ಶ್ರೀರಾಮಚಂದ್ರಾಚಾರ್ಯ ವಿರಚಿತಂ

ಶ್ರೀವಾದಿರಾಜಗುರುವರಚರಿತಾಮೃತಮ್

(ಕನ್ನಡಾನುವಾದ, ಸ್ತೋತ್ರ ಹಾಗೂ ಕೀರ್ತನೆಗಳನ್ನೊಳಗೊಂಡಿದೆ)



ಅನುವಾದಕರು ಶ್ರೀ ಕೆ.ಎಸ್. ವಾದಿರಾಜ

Shri Ramachandracharya Virachitam

“SriVadiraja Guruvara Charithamrutham”

Kannada Translation

by


Shri K. S. Vadiraja



ಶ್ರೀಶ್ರೀ 108 ಶ್ರೀ ವಿದ್ಯಾಸಾಗರತೀರ್ಥ ಶ್ರೀ ಪಾದಂಗಳವರು ಕೃಷ್ಣಾಪುರಮಠ ಉಡುಪಿ

ಭಾವೀ ಸಮೀರರಾದಂತಹ ಶ್ರೀ ವಾದಿರಾಜತೀರ್ಥರ ಚರಿತ್ರೆಯನ್ನು ವಾದಿರಾಜರ ಶಿಷ್ಯರಾದ ಶ್ರೀ ವೇದವೇದ್ಯರ ಶಿಷ್ಯರಾದಂತಹ ಶ್ರೀ ವೇದನಿಧಿತೀರ್ಥರ ಶಿಷ್ಯರಾಗಿದ್ದಂತಹ ಶ್ರೀ ರಾಮ ಚಂದ್ರಾಚಾರ್ಯರು ವಿರಚಿಸಿದ್ದು. ಇದು ವಾದಿರಾಜರ ಚರಿತ್ರೆಯ ಬಗ್ಗೆ ಅಧಿಕೃತ ಗ್ರಂಥವಾಗಿದೆ. ಶ್ರೀ ವಾದಿರಾಜರ ನಿಕಟಕಾಲದಲ್ಲೇ ಬಂದಿದ್ದಂತಹ ಶ್ರೀ ರಾಮಚಂದ್ರಾಚಾರ್ಯರು ವಿರಚಿಸಿದ್ದರಿಂದ ಈ ಕೃತಿಯ ಸಾಚಾತನದ ಬಗ್ಗೆ ಯಾರೂ ಸಂಶಯ ಪಡುವ ಅಗತ್ಯವಿಲ್ಲ. ಸಂಸ್ಕೃತದಲ್ಲಿ ಶ್ಲೋಕರೂಪದಲ್ಲಿ ಪೋಣಿಸಲ್ಪಟ್ಟಂತಹ ಈ ಚರಿತಾಮೃತವನ್ನು ಮೂಲ ಹಾಗೂ ಕನ್ನಡ ಅನುವಾದದ ಜೊತೆಗೆ ನಮ್ಮವರೇ ಆಗಿರತಕ್ಕಂತಹ ತುಮಕೂರಿನ ಶ್ರೀ.ಕೆ.ಎಸ್.ಗಣಪತಿರಾವ್ ಪ್ರಕಟಿಸಿ ಸಜ್ಜನರಿಗೆಲ್ಲಾ ದೊಡ್ಡ ಉಪಕಾರವನ್ನು ಮಾಡಿದ್ದಾರೆ. ಈ ಗ್ರಂಥದ ಕನ್ನಡಾನುವಾದವನ್ನು ತುಮಕೂರಿನ ಶ್ರೀ ನಾಗಭೂಷಣರಾಯರ ಶಿಷ್ಯರಾದಂತಹ ಶ್ರೀ ಕೆ.ಎಸ್.ವಾದಿರಾಜರಾಯರು ಮಾಡಿದ್ದು ಮೂಲ ಗ್ರಂಥದ ಸಾರ ಸರ್ವಸ್ವವನ್ನು ಸಜ್ಜನರಿಗೆ ಉಣಿಸುವುದರಲ್ಲಿ ಸಮರ್ಥವಾಗಿದೆ ಎಂದು ನಾವು ಭಾವಿಸುತ್ತೇವೆ. ಸಂಸ್ಕೃತಬಾರದ ಸಜ್ಜನರಿಗೆ ಮೂಲ ಗ್ರಂಥದ ಅಭಿಪ್ರಾಯವನ್ನು ತಿಳಿದು ಶ್ರೀ ಶ್ರೀ ವಾದಿರಾಜರಲ್ಲಿ ವಿಶೇಷ ಭಕ್ತಿ, ಶ್ರದ್ಧೆ ಉಂಟಾಗುವಂತೆ ಮಾಡಿದಂತಹ ಅನುವಾದಕರಿಗೆ ಹಾಗೂ ಇಂತಹ ಪುಸ್ತಕವನ್ನು ಪ್ರಕಟಿಸಿದ ಪ್ರಕಾಶಕರಿಗೂ ಕೂಡಾ ಶ್ರೀ ವಾದಿರಾಜ ಗುರ್ವಂತರ್ಗತ ಲಕ್ಷ್ಮೀ ಹಯಗ್ರೀವಾಭಿನ್ನ ಶ್ರೀ ನೃಸಿಂಹ ಕಾಳೀಯ ಮರ್ದನ ಕೃಷ್ಣ ಅನುಗ್ರಹಿಸಲೆಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.

ಶ್ರೀ ವಿದ್ಯಾಸಾಗರ ತೀರ್ಥರು



॥ ಶ್ರೀ ಗುರುರಾಜೋ ವಿಜಯತೇ॥

ಶ್ರೀ ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ ಭಾವಿಸಮೀರ ಶ್ರೀ ಮಧ್ವಾದಿರಾಜ ಗುರುಸಾರ್ವಭೌಮರ ಮೂಲ ಪಂಚವೃಂದಾವನ ಸನ್ನಿಧಿ

ಸೋದೆ ಶ್ರೀ ವಾದಿರಾಜ ಮಠ, ಸೋಂದಾ ತಾಲೂಕ ಶಿರಸಿ (ಉ.ಕ) 581336

ದೂರವಾಣಿ: 08384–279685

"ಶ್ರೀ ಹರಿಃ ಶರಣಂ ಸದಾ"

ಕ್ರ.ಸಂಖ್ಯೆ ತಾರೀಖು: 28.07.2009

ಮನೋ ವಿಶುದ್ಧ್ಯೈ ಚರಿತಾನುವಾದಃ ಎಂಬುದಾಗಿ ಶ್ರೀ ಮಧ್ವ ವಿಜಯಕಾರರು ಹಿರಿಯ ಮಾತೊಂದನ್ನು ಹೇಳಿದ್ದಾರೆ. ಈ ಮಾತು ಬರಹಗಾರರಿಗೊಂದು ದಿಗ್ದರ್ಶನವವನ್ನು ಮಾಡುತ್ತದೆ. ಯಾರ ಕುರಿತು ಅಥವಾ ಯಾವುದರ ಕುರಿತು ನಾವು ಬರೆಯ ಹೊರಟಿರುವೆವೋ ಆ ಬರಹ ಎಲ್ಲರ ಮನಸ್ಸನ್ನು ಪರಿಶುದ್ಧಗೊಳಿಸಿ ಎಲ್ಲರ ಮನೋ ವಿಶುದ್ಧಿಗೆ ಕಾರಣವಾಗಬಲ್ಲ ಚರಿತೆಯ ಬಗ್ಗೆಯೇ ನಾವು ಬರೆಯಬೇಕು ಎಂಬ ಸಂದೇಶವನ್ನು ಮೇಲಿನ ಮಾತು ತಿಳಿಸುತ್ತದೆ. ಇಂತಹ ಕಾರ್ಯಮಾತ್ರ ನಮಗೆ ಪುಣ್ಯವನ್ನು ತಂದು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಕೀರ್ತಿ ಮೊದಲಾದವುಗಳೊಂದಿಗೆ ಪುಣ್ಯಪ್ರಾಪ್ತಿಯೂ ನಮಗಾಗಬೇಕಾದರೆ ಇಂತಹ ಕಾರ್ಯದಲ್ಲಿ ನಾವು ಹೆಚ್ಚು ಹೆಚ್ಚು ತೊಡಗಬೇಕು.

ಅಂತಹ ಪುಣ್ಯ ಚರಿತವನ್ನು ಸಾರುವ ಕೃತಿ ರತ್ನ "ಶ್ರೀ ವಾದಿರಾಜಗುರುವರ ಚರಿತಾಮೃತ" ಅದನ್ನು ಓದಿದಾಗ ನಮ್ಮ ಮನಸ್ಸು ಪರಿಶುದ್ಧವಾಗುತ್ತದೆ. ಅಂತಹ ಮನಸ್ಸಿನಲ್ಲಿ ಭಕ್ತಿ ಉಂಟಾಗಿ ಭಗವಂತನ ಅನುಗ್ರಹವನ್ನು ಪಡೆಯಲು ಆಗುತ್ತದೆ. ಈ ಗ್ರಂಥ ತೀರಾ ಸಾಧಾರಣವೆಂದು ಬಗೆಯುವಂತಿಲ್ಲ. ಶ್ರೀ ಮಧ್ವವಿಜಯ ಗ್ರಂಥಕ್ಕೆ ಇರುವಷ್ಟೇ ಐತಿಹಾಸಿಕ ಹಿನ್ನೆಲೆ ಈ ಗ್ರಂಥಕ್ಕೂ ಇದೆ. ಆದ್ದರಿಂದಲೇ ಇದು ಅತ್ಯಂತ ಪ್ರಾಮಾಣಿಕ ಗ್ರಂಥ ಶ್ರೀ ಗುರುರಾಜರ ಚರಿತಾಮೃತ ಸಾಗರದ ಅನೇಕ ಹನಿಗಳನ್ನು ಸಾಕ್ಷಿ ಪುರಾವೆಯೊಂದಿಗೆ ದಾಖಲಿಸಿಕೊಂಡು ಮಹತ್ತ್ವ ಈ ಗ್ರಂಥಕ್ಕಿದೆ. ಇದರ ಪೂರ್ವ ಪ್ರಮಾಣದ ಪ್ರಾಮಾಣೀಕತೆಗೆ ಶ್ರೀ ಗುರುರಾಜರು ಶ್ರೀ ವೇದನಿಧಿತೀರ್ಥರು ಸಾಕ್ಷಿಯಾಗಿರುವರು. ಆದ್ದರಿಂದಲೇ ಈ ಗ್ರಂಥ ಮಾಧ್ವರ ಪಾಲಿಗೆ, ಶ್ರೀ ಗುರುರಾಜೀಯ ಭಕ್ತರಪಾಲಿಗೆ ಅತ್ಯಂತ ವಿಶ್ವಾಸನೀಯವಾಗಿದೆ.

ಇಂತಹ ಗ್ರಂಥದ ಭಾವಾನುವಾದ ಕಾರ್ಯವೂ ಪುಣ್ಯ ಪ್ರದವಾದುದು ಅದರಲ್ಲಿ ಶ್ರೀ ಹರಿ ಗುರುಭಕ್ತರೂ ಶ್ರೀ ಗುರು ರಾಜರಲ್ಲಿ ಅತ್ಯಂತ ಶ್ರದ್ಧಾಳುಗಳೂ ಹಾಗೂ ನಮ್ಮ ಆತ್ಮೀಯರೂ ಆಗಿರುವ ಶ್ರೀ ಕೆ.ಎಸ್. ವಾದಿರಾಜರವರು ತೊಡಗಿರುವುದು ಅತ್ಯಂತ ಅಭಿನಂದನೀಯವಾದುದು. ಅವರ ಈ ಕಾರ್ಯವು ಶ್ರೀ ಹರಿ ಗುರತೋಷಕಾರಿಯಾಗಿ ಯಶಪ್ರದವಾಗಲಿಯೆಂದೂ ಹಾಗೂ ಈ ಕೃತಿಯನ್ನು ಪ್ರಕಟಿಸುತ್ತಿರುವ ಶ್ರೀ ಕೆ.ಎಸ್.ಗಣಪತಿರಾಯರಿಗೂ ಅನುಗ್ರಹವಾಗಲಿ ಎಂದು ನಾವು ನಮ್ಮ ಆರಾಧ್ಯ ದೇವರಲ್ಲಿ ವಿಶೇಷವಾಗಿ ಪ್ರಾರ್ಥಿಸುತ್ತೇವೆ.

ಇತ್ಯನೇಕ ಶ್ರೀ ಮನ್ನಾರಾಯಣ ಸ್ಮರಣೆಗಳು

ಶ್ರೀ ವಿಶ್ವವಲ್ಲಭ ತೀರ್ಥ ಸ್ವಾಮಿಜಿ
ಸೊಂದಾ ವಾದಿರಾಜ ಮಠ ಸೊಂದಾ

ಕಾಮಧೇನುರ್ಯಥಾ ಪೂರ್ವಂ ಸರ್ವಾಭೀಷ್ಟ ಫಲಪ್ರದಾ ।
ತಥಾ ಕಲೌ ವಾದಿರಾಜ ಶ್ರೀ ಪಾದೋಽಭೀಷ್ಟದಃ ಸತಾಂ ॥

ಭಾವೀ ಸಮೀರರಾದ ಶ್ರೀ ವಾದಿರಾಜ ಗುರುಸಾರ್ವಭೌಮರು ಶ್ರೀ ಮದಾನಂದ ತೀರ್ಥರ ಸತ್ಸಿದ್ಧಾಂತವನ್ನು ಪ್ರಸರಿಸುವುದಕ್ಕಾಗಿ, ಮೂಕ ವಿಪ್ರನೋರ್ವನಿಗೆ, ಸ್ವಪ್ನದಲ್ಲಿ ಅವರೇ ಬೋಧಿಸಿದಂತೆ, ಕಲಿಯುಗದಲ್ಲಿ ಸಜ್ಜನರಿಗೆ ಕಾಮಧೇನುವಿನಂತೆ ಸರ್ವಾಭೀಷ್ಟ ಫಲ ಪ್ರದರು. ಪರಮ ಪುರುಷಾರ್ಥವಾದ ಮೋಕ್ಷ ಸಾಧನ ಮಾರ್ಗದಲ್ಲಿ ಮುಂದೆ ಸಾಗಲು, ಇಂತಹ ಮಹಾ ಮಹಿಮೋಪೇತರಾದ ಜಗದ್ಗುರುಗಳ ಮಹಿಮೆಗಳನ್ನು ಯಥಾರ್ಥವಾಗಿ ತಿಳಿದು ಅವರಲ್ಲಿ ಭಕ್ತಿಯನ್ನು ಮಾಡಿ, ಅವರ ಅನುಗ್ರಹಕ್ಕೆ ಪಾತ್ರರಾಗಬೇಕು.

ಶ್ರೀವಾದಿರಾಜರ ಕಾಲದಲ್ಲಿಯೇ, ಅವರ ಮಠದಲ್ಲಿಯೇ ಅವರ ಪ್ರಶಿಷ್ಯರಾದ ಶ್ರೀ ವೇದನಿಧಿಗಳ ಬಳಿ ಇದ್ದ ಶ್ರೀ ರಾಮಚಂದ್ರಾಚಾರ್ಯರೆಂಬ ವಿದ್ವಾಂಸರು ಶ್ರೀ ವಾದಿರಾಜರ ಐತಿಹ್ಯವನ್ನು ತಿಳಿಸುವ "ಶ್ರೀ ವಾದಿರಾಜ ಗುರುವರ ಚರಿತಾಮೃತ" ಎಂಬ ಗ್ರಂಥವನ್ನು ರಚಿಸಿದ್ದರು. ಆದ್ದರಿಂದ ಈ ಗ್ರಂಥದಲ್ಲಿರುವ ವಿಷಯಗಳು ಯಥಾರ್ಥವಾದವು. ಈ ಗ್ರಂಥವು ಸಂಸ್ಕೃತ ಭಾಷೆಯಲ್ಲಿದೆ. ಸಂಸ್ಕೃತ ತಿಳಿಯದ ಸಜ್ಜನರಿಗೆ ಉಪಯೋಗವಾಗಲೆಂದು, ಶ್ರೀ ವಾದಿರಾಜಗುರುಗಳ ಪರಮಾನು ಗ್ರಹಕ್ಕೆ ಪಾತ್ರರಾದ ಶ್ರೀ ಕೆ.ಎಸ್.ವಾದಿರಾಜರಾಯರು, ಈ ಗ್ರಂಥವನ್ನು ಶ್ಲೋಕಗಳಲ್ಲಿರುವ ಪದಗಳ ಅರ್ಥವೂ ಲಭಿಸುವಂತೆ ಕನ್ನಡ ಭಾಷೆಗೆ ಸರಳ ಅನುವಾದವನ್ನು ಉತ್ತಮ ರೀತಿಯಲ್ಲಿ ಮಾಡಿ, ಸಜ್ಜನರಿಗೆ ಬಹಳ ಉಪಕಾರ ಮಾಡಿದ್ದಾರೆ. ಇನ್ನೂ ಅನೇಕ ಉಪಯುಕ್ತ ಗ್ರಂಥಗಳನ್ನು ಪ್ರಕಟಿಸಬೇಕೆಂಬ ಉತ್ಸಾಹವುಳ್ಳವರಾಗಿದ್ದಾರೆ.

ಇಂತಹ ಮಾದರಿಯ ಗ್ರಂಥಗಳನ್ನು ಪ್ರಕಟಿಸಲು ಅವಶ್ಯಕವಾದ ಆಯುರಾರೋಗ್ಯಾದಿ ಸಕಲ ಸಂಪತ್ತನ್ನು ಅವರಿಗೆ ಶ್ರೀ ಹರಿಗುರುಗಳು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಈ ಗ್ರಂಥವನ್ನು ಶ್ರೀ ಕೆ.ಎಸ್.ಗಣಪತಿರಾಯರು ಪ್ರಕಟಿಸಿದ್ದಾರೆ. ಅವರಿಗೂ ಶ್ರೀ ಹರಿಗುರುಗಳು ಆಯುರಾರೋಗ್ಯಾದಿ ಸಕಲ ಸಂಪತ್ತನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

9.07.2009

ಬಿ.ಪಿ.ನಾಗಭೂಷಣರಾವ್
"ಪದ್ಮಪ್ರಭಾ" ಬಿ.ಎನ್.ಪಿ.ಕಂಪೌಂಡು.
ಎಂ.ಜಿ.ರಸ್ತೆ, ತುಮಕೂರು- 572101.

ಅನುವಾದಕನ ನುಡಿ

ಶ್ರೀ ವಾಯುದೇವರು ತ್ರೇತಾಯುಗದಲ್ಲಿ ಹನುಮಂತನಾಗಿ ದ್ವಾಪರದಲ್ಲಿ ಭೀಮಸೇನರಾಗಿ ಹಾಗೂ ಕಲಿಯುಗದಲ್ಲಿ ಮಧ್ವರಾಗಿ ಅವತರಿಸಿ ಭಗವತ್ಕಾರ್ಯ ಸಾಧಕರಾಗಿ ಸೇವೆ ಸಲ್ಲಿಸಿರುವರು. ಅವರಂತ ಶ್ರೀ ಲಾತವ್ಯ ನಾಮಕ ಋಜುಗಳುರೂಪವು ಬ್ರಹ್ಮಾಂಡದ ಹೊರಗಿರುವುದು. ಸತ್ಯಲೋಕದಲ್ಲಿ 'ವಿಶ್ವ' ನಾಮಕ ಹರಿಯನ್ನು ಪ್ರವಚನಾದಿಗಳಿಂದ ಸೇವಿಸುವುದು ಅವರ ಪ್ರಥಮರೂಪವು. ರುಕ್ಮಿಣೀ ಪತ್ರವನ್ನು ಶ್ರೀಕೃಷ್ಣನಿಗೆ ಕೊಟ್ಟಿದ್ದು ದ್ವಿತೀಯರೂಪವಾದ ಸುದೇವ ನಾಮಕ ಬ್ರಾಹ್ಮಣದು. ಕಲಿಯುಗದಲ್ಲಿ ಶ್ರೀವಾದಿರಾಜರಾಗಿ ಅವತರಿಸಿ ಮಧ್ವಮತವನ್ನು ವಿಸ್ತರಿಸಿ ಸಜ್ಜನರನ್ನು ಉದ್ಧರಿಸಿರುವದು ಅವರ ತೃತೀಯ ರೂಪವು. ಹೀಗೆ ಲಾತವ್ಯ ನಾಮಕ ಋಜುಗಳ ಮೂರು ರೂಪಗಳು ಬಳಿತ್ಥಾಸೂಕ್ತದಲ್ಲಿ ಸ್ತುತಿಸಲ್ಪಟ್ಟಿದೆ.

ವಾಯುದೇವರು ಮಧ್ವರಾಗಿ ಅವತರಿಸಿದಾಗ ಆ ಕಾಲದಲ್ಲಿದ್ದ ಅದ್ವೈತಮತದ ಪ್ರಕಾಂಡ ಪಂಡಿತರಾದ ಶ್ರೀತ್ರಿವಿಕ್ರಮ ಪಂಡಿತಾಚಾರ್ಯರು ಹದಿನೈದು ದಿನಗಳಕಾಲ ಮಧ್ವರೊಂದಿಗೆ ವಾದಮಾಡಿ ಸೋತು ಅವರ ಶಿಷ್ಯರಾದರು. ಇವರ ಮಗ ನಾರಾಯಣ ಪಂಡಿತಾಚಾರ್ಯರು ಮಧ್ವರನ್ನು ಸಮೀಪದಿಂದ ನೋಡಿದವರು, ಮಧ್ವರ ಬಗ್ಗೆ ಸಮಕಾಲೀನರನ್ನು ಸಂದರ್ಶಿಸಿ ಅವರ ಮಹಿಮೆಗಳನ್ನು ಕೇಳಿ ತಿಳಿದು ಹದಿನಾರು ಸರ್ಗವುಳ್ಳ ಶ್ರೀ ಸಮಧ್ವವಿಜಯ ಮಹಾಕಾವ್ಯ ನಿರ್ಮಾಣ ಮಾಡಿದರೂ ಈ ಕಾವ್ಯ ಐತಿಹಾಸಿಕ ಮಹತ್ವವುಳ್ಳದ್ದು ಸತ್ಯ ಸಂಗತಿಗಳನ್ನು ಆಧರಿಸಿ ಬರೆಯಲಾಗಿದೆ. ಇದು ಕೇವಲ ಮಧ್ವಾಚಾರ್ಯರ ಚರಿತ್ರೆ ಮಾತ್ರವಲ್ಲ. ಮಂತ್ರತುಲ್ಯವಾದ ಗ್ರಂಥವೂ ಕೂಡ ಆಗಿದೆ.

ಭಾವೀ ಸಮೀರ ಶ್ರೀವಾದಿರಾಜರ ಪ್ರಶಿಷ್ಯರಾದ ವೇದನಿಧಿಗಳಲ್ಲಿ ಶ್ರೀ ರಾಮಚಂದ್ರಾಚಾರ್ಯರೆಂಬ ವಿದ್ಯಾಶಿಷ್ಯರಿದ್ದರು. ಆಗ ಸೋದಾಮಠದಲ್ಲಿ ವಾಸವಾಗಿದ್ದ ಏಡಮೂಕ ಬ್ರಾಹ್ಮಣನ ಕನಸಿನಲ್ಲಿ ಶ್ರೀ ವಾದಿರಾಜರು ಕಾಣಿಸಿಕೊಂಡು ತಮ್ಮ ಮಹಿಮಾ ವರ್ಣನಾತ್ಮಕವಾದ ಆಖ್ಯಾನ ಗ್ರಂಥ ಬೋಧಿಸುತ್ತಿದ್ದರು. ಬೆಳಿಗ್ಗೆ ಶ್ರೀ ವೇದನಿಧಿಗಳ ಮುಂದೆ ಹಿಂದಿನ ದಿನ ಬೋಧಿಸಿದ ಸ್ವಾಪ್ನ ವೃತ್ತಾಂತವನ್ನು ಏಡಮೂಕನು ಹೇಳಿ ಮೂಕನಾಗಿ ಬಿಡುತ್ತಿದ್ದನು ಆಗ ಶ್ರೀ ವೇದನಿಧಿಗಳು ಆಖ್ಯಾನವನ್ನು ತಮ್ಮ ವಿದ್ಯಾಶಿಷ್ಯರಾದ ಶ್ರೀ ರಾಮಚಂದ್ರಾಚಾರ್ಯರಿಂದ ಲಿಖಿತಗೊಳಿಸುತ್ತಿದ್ದರು. ಹೀಗೆ ಹಲವು ವರ್ಷಗಳಕಾಲ ಶ್ರೀ ಸ್ವಾಪ್ನವೃಂದಾವನಾಖ್ಯಾನ ಬರೆಯಲ್ಪಟ್ಟಿತು.

ಶ್ರೀ ವೇದನಿಧಿ ಶ್ರೀಪಾದಂಗಳವರು ಶ್ರೀರಾಮಚಂದ್ರಚಾರ್ಯರಿಗೆ ಭಾವೀ ಸಮೀರ ಶ್ರೀ ವಾದಿರಾಜ ಗುರುಗಳ ಮಹಿಮೋಪೇತವಾದ ದಿವ್ಯ ಚರಿತ್ರೆ ಬರೆಯುವಂತೆ ಆಜ್ಞಾಪಿಸಿದರು ಗುರುಗಳ ಆಜ್ಞೆ ಶಿರಸಾವಹಿಸಿದ ಶ್ರೀ ರಾಮಚಂದ್ರಾಚಾರ್ಯರು ತಾವು ನೋಡಿದ. ಹಾಗೂ ಕೇಳಿದ ಅಪಾರ ಮಹಿಮೆಯುಳ್ಳ ಶ್ರೀವಾದಿರಾಜ ಗುರುವರ ಚರಿತ್ರೆಯನ್ನು ಒಂಬತ್ತು ಅಧ್ಯಾಯಗಳಲ್ಲಿ ಸುಲಭ ಸಂಸ್ಕೃತ ಭಾಷೆಯಲ್ಲಿ ಬರೆದಿರುವರು.

ಈ ಗ್ರಂಥದ ಏಳು ಬಿಂದು (ಅಧ್ಯಾಯ) ಗಳಲ್ಲಿ ಶ್ರೀ ವಾದಿರಾಜರ ಚರಿತ್ರೆಯನ್ನು ಹೇಳಿದ್ದಾರೆ. ಎಂಟನೆಯ ಬಿಂದುವಿನಲ್ಲಿ ಋಜುತ್ವ ಸಾಧಕ ಪ್ರಮಾಣಗಳು ಉದಾಹರಿಸಲ್ಪಟ್ಟಿವೆ. ಒಂಬತ್ತನೆಯ ಅಧ್ಯಾಯದಲ್ಲಿ ದೇವಗುರುಸ್ತುತಿಪೂರ್ವಕವಾಗಿ ಗ್ರಂಥವು ಮುಗಿಸಿ ಮಂಗಳ ಮಾಡಲ್ಪಟ್ಟಿದೆ. ಎಂಟನೆಯ ಅಧ್ಯಾಯದಲ್ಲಿ ಉದಾಹೃತ ಪ್ರಮಾಣಗಳಿಂದ ವಾದಿರಾಜರ ಋಜುತ್ವವು ಶಾಸ್ತ್ರಸಿದ್ಧ ಪ್ರಮೇಯವೆಂದು ಗೊತ್ತಾಗುತ್ತದೆ. ಆಖ್ಯಾನ, ವಾದಿರಾಜ ಗುರುವರ ಚರಿತಾಮೃತ ಇತ್ಯಾದಿಗ್ರಂಥಗಳು ವೇದಪುರಾಣ ಮೂಲವುಳ್ಳವೆಂದೂ ಗೊತ್ತಾಗುತ್ತದೆ. ಪ್ರಥಮವಾಗಿ

ಅಷ್ಟಮಾಧ್ಯಾಯದಲ್ಲಿ ಋಜುತ್ವ ಸ್ವರೂಪವು ಛಾಂದೋಗ್ಯ ಭಾಷ್ಯ ಮತ್ತು ಮಹಾಭಾರತ ತಾತ್ಪರ್ಯನಿರ್ಣಯ ವಾಕ್ಯಗಳಿಂದ ಪ್ರತಿಪಾದಿಸಲ್ಪಟ್ಟಿದೆ. ಅನಂತರ ವಾಮನ ಪುರಾಣೋಕ್ತ ಕಲ್ಯಾದಿ ಚತುರ್ಮುಖ ಪರ್ಯಂತ ನೂರು ಕೊನೆಯ ಋಜುಗಳ ಹೆಸರುಗಳು ಹೇಳಲ್ಪಟ್ಟಿವೆ.

ಸತ್ತತ್ವರತ್ನಮಾಲಾ ವಾಕ್ಯದ ಆಧಾರದಿಂದ ಋಜುಗಳ ನಿರ್ದೋಷತ್ವವನ್ನು ತಿಳಿಸಿ ತಾತ್ಪರ್ಯ ನಿರ್ಣಯ ವ್ಯಾಖ್ಯಾಧಾರದಿಂದ ಲಕ್ಷಾಂಲಕಾರ ವಿರಚಿಸಿರುವ ವಾದಿರಾಜ ಮುನಿಗಳಿಗೆ ಮಧ್ವ ಸಾಮ್ಯವು ಉಚಿತವೆಂದು ಪ್ರತಿಪಾದಿಸಿದ್ದಾರೆ. ಗಾರುಡ ವಾಕ್ಯದಿಂದ ಋಜುಗಳು ಸಾಮ್ಯವುಳ್ಳವರೆಂದು ಸ್ಪಷ್ಟ ಪಡಿಸಿದ್ದಾರೆ. ಶ್ರೀ ಹರಿಯೇ ಗುರುರಾಜರನ್ನು ಆಜ್ಞಾಪಿಸಿ ಅವರ ಪ್ರತಿಭೆಯ ನಿಮಿತ್ತದಿಂದ ಲಕ್ಷಾಲಂಕಾರ ಮಾಡಿಸಿರುವುದರಿಂದ ಲಕ್ಷಾಲಂಕಾರವು ವಾದಿರಾಜರ ಋಜುತ್ವ ಜ್ಞಾಪಕವೆಂದು ಶಾಸ್ತ್ರಾನುಸಾರಿ ಅನುಮಾನ ತೋರಿಸಿದ್ದಾರೆ.

ನಾನು ತುಮಕೂರಿನಲ್ಲಿ ೨೦ ವರ್ಷಗಳ ಹಿಂದೆ ವಾಸವಾಗಿದ್ದ ಸಮಯದಲ್ಲಿ, ಶ್ರೀ ಬಿ.ಪಿ. ನಾಗಭೂಷಣರಾಯಲ್ಲಿ ಕೆಲವು ಸಚ್ಛಾಸ್ತ್ರಗಂಥಗಳನ್ನು ಅಧ್ಯಯನ ಮಾಡುವ ಸದಾವಕಾಶ ಪ್ರಾಪ್ತವಾಗಿತ್ತು. ಆ ಸಮಯದಲ್ಲಿ ನಾನು ಶ್ರೀ ರಾಮಚಂದ್ರಚಾರ್ಯ ಕೃತ 'ಶ್ರೀ ವಾದಿರಾಜ ಗುರುವರ ಚರಿತಾಮೃತವನ್ನು ಅನುವಾದ ಮಾಡುತ್ತಾ ಅದನ್ನು ಗುರುಗಳಾದ ಶ್ರೀ ಬಿ.ಪಿ. ನಾಗಭೂಷಣರಾಯರಿಗೆ ತೋರಿಸುತ್ತಿದ್ದೆನು. ಅವರು ಅದಕ್ಕೆ ಸೂಕ್ತ ತಿದ್ದುಪಡಿಮಾಡಿ ನನಗೆ ಮಾರ್ಗದರ್ಶನ ಮಾಡುತ್ತಿದ್ದರು. ಅದು ಪೂರ್ತಿ ಅನುವಾದವಾಗಿ ೨೦ ವರ್ಷಗಳಾದರೂ ಕಾರಣಾಂತರಿಂದ ಪ್ರಕಟಿಸಲಾಗಲಿಲ್ಲ. ಈಗ ಅದನ್ನು ಪ್ರಕಟಿಸುವ ಸಮಯ ಪ್ರಾಪ್ತವಾಗಿದೆ. ಶ್ರೀ ಬಿ.ಪಿ. ನಾಗಭೂಷಣರಾಯರ ಇನ್ನೊಬ್ಬ ಶಿಷ್ಯರಾದ, ನಮ್ಮ ಭಾವನವರಾದ ಶ್ರೀ.ಕೆ.ಎಸ್. ಗಣಪತಿರಾಯರು ತಮ್ಮ ತಂದೆ ತಾಯಿಗಳ ಸ್ಮರಣಾರ್ಥ ಪ್ರಕಟಿಸಲು ಮುಂದೆ ಬಂದಕಾರಣ, ದೀರ್ಘ ಸಮಯದ ನಂತರ "ಶ್ರೀವಾದಿರಾಜ ಗುರುವರಚರಿತಾಮೃತ" ಪ್ರಕಾಶವಾಗುತ್ತಿರುವುದು ನಮಗೆಲ್ಲಾ ಸಂತೋಷವನ್ನುಂಟು ಮಾಡಿದೆ.

ಶ್ರೀ ವಾದಿರಾಜರ ಅಂತರಂಗದ ಭಕ್ತರಾದ, ಶ್ರೀ ವಿಶ್ವೋತ್ತಮತೀರ್ಥರ ವಿದ್ಯಾಶಿಷ್ಯರಾದ ಕೃಷ್ಣಾಪುರ ಮಠಾಧೀಶರಾದ ಶ್ರೀಶ್ರೀವಿದ್ಯಾಸಾಗರ ತೀರ್ಥ ಶ್ರೀಪಾದಂಗಳವರು, ಸೋದೆ ವಾದಿರಾಜಮಠದ ಪೀಠಾಧೀಶರಾದ ಶ್ರೀಶ್ರೀವಿಶ್ವವಲ್ಲಭ ಶ್ರೀಪಾದಂಗಳವರು ಹಾಗೂ ನಮ್ಮ ವಿದ್ಯಾಗುರುಗಳಾದ ಶ್ರೀ ಬಿ.ಪಿ. ನಾಗಭೂಷಣರಾಯರು ಆಶೀರ್ವಚನ ನೀಡಿ ಕೃತಿಯ ಮಹತ್ವವನ್ನು ಹೆಚ್ಚಿಸಿದ್ದಾರೆ. ಇವರೆಲ್ಲರಿಗೂ ಶಿರಸಾಷ್ಟಾಂಗ ಪೂರ್ವಕ ನಮಸ್ಕಾರ ಸಮರ್ಪಿಸುತ್ತೇನೆ. ನಮ್ಮ ಭಾವನವರಾದ ಶ್ರೀ ಕೆ.ಎಸ್. ಗಣಪತಿರಾಯರು ಈ ಕೃತಿಯನ್ನು ಪ್ರಕಟಿಸುವ ಮೂಲಕ ನನಗೆ ಪ್ರೋತ್ಸಾವ ನಿಡಿದ್ದಾರೆ. ಅವರಿಗೂ ನನ್ನ ಕೃತಜ್ಞತಾಪೂರ್ವಕ ಶಿರಾಸಾಷ್ಟಾಂಗ ಪೂರ್ವಕ ನಮಸ್ಕಾರಗಳು.

ಈ ಕೃತಿಯನ್ನು ಸುಂದರವಾಗಿ ಮುದ್ರಣ ಮಾಡಿದ 'ವಿಶ್ವಾಸ್ ಪ್ರಿಂಟ್ಸ್' ಮಾಲೀಕರಾದ ಶ್ರೀ ವೆಂಕಟೇಶಮೂರ್ತಿಗಳಿಗೂ ಹಾಗೂ ಅವರ ಸಿಬ್ಬಂದಿವರ್ಗಕ್ಕೂ ಕೃತಜ್ಞನಾಗಿರುತ್ತೇನೆ. ಈ ಕೃತಿಯು ಕರಡುಪ್ರತಿ ತಿದ್ದುವುದರಲ್ಲಿ ಪರಿಶ್ರಮವಹಿಸಿ ಮಾಡಿಕೊಟ್ಟ ಶ್ರೀ ವಿದ್ವಾನ್ ಸಿ.ಹೆಚ್. ಬದರಿನಾರಾಯಣ ಆಚಾರ್ಯ ಪೂರ್ಣಪ್ರಜ್ಞ ವಿದ್ಯಾಪೀಠ ಬೆಂಗಳೂರ ಇವರಿಗೂ ಅನಂತ ವಂದನೆಗಳು. ಈ ಕಾರ್ಯದಲ್ಲಿ ಸಹಕರಿಸಿದ ಕೆ.ಆರ್. ವಾದಿರಾಜರಾವ್ ಚಿತ್ರದುರ್ಗ ಇವರಿಗೆ ಕೃತಜ್ಞತೆಗಳು.

ಭಗವದ್ಭಕ್ತರು ಈ ಕೃತಿಯನ್ನು ಓದುವ ಮೂಲಕ ಶ್ರೀವಾದಿರಾಜಗುರುಗಳ ಅನುಗ್ರಹಕ್ಕೆ ಪಾತ್ರರಾದರೆ ನನ್ನ ಶ್ರಮಸಾರ್ಥಕ ವಂತ ಭಾವಿಸುತ್ತೇನೆ.

ದಿನಾಂಕ: ೧೫-೦೮-೨೦೦೯

ಕೆ.ಎಸ್. ವಾದಿರಾಜ

ಪರಿವಿಡಿ

॥ ಶ್ರೀ ಕೃಷ್ಣ ವರಾಹ ಹಯಗ್ರೀವ ಬಾದರಾಯಣಾಃ ಪ್ರಸೀದಂತು ॥
॥ ಶ್ರೀ ಭಾವಿಸಮೀರ ವಾದಿರಾಜಗುರುಭ್ಯೋ ನಮಃ ॥
॥ ಶ್ರೀ ವೇದನಿಧಿಗುರುಭ್ಯೋ ನಮಃ ॥

ಶ್ರೀ ವಾದಿರಾಜಗುರುವರ ಚರಿತಾಮೃತಮ್

॥ ಪ್ರಥಮ ಬಿಂದುಃ ॥

**ಶ್ಲೋಕ:– ಶ್ರಿಯಃ ಪತಿಂ ಭೂಧರಮಪ್ರಮೇಯಂ ವರಾಹಮೀಶಂ ಹ್ಯನಿಶಂ ನಮಾಮಿ।
ಹಯಾಸ್ಯಮಪ್ಯಾದರತೋ ಭಜಾಮಿ ಮಧ್ವೇಶಕೃಷ್ಣಂ ಪ್ರಣಮಾಮಿ ಭಕ್ತ್ಯಾ ॥1॥**

ಅರ್ಥ:– ಲಕ್ಷ್ಮೀ ಪತಿಯಾದ, ಸಂಪೂರ್ಣವಾಗಿ ತಿಳಿಯಲಶಕ್ಯನಾದ ಸ್ವಾಮಿಯಾದ, ಭೂಮಿಯನ್ನು ಧರಿಸಿರುವ, ವರಾಹನನ್ನು ಸದಾ ನಮಸ್ಕರಿಸುತ್ತೇನೆ. ಹಯಗ್ರೀವನನ್ನು ಆದರ ಪೂರ್ವಕ ಭಜಿಸುತ್ತೇನೆ. ಹಾಗೂ ಮಧ್ವೇಶಕೃಷ್ಣನನ್ನು ಭಕ್ತಿಯಿಂದ ನಮಸ್ಕರಿಸುತ್ತೇನೆ.

**ಶ್ಲೋಕ:– ಸ್ತೋತವ್ಯಕರ್ಮಾಣಮಿಲಾತಲೇऽಸ್ಮಿನ್ ಗಾತವ್ಯ ಮಹಾತ್ಮ್ಯ ಸುಪಾತ್ರಭೂ ತಮ್।
ಲಾತವ್ಯರೂಪಂ ಗುರುವಾದಿರಾಜಂ ಧ್ಯಾತವ್ಯಮೂರ್ತಿಂ ಪ್ರಣತೋಽಸ್ಮಿಭಕ್ತ್ಯಾ ॥2॥**

ಅರ್ಥ:– ಈ ಭೂಮಿಯಲ್ಲಿ ಯಾರ ಲೀಲೆಗಳು ಸ್ತುತಿಸಲು ಯೋಗ್ಯವಾಗಿದೆಯೋ ಯಾರ ಮಹಾತ್ಮ್ಯಗಳು ಹಾಡಲು ಯೋಗ್ಯವಾಗಿದೆಯೋ, ಅಂತಹ ಧ್ಯಾನಿಸಲು ಯೋಗ್ಯರಾದ, ಸುಪಾತ್ರರಾದ ಲಾತವ್ಯ ಸ್ವರೂಪರಾದ ಗುರು ವಾದಿರಾಜರನ್ನು ಭಕ್ತಿಯಿಂದ ನಮಸ್ಕರಿಸುತ್ತೇನೆ.

**ಶ್ಲೋಕ:– ಶ್ರೀ ವೇದವೇದ್ಯಂ ಪರಮಂ ಗುರುಂ ತಂ ಪ್ರಣಮ್ಯ ತಚ್ಛಿಷ್ಯವರಾನ್ಗುರೂನ್ಮೇ।
ಶ್ರೀ ವೇದನಿಧ್ಯಾಖ್ಯಯತೀಂಸ್ತದಾಜ್ಞಾಮಾಲಂಬ್ಯ ಸಂವಚ್ಮಿ ಗುರೋಶ್ಚರಿತ್ರಮ್ ॥3॥**

ಅರ್ಥ:– ಪರಮ ಗುರುಗಳಾದ ಶ್ರೀ ವೇದವೇದ್ಯರನ್ನು ಹಾಗೆಯೇ ಅವರ ಶ್ರೇಷ್ಠ ಶಿಷ್ಯರಾದ ನನ್ನ ಗುರುಗಳಾದ ಶ್ರೀ ವೇದನಿಧಿಯತಿಗಳನ್ನು ನಮಸ್ಕರಿಸಿ, ಅವರ ಆಜ್ಞೆಯನ್ನು ಆಶ್ರಯಿಸಿ ಗುರುಗಳ (ವಾದಿರಾಜರ) ಚರಿತ್ರೆಯನ್ನು ಯಥಾರ್ಥವಾಗಿ ಹೇಳುವೆನು.

**ಶ್ಲೋಕ:– ಸುರೈ: ಪ್ರವರ್ಣ್ಯಂ ಗುರುವಾದಿರಾಜಚರಿತ್ರಮಾವರ್ಣಯಿತುಂ ಸಮುತ್ಕಃ।
ಹಾಸ್ಯೋ ಭವೇಯಂ ವಿಬುಧೈಸ್ತಥಾಪಿ ಗುರೂತ್ತಮಾಜ್ಞಾ ಬಲತಃ ಪ್ರವೃತ್ತಃ ॥4॥**

ಅರ್ಥ:– ದೇವತೆಗಳಿಂದ ಹಾಗೂ ಅಪರೋಕ್ಷ ಜ್ಞಾನಿಗಳಿಂದ, ಚೆನ್ನಾಗಿ ವರ್ಣಿಸಲು ಯೋಗ್ಯವಾದ ಗುರುವಾದಿರಾಜರ ಚರಿತ್ರೆಯನ್ನು ನಾನು ವರ್ಣಿಸಲು ಉತ್ಸುಕನಾಗಿರುವೆ ನೆಂಬುದು ಹಾಸ್ಯಾಸ್ಪದವೇ, ಆದಾಗ್ಯೂ ಗುರುಗಳ ಆಜ್ಞಾ (ಅನುಗ್ರಹ) ಬಲದಿಂದ ಪ್ರವೃತ್ತನಾಗಿದ್ದೇನೆ.

**ಶ್ಲೋಕ:– ಕುಠಾರಪಾಣಿನಾ ಸೃಷ್ಟೇ ತೌಲವೇ ಮಂಡಲೇ ಪುರಾ ।
ಕುಂಭಾಸಿಕ್ಷೇತ್ರ ನಿಕಟೇ ಪುಷ್ಪಕಾಸಾರ ಸಂಜ್ಞಕೇ ॥5॥
ರಾಮಾಚಾರ್ಯಃ ಸಾಮವೇದೀ ಷಟ್‌ಕರ್ಮ ನಿರತೋ ದ್ವಿಜಃ ।
ಸರಸ್ವತ್ಯಾಖ್ಯಯಾ ಪತ್ನ್ಯಾ ಸ್ವಧರ್ಮನಿರತೋऽ ವಸತ್ ॥6॥**

ಅರ್ಥ:– ಹಿಂದೆ ಪರಶುರಾಮ ಸೃಷ್ಟಿಯಲ್ಲಿ, ತೌಳವ ದೇಶದಲ್ಲಿ, ಕುಂಭಾಸಿ ಕ್ಷೇತ್ರದ ಸಮೀಪದಲ್ಲಿರುವ ಹೂವಿನಕೆರೆ ಎಂಬ ಗ್ರಾಮದಲ್ಲಿ ಸಾಮವೇದಿಗಳಾದ ಷಟ್‌ಕರ್ಮನಿರತರಾದ ರಾಮಾಚಾರ್ಯ ಎಂಬ ಬ್ರಾಹ್ಮಣರು ಸರಸ್ವತಿ ಎಂಬ ಹೆಸರಿನ ತಮ್ಮ ಪತ್ನಿಯೊಂದಿಗೆ ಸ್ವಧರ್ಮದಲ್ಲಿ ನಿರತರಾಗಿ ವಾಸವಾಗಿದ್ದರು.

**ಶ್ಲೋಕ:– ಯಾಂ ಗೌರೀಮಿತಿ ಚ ಪ್ರಾಹುರ್ದೇವಭಟ್ಟಂ ಚ ತಂ ವಿದುಃ ।
ಸಂತಾನವಾನ್‌ಕನ್ಯಕಯಾ ಲಿಪ್ಸುಃ ಸುಗುಣಮಾತ್ಮಜಂ ॥7॥**

ಅರ್ಥ:– ಆ ಸರಸ್ವತಿಯನ್ನು ಗೌರಿ ಎಂದೂ ರಾಮಾಚಾರ್ಯರನ್ನು ದೇವಭಟ್ಟರೆಂದೂ ಕರೆಯುತ್ತಿದ್ದರು. ಕನ್ಯಾಸಂತಾನವುಳ್ಳ ಆ ದಂಪತಿಗಳು ಸದ್ಗುಣವುಳ್ಳ ಮಗನನ್ನು ಪಡೆಯಬೇಕೆಂದು ಇಚ್ಛಿಸಿದರು.

**ಶ್ಲೋಕ:– ಕುಂಭಾಸಿಕ್ಷೇತ್ರಮಠಗಾನ್ ಶ್ರೀ ವಾಗೀಶಮುನೀಶ್ವರಾನ್ ।
ಭಕ್ತಾನುಗ್ರಹದಕ್ಷಾಂಸ್ತಾನ್ ಶ್ರುತ್ವಾ ಶರಣಮೇಯಿವಾನ್ ॥8॥**

ಅರ್ಥ:– ಕುಂಭಾಸಿ ಕ್ಷೇತ್ರದಲ್ಲಿರುವ ಮಠದಲ್ಲಿ ವಾಸವಾಗಿರುವ ಶ್ರೀ ವಾಗೀಶ ಮುನಿವರ್ಯರು ಭಕ್ತರ ಅಭೀಷ್ಟಗಳನ್ನು ಈಡೇರಿಸುವದರಲ್ಲಿ ದಕ್ಷರು ಎಂಬುದಾಗಿ ತಿಳಿದು, ಅವರನ್ನು ಶರಣು ಹೊಂದಿದರು.

ಶ್ಲೋಕ:– ಗೌರೀ ತು ಸುತಲಾಭಃ ಸ್ಯಾದ್ಯದಿ ಲಕ್ಷಸುಭೂಷಣೈಃ ।
ಶ್ರೀಪತಿಂ ಪೂಜಯಿಷ್ಯೇಽಹಮಿತಿ ಸಂಕಲ್ಪವತ್ಯಭೂತ್॥ ॥9॥

ಅರ್ಥ:– ಗೌರಿಯಾದರೋ ಪುತ್ರ ಸಂತಾನವಾದರೆ ಶ್ರೀ ಲಕ್ಷ್ಮೀಪತಿಯನ್ನು ಲಕ್ಷಾಭರಣಗಳಿಂದ ಪೂಜಿಸುತ್ತೇನೆ ಎನ್ನುವ ಸಂಕಲ್ಪವುಳ್ಳವಳಾದಳು.

ಶ್ಲೋಕ:– ಶ್ರೀ ವಾಗೀಶಯತೀಶಾಸ್ತೇ ದಂಪತೀ ಶರಣಾಗತೌ ।
ಕೃಪಾದೃಷ್ಟ್ಯಾಽನು ಗೃಣ್ವಂತೋ ಭವೇತಾಂ ಪುತ್ರಶಾಲಿನೌ ॥10॥

ಅರ್ಥ:– ಶರಣು ಹೊಂದಿದ ದಂಪತಿಗಳಿಗೆ ಶ್ರೀ ವಾಗೀಶರು ಕೃಪಾದೃಷ್ಟಿಯಿಂದ ಅನುಗ್ರಹಿಸುತ್ತಾ ಪುತ್ರವಂತರಾಗಿರೆಂದು ಆದೇಶಿಸಿದರು.

ಶ್ಲೋಕ:– ಮಂತ್ರಾಕ್ಷತಾನ್ ಸ್ವೀಕುರುತಮಿತ್ಯುಕ್ತ್ವಾ ಪ್ರದದುಃ ಕಿಲ. ।
ಕಿಂ ತು ವಾಚಂ ಯುವಾಂ ಪಾತಂ ಮದೀಯಾಂಜಾತಮಾತ್ರಕಮ್ ॥11॥

ಅರ್ಥ:– ಮಂತ್ರಾಕ್ಷತೆಯನ್ನು ಸ್ವೀಕರಿಸಿ ಎಂದು ಹೇಳಿ ಮಂತ್ರಾಕ್ಷತೆಯನ್ನು ಕೊಟ್ಟರು ಮತ್ತು ಹುಟ್ಟಿದ ತತ್‌ಕ್ಷಣ ದಿಂದಲೇ ಮಗು ನನ್ನದು ಎಂದು ಹೇಳಿದರು.

ಶ್ಲೋಕ:– ಪವಿತ್ರಸ್ವರ್ಣಪಾತ್ರಸ್ಥಂ ಸ್ವರ್ಣವರ್ಣಮನೋರಮಮ್ ।
ಶಿಶುಂ ದತ್ತಂ ಮದಾರಾಧ್ಯ ಕೋಲಾಯೇತಿ ವಚೋಽಬ್ರುವನ್ ॥12॥

ಅರ್ಥ:– ಪವಿತ್ರವಾದ ಸುವರ್ಣಪಾತ್ರೆಯಲ್ಲಿರುವ, ಹೊಂಬಣ್ಣದ ಮನೋಹರವಾದ, ದತ್ತವಾದ ಶಿಶುವು ತನ್ನ ಆರಾಧ್ಯ ದೇವತೆಯಾದ ಭೂವರಾಹನಿಗೆ (ಸಮರ್ಪಿಸಬೇಕು) ಎನ್ನುವ ಮಾತುಗಳನ್ನು ಹೇಳಿದರು.

ಶ್ಲೋಕ:– ಆಕರ್ಣ್ಯ ತದ್ವಾಚಮಿಮಾಂ ತು ದಂಪತೀ
ಖಿನ್ನೌ ಯದಾಽಽಸ್ತಾಂ ಗುರವೋಽವದಂಸ್ತದಾ ।
ಯದಿ ಪ್ರಸೂಯೇತ ಭವನ್ನಿಕೇತನೇ
ತದಾ ಸ ಬಾಲೋ ಯುವಯೋಃ ಪರಂ ಭವೇತ್ ॥13॥

ಅರ್ಥ:– ಅವರ ಈ ಮಾತುಗಳನ್ನು ಕೇಳಿದ ಆ ದಂಪತಿಗಳು ದುಃಖಿತರಾಗಲು ಆಗ ಗುರುಗಳು "ಆ ಮಗುವು ನಿಮ್ಮ ಮನೆಯಲ್ಲಿ ಹುಟ್ಟಿದರೆ ನಿಮ್ಮವನಾಗುವನು" ಎಂದು ಹೇಳಿದರು.

ಶ್ಲೋಕ:– ಬಹಿಃ ಪ್ರಸೂಯೇತ ತದಾ ಸ ಮಹ್ಯಂ
ದೇಯಃ ಸುದೈವಂ ಹಿ ಪರೀಕ್ಷಣೀಯಂ ।
ಆಶ್ವಾಸಿತಾವೇವಮಮೂನ್ಪ್ರಣಮ್ಯ
ಗೃಹಂ ಗತೌ ಸಾ ತು ಬಭಾರ ಗರ್ಭಂ ॥14॥

ಅರ್ಥ:– "ಮನೆಯ ಹೊರಗೆ ಪ್ರಸವಿಸಿದರೆ ಆಗ ಆ ಮಗುವನ್ನು ನಮಗೆ ಕೊಡತಕ್ಕದ್ದು. ಅದೃಷ್ಟವನ್ನು ಪರೀಕ್ಷಿಸೋಣ" ಈ ರೀತಿಯಾಗಿ ಗುರುಗಳು ಭರವಸೆಯನ್ನು ಕೊಡಲು ಆ ದಂಪತಿಗಳು ಅವರಿಗೆ ನಮಿಸಿ ಮನೆಗೆ ಹೋದರು. ಕೆಲವು ಸಮಯ ನಂತರ ಆ ಗೌರಿದೇವಿ ಗರ್ಭವನ್ನು ಧರಿಸಿದಳು.

ಶ್ಲೋಕ:– ಸಾ ಗರ್ಭಿಣೀ ದೋಹದಮದ್ಭುತಂ ತದ್ದಧಾರ ತೀರ್ಥಾದ್ಯವಗಾಹನೇಚ್ಛುಃ॥
ತತ್ತ್ವಾನಿ ಶುಶ್ರೂಷುರಹೋ ದಿದೃಕ್ಷುರ್ಹರೇಃ ಶುಭಾರ್ಚಾಃ ಕಿಲ ಸಂಬಭೂವ ॥15॥

ಅರ್ಥ:– ಆ ಗರ್ಭವು (ಕಾಮಧೇನುವಿನಂತೆ) ಅದ್ಭುತ (ಅಭೀಷ್ಟಗಳನ್ನು) ಕೊಡುವ (ಜೀವವನ್ನು) ಧರಿಸಿತು. ಆ ಗರ್ಭಿಣಿಯು ತೀರ್ಥಾದಿಗಳಲ್ಲಿ ಸ್ನಾನವನ್ನು ಇಚ್ಛಿಸಿದಳು. ಶ್ರೀ ಹರಿಯ ನಿಜಸ್ವರೂಪವನ್ನು ಸೇವಿಸಿದಳು. ಅವಳಿಗೆ ಶ್ರೀ ಹರಿಯ ಶೋಭನವಾದ ಪೂಜೆಗಳನ್ನು ನೋಡುವ ಇಚ್ಛೆಗಳುಂಟಾಗುತ್ತಿದ್ದವು.

ಶ್ಲೋಕ:– ರಾಮಾಚಾರ್ಯೋ ಗುರೋರ್ವಾಚಂ ಸ್ಮರನ್ಪೂರ್ಣಸುಗರ್ಭಿಣೀಮ್।
ಗೇಹಾಂತರೇಽವರುರುಧೇ ಬಹಿಃ ಪ್ರಸವಭೀತಿತ: ॥16॥

ಅರ್ಥ:– ರಾಮಾಚಾರ್ಯರು ಗುರುಗಳ ಮಾತನ್ನು ಜ್ಞಾಪಿಸಿಕೊಳ್ಳುತ್ತಾ ಮನೆಯ ಹೊರಗೆ ಹೆರಿಗೆ ಆಗಬಹುದುದೆಂಬ ಹೆದರಿಕೆಯಿಂದ ತುಂಬು ಗರ್ಭಿಣಿಯಾದ ಸರಸ್ವತಿದೇವಿಯರನ್ನು ಮನೆಯ ಹೊರಗೆ ಹೋಗದಂತೆ ತಡೆಯುತ್ತಿದ್ದರು.

ಶ್ಲೋಕ:– **ಸಂಪ್ರಾಪ್ತೇ ದಶಮೇ ಮಾಸೇ ಸಾಧನದ್ವಾದಶೀ ತಿಥೌ ।**
ಆಚಾರ್ಯೇ ಪಾರಣಾಸಕ್ತೇ ತದಾ ಕೇದಾರಸಸ್ಯಕಮ್ ॥ 17॥

ಗೌರೇಕಾ ಸಹಸಾಽಽಗತ್ಯ ಭೋಕ್ತುಂ ಸಮುಪಚಕ್ರಮೇ ।

ಅರ್ಥ:– ಗರ್ಭಿಣಿಗೆ ಹತ್ತನೆ ತಿಂಗಳು ಪ್ರಾಪ್ತವಾಗಲು, ಸಾಧನದ್ವಾದಶಿಯ ದಿನ ರಾಮಾಚಾರ್ಯರು ಪಾರಣಾಸಕ್ತರಾಗಿರಲು, ಹಠಾತ್ತಾಗಿ ಒಂದು ಹಸುವು ಗದ್ದೆಯಲ್ಲಿನ ಸಸ್ಯವನ್ನು ತಿನ್ನಲು ಪ್ರಾರಂಭಿಸಿತು.

ಶ್ಲೋಕ:– **ದಾರಿದ್ರ್ಯಪೀಡಿತಾ ಸಾಧ್ವೀ ಸಸ್ಯಭಕ್ಷಣತತ್ಪರಾಮ್ ॥ 18 ॥**
ಪತ್ಯಾಜ್ಞಯಾ ಗಾಂ ನಿರೋದ್ಧುಂ ಕೇದಾರಂ ಪ್ರಾಪ ಸತ್ವರಮ್

ಅರ್ಥ:– ಪೈರನ್ನು ಮೇಯುತ್ತಿರುವ ಗೋವನ್ನು ತಡೆಯಲು, ಬಡತನದಿಂದ ತೊಂದರೆ ಪಡುತ್ತಿದ್ದ ಆ ಸಾಧ್ವಿಯು ಪತಿಯ ಆಜ್ಞೆಯ ಮೇರಿಗೆ ಗದ್ದೆಗೆ ಆ ಕೂಡಲೇ ಬಂದಳು.

ಶ್ಲೋಕ:– **ತದಾ ತತ್ರೈವ ಸುಷುವೇ ಭಾಸ್ಕರಪ್ರಭಮಾತ್ಮಜಮ್ ॥19॥**

ಅರ್ಥ:– ಆ ಸಮಯದಲ್ಲಿ ಆ ಸಾಧ್ವಿಯು ಅಲ್ಲಿಯೇ (ಗದ್ದೆಯಲ್ಲಿ) ಸೂರ್ಯನಂತೆ ಪ್ರಕಾಶಮಾನನಾದ ಮಗುವನ್ನು ಹೆತ್ತಳು.

ಶ್ಲೋಕ:– **ಜ್ಞಾನದೃಷ್ಟ್ಯೈವ ಗುರುಭಿರ್ವಿಜ್ಞಾತಾರ್ಥೈಃ ಪುರಾಗತೈಃ ।**
ಪ್ರಸೂತಿಕಾರ್ಯಕುಶಲಾ ನಿಯುಕ್ತಾ ವೃದ್ಧಯೋಷಿತಃ ॥ 20 ॥

ಅರ್ಥ:– ಈ ಮೊದಲೇ ಜ್ಞಾನದೃಷ್ಟಿಯಿಂದ ಎಲ್ಲವನ್ನೂ ತಿಳಿದ ಗುರುಗಳಾದ ವಾಗೀಶತೀರ್ಥ ಯತಿಗಳಿಂದ ಕಳುಹಿಸಲ್ಪಟ್ಟ ಪ್ರಸೂತಿಕಾರ್ಯನಿಪುಣರಾದ ವೃದ್ಧಸ್ತ್ರೀಯರು ಅಲ್ಲಿಗೆ ಬಂದಿದ್ದರು.

ಶ್ಲೋಕ:– **ಗುರ್ವಾದೇಶಾದ್ಧರ್ಮಮಯಶರಾವೇಣಾದ್ಭುತಂ ಶಿಶುಮ್ ।**
ಭೂಮಿಸ್ಪರ್ಶಾತ್ಪುರೈವಾಽಽಶು ಜಗೃಹುಃ ಪೂತದೇಹಿನಮ್ ॥ ॥21॥

ಅರ್ಥ:– ಗುರುಗಳ ಆದೇಶದಂತೆ ಪರಿಶುದ್ಧದೇಹವುಳ್ಳ ಅದ್ಭುತವಾದ ಮಗುವನ್ನು ಭೂಸ್ಪರ್ಶವಾಗುವ ಮೊದಲೇ ವೃದ್ಧ ಸ್ತ್ರೀಯರು ಸುವರ್ಣಪಾತ್ರೆಯಲ್ಲಿ ಹಿಡಿದರು.

ಶ್ಲೋಕ:– **ಸಾಧ್ವೀ ಸಾ ಕ್ಷೇತ್ರಮಧ್ಯೇ ತು ಪ್ರತಿಸೀರಾಂತರೇ ಸ್ಥಿತಾ ।**
ವೃದ್ಧಾಃ ಪರಿಚರಂತೀಸ್ತಾಃ ಸಂವೀಕ್ಷ್ಯಾಶ್ಚರ್ಯತೋಽಬ್ರವಿತ್ ॥22॥
ಕುತೋ ಜವನಿಕಾ ಸೇಯಂ ಪರಿಚಾರಪರಾಯಣಾ: ।
ಕುತೋ ಭವತ್ಯೋ ಮಾನ್ಯಾಶ್ಚ ಸಮೇತಾ ದುರ್ಗತಾಮಿತಿ ॥23॥

ಅರ್ಥ:– ಆ ಸಾಧ್ವಿಯು ಗದ್ದೆ ಮಧ್ಯದಲ್ಲಿ ಬಟ್ಟೆ ಪರದೆ ಹಿಡಿದು ನಿಂತು ಸೇವೆ ಮಾಡುತ್ತಿರುವ ವೃದ್ಧೆಯರನ್ನು ನೋಡಿ ವಿಸ್ಮಿತಳಾಗಿ "ಈ ಪರದೆ ಎಲ್ಲಿಂದ ಬಂದಿತು? ಬಡವಳಾದ ನನ್ನ ಪರಿಚಾರಿಕೆಯಲ್ಲಿ ತತ್ಪರರಾದ ಮಾನಿನಿಯರಾದ ನೀವು ಎಲ್ಲಿಂದ ಬಂದಿರುವಿರಿ?" ಎಂದು ನುಡಿದಳು.

ಶ್ಲೋಕ:– **ಇತಃ ಸಮೀಪೇ ವಾಗೀಶಯೋಗಿಭಿಃ ಸಂಪ್ರಚೋದಿತಾಃ ।**
ಸೇವಿತುಂ ಭವತೀಂ ಪ್ರಾಪ್ತಾ ಇತ್ಯಾಹುರ್ಗುರುಸತ್ಕೃಪಾಮ್ ॥24॥

ಅರ್ಥ:– ಗುರುಗಳ ಕೃಪಾಕಟಾಕ್ಷವನ್ನು ಹೊಂದಿದ ತಮ್ಮನ್ನು ಸೇವಿಸಲು ಇಲ್ಲಿಯೇ ಸಮೀಪದಲ್ಲಿರುವ ವಾಗೀಶಯೋಗಿಗಳು ನಮ್ಮನ್ನು ಕಳುಹಿಸಿರುತ್ತಾರೆ ಎಂದು ಆ ಸ್ತ್ರೀಯರು ಹೇಳಿದರು.

ಶ್ಲೋಕ:– **ತತೋ ವೃದ್ಧಾಭಿರಾನೀತಾ ಸಶಿಶುಸ್ಸಾ ಸರಸ್ವತೀ ।**
ರಾಮಾಚಾರ್ಯಸ್ತನ್ಮುಖೇನ ಶ್ರುತ್ವಾ ಸರ್ವಂ ಸುವಿಸ್ಮಿತಃ ॥25॥

ಅರ್ಥ:– ಅನಂತರ ವೃದ್ಧಸ್ತ್ರೀಯರಿಂದ ಮಗುವಿನೊಂದಿಗೆ ಕರೆತರಲ್ಪಟ್ಟ ಆ ಸರಸ್ವತಿಯ ಮುಖಾಂತರ ಎಲ್ಲವನ್ನೂ ಕೇಳಿದ ರಾಮಾಚಾರ್ಯರು ಸುವಿಸ್ಮಿತರಾದರು.

ಶ್ಲೋಕ:– **ಸ್ವರ್ಣಪಾತ್ರಧೃತಂ ಬಾಲಂ ಗುರೂಣಾಂ ಸನ್ನಿಧೌ ಮುದಾ ।**
ನ್ಯವೇದಯದಖಿನ್ನಃ ಸನ್ ಗುರುವ್ರೋ ವೀಕ್ಷ್ಯ ಬಾಲಕಮ್ ॥26॥
ಭಾವಿವಾಯೋ ನಮಸ್ತುಭ್ಯಮೃಜುವರ್ಯ ಪ್ರಸೀದ ನಃ ।
ಇತಿ ಸ್ಮರಂತಶ್ಚಿತ್ತೇನ ಪಸ್ಪೃಶುಃ ಶಿಶುಮಾದರಾತ್ ॥27॥

ಅರ್ಥ:– ಸ್ವರ್ಣಪಾತ್ರೆಯಲ್ಲಿ ಧಾರಣ ಮಾಡಿದ ಮಗುವನ್ನು ಗುರುಗಳ ಸನ್ನಿಧಿಯಲ್ಲಿ ಖಿನ್ನ ಮನಸ್ಕರಾಗದೆ ಆ ದಂಪತಿಗಳು ಸಂತೋಷದಿಂದಲೇ ತಂದು ಅರ್ಪಿಸಿದರು. ಮಗುವನ್ನು ನೋಡಿ ಗುರುಗಳು "ಭಾವೀ ವಾಯುವೇ! ಋಜುವರ್ಯನೇ! ನಿನಗೆ ನಮಸ್ಕಾರವು ನಮ್ಮನ್ನು ಅನುಗ್ರಹಿಸು" ಎಂದು ಮನಸ್ಸಿನಲ್ಲಿ ಸ್ಮರಿಸುತ್ತಾ ಆ ಮಗುವನ್ನು ಆದರದಿಂದ ಸ್ಪರ್ಶ ಮಾಡಿದರು.

ಶ್ಲೋಕ:– **ಶಿಶೋರ್ವಿಯೋಗಮಾಶಂಕ್ಯ ವಿಷಣ್ಣೌ ದಂಪತೀ ತದಾ ।**
ಪಂಚಾಬ್ಧಮೇತಂ ಪುಷ್ಣೀತಮೇತಲ್ಲೀಲಾ ವಿನೋದಿತೌ ॥28॥
ಇತಿ ವಾಗೀಶತೀರ್ಥೋಕ್ತಿಸುಧಾಸಂಜೀವಿತೌ ಗುರೂನ್ ।
ಪ್ರಣಮ್ಯ ಶಿಶುಮಾದಾಯ ಗೃಹಂ ವಿವಿಶತುರ್ಮುದಾ ॥29॥

ಅರ್ಥ:– ಆಗ ಶಿಶುವಿನ ವಿಯೋಗವನ್ನು ಶಂಕಿಸಿಕೊಂಡು ದುಃಖಿತರಾದ ದಂಪತಿಗಳಿಗೆ, "ಐದು ವರ್ಷಗಳವರೆಗೆ ಈ ಶಿಶುವನ್ನು ಪೋಷಿಸಿರಿ, ಅವನ ಬಾಲಲೀಲೆಯಿಂದ ಸಂತೋಷಪಡಿರಿ" ಈ ರೀತಿಯಾಗಿ ಹೇಳಿದ ವಾಗೀಶತೀರ್ಥರ ಮಾತುಗಳು ಆದಂಪತಿಗಳಿಗೆ ಅಮೃತ ಸಂಜೀವಿನಿಯಂತಾಯಿತು. ಗುರುಗಳಿಗೆ ನಮಿಸಿ, ಶಿಶುವನ್ನು ಕರೆದುಕೊಂಡು ಸಂತೋಷದಿಂದ ಮನೆಗೆ ತೆರಳಿದರು.

ಶ್ಲೋಕ:– **ಶಾಲಿವಾಹಸ್ಯಸುಶಕೇ ಪಕ್ಷಾಕಾಶಯುಗೇಂದುಕೇ ।**
ಶಾರ್ವರೀವತ್ಸರೇ ಮಾಘೇ ಶುಕ್ಲದ್ವಾದಶಿಕಾತಿಥೌ ॥30॥
ಋಜುದೇವಃ ಸ ಲಾತವ್ಯೋ ಧರಣ್ಯಾಮವತೀರ್ಣವಾನ್

ಅರ್ಥ:– ಶಾಲಿವಾಹನಶಕೆ 1402ನೇ ಶಾರ್ವರಿ ಸಂವತ್ಸರದ ಮಾಘ ಶುದ್ಧ ದ್ವಾದಶಿ ತಿಥಿಯಲ್ಲಿ ಆ ಋಜುದೇವತೆಯಾದ ಲಾತವ್ಯರು ಭೂಮಿಯಲ್ಲಿ ಅವತರಿಸಿದರು.

ಶ್ಲೋಕ:– **ಏಕಾದಶೇಽಹ್ನಿ ರಾಮಾರ್ಯೋ ಜಾತಕರ್ಮಾದಿ ಕಾರಯನ್ ॥31॥**

ಅರ್ಥ:– ಹನ್ನೊಂದನೇ ದಿನ ರಾಮಾಚಾರ್ಯರು ಮಗುವಿಗೆ ಜಾತಕರ್ಮಾದಿಗಳನ್ನು ಮಾಡಿದರು.

ಶ್ಲೋಕ:– **ವರಾಹಕೃಪಯಾ ಜಾತಂ ವರಾಹಾಖ್ಯಂ ವ್ಯಧಾತ್ತತಃ ।**

ಅರ್ಥ:– ವರಾಹದೇವರ ಕೃಪೆಯಿಂದ ಜನಿಸಿದ ಮಗುವಿಗೆ 'ವರಾಹ' ನೆಂದು ನಾಮಕರಣ ಮಾಡಿದರು.

ಶ್ಲೋಕ:– **ಅಮರ್ತ್ಯಲೀಲಂ ಬಾಲಂ ತಂ ಪಂಚಮೇಽಬ್ದೇ ಪಿತಾ ಮುದಾ ॥32॥**
ಉಪನಿನ್ಯೇ ಸುಲಗ್ನೇ ಹಿ ಪತ್ನ್ಯಾ ಸಾಕಂ ಸಬಾಂಧವಃ ।

ಅರ್ಥ:– ದೇವತಾ ಲೀಲೆಯುಳ್ಳ ಆ ಬಾಲಕನಿಗೆ ಐದನೇ ವರ್ಷದಲ್ಲಿ ತಂದೆಯಾದ ರಾಮಾಚಾರ್ಯರು ಸುಮುಹೂರ್ತದಲ್ಲಿ ಪತ್ನಿ ಹಾಗೂ ಬಂಧುಗಳೊಂದಿಗೆ ಕೂಡಿಕೊಂಡು ಉಪನಯನ ಮಾಡಿದರು.

ಶ್ಲೋಕ:– **ತತೋ ಗುರುನಿದೇಶೇನ ಪತ್ನೀಪುತ್ರಾನ್ವಿತೋ ದ್ವಿಜಃ ॥33॥**
ಸಮಾಗತಃ ಸನ್ನಮಾಮ ಪ್ರೋಕ್ತಶ್ಚೈವಂ ಗುರೂತ್ತಮೈಃ ।
ವರಾಹಕರುಣಾಜಾತೋ ವರಾಹಸ್ಯೈವ ಸನ್ನಿಧೌ ॥34॥
ತಿಷ್ಠತ್ವಿತಃ ಪರಂ ಹೀತಿ ವಿಷಣ್ಣೋ ಜಾಯಯಾ ದ್ವಿಜಃ ।

ಅರ್ಥ:– ಅನಂತರ ಗುರುಗಳ ಆದೇಶದಂತೆ ಪತ್ನಿ, ಪುತ್ರರೊಂದಿಗೆ ಆಗಮಿಸಿ ನಮಸ್ಕರಿಸಲು ಶ್ರೇಷ್ಠರಾದ ಗುರುಗಳು "ವರಾಹದೇವರ ಕರುಣೆಯಿಂದ ಹುಟ್ಟಿದ ಈ ವರಾಹನು ಇನ್ನು ಮುಂದೆ ವರಾಹನ ಸನ್ನಿಧಿಯಲ್ಲಿಯೇ ಇರುವವನಾಗಲಿ" ಎಂದು ನುಡಿದರು. ಇದನ್ನು ಕೇಳಿದ ರಾಮಾಚಾರ್ಯರಿಗೆ ದುಃಖವಾಯಿತು.

ಶ್ಲೋಕ:– **ಅತ್ರೈವ ವಸತಂ ಬಾಲವೀಕ್ಷಣಾನಂದಿತೌ ಸದಾ ॥35॥**
ಇತಿ ಗುರುವರವಾಚಾ ದಂಪತೀ ಹೃಷ್ಟಚಿತ್ತೌ
ಯತಿವರಸವಿಧೇ ತೌ ಬಾಲವಕ್ತ್ರೇಂದು ದೃಷ್ಟ್ವಾ ।

ಕಿಟವರಪದಸೇವಾತತ್ಪರೌ ಶ್ಲಾಘ್ಯಚರ್ಯೌ
ಕ್ಷಣಮಿವ ಬಹುಕಾಲಂ ನಿನ್ಯತುರ್ದೇವಭಕ್ತೌ ॥36॥

ಅರ್ಥ:– "ನೀವು ಕೂಡಾ ಇಲ್ಲಿಯೇ ವಾಸಮಾಡಿ ಬಾಲಕನನ್ನು ನೋಡುತ್ತಾ ಸದಾ ಆನಂದ ಹೊಂದಿರಿ." ಗುರುಗಳ ಈ ಮಾತುಗಳು ಆ ದಂಪತಿಗಳ ಮನಸ್ಸಿಗೆ ಸಂತೋಷವನ್ನುಂಟುಮಾಡಿತು. ವರಾಹದೇವರ ಪಾದಸೇವೆಯಲ್ಲಿ ತತ್ಪರರಾದ; ಶ್ಲಾಘನೀಯ ಆಚರಣೆಯುಳ್ಳ ದೇವಭಕ್ತರಾದ ಆ ದಂಪತಿಗಳು ಚಂದ್ರನಂತೆ ಮುಖವುಳ್ಳ ಬಾಲಕನ ನೋಟದಿಂದ ಬಹುಕಾಲವನ್ನು ಕ್ಷಣಕಾಲದಂತೆ ಕಳೆದವರಾದರು.

ಶ್ಲೋಕ:– **ಇತಿ ಶ್ರೀ ವೇದನಿಧಿತೀರ್ಥಾಂತೇ ವಾಸಿ ರಾಮಚಂದ್ರಾಚಾರ್ಯ ವಿರಚಿತೇ**
ಶ್ರೀ ವಾದಿರಾಜಗುರುವರಚರಿತಾಮೃತೇ ಪ್ರಥಮಬಿಂದುಃ ಸಮಾಪ್ತಃ ॥

ಅರ್ಥ:– ಇಲ್ಲಿಗೆ ಶ್ರೀ ವೇದನಿಧಿತೀರ್ಥರ ಶಿಷ್ಯರಾದ ರಾಮಚಂದ್ರಾಚಾರ್ಯರಿಂದ ರಚಿತವಾದ ಶ್ರೀ ವಾದಿರಾಜಗುರುವರಚರಿತಾಮೃತದಲ್ಲಿ ಪ್ರಥಮ ಬಿಂದುವು ಮುಗಿಯಿತು.

॥ ದ್ವಿತೀಯ ಬಿಂದುಃ ॥

॥ ಶ್ರೀ ವಾರಿರಾಜ ಪೂಜ್ಯ ಚರಣಃ ಪ್ರಸೀದತಾಮ್ ॥

ಶ್ಲೋಕ:– **ಶ್ರೀ ವಾಗೀಶಮುನೀಂದ್ರಾಣಾಂ ಸಕಾಶೇಽಘವಿನಾಶಕೇ ।**
ಶ್ರೀನಿವಾಸಾಭಿದಃ ಕಶ್ಚಿತ್ಪೂರ್ವಬಂಧುರಭೂತ್ಕಿಲ ॥1॥

ಅರ್ಥ:– ಪಾಪಪರಿಹಾರಕ ಶ್ರೀವಾಗೀಶಮುನಿಗಳ ಸಮೀಪದಲ್ಲಿ ಶ್ರೀನಿವಾಸನೆಂಬ ಹೆಸರುಳ್ಳ ಅವರ ಪೂರ್ವಾಶ್ರಮ ಬಂಧುಗಳೊಬ್ಬರು ಇದ್ದರು.

ಶ್ಲೋಕ:– **ವಿನಷ್ಟಪುತ್ರಸ್ವಜನೋ ವಿರಕ್ತೋ ವಾರ್ಧಕೇಽಭವತ್ ।**
ಕಾವ್ಯತರ್ಕವಿನೋದೀ ಚ ಮಾಧ್ವರಾದ್ಧಂತ ಕೋವಿದಃ ॥2॥

ಅರ್ಥ:– ಮಗನನ್ನು ಸ್ವಬಾಂಧವರನ್ನು ಕಳೆದಕೊಂಡ ಅವರು ವೈರಾಗ್ಯಶಾಲಿಗಳಾಗಿ ವೃದ್ಧರಾಗಿದ್ದರು. ಅವರು ಕಾವ್ಯ, ತರ್ಕ, ವಿನೋದಿ ಹಾಗೂ ಮಧ್ವಶಾಸ್ತ್ರಗಳಲ್ಲಿ ಪಂಡಿತರಾಗಿದ್ದರು.

ಶ್ಲೋಕ:– **ಆತ್ಮಪಾವನ ಹೇತೋಸ್ತು ಯತಿತ್ವಂ ಪ್ರಾರ್ಥಯದ್ಗುರೂನ್ ।**
ತತ್ಪಾರ್ಥಿತಾಶ್ಚ ವಾಗೀಶಾಸ್ತಸ್ಮೈ ಸನ್ಯಾಸಸದ್ವ್ರತಮ್ ॥3॥

ಅರ್ಥ:– ಆತ್ಮೋದ್ಧಾರಕ್ಕಾಗಿ ಯತ್ಯಾಶ್ರಮ ನೀಡಬೇಕೆಂದು ಗುರುಗಳನ್ನು ಪ್ರಾರ್ಥಿಸಿದರು. ಯತ್ಯಾಶ್ರಮವನ್ನು ಪ್ರಾರ್ಥಿಸಿದ ಅವರಿಗೆ ಆ ಕೂಡಲೇ ವಾಗೀಶತೀರ್ಥರು ಸನ್ಯಾಸವನ್ನು ನೀಡಿದರು.

ಶ್ಲೋಕ:– **ದತ್ವಾ ವಿದ್ಯಾನಿಧಿಂ ನಾಮ್ನಾ ಖ್ಯಾಪಯಾಮಾಸುರಾದೃತಾಃ ।**
ವರಾಹಾಖ್ಯಂ ಬಾಲಮೇನಂ ತಚ್ಛಿಷ್ಯಂ ವ್ಯದಧುಃ ಕಿಲ ॥4॥

ಅರ್ಥ:– ವಿದ್ಯಾನಿಧಿ ಎಂಬ ಹೆಸರನ್ನು ನೀಡಿ, ಪ್ರೀತಿಸಲ್ಪಟ್ಟ ಅವರನ್ನು ಪ್ರಖ್ಯಾತಿಗೊಳಿಸಿದರು. ವರಾಹನೆಂಬ ಹೆಸರಿನ ಈ ಬಾಲಕನನ್ನು ಅವರ (ವಿದ್ಯಾ) ಶಿಷ್ಯರನ್ನಾಗಿ ಮಾಡಿದರು.

ಶ್ಲೋಕ:– **ಜನ್ಮತಃ ಸರ್ವವೇತ್ತಾಽಯಂ ಮಾನುಷ್ಯಂ ಹಿ ವಿಡಂಬಯನ್ ।**
ಸಕೃದುಕ್ತಾದ್ಗುರೋರ್ವಾಕ್ಯಾದಧಿಕಂ ಜಗೃಹೇ ಸ್ವತಃ ॥5॥

ಅರ್ಥ:– ಹುಟ್ಟುವಾಗಲೇ ಸರ್ವವನ್ನೂ ತಿಳಿದ ಈ ಬಾಲಕನು ಮಾನುಷತ್ವವನ್ನು ಅನುಕರಣೆ ಮಾಡುತ್ತಾ ಗುರುಮುಖದಿಂದ ಒಂದು ಸಲ ಉಕ್ತವಾದ ವಾಕ್ಯದಿಂದ ಅಧಿಕ ವಿಷಯವನ್ನು ಸ್ವತಃ ಗ್ರಹಿಸುತ್ತಿದ್ದನು.

ಶ್ಲೋಕ:– **ಅನನ್ಯಸಾಧಾರಣಬುದ್ಧಿಶಕ್ತಿರ್ವರಾಹನಾಮಾಽಖಿಲ ತತ್ವವೇದೀ ।**
ಸನ್ಯಾಸದೀಕ್ಷಾವಹನೇಪ್ಸಯಾಽಽಜ್ಞಾಂ ವಾಗೀಶತೀರ್ಥಾಜ್ಜಗೃಹೇ ಸುನಮ್ರಃ ॥6॥

ಅರ್ಥ:– ಅಸಾಧಾರಣಬುದ್ಧಿಶಾಲಿಯಾದ ಎಲ್ಲ ತತ್ವಗಳನ್ನೂ ತಿಳಿದ ವರಾಹನು ಸನ್ಯಾಸದೀಕ್ಷೆ ಪಡೆಯಬೇಕೆಂಬ ಅಪೇಕ್ಷೆಯಿಂದ ವಾಗೀಶತೀರ್ಥರಲ್ಲಿ ನಮ್ರಯುತನಾಗಿ ಪ್ರಾರ್ಥಿಸಿದನು.

ಶ್ಲೋಕ:– **ಸ್ವವಂಶಮುಕ್ತಾಮಣಿರೇಕ ಏವ ಸುತೋಯತಿಃಸ್ಯಾತ್ಸ್ವಕುಲಂ ವಿನಶ್ಯೇತ್।**
ಇತ್ಥಂ ವಿಷಣ್ಣೌ ದ್ವಿಜದಂಪತೀ ತೌವಾಗೀಶಯೋಗಿ ದಯಮಾನ ಊಚೇ॥7॥
ಮಾಭೈಷ್ಟಮೇತತ್ಸುತತುಲ್ಯರೂಪೋ ದ್ವಿತೀಯಪುತ್ರೋ ಭವಿತೇತಿ ತತ್ರ ।
ಪಶ್ಚಾತ್ತಯೋಃ ಸೂನುರಭೂದ್ವರಾಹತುಲ್ಯಾತುಕೃತಿಸ್ತೋಷಕರಃ ಸ್ವಪಿತ್ರೋ ॥8॥

ಅರ್ಥ:– ತಮ್ಮ ವಂಶಕ್ಕೆ ಮುತ್ತಿನ ಮಣಿಯಂತಿರುವ ಒಬ್ಬನೇ ಮಗನು ಯತ್ಯಾಶ್ರಮ ಸ್ವೀಕರಿಸಿದರೆ ತಮ್ಮ ಕುಲನಾಶವಾಗುವುದು, ಎಂಬುದಾಗಿ ದುಃಖಿತರಾದ ಆ ದ್ವಿಜ ದಂಪತಿಗಳಿಗೆ ದಯಾವಂತರಾದ ವಾಗೀಶಯೋಗಿಗಳು ಹೇಳಿದರು "ಹೆದರಬೇಡಿರಿ ಈ ಪುತ್ರನಿಗೆ ಸದೃಶನಾದ ಎರಡನೇ ಮಗನು ಹುಟ್ಟುವನು" ಎಂದರು. ಅವರು ನುಡಿದಂತೆಯೇ ಕೆಲವು ಕಾಲದ ನಂತರ ಭೂವರಾಹನಂತೆ ರೂಪವುಳ್ಳ, ತನ್ನ ತಾಯಿ ತಂದೆಗೆ ಸಂತೋಷಕಾರಕನಾದ ಮಗನು ಹುಟ್ಟಿದನು.

ಟಿಪ್ಪಣಿ:– ಮುಂದೆವಾದಿರಾಜರ ಪೂರ್ವಾಶ್ರಮ ತಮ್ಮಂದಿರು ಭಂಡಾರಕೇರಿ ಮಠದ ಶ್ರೀಗಳಿಂದ ಆಶ್ರಮ ಪಡೆದು 'ಸುರೋತ್ತಮ ತೀರ್ಥ'ರೆಂದು ಪ್ರಖ್ಯಾತರಾದರು. ಇವರು ವಾದಿರಾಜರಲ್ಲಿ ವ್ಯಾಸಂಗಮಾಡಿ ಶ್ರೇಷ್ಠ ಜ್ಞಾನಿಗಳಾದರು. ವಾದಿರಾಜರ ಯುಕ್ತಿಮಲ್ಲಿಕೆ ಗ್ರಂಥಕ್ಕೆ ಟೀಕೆ ಬರೆದಿರುವರು.

ಶ್ಲೋಕ:– **ಅಷ್ಟಮೇಽಬ್ಧೇ ವರಾಹೋಽಸೌ ವಾಗೀಶಮುನಿಶೇಖರೈಃ ।**
ಸನ್ಯಾಸದೀಕ್ಷಾಪಾತ್ರಂಸ ಕಾರಿತಸ್ತುಷ್ಟಿ ಮಾದಧೌ ॥9॥

ಅರ್ಥ:– ಸನ್ಯಾಸ ದೀಕ್ಷೆಗೆ ಪಾತ್ರನಾದ ವರಾಹನಿಗೆ ಎಂಟನೆಯ ವರ್ಷದಲ್ಲಿ ವಾಗೀಶ ಮುನಿವರ್ಯರು ಸನ್ಯಾಸವನ್ನು ಕೊಟ್ಟು ಸಂತೋಷಗೊಂಡರು.

ಶ್ಲೋಕ:– **ಭವಿತಾಽಖಿಲವಾದೀಂದ್ರದರ್ಪಹಂತಾ ಯತೀಶ್ವರಃ ।**
ಇತ್ಯತೋ ವಾದಿರಾಜಾಖ್ಯಾಂ ಲಂಬಿತಃ ಸದ್ಗುರೂತ್ತಮೈಃ ।
ರಂಜನಾದ್ಗುರುಷೂಚ್ಚತ್ವಾದ್ಗುರುರಾಡಿತಿ ಚೇರಿತಃ ॥10॥

ಅರ್ಥ:– ಸಮಸ್ತ ಶ್ರೇಷ್ಠವಾದಿಗಳ ಗರ್ವವನ್ನು ನಾಶಮಾಡುವ ಯತೀಶ್ವರನಾಗುವನು ಎಂದು "ವಾದಿರಾಜ"ನೆಂಬ ಹೆಸರು ಸದ್ಗುರು ಶ್ರೇಷ್ಠರಾದ ವಾಗೀಶರಿಂದ ಇಡಲ್ಪಟ್ಟಿತು. ಮತ್ತು ಸಂತೋಷವನ್ನುಂಟು ಮಾಡುವುದರಿಂದಲೂ ಗುರುಗಳಲ್ಲಿ ಉಚ್ಚನಾದುದರಿಂದಲೂ' ಗುರುರಾಜ'ನೆಂದು ಕರೆಯಲ್ಪಟ್ಟಿತು.

ಶ್ಲೋಕ:– **ತತಶ್ಚ ವಿದ್ಯಾನಿಧಿಯೋಗಿವರ್ಯಾದಾಪ್ತೋಚ್ಚ ವಿದ್ಯೋ ಹ್ಯನವದ್ಯಬೋಧಃ।**
ವಿದ್ಯಾನಿಧೌ ವೃದ್ಧತಮೇಽಚ್ಯುತಸ್ಯ ಪದಂ ಗತೇ ಬಾಲಯತೀಶ್ವರೋಽಸೌ॥11॥
ವಾಗೀಶಯೋಗೀಂದ್ರ ಮುಖಾದಪಿ ಸ್ಮ ವೇದಾಂತತತ್ತ್ವಂ ಜಗೃಹೇಽಥಮೋದಾತ್ ।
ಕಾಲೇಽಸ್ಯ ಮಾತಾ ಸುಷುವೇಽಥ ಬಾಲಂ ರೂಪಾದಿಭಿಃ ಪೂರ್ವಜವನ್ಮನೋಜ್ಞಮ್॥12॥

ಅರ್ಥ:– ನಿರ್ದೋಷವಾದ ಜ್ಞಾನವುಳ್ಳ ಈ ಬಾಲಯತೀಶ್ವರನು ಸನ್ಯಾಸ ಸ್ವೀಕಾರಾನಂತರ ವಿದ್ಯಾನಿಧಿಯೋಗಿವರ್ಯರಿಂದ ಶ್ರೇಷ್ಠವಾದ ವಿದ್ಯೆಯನ್ನು ಪಡೆದನು. ವಿದ್ಯಾನಿಧಿಗಳು ವೃದ್ಧಾಪ್ಯದಿಂದ ಹರಿಪಾದವನ್ನು ಸೇರಲು, ವಾಗೀಶಯೋಗಿ ಶ್ರೇಷ್ಠರ ಮುಖದಿಂದಲೇ ವೇದಾಂತ ತತ್ವವನ್ನು ಸಂತೋಷದಿಂದಲೇ ಸ್ವೀಕರಿಸಿದನು. ಕಾಲಾಂತರದಲ್ಲಿ ತಾಯಿಯಾದ ಗೌರಿದೇವಿಯು ತನ್ನ ಮೊದಲನೆ ಮಗನಂತಹ ರೂಪಾದಿಗಳಿಂದ ಮನೋಹರನಾದ ಪುತ್ರನನ್ನು ಹಡೆದಳು.

ಶ್ಲೋಕ:– **ಸ್ವವಂಶಮುಕ್ತಾಮಣಿಮಾಧೃತಾ ಸಾ ಪುಪೋಷವಾಗೀಶವರಾಪ್ತಮೇತಮ್।**
ಸ ವಾದಿರಾಟ್ ಸದ್ಮಗತೋಽನುಜಾತಂ ದೃಷ್ಟ್ವಾಽನ ಗೃಹ್ಣನ್ನಿಜಮಾತೃತುಷ್ಟ್ಯೈ ॥13॥
ವಿಯೋಗದುಃಖಪ್ರಶಮಾಯ ನೈಜಾಂ ಮೂರ್ತಿಂ ದದೌಕಾಂಸ್ಯಮಯೀಂ ಸ್ವಮಾತ್ರೇ।
ಮಾತ್ರಾ ಚ ಲಕ್ಷಾಭರಣಾರ್ಪಣಾಯ ಸಂಸೂಚಿತೋಽಂಗೀಕೃತವಾನ್ಸ ಯೋಗೀ॥14॥

ಅರ್ಥ:– ವಾಗೀಶಗುರುಗಳ ವರದಿಂದ ಹುಟ್ಟಿದ, ತಮ್ಮ ವಂಶದ ಮಾಣಿಕ್ಯದಂತೆ ಇರುವ ಮಗನನ್ನು ಗೌರಿದೇವಿಯು ಪ್ರೀತಿಯಿಂದ ಚೆನ್ನಾಗಿ ಪೋಷಿಸುತ್ತಿದ್ದಳು. ವಾದಿರಾಜರು ಮನೆಗೆ ಹೋಗಿ ಅನುಜನನ್ನು ನೋಡಿ ಅವನನ್ನು ಅನುಗ್ರಹಿಸುತ್ತಾ, ತನ್ನ ವಿಯೋಗದ ದುಃಖವನ್ನು ಪರಿಹರಿಸಿ ತನ್ನ ತಾಯಿಗೆ ಸಂತೋಷವನ್ನುಂಟು ಮಾಡಲು ಕಂಚಿನಲ್ಲಿ ತಯಾರಿಸಿದ ತನ್ನ ವಿಗ್ರಹವನ್ನು ತನ್ನ ತಾಯಿಗೆ ಕೊಟ್ಟರು.

(ತಾನು ಹೇಳಿಕೊಂಡ ಹರಕೆಯನ್ನು ತೀರಿಸಲು) ಲಕ್ಷಾಭರಣವನ್ನು ಅರ್ಪಿಸಲು ತಾಯಿಯು ಸೂಚಿಸಿದಾಗ. ವಾದಿರಾಜಯೋಗಿಗಳು (ತಾವು ಅದನ್ನು ಸಮರ್ಪಿಸುವದಾಗಿ) ಒಪ್ಪಿಕೊಂಡರು.

ಶ್ಲೋಕ:– **ವಾಗೀಶಯೋಗೀಶ ನಿದೇಶಮಾಪ್ಯ ಸ ವಾದಿರಾಜೋಽಖಿಲದೇಶಚಾರೀ।**
ಕ್ಷೇತ್ರಾಣಿ ತೀರ್ಥಾನಿ ನಿಷೇವಮಾಣೋ ವಾದೀಭಸಿಂಹೋ ಯಶಸಾ ಬಭಾಜೇ॥15॥

ಅರ್ಥ:– ತಮ್ಮ ಗುರುಗಳಾದ ವಾಗೀಶಯೋಗಿಗಳಿಂದ ಅಪ್ಪಣೆ ಪಡೆದ ಆ ವಾದಿರಾಜರು ಸಮಸ್ತದೇಶಗಳನ್ನು ಸಂಚರಿಸುತ್ತಾ, ಸಮಸ್ತಕ್ಷೇತ್ರಗಳನ್ನೂ, ತೀರ್ಥಗಳನ್ನು ಸೇವಿಸುತ್ತಾ ವಾದಿಗಳೆಂಬ ಗಜಗಳಿಗೆ ಸಿಂಹಪ್ರಾಯರಾಗಿ ಯಶಸ್ಸನ್ನು ಗಳಿಸಿದರು.

ಶ್ಲೋಕ:– **ಸ್ವದೃಷ್ಟಕ್ಷೇತ್ರತೀರ್ಥಾದಿ ಮಹಾತ್ಮ್ಯಸ್ಯಾವ ಬೋಧಕಮ್ ।**
ತೀರ್ಥಪ್ರಬಂಧಂ ಕೃತವಾನ್ ಪಠತಾಮಘನಾಶನಮ್ ॥ 16॥

ಅರ್ಥ:– ವಾದಿರಾಜರು ತಾವು ಸಂಪರ್ಕಸಿದ ತೀರ್ಥಕ್ಷೇತ್ರಾದಿಗಳ ಮಹಾತ್ಮ್ಯೆಯನ್ನು ಬೋಧಿಸುವ, ಪಠಿಸುವವರ ಪಾಪವನ್ನು ಕಳೆವ ತೀರ್ಥ ಪ್ರಬಂಧ (ಎಂಬ ಕಾವ್ಯವನ್ನು) ರಚಿಸಿದರು.

ಶ್ಲೋಕ:– **ಪಠನಾದ್ಯಸ್ಯ ತೀರ್ಥಾದಿಸೇವನಾಲ್ಲಭ್ಯಮಂಜಸಾ ।**
ಸುಕೃತಂ ಜನತಾಯಾಃ ಸ್ಯಾತ್ತಂ ಸ್ತೋತುಂ ಕೋಽನುಶಕ್ನುಯಾತ್ ॥17॥

ಅರ್ಥ:– (ಆ ತೀರ್ಥ ಪ್ರಬಂಧ ಕಾವ್ಯದ ಮಹಿಮೆ ಎಂತಹದು!) ತೀರ್ಥಾದಿಗಳನ್ನು ಸೇವಿಸುವ ಜನರಿಗೆ ಎಷ್ಟು ಪುಣ್ಯ ಬರುತ್ತದೋ ಅಷ್ಟು ಪುಣ್ಯ ಪಠಿಸುವವರಿಗೆ ಹುಟ್ಟಿಸುವಂತಹದು. ಅದರ ಮಹಿಮೆಯನ್ನು ಪ್ರಶಂಸಿಸಲು ಯಾರು ಸಮರ್ಥರಾದಾರು?

ಶ್ಲೋಕ:– **ಕ್ವಚದ್ವಿವಾಹಸಂರಂಭೇ ವರೋಷ್ಣೀಷಾಂತರಂ ವಿಶನ್।**
ದುಷ್ಟಾಹಿರ್ವರಮೂರ್ಧಾನಂ ದಷ್ಟವಾನ್ಕಷ್ಟಮಾಪತತ್ ॥18॥

ಅರ್ಥ:– ವಿವಾಹಸಮಾರಂಭ ಒಂದರಲ್ಲಿ ವರನ ಪೇಟವನ್ನು ಪ್ರವೇಶಿಸಿದ ದುಷ್ಟ ಹಾವು ವರನ ಶಿರಸ್ಸನ್ನು ಕಚ್ಚಿತು. ಕಷ್ಟ ಒದಗಿತು.

ಶ್ಲೋಕ:– **ಕರ್ತವ್ಯಮೂಢಃ ಕ್ಷೇತ್ರೇಶೋ ವಧೂತಾತಃ ಸಮೀಪಗಾನ್ ।**
ವಾದಿರಾಜಗುರೂನ್ ಶ್ರುತ್ವಾ ಶುಚಾ ಶರಣಮಾಗತಃ ॥19॥

ಅರ್ಥ:– ಏನು ಮಾಡಬೇಕೆಂದು ತೋಚದಂತಾದ ವಧುವಿನ ತಂದೆಯು, ಸಮೀಪದಲ್ಲಿ ಶ್ರೀ ವಾದಿರಾಜಗುರುಗಳು ಇರುವರೆಂದು ಅರಿತು, ಕೂಡಲೇ ಅವರಿಗೆ ಶರಣು ಹೊಂದಿದನು.

ಶ್ಲೋಕ:– **ಕೃಪಯಾ ಗುರುರಾಟ್‌ತೀರ್ಥಂ ತತ್ರಾಽಽನೀತಶವಂ ಪ್ರತಿ ।**
ಸಂಪ್ರೋಕ್ಷ್ಯ ಜೀವಯಾಮಾಸ ವರಂ ಬಂಧುಜನೈಸ್ಸಹ ॥20॥

ಅರ್ಥ:– ಬಂಧು ಜನರೊಂದಿಗೆ, ಕರುಣೆಯಿಂದ ಗುರುರಾಜರು ತೀರ್ಥವನ್ನು ಅಲ್ಲಿಗೆ ತಂದು ಶವಕ್ಕೆ ಪ್ರೋಕ್ಷಿಸಿ ವರನನ್ನು ಬದುಕಿಸಿದರು.

ಶ್ಲೋಕ:– **ವಧೂವರಶುಭಾರ್ಥಂ ಸ ಲಕ್ಷ್ಮೀಶೋಭನಗೀತಕಮ್ ।**
ಸ್ವಕೃತಂ ಬೋಧಯಾಮಾಸ ತದದ್ಯಾಪಿ ಹಿ ಗೀಯತೇ ॥ 21॥

ಅರ್ಥ:– ವಧೂವರರ ಶ್ರೇಯಸ್ಸಿಗಾಗಿ ಅವರು ತಾವೇ ರಚಿಸಿ ಲಕ್ಷ್ಮೀ ಶೋಭನವೆಂಬ ಕೀರ್ತನೆಯನ್ನು ಬೋಧಿಸಿದರು. ಆ ಕೀರ್ತನೆಯು ಅಂದಿನಿಂದ ಈಗಲೂ (ವಿವಾಹ ಕಾಲದಲ್ಲಿ) ಹಾಡಲ್ಪಡುತ್ತದೆ.

ಶ್ಲೋಕ:– **ಕುಂಭಘೋಣಂಗತಃ ಶಾರ್ಙಪಾಣಿಂ ನತ್ವಾ ಸಭಾಸ್ವಸೌ ।**
ಪ್ರಾಜ್ಞ್ಯಾನ್ಪ್ರಾಜ್ಞಾನ್ಪರಾಜಿತ್ಯ ಸ್ವಶಿಷ್ಯಾನಕರೋತ್ ಪ್ರಭುಃ ॥ 22॥

ಅರ್ಥ:– ಕುಂಭಘೋಣಕ್ಕೆ ಹೋದ ಪ್ರಭುಗಳಾದ ಶ್ರೀ ವಾದಿರಾಜರು ಶಾರ್ಙಪಾಣಿಯನ್ನು ನಮಿಸಿ ಅಲ್ಲಿ ಸೇರಿದ ವಿದ್ವಾಂಸರ ಸಭೆಯಲ್ಲಿ ಅನೇಕ ಪಂಡಿತರನ್ನು ವಾದದಲ್ಲಿ ಸೋಲಿಸಿ ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡರು.

ಟಿಪ್ಪಣಿ:– ಕುಂಭಘೋಣದಲ್ಲಿ ಪ್ರಸಿದ್ಧ ಶಾರ್ಙಪಾಣಿ ದೇವರಿಗೆ ವಾದಿರಾಜರು ತೀರ್ಥಪ್ರಬಂಧದಲ್ಲಿ ಸ್ತುತಿಸಲ್ಪಟ್ಟ ಶ್ಲೋಕದಿಂದಲೇ ಇಂದೂ ಕೂಡ ಆರತಿ ಮಾಡುತ್ತಾರೆ.

ಶ್ಲೋಕ:– **ತತೋ ವೆಂಕಟಶೈಲಸ್ಯ ನಿಕಟಂ ಪ್ರಾಪ್ತವಾನ್ಕೃತೀ ।**
ಶಿಲಾಸೋಪಾನರೂಪೇಣ ದೇವಮಾವೇಕ್ಷ್ಯ ದಿವ್ಯದೃಕ್ ॥23॥
ಜಾನುಭ್ಯಾಮೇವ ಶೈಲೇಂದ್ರಮಾರುರೋಹ ಮಹಾಬಲಃ ।

ಶ್ರೀನಿವಾಸಂ ನಿರೀಕ್ಷ್ಯಾಥ ಸಾಲಿಗ್ರಾಮ ಸುಮಾಲಿಕಾಮ್ ॥24॥
ಅರ್ಪಯಾಮಾಸ ಸಾ ಮಾಲಾ ತತ್ಕಂಠೇಽದ್ಯಾಪಿ ರಾಜತೇ ।

ಅರ್ಥ:– ಅನಂತರ ವೆಂಕಟಾದ್ರಿ (ತಿರುಪತಿ) ಸಮೀಪಕ್ಕೆ ಜ್ಞಾನಿಗಳಾದ ವಾದಿರಾಜರು ಬಂದರು. ದಿವ್ಯ ದೃಷ್ಟಿಯುಳ್ಳ ಅವರು ಕಲ್ಲು ಮೆಟ್ಟಲಿನ ರೂಪದಲ್ಲಿ ಪರಮಾತ್ಮನನ್ನು ನೋಡಿ, ಮಹಾಬಲಶಾಲಿಗಳಾದ ಅವರು ಮೊಳಕಾಲಿನಿಂದಲೇ ಬೆಟ್ಟವನ್ನು ಏರಿದರು ನಂತರ ಶ್ರೀನಿವಾಸನ ದರ್ಶನ ಮಾಡಿ (ತಾವು ತಂದ) ಸಾಲಿಗ್ರಾಮ ಸರವನ್ನು ಸಮರ್ಪಿಸಿದರು. ಆ ಸರವು ಇಂದಿಗೂ (ಶ್ರೀನಿವಾಸನ) ಕಂಠದಲ್ಲಿ ಕಂಗೊಳಿಸುತ್ತದೆ.

ಶ್ಲೋಕ:– **ಕ್ವಚಿದ್ದೇಶೇ ಸಂಚರನ್ಸ ಧನಿಕೇನ ಸುತೇಪ್ಸುನಾ ॥25॥**
ಪ್ರಾರ್ಥಿತಃ ಪ್ರೋಚಿವಾನಸ್ಮಿನ್ ಜನ್ಮನ್ಯೇಷ ಸುದುರ್ಲಭಃ ।
ಸಂಚಿತಂ ಧನರಾಶಿಂ ತ್ವಂ ಧರ್ಮಾಯ ವಿನಿಯೋಜಯ ॥26॥
ಇತಿ ವಾಚಾ ವಿಷಣ್ಣಸ್ಸ ಧನಿಕಃ ಸಮಯಾಂತರೇ ।
ತುರುಷ್ಕಮಂತ್ರವಿಜ್ಞೇನ ಪ್ರದತ್ತಫಲಭಕ್ಷಣಾತ್ ॥27॥
ಸ್ವಪತ್ನ್ಯಾಂ ಲಬ್ಧಜನುಷಾ ಪುತ್ರೇಣಾನಂದಭಾಗಭೂತ್ ।

ಅರ್ಥ:– ವಾದಿರಾಜರು ಸಂಚಾರ ಮಾಡುತ್ತಿರುವ ಸಮಯದಲ್ಲಿ ಒಂದು ಊರಲ್ಲಿ ಧನಿಕನೊರ್ವನು ಪುತ್ರ ಸಂತಾನಾಪೇಕ್ಷೆಯುಳ್ಳವನಾಗಿ ಬಂದು (ವಾದಿರಾಜರಲ್ಲಿ) ಪ್ರಾರ್ಥಿಸಲು "ಈ ಜನ್ಮದಲ್ಲಿ ಪುತ್ರ ಸಂತಾನ ದುರ್ಲಭ. ನಿನ್ನಿಂದ ಸಂಗ್ರಹಿಸಲ್ಪಟ್ಟ ಧನರಾಶಿಯನ್ನು ಧರ್ಮಕಾರ್ಯಕ್ಕಾಗಿ ವಿನಿಯೋಗಿಸು" (ಎಂದರು) ಈ ಮಾತುಗಳು ಆ ಧನಿಕನಿಗೆ ದುಃಖವನ್ನುಂಟು ಮಾಡಿತು. ಕೆಲವು ಸಮಯದ ನಂತರ ತುರುಷ್ಕ ಮಂತ್ರ ವಿದ್ಯೆ ಬಲ್ಲವನಿಂದ ಕೊಡಲ್ಪಟ್ಟ ಫಲ ತಿನ್ನುವದರಿಂದ ತನ್ನ ಪತ್ನಿಯಲ್ಲಿ ಹುಟ್ಟಿದ ಗಂಡು ಮಗುವಿನಿಂದ (ಆ ಧನಿಕನು) ಆನಂದವುಳ್ಳವನಾದನು.

ಶ್ಲೋಕ:– **ಕಾಲಾಂತರೇ ವಾದಿರಾಜಗುರುರಾಡಾಗತಃ ಪುನಃ ॥28॥**

ಅರ್ಥ:– ಕೆಲವು ಸಮಯದ ನಂತರ ಶ್ರೀ ವಾದಿರಾಜಗುರುವರ್ಯರು ಪುನಃ (ಧನಿಕನಿರುವ ಊರಗೆ) ಬಂದರು.

ಶ್ಲೋಕ:– **ಧನಿಕೋದಂತಮಾಕರ್ಣ್ಯ ಸಮಾಹ್ವಯತ ತತ್ವವಿತ್ ।**
ಸ್ವಕೀಯಮನುಜದ್ವಾರಾ ಧನಿಕಂ ಸಕುಟಂಬಕಮ್ ॥29॥

ಅರ್ಥ:– ನಿಜ ವಿಷಯವನ್ನು ತಿಳಿದ ವಾದಿರಾಜರು ಧನಿಕನ ವೃತ್ತಾಂತವನ್ನು ಕೇಳಿ ಕುಟುಂಬ ಸಮೇತನಾಗಿ ಧನಿಕನಿಗೆ ತಮ್ಮ ಬಳಿಗೆ ಬರಲು ಪರಿವಾರ ಜನರ ಮೂಲಕ ಆಮಂತ್ರಿಸಿದರು.

ಶ್ಲೋಕ:– **ಸ್ವಪುತ್ರಪತ್ನೀಸಹಿತಸ್ಸ ಆಢ್ಯಕಸ್ಸಮಾಗತಃ ಪುತ್ರಮದರ್ಶಯದ್ಗುರೋಃ।**
ತಸ್ಮಾದ್ಗುರೋರಪ್ಯಧಿಕಂ ತು ರುಷ್ಕಜಂ ಚಿತ್ತೇ ವಿಜಂತ್ಯಾತ್ತಮನೋರಥೋಽಹಸತ್॥30॥

ಅರ್ಥ:– ಮನೋಭಿಷ್ಟವನ್ನು ಹೊಂದಿದ ಧನಿಕನು (ಗುರುಗಳಿಂದಾಗದ್ದನ್ನು ತುರುಷ್ಕನು ಮಾಡಿ)ದುದರಿಂದ, ತುರುಷ್ಕನು ಗುರುಗಳಿಗಿಂತ ಅಧಿಕನು ಎಂದು ಮನಸ್ಸಿನಲ್ಲಿ ಚಿಂತಿಸಿ, ನಕ್ಕನು.

ಶ್ಲೋಕ:– **ನ ಯೊಗ್ಯೋಽಯಂ ತವೇತ್ಯುಕ್ತೋ ಗುರುಣಾ ಧನಿಕಸ್ತದಾ ।**
ಕುತ ಇತ್ಯಾರ್ತಿಮಾಂಸ್ತರ್ಹಿ ಪಶ್ಯೇತಿ ಯತಿಪುಂಗವಃ ॥31॥

ಅರ್ಥ:– "ಈತನು ನಿಮಗೆ ಯೋಗ್ಯನಲ್ಲ" ಎಂದು ಗುರುಗಳು ಹೇಳಲು ಧನಿಕನು ಆಗ "ತನಗೆ ಈತನಿಂದ ಏನು ತೊಂದರೆ" ಎಂದು ಪ್ರಶ್ನಿಸಲು ಯತಿ ಶ್ರೇಷ್ಠರಾದ ವಾದಿರಾಜರು "ಹಾಗಾದರೆ ನೋಡು" (ಎಂದು ನುಡಿದರು)

ಶ್ಲೋಕ:– **ತೀರ್ಥಂ ಬಾಲಾಯ ಚಿಕ್ಷೇಪ ಬಾಲೋ ರೌದ್ರತನುಂ ದಧೌ ।**
ತದ್ವೀಕ್ಷ್ಯ ಧನಿಕೋ ಭೀತೋ ಮುಮೋಹ ಪತಿತಃ ಕ್ಷಿತೌ ॥32॥

ಅರ್ಥ:– ಬಾಲಕನಿಗೆ ತೀರ್ಥವನ್ನು ಪ್ರೋಕ್ಷಿಸಲು, ಬಾಲಕನು ಭೀಕರಶರೀರವನ್ನು ಧರಿಸಿದನು. ಅದನ್ನು ನೋಡಿ ಧನಿಕನು ಭೀತಿಯಿಂದ ಮೂರ್ಛಿತನಾಗಿ ಭೂಮಿಯ ಮೇಲೆ ಬಿದ್ದನು.

ಶ್ಲೋಕ:– **ಚಿರಾದುತ್ಥಾಯ ಸ ಗುರುಂ ಪಪ್ರಚ್ಛಾದರ್ಶನಂ ಶಿಶೋಃ ।**
ಗುರುರ್ಭೂತಂ ತು ಪಪ್ರಚ್ಛವದ ಕೋಽಸೀತಿ ಸತ್ವರಮ್ ॥33॥

ಅರ್ಥ:– ನಿಧಾನವಾಗಿ ಮೂರ್ಛೆಯಿಂದ ಎದ್ದ ಧನಿಕನು ಗುರುಗಳಿಗೆ "ಮಗುವು ಕಾಣಿಸುವುದಿಲ್ಲ" ಏಕೇಂದು ಕೇಳಲು, ಗುರುಗಳು (ಅಲ್ಲಿದ್ದ) ಭೂತವನ್ನು "ನೀನು ಯಾರು ಆಗಿರುವೆ? ಶೀಘ್ರವಾಗಿ ಹೇಳು" ಎಂದರು.

ಶ್ಲೋಕ:– **ಭೂತೋ ಭೀತೋಽವದನ್ಮಂತ್ರವಾದ್ಯಾದೇಶಾದಹಂ ಶಿಶುಃ ।**
ಭೂತ್ವಾ ಷಡ್ಡಾಯನೋ ಹತ್ವಾ ಪಿತರೌ ತನ್ನಿದೇಶತಃ ॥34॥
ಗಂತುಕಾಮಃ ಕೃಪಾಲುಸ್ತ್ವಂ ಮಂತುಂ ಮೇ ಕ್ಷಂತುಮರ್ಹಸಿ ।
ಇತಿ ಯಾಚಂತಮವೋಚೇಽಥ ತವ ಶಕ್ತಿಂ ದದಾಮ್ಯಹಮ್ ॥35॥

ಅರ್ಥ:– ಭೂತವು ಭಯದಿಂದ "ಮಂತ್ರವಾದಿಯ ಆದೇಶಾನುಸಾರ ನಾನು ಮಗುವಾಗಿದ್ದೇನೆ. ಆರು ವರ್ಷಗಳ ನಂತರ ತಾಯಿ ತಂದೆಗಳನ್ನು ಕೊಂದು ಅವನ ಆಜ್ಞೆಯಂತೆ ಹೋಗಲು ಇಚ್ಛಿಸಿದ್ದೇನೆ. ಕೃಪಾಲುಗಳಾದ ತಾವು ನನ್ನ ಅಪರಾಧವನ್ನು ಕ್ಷಮಿಸಲು ಅರ್ಹರಾಗಿದ್ದೀರಿ" ಎಂದು ನುಡಿಯಲು ಹೀಗೆ ಪ್ರಾರ್ಥಿಸಿದ ಭೂತವನ್ನು ಕುರಿತು "ನಿನಗೆ ನಾನು ಶಕ್ತಿಯನ್ನು ಕೊಡುತ್ತೇನೆ.

ಶ್ಲೋಕ:– **ತಂ ಮಂತ್ರಜ್ಞಂ ಕೃತಘ್ನಂ ತ್ವಂ ಹತ್ವಾ ಸ್ವಚ್ಛಂದತೋ ವ್ರಜ ।**

ಅರ್ಥ:– ಕೃತಘ್ನನಾದ ಆ ಮಂತ್ರವಾದಿಯನ್ನು ನೀನು ಕೊಂದು ನಿನ್ನಿಷ್ಟ ಬಂದ ಕಡೆಗೆ ಹೋಗು.

ಶ್ಲೋಕ:– **ಇತ್ಯಾಶ್ವಾಸ್ಯ ಶ್ರುತೋದಂತಂ ಧನಿಕಂ ಚ ಸಮಾದದೌ ॥36॥**
ದಶಸಾಹಸ್ರರೂಪ್ಯಾಣಾಂ ಹರ್ತ್ರೇದುರ್ಮಂತ್ರವೇದಿನೇ ।
ಕ್ರುದ್ಧ್ಯನ್ಗುರೋರ್ನಿದೇಶೇನ ಸದ್ಧರ್ಮಪರಮೋಽವಸತ್ ॥37॥

ಅರ್ಥ:– ಎಂದು ಆಶ್ವಾಸನೆಯನ್ನು ನೀಡಿ ಗುರುಗಳು ಸಮಾಚಾರವನ್ನು ತಿಳಿದ ಧನಿಕನನ್ನು ಸಮಾಧಾನ ಪಡಿಸಿದರು. ಹತ್ತು ಸಾವಿರ ಚಿನ್ನದ ನಾಣ್ಯವನ್ನು ಹಾಳು ಮಾಡಿದ ಕೆಟ್ಟ ಮಾಂತ್ರಿಕನ ವಿಷಯದಲ್ಲಿ ಸಿಟ್ಟುಗೊಂಡ ಧನಿಕನು (ಅಲ್ಲಿಂದ ಮುಂದೆ) ಗುರುಗಳ ನಿರ್ದೇಶದಂತೆ ಸದ್ಧರ್ಮರತನಾಗಿ ವಾಸ ಮಾಡಿದನು.

ಶ್ಲೋಕ:– **ವಿಠ್ಠಲೇಕ್ಷಾತತ್ಪರೇಽಸ್ಮಿನ್ ಗುರೌ ಭೀಮರಥೀತಟೇ ।**
ನಿಶಿ ಕೇಚಿದ್ದಸ್ಯುವೀರಾ: ಮಠೀಯಾನ್ ರುರುಧುಃ ಕಿಲ ॥38॥

ಅರ್ಥ:– (ಪಂಢರಾಪುರ) ವಿಠ್ಠಲನನ್ನು ನೋಡಲಪೇಕ್ಷೆಯಿಂದ ಗುರುಗಳು ಹೋಗುತ್ತಿರುವಾಗ ಭೀಮರಥಿತೀರದಲ್ಲಿ. ರಾತ್ರಿ ಸಮಯದಲ್ಲಿ, ಶೂರರಾದ ಕೆಲವು ಕಳ್ಳರು ಮಠದ ಪರಿವಾರದವರನ್ನು ತಡೆದರು.

ಶ್ಲೋಕ:– **ಮಠೀಯೈರ್ಮನುಜೈಸ್ತ್ಯಕ್ತಂ ಗುರುಂ ನಿರ್ಭೀತಮಾನಸಮ್ ।**
ದೃಷ್ಟ್ವಾ ಭೀತಾಸ್ತಸ್ಕರಾಸ್ತೇ ತಮೇವ ಶರಣಂ ಯಯುಃ ॥39॥

ಅರ್ಥ:– ಮಠದ ಪರಿವಾರದವರು ಗುರುಗಳನ್ನು ತೊರೆದು ಪಲಾಯನ ಮಾಡಲು ಮಠದ ಪರಿವಾರದವರಿಂದ ಬಿಡಲ್ಪಟ್ಟ ನಿರ್ಭೀತ ಮನಸ್ಸಿನ ಗುರುಗಳನ್ನು ನೋಡಿ ಭೀತಿಯಿಂದ ಕಳ್ಳರೆಲ್ಲರೂ ಅವರಿಗೆ ಶರಣು ಹೊಂದಿದರು.

ಶ್ಲೋಕ:– **ಸಾಂತಯಿತ್ವಾ ಗುರುರ್ದಸ್ಯೂನ್ ಯಥೋದಿಷ್ಟಂ ಚಚಾರ ಸಃ ।**
ವಿಠ್ಠಲಾಧೀಷ್ಠಿತೇ ದೇಶೇ ಗುರೌ ನಿವಸತಿ ಕ್ವಚಿತ್ ॥40॥

ಅರ್ಥ:– ಗುರುಗಳು ಕಳ್ಳರಿಗೆ ಹಿತವಾದ ಮಾತುಗಳಿಂದ ಸ್ವಾಂತನಗೊಳಿಸಿ, ಅವರ ಅಭೀಷ್ಟವನ್ನು ನೆರವೇರಿಸಿದರು. ವಿಠ್ಠಲನ ಆವಾಸ ಸ್ಥಾನವಾದ ಪಂಢರಾಪುರದಲ್ಲಿ ಕೆಲವು ಕಾಲ ಗುರುಗಳು ಆವಾಸ ಮಾಡಿದರು.

ಶ್ಲೋಕ:– **ಧನಿಕಕ್ಷೇತ್ರಚಣಕಂ ಭಕ್ಷಯಂತಂ ಸಿತಂ ಹಯಮ್ ।**
ವೀಕ್ಷ್ಯ ಕ್ಷೇತ್ರೀ ದಾವಯನ್ಸ ದದರ್ಶ ಯತಿಮಂದಿರಮ್ ॥41॥
ಪ್ರವಿಶಂತಂ ತುರಂಗಂ ತಂ ಕ್ರುದ್ಧಃ ಕ್ಷೇತ್ರಾಧಿಪೋ ಗುರುಮ್
ಭವದ ಶ್ವೇನ ಮೇ ಕ್ಷೇತ್ರಧಾನ್ಯ ಸರ್ವಸ್ವಮಾಹೃತಮ್ ॥42॥

ಅರ್ಥ:– ಪಂಢರಾಪುರದಲ್ಲಿ ಧನಿಕನೊಬ್ಬನು ತನ್ನ ಹೊಲದಲ್ಲಿ ಬಿಳಿಕುದುರೆ ಕಡಲೆ ಮೇಯ್ಯುತ್ತಿರುವದನ್ನು ನೋಡಿ ಹಿಂಬಾಲಿಸಲು ಅದು ಗುರುಗಳು ಆವಾಸವಾಗಿರುವ ಮನೆಯನ್ನು ಪ್ರವೇಶಿಸುತ್ತಿರುವುದನ್ನು ನೋಡಿದನು. ಕೋಪಗೊಂಡ ಹೊಲದೊಡೆಯನು ಗುರುಗಳನ್ನು ಕುರಿತು "ತಮ್ಮ ಕುದುರೆಯಿಂದ ನನ್ನ ಹೊಲದಲ್ಲಿರುವ ಎಲ್ಲಾ ಧಾನ್ಯವು ಭಕ್ಷಿಸಲ್ಪಟ್ಟಿರುತ್ತದೆ."

ಶ್ಲೋಕ:– **ಇತ್ಯುಕ್ತೇ ತಂ ಗುರುಃ ಪ್ರಾಹ ಪಶ್ಯ ಮೇಽಶ್ವೋ ನ ವಿದ್ಯತೇ ।**
ಇತ್ಯಾದಿಷ್ಟೋ ಮಾರ್ಗಮಾಣೋ ನಾಪಶ್ಯತ್ತಂ ಹಯಂ ಸಿತಮ್ ॥43॥

ಅರ್ಥ:– ಈ ರೀತಿಯಾಗಿ ಹೇಳಲು ಗುರುಗಳು "ನಮ್ಮ ಹತ್ತಿರ ಯಾವ ಅಶ್ವವೂ ಇರುವುದಿಲ್ಲ: ಬೇಕಾದರೆ ನೋಡು" ಎಂದರು. ಗುರುಗಳ ಆದೇಶಾನುಸಾರ ಧನಿಕನು ಹುಡುಕಲು ಅಲ್ಲಿ ಬಿಳಿ ಕುದುರೆ ಕಾಣಲಿಲ್ಲ

ಶ್ಲೋಕ:– **ವಿಸ್ಮಿತೋಽತ್ರ ಪ್ರವಿಷ್ಟಸ್ಸ ದೃಷ್ಟೋ ನೈವಾವಲೋಕ್ಯತೇ ।**
ಯೋಗೀಂದ್ರ ಮಮ ಸಂಶೀತಿಂ ಛೇತ್ತುಮರ್ಹಸಿ ಸದ್ಗುರೋ ॥44॥
ಇತ್ಯರ್ಥಯಂತಂ ತಂಪ್ರಾಹ ಮದಾರಾಧ್ಯಃ ಕೃಪಾಂ ತ್ವಯೀ ।
ಕೃತವಾನ್ಸುಕೃತೀ ತ್ವಂ ಹಿ ಪಶ್ಯ ಕ್ಷೇತ್ರಂ ಪ್ರಗೇ ಪುನಃ ॥45॥

ಅರ್ಥ:– ಇಲ್ಲಿ ಪ್ರವೇಶಿಸಿದ ಕುದುರೆಯು ಕಾಣದೇ ಇರುವುದು ಆಶ್ಚರ್ಯಕರವು! ಹೇ ಸದ್ಗುರುಗಳೇ, ಯೋಗಿವರ್ಯರೇ ನನ್ನ ಸಂಶಯವನ್ನು ನಿವಾರಿಸಲು ನೀವೇ ಸಮರ್ಥರು. ಎಂದು ಧನಿಕನು ಪ್ರಾರ್ಥಿಸಲು, ಅವನನ್ನು ಕುರಿತು ಗುರುಗಳು "ನೀನು ಮಾಡಿದ ಸುಕೃತದಿಂದ ನಮ್ಮ ಆರಾಧ್ಯದೇವರ ಅನುಗ್ರಹ ನಿನ್ನ ಮೇಲಿದೆ. ನಾಳೆ ಬೆಳಿಗ್ಗೆ ಪುನಃ ನೀನು ಹೊಲವನ್ನು ನೋಡು" ಎಂದರು.

ಶ್ಲೋಕ:– **ಇತ್ಯುಕ್ತಃ ಪ್ರಾತರಾಯಾತಃ ಸುವರ್ಣಚಣಕೋತ್ಕರೈಃ ।**
ಪೂರಿತಂ ಕ್ಷೇತಮಾಲೋಕ್ಯ ವಿಸ್ಮಯಾನಂದನಿರ್ಭರಃ ॥46॥

ಅರ್ಥ:– ಈ ರೀತಿಯಾಗಿ ಹೇಳಿಸಿ ಕೊಳ್ಳಲ್ಪಟ್ಟ ಧನಿಕನು ಬೆಳಗಾಗಲು ತನ್ನ ಹೊಲವು ಚಿನ್ನದ ಕಡಲೆ ತೆನೆಯಿಂದ ತುಂಬಿರುವುದನ್ನು ನೋಡಿ ಆಶ್ಚರ್ಯ ಮತ್ತು ಆನಂದದಿಂದ ಭರಿತನಾದನು.

ಶ್ಲೋಕ:– **ಗುರುಂ ಶರಣಮಾಪನ್ನಃ ಕ್ಷೇತ್ರಂ ದೇವಾಯ ಸೋಽರ್ಪಯತ್ ।**
ತತಃ ಕ್ಷೇತ್ರೇಶಮಾಪೃಚ್ಛ್ಯ ಯಥೇಚ್ಛಂ ಗತವಾನ್ಗುರುಃ ॥47॥

ಅರ್ಥ:– ಆ ಧನಿಕನು ಗುರುಗಳಿಗೆ ಶರಣಾಗತನಾದನು ತನ್ನ ಹೊಲವನ್ನು ಶ್ರೀಗಳ ಪಟ್ಟದ ದೇವರಿಗೆ ಸಮರ್ಪಿಸಿದನು. ಅನಂತರ ಗುರುಗಳು ಪಂಢರಪುರದ ವಿಠ್ಠಲನನ್ನು ಪ್ರಶ್ನೆ ಮಾಡಿ ತಿಳಿದು ಅವನ ಅಪೇಕ್ಷೆಗೆ ಅನುಸಾರವಾಗಿ ಪ್ರಯಾಣಿಸಿದರು.

ಶ್ಲೋಕ:– **ತದನು ಯತಿವರೇಣ್ಯಃ ಸಮ್ಭಜನ್ ಕ್ಷೇತ್ರವೃಂದಂ**
ವಿಜಯನಗರಮಾಗಾತ್ ಸ್ವರ್ಗಭೋಗಾಭಿರಾಮಮ್ ।
ಅಥ ನರಪತಿರಾರಾದ್ಯೋಗಿವರ್ಯಾಗತಿಂ ತಾಂ
ಶ್ರುತಿಪಥಮುಪನೀತಾಂ ಭೃತ್ಯಕೈರ್ಜ್ಞಾತವಾನ್ಸಃ ॥48॥

ಅರ್ಥ:– ಅನಂತರ ಯತಿಶ್ರೇಷ್ಠರಾದ ವಾದಿರಾಜರು ತೀರ್ಥಕ್ಷೇತ್ರಗಳನ್ನು ಸೇವಿಸುತ್ತಾ ಸ್ವರ್ಗದಂತೆ ಮನೋಹರವಾದ ವಿಜಯನಗರ ರಾಜ್ಯಕ್ಕೆ ಬಂದರು. ಪೂಜಿಸಲು ಯೋಗ್ಯರಾದ ಯೋಗಿವರ್ಯರ ಆಗಮನವನ್ನು ತನ್ನ ಸೇವಕರಿಂದ ರಾಜನು ಕೇಳಿ ತಿಳಿದನು.

ಶ್ಲೋಕ:– **ನೃಪತಿರಥ ಸುದೋಲಾಂ ವಾದ್ಯಪೂಗೇನ ಸಾರ್ಧಂ**
ಗುರುವರಸವಿಧಂ ದ್ರಾಕ್ ಯಾಪಯಾಮಾಸ ತೋಷಾತ್ ।
ನೃಪತಿಸಚಿವ ಮುಖ್ಯೈರರ್ಥಿತೋ ಯೋಗಿವರ್ಯಃ
ತ್ರಿಭುವನ ಗುರುರೇಷ ಪ್ರಾವಿಶದ್ರಾಜಧಾನೀಮ್ ॥49॥

ಅರ್ಥ:– ಅನಂತರ ರಾಜನು ವಾದ್ಯಸಮೂಹಗಳೊಂದಿಗೆ ಪಲ್ಲಕ್ಕಿಯನ್ನು ಗುರುವರ್ಯರ ಸಮೀಪಕ್ಕೆ ಶೀಘ್ರವಾಗಿ ಸಂತೋಷದಿಂದ ಕಳುಹಿಸಿದನು. ರಾಜ, ಮಂತ್ರಿ ಮೊದಲಾದವರಿಂದ ಪ್ರಾರ್ಥಿತರಾದ ಯೋಗಿವರ್ಯರಿಂದ ಮೂರು ಲೋಕಗಳಿಗೆ ಗುರುಗಳಾದ ವಾದಿರಾಜರು ರಾಜಧಾನಿಯನ್ನು ಪ್ರವೇಶಿಸಿದರು.

ಶ್ಲೋಕ:– **ಇತಿ ಶ್ರೀವೇದನಿಧಿತೀರ್ಥಾಂತೇವಾಸಿ ರಾಮಚಂದ್ರಾಚಾರ್ಯವಿರಚಿತೇ**
ಶ್ರೀವಾದಿರಾಜಗುರುವರಚರಿತಾಮೃತೇ ದ್ವಿತೀಯಬಿಂದುಃ ಸಮಾಪ್ತಃ

ಅರ್ಥ:– ಇಲ್ಲಿಗೆ ಶ್ರೀ ವೇದನಿಧಿತೀರ್ಥರ ಶಿಷ್ಯರಾದ ಶ್ರೀರಾಮಚಂದ್ರಾಚಾರ್ಯ
ರಿಂದ ವಿರಚಿತವಾದ ಶ್ರೀ ವಾದಿರಾಜಗುರುವರ ಚರಿತಾಮೃತದಲ್ಲಿ ದ್ವಿತೀಯ ಬಿಂದು ಮುಗಿಯಿತು.

॥ ತೃತೀಯ ಬಿಂದುಃ ॥

॥ ಶ್ರೀ ಗುರುರಾಜಃ ಪ್ರಸೀದತು ॥

ಶ್ಲೋಕ:– ಅಥೋ ನೃಪಸಭಾಮಧ್ಯೇ ನೃಪತೌ ಸದಸಸ್ಪತೌ ।
ಬಹುಭಿರ್ವಾದಿಭಿಸ್ಸಾರ್ಧಂ ಶಾಸ್ತ್ರವಾದೋಽಭವತ್ಕಿಲ ॥1॥

ಅರ್ಥ:– ಬಳಿಕ ರಾಜಸಭಾ ಮಧ್ಯದಲ್ಲಿ ಸಭಾಪತಿಯಾದ ಹಾಗೂ ಬಹುವಾದಿಗಳೊಂದಿಗೆ ಶಾಸ್ತ್ರ ವಿಷಯವಾದವು ನಡೆಯಿತು.

ಶ್ಲೋಕ:– ಪ್ರಸಕ್ತೇ ಬಹುಭಿಸ್ತತ್ರ ಪ್ರಸಂಗೇ ವಾದಿರಾಟ್ ಸುಧೀಃ ।
ಸರ್ವಾನುತ್ತರದಾನೇನ ಪ್ರೀಣಯಾಮಾಸ ಪಂಡಿತಾನ್ ॥2॥

ಅರ್ಥ:– ಸಭೆಯಲ್ಲಿ ಬಹಳ ಪ್ರಕರಣಗಳು ಪ್ರಾಪ್ತವಾಗಲು ಜ್ಞಾನಿಗಳಾದ ವಾದಿರಾಜರು ಎಲ್ಲ ಪ್ರಕರಣಗಳಿಗೂ ಸಮರ್ಪಕ ಉತ್ತರ ನೀಡುವುದರ ಮೂಲಕ ಪಂಡಿತರನ್ನು ಸಂತೋಷಗೊಳಿಸಿದರು.

ಶ್ಲೋಕ:– ಶ್ರೀವೆಂಕಟಪತಿರ್ವೀರಪ್ರತಾಪಸ್ತುಷ್ಟ ಮಾನಸಃ ।
ಪ್ರಸಂಗಾಭರಣಂ ನಾಮ ಬಿರುದಂ ಗುರವೇ ದದೌ ॥3॥

ಅರ್ಥ:– ಸಂತುಷ್ಟ ಮನಸ್ಸುಳ್ಳವನಾದ ಶ್ರೀ ವೀರಪ್ರತಾಪ ವೆಂಕಟಪತಿರಾಜನು ಗುರುಗಳಿಗೆ **"ಪ್ರಸಂಗಾಭರಣಂ"** ಎಂಬ ಬಿರುದನ್ನು ನೀಡಿದನು.

ಶ್ಲೋಕ:– ತತಃ ಪುಣ್ಯಪುರೀಂ ಪ್ರಾಪ್ತೋ ಭೇರಿ ತಾಡನ ಪೂರ್ವಕಮ್ ।
ಕಾವ್ಯಶ್ರೇಷ್ಠಂ ಮಾಘಕಾವ್ಯಂ ಗಜಮೂರ್ಧನಿ ಪೂಜ್ಯತೇ ॥4॥
ಇತ್ಯಾಘೋಷಿತಮಾಕರ್ಣ್ಯ ಸಭಾಪತಿಮವೋಚತ ।
ಅಸ್ಮತ್ಪುರೇ ಮಹಾಕಾವ್ಯಮೇಕಂ ಶ್ರೇಷ್ಠ ಪ್ರಕಾಶತೇ। ॥5॥

ಅರ್ಥ:– ಅನಂತರ ವಾದಿರಾಜರು ಪುಣೆ ಪಟ್ಟಣಕ್ಕೆ ಆಗಮಿಸಲು ಕಾವ್ಯಗಳಲ್ಲಿ ಮಾಘಕಾವ್ಯವು ಶ್ರೇಷ್ಠವು ಅದನ್ನು ಆನೆಯ ಮೇಲಿಟ್ಟು ಗೌರವಿಸಲಾಗುವುದು ಎಂಬುದಾಗಿ ನಗಾರಿ ಬಾರಿಸುತ್ತಾ ಘೋಷಿಸುತ್ತಿರುವದನ್ನು ಕೇಳಿ ವಾದಿರಾಜರು ಸಭಾಪತಿಯನ್ನುದ್ದೇಶಿಸಿ "ನಮ್ಮ ಊರಲ್ಲಿ ಒಂದು ಮಹಾ ಕಾವ್ಯವು ಪ್ರಖ್ಯಾತವಾಗಿದೆ."

ಶ್ಲೋಕ:– ದೀಯೇತ ಸಮಯಃ ಕಶ್ಚಿದ್ದರ್ಶಯಿಷ್ಯೇ ಪರೀಕ್ಷ್ಯತಾಮ್ ।
ಅಂಗೀಕುರ್ವತಿವಿಜ್ಞೌಘೇ ಗುರುರೇಕೋನವಿಂಶತಾ ॥6॥
ದಿವಸೈರೇಕದಿವಸೇ ಹ್ಯೇಕಸರ್ಗಕ್ರಮೇಣ ಸಃ ।
ರುಕ್ಮಿಣೀಶಮಹಾಕಾವ್ಯಂ ನಿರ್ಮಮೇ ಸುರಸಾಕರಮ್ ॥7॥

ಅರ್ಥ:– ಕಾಲಾವಕಾಶ್ನಕೊಟ್ಟರೆ ಅದನ್ನು ತೋರಿಸುತ್ತೇವೆ. ವಿದ್ವಾಂಸರ ಸಭೆಯಲ್ಲಿ ಪರೀಕ್ಷಿಸಬಹುದು (ಸಭೆಯು) ಒಪ್ಪಿಕೊಳ್ಳುತ್ತದೆ ಎಂದು ಹೇಳಿದರು.

ಹತ್ತೊಂಬತ್ತು ದಿವಸಗಳಲ್ಲಿ ದಿವಸಕ್ಕೊಂದು ಸರ್ಗದಂತೆ ದೇವತಾಲಕ್ಷಣವುಳ್ಳ **"ರುಕ್ಮಿಣೀಶ ವಿಜಯ"** ವೆಂಬ ಮಹಾಕಾವ್ಯವನ್ನು ಗುರುಗಳಾದ ಶ್ರೀ ವಾದಿರಾಜರು ರಚಿಸಿದರು.

ಶ್ಲೋಕ:– ಅವೇಕ್ಷಣಾಯ ವಿದುಷಾಂ ಸಂಸದಂ ಪ್ರೈಷಯತ್ಸುಧೀಃ ।
ಪರಿಷತ್ಸಾ ಪರೀಕ್ಷ್ಯಾಥ ವಿಸ್ಮಿತಾನಂದ ಪೂರಿತಾ ॥8॥

ಅರ್ಥ:– ಸುಜ್ಞಾನಿಗಳಾದ ವಾದಿರಾಜರು ವಿದ್ವಾಂಸರ ಸಭೆಗೆ (ರುಕ್ಮಿಣೀಶ ವಿಜಯ ಮಹಾಕಾವ್ಯವನ್ನು) ಅವಲೋಕನೆಗಾಗಿ ಕಳುಹಿಸಿದರು. ಅದನ್ನು ಪರೀಕ್ಷಿಸಿದ ವಿದ್ವಾಂಸರ ಸಭೆಯು ವಿಸ್ಮಯಾನಂದಭರಿತವಾಯಿತು.

ಶ್ಲೋಕ:– ರುಕ್ಮಿಣೀಶಮಹಾಕಾವ್ಯಮುತ್ತಮಂ ಮಾಘತೋಽಪಿ ಚ ।
ಇತ್ಯಾಘೋಷ್ಯ ಚ ಸಮ್ಮಾನ್ಯ ಪ್ರಾರ್ಚಯತ್ಕವಿಸತ್ತಮಮ್ ॥9॥

ಅರ್ಥ:– ರುಕ್ಮಿಣೀಶವು ಮಹಾಕಾವ್ಯವು, ಮಾಘಕಾವ್ಯಕ್ಕಿಂತಲೂ ಉತ್ತಮವಾದುದು ಎಂಬುದಾಗಿ (ಪಂಡಿತರ ಸಭೆಯು) ಘೋಷಿಸಿ (ಆನೆಯ ಮೇಲಿಟ್ಟು) ಮೆರವಣಿಗೆ ಮಾಡುವ ಮೂಲಕ) ಸನ್ಮಾನಿಸಿ ವಾದಿರಾಜರನ್ನು ಶ್ರೇಷ್ಠಕವಿಗಳೆಂದು ಗೌರವಿಸಿತು.

ಶ್ಲೋಕ:– **ಕವೀನಾಂ ಕುಲಮಧ್ಯೇ ಹಿ ತಿಲಕೋಽಯಮಿತಿ ಪ್ರಥಾಮ್ ।**
ಖ್ಯಾಪಯಾಮಾಸ ವಿದುಷಾಂ ಪರೀಷದ್ಗುಣಮೋದಿನೀ ॥10॥

ಅರ್ಥ:– ಗುಣಗಳನ್ನು ಮೆಚ್ಚಿ ಸಂತೋಷ ಪಡುವ ವಿದ್ವಾಂಸರ ಸಭೆಯು "ಕವಿಗಳ ಕುಲಮಧ್ಯದಲ್ಲಿ ತಿಲಕದಂತಿರುವರು ಈ ವಾದಿರಾಜರು" ಎಂಬುದಾಗಿ ಪ್ರಸಿದ್ಧಿಪಡಿಸಿತು.

ಶ್ಲೋಕ:– **ಕಾಶ್ಯಾಂ ಹಿ ಗಂಗಾಸರಿತಸ್ತಟೇಽಸೌ ನಿಶ್ಯರ್ಚನಾಂ ಶ್ರೀದಯಿತಸ್ಯ ಕೃತ್ವಾ।**
ಉವಾಸ ತತ್ರೈವ ಸ್ವಕೈರ್ನಿಶೀಥೇ ಗ್ರಾಹಾಸ್ತದಾಽತ್ತುಂ ಪರಿವವ್ರುರಾರಾತ್॥11॥

ಅರ್ಥ:– ಕಾಶಿಯಲ್ಲಿ ಗಂಗಾನದಿಯ ತೀರದಲ್ಲಿ ಒಂದು ರಾತ್ರೆ ಶ್ರೀ ಪತಿಯಾದ ಶ್ರೀ ಭೂವರಾಹನನ್ನು ಪೂಜಿಸಿ, ರಾತ್ರಿ ಅಲ್ಲಿಯೇ ತಮ್ಮ ಪರಿವಾರದವರೊಂದಿಗೆ ವಾದಿರಾಜರು ವಾಸ ಮಾಡಿದರು ಆಗ ಮೊಸಳೆಗಳು ಇವರನ್ನು ತಿನ್ನಲು ಸಮೀಪದಲ್ಲಿ ಸುತ್ತುವರಿದವು.

ಶ್ಲೋಕ:– **ಸ್ವರಕ್ಷಣಾಶಕ್ತಿಭಿಯಾ ಯುತಾನ್ ಸರೇಖಾವಿಲೇಖೇನ ನಿಜಾನ್ರರಕ್ಷ ।**
ನಕ್ರಾಸ್ತು ರೇಖಾಮಭಿಲಂಘಿತುಂ ಹೇ ಹ್ಯಶಕ್ತಿತೋ ಹಂತ ನಿವೃತ್ಯ ಜಗ್ಮುಃ॥12॥

ಅರ್ಥ:– ಗೆರೆಯೊಂದನ್ನು ಎಳೆದು ವಾದಿರಾಜರು ತಮ್ಮ ರಕ್ಷಣೆಯಲ್ಲಿ ಅಶಕ್ತರಾಗಿ ಭಯದಿಂದ ಕೂಡಿದ ತನ್ನವರನ್ನು ರಕ್ಷಿಸಿದರು. ಮೊಸಳೆಗಳಾದರೋ ಗೆರೆ ದಾಟಲು ಅಸಮರ್ಥವಾಗಿ ಹಿಂತಿರುಗಿದವು.

ಶ್ಲೋಕ:– **ಇಂದ್ರಪ್ರಸ್ಥೇ ತುರುಷ್ಕೇಂದ್ರ ಮೃತ ಪುತ್ರಸ್ಥಲೋಪರಿ ।**
ದೇವಪೇಟಿಂ ನ್ಯಧಾದ್ಯೋಗೀ ನಿಷಿದ್ಧೋ ಯದನೈರ್ಹಸನ್ ॥13॥

ಅರ್ಥ:– ಇಂದ್ರಪ್ರಸ್ಥದಲ್ಲಿ (ಇಂದಿನ ದಿಲ್ಲಿ ನಗರದಲ್ಲಿ) ಯೋಗಿಗಳಾದ ವಾದಿರಾಜರು ತುರುಷ್ಕರಾಜನ ಮೃತ ಪುತ್ರನ ಸಮಾಧಿಯ ಮೇಲೆ ತಮ್ಮ ದೇವರ ಪೆಟ್ಟಿಗೆಯನ್ನು ಇಡಲು, ಬೇಡವೆಂದು ಯವನ (ತುರುಷ್ಕನೊಬ್ಬನಿಂದ) ತಡೆಯಲ್ಪಟ್ಟರು. "ರಾಜನಮಗನು ಜೀವಿಸಿರುವುದರಿಂದ ಈ ಸ್ಥಳದಲ್ಲಿ ದೋಷವಿಲ್ಲ"ವೆಂದು ಯತಿಶೇಖರರು ಹೇಳಿದರು. ರಾಜನು ವಿಸ್ಮಿತರಾದ ಸೇವಕರಿಂದ (ಈ ವಿಷಯವನ್ನು) ತಿಳಿದನು.

ಶ್ಲೋಕ:– **ಜೀವದ್ರಾಜಾತ್ಮಸ್ಥಾನೇ ನ ದೋಷೋಽಸ್ತೀತಿ ಸೋಽಬ್ರವೀತ್ ।**
ಯವನೈರ್ವಿಸ್ಮತೈ ರ್ಭೂಪೋ ಬೋದಿತೋಯತಿಶೇಖರ ಮ್ ॥14॥

ಅರ್ಥ:– ಇಂದ್ರಪ್ರಸ್ಥದಲ್ಲಿ (ಇಂದಿನ ದಿಲ್ಲಿ ನಗರದಲ್ಲಿ) ಯೋಗಿಗಳಾದ ವಾದಿರಾಜರು ತುರುಷ್ಕರಾಜನ ಮೃತ ಪುತ್ರನ ಸಮಾಧಿಯ ಮೇಲೆ ತಮ್ಮ ದೇವರ ಪೆಟ್ಟಿಗೆಯನ್ನು ಇಡಲು, ಬೇಡವೆಂದು ಯವನ (ತುರುಷ್ಕನೊಬ್ಬನಿಂದ) ತಡೆಯಲ್ಪಟ್ಟರು. "ರಾಜನಮಗನು ಜೀವಿಸಿರುವುದರಿಂದ ಈ ಸ್ಥಳದಲ್ಲಿ ದೋಷವಿಲ್ಲ"ವೆಂದು ಯತಿಶೇಖರರು ಹೇಳಿದರು. ರಾಜನು ವಿಸ್ಮಿತರಾದ ಸೇವಕರಿಂದ (ಈ ವಿಷಯವನ್ನು) ತಿಳಿದನು.

ಶ್ಲೋಕ:– **ಶ್ರೀಮದುಕ್ತಂ ತಥ್ಯಮಸ್ತು ಪರೀಕ್ಷಾ ಕ್ರೀಯತೇ ಮಯಾ ।**
ಇತ್ಯುಕ್ತ್ವೋತ್ಖಾನಯನ್ಪುತ್ರಂ ಜೀವಂತಂ ವೀಕ್ಷ್ಯ ವಿಸ್ಮಿತಃ ॥15॥

ಅರ್ಥ:– ಶ್ರೀಗಳವರು ಹೇಳಿದ ಮಾತು ಸತ್ಯವಾಗಲಿ, ನನ್ನಿಂದ ಪರೀಕ್ಷಿಸಲ್ಪಡುತ್ತದೆ ಎಂದು ರಾಜನು ಹೇಳಿ, ಸಮಾಧಿಯನ್ನು ಅಗೆಸಿ ಮಗನು ಜೀವಿಸಿರುವುದನ್ನು ನೋಡಿ ವಿಸ್ಮಿತನಾದನು.

ಶ್ಲೋಕ:– **ವಂದಸ್ವ ವತ್ಸ ಮಹತಸ್ತವ ಜೀವನದಾನ್ ಗುರೂನ್ ।**
ಇತ್ಯಾನಮಯ್ಯ ಸ್ವಸುತಂ ಧನರಾಶಿಂ ನ್ಯವೇದಯತ್ ॥16॥

ಅರ್ಥ:– "ವತ್ಸ! ನಿನಗೆ ಜೀವದಾನ ಮಾಡಿದ ಮಹಾಗುರುಗಳಿಗೆ ನಮಸ್ಕಾರ ಮಾಡು" ಎನ್ನುತ್ತಾ ತಾನು ನಮಸ್ಕಾರ ಮಾಡಿ, ತನ್ನ ಪುತ್ರನನ್ನು ಧನರಾಶಿಯನ್ನೂ ಅರ್ಪಿಸಿದನು.

ಶ್ಲೋಕ:– **ನಿರಾಕುರ್ವತಿ ಹಂಸೇಂದ್ರೇ ಬಹುಷ್ಟ್ರೈಃ ಪ್ರೇಷಯನ್ನೃಪಃ ।**
ತತ್ಪ್ರೇಷಿತಂ ದ್ರವ್ಯರಾಶಿಂ ಮುಕ್ತಾರತ್ನಾದಿಕೈರ್ಯುತಮ್ ॥17॥
ಗಂಗಾಯಾಂ ಕ್ಷೇಪಯಾಮಾನ ವಿರಕ್ತಕುಲದೀಪಕಃ

ಅರ್ಥ:– ಪರಮಹಂಸರಾದ ವಾದಿರಾಜರು ನಿರಾಕರಿಸಿದರು. (ಆದಾಗ್ಯೂ) ಒಂಟೆಗಳ ಮೇಲೆ ರಾಜನಿಂದ ಕಳುಹಿಸಲ್ಪಟ್ಟ, ಮುತ್ತುರತ್ನಗಳಿಂದ ಕೂಡಿದ ಅಪಾರ ದ್ರವ್ಯರಾಶಿಯನ್ನು ವಿರಕ್ತ ಕುಲದೀಪಕಾರಾದ ಶ್ರೀವಾದಿರಾಜರು ಗಂಗಾನದಿಗೆ ಸುರಿಸಿದರು.

ಶ್ಲೋಕ:– **ಪ್ರಯಾಗೇ ಬ್ರಹ್ಮಣಃ ಸಂಧ್ಯಾಮತೇ ಜಪಪರಸ್ಯ ಹಿ ॥18॥**
ಮುನಿವೇಷಧರೋ ವ್ಯಾಸಃ ಸಾಕ್ಷಾದ್ದೃಷ್ಟಿಪಥೆ ಸ್ಥಿತ ಃ ।
ಮಾತ್ರೋಪಯಾಚಿತಂ ವತ್ಸ ಲಕ್ಷಭೂಷಾ ನಿವೇದನಮ್ ॥19॥
ಸುಪುತ್ರೇಣ ತ್ವಯಾ ಕಾರ್ಯಂ ಮಹಾಭಾರತಟೀಕಯಾ ।
ಲಕ್ಷಗ್ರಂಥಿ ಪದಾರ್ಥಾನಾಂ ವಿವೃತ್ತ್ಯಾ ಲಕ್ಷಭೂಷಯಾ ॥20॥
ಮದರ್ಚನೇನ ಮಾತ್ರೋಕ್ತಂ ಸಾಧಿತಂ ಸ್ಯಾದಿತೀರಿತಃ ।
ವ್ಯಾಸಾಜ್ಞಾಂ ಶಿರಸಾ ಧೃತ್ವಾ ಬದರೀಂ ಗತವಾನ್ಮುದಾ ॥21॥

ಅರ್ಥ:– ಪ್ರಯಾಗದ ಸಂಧ್ಯಾಮತದಲ್ಲಿ ಗುರುಗಳಾದ ವಾದಿರಾಜರು ಜಪಮಾಡುತ್ತಿರುವಾಗ ಮುನಿವೇಷಧಾರಿಗಳಾದ ವೇದವ್ಯಾಸರು ಪ್ರತ್ಯಕ್ಷರಾಗಿ ಎದುರಿಗೆ ಬಂದು ನಿಂತರು "ಹೇ ವತ್ಸ! ತಾಯಿ ಹರಕೆಹೊತ್ತ ಲಕ್ಷಾಭರಣವನ್ನು ಸಮರ್ಪಿಸುವುದು ಸುಪುತ್ರನಾದ ನಿನ್ನ ಕರ್ತವ್ಯವು ಮಹಾಭಾರತಗ್ರಂಥದ ಟೀಕಾರೂಪದಲ್ಲಿ ಒಂದು ಲಕ್ಷ ಕಠಿಣ ಪದಗಳ ಅರ್ಥ ವಿವರಣಾರೂಪವಾದ ಲಕ್ಷಾಲಂಕಾರಗಳಿಂದ ನನ್ನನ್ನು ಪೂಜಿಸುವುದರಿಂದ ತಾಯಿಯು ಹೇಳಿದ ಹರಕೆಯು ತೀರುತ್ತದೆ." ಎಂದು ಹೇಳಿದರು. ವೇದವ್ಯಾಸರ ಆಜ್ಞೆಯನ್ನು ಶಿರಸಾವಹಿಸಿ ಸಂತೋಷದಿಂದ ಬದರಿಕಾಶ್ರಮಕ್ಕೆ ತೆರಳಿದರು.

ಶ್ಲೋಕ:– **ಪ್ರಣಮ್ಯ ಮಧ್ವ ಹಂಸೇಂದ್ರಾನ್ ವ್ಯಾಸ ಮಧ್ವ ಪ್ರಚೋದಿತಃ ।**
ಲಕ್ಷಾಲಂಕಾರಟೀಕಾಂ ಸ ವಿಲಿಖ್ಯಾರ್ಪಯತೇ ಸ್ಮ ಹಿ ॥22॥

ಅರ್ಥ:– (ಬದರಿಯಲ್ಲಿ) ಪರಮಹಂಸರಾದ ಮಧ್ವಾಚಾರ್ಯರಿಗೆ ನಮಸ್ಕರಿಸಿ ವೇದವ್ಯಾಸರು ಹಾಗೂ ಮಧ್ವಾಚಾರ್ಯರಿಂದ ಪ್ರೇರಿತರಾಗಿ ಶ್ರೀ ವಾದಿರಾಜರು ಲಕ್ಷಾಲಂಕಾರವೆಂಬ ಟೀಕಾಗ್ರಂಥವನ್ನು ರಚಿಸಿ (ವೇದವ್ಯಾಸರಿಗೆ) ಅರ್ಪಿಸಿದರು.

ಶ್ಲೋಕ:– **ಶ್ರೀಯುಕ್ತಿಮಲ್ಲಿಕಾದೀನಾಂ ಕರಣೇ ವ್ಯಾಸಮಧ್ವಯೋಃ ।**
ಅನುಜ್ಞಾಂ ಪ್ರಾಪ್ಯ ನತ್ವಾ ಸ ನರನಾರಾಯಣೌ ಮುನೀ ॥23॥
ಪ್ರತ್ಯಾವೃತ್ತೋ ದ್ವಾರವತೀಮಗದ್ದೇವಾರ್ಚನೇಚ್ಛಯಾ ।
ಷಣ್ಮಾಸೋಪೋಷಣಂ ಕುರ್ವನ್ನತ್ರ ತೇಪೇ ತಪಃ ಪರಮ್ ॥24॥

ಅರ್ಥ:–ಶ್ರೀಯುಕ್ತಿಮಲ್ಲಿಕಾದಿ ಗ್ರಂಥ ರಚಿಸಲು ವ್ಯಾಸಮಧ್ವರಿಂದ ಅಪ್ಪಣೆಯನ್ನು ಪಡೆದು, ಅವರು ನರನಾರಾಯಣಮುನಿಗಳನ್ನು ನಮಸ್ಕರಿಸಿ (ಬದರಿಯಿಂದ) ಹಿಂದಿರುಗಿದರು.

ದ್ವಾರಕಾ ಪಟ್ಟಣಕ್ಕೆ ಬಂದು ವಾದಿರಾಜರು ದೇವತಾರ್ಚನಾ ಇಚ್ಛೆಯಿಂದ ಆರು ತಿಂಗಳು ಉಪವಾಸ ಮಾಡುತ್ತಾ ಶ್ರೇಷ್ಠವಾದ ತಪಸ್ಸನ್ನಾಚರಿಸಿದರು.

ಶ್ಲೋಕ:– **ಮಧ್ವಾಷ್ಟಕಂ ತದಾ ತೇನೇ ಭಕ್ತಾಭೀಷ್ಟಾರ್ಥಸಾಧಕಮ್ ।**
ಕೃಷ್ಣನಾಮಾ ಯತಿಸ್ತತ್ರ ವಸನ್ ಸಂಜ್ವರಪೀಡಿತಃ ॥25॥

ಅರ್ಥ:– ವಾದಿರಾಜರು ಆ ಸಮಯದಲ್ಲಿಯೇ ಭಕ್ತರ ಕಾಮನೆಗಳನ್ನು ಪೂರೈಸುವ "ಮಧ್ವಾಷ್ಟಕ"ವನ್ನು ರಚಿಸಿದರು. ಅಲ್ಲಿಯೇ (ದ್ವಾರಾವತಿಯಲ್ಲಿ) ವಾಸಿಸುತ್ತಿದ್ದ ಕೃಷ್ಣ ಹೆಸರಿನ ಯತಿಗಳೊಬ್ಬರು ಜ್ವರ ಪೀಡಿತರಾಗಿದ್ದರು.

ಶ್ಲೋಕ:– **ಶ್ರೀ ವಾದಿರಾಜರಚಿತ ಮಧ್ವಾಷ್ಟಕ ಜಪಾತ್ ಜ್ವರಃ ।**
ನಶ್ಯೇದಿತಿ ಸ್ವಪ್ನದೃಷ್ಟ್ಯಾ ವಾದಿರಾಜಂ ಸಮಾಶ್ರಯತ್ ॥26॥

ಅರ್ಥ:– ಶ್ರೀ ವಾದಿರಾಜರು ರಚಿಸಿದ ಮಧ್ವಾಷ್ಟಕ ಜಪದಿಂದ ಜ್ವರ ನಾಶವಾಗುವುದೆಂದು ಸ್ವಪ್ನ ಸೂಚನೆಯಿಂದ ತಿಳಿದ ಆ ಯತಿಗಳು ವಾದಿರಾಜರನ್ನೂ ಶರಣು ಹೊಂದಿದರು.

ಶ್ಲೋಕ:– **ಶ್ರೀ ವಾದಿರಾಜಯತಿದತ್ತಸುಮಧ್ವಯೋಗಿಸ್ತೋತ್ರೇಣ ತೇನ ಹೃತಸನರಬಾಧಯೇಷಃ ।**
ಕೃಷ್ಣಾಖ್ಯಭಿಕ್ಷುರವನಾವಟತಿಸ್ಮ ರೂಪೀ ಶ್ರೀವಾದಿರಾಜಮುನಿಕೀರ್ತಿಜಯಧ್ವಜೋವಾ॥27॥

ಅರ್ಥ:– ಶ್ರೀ ವಾದಿರಾಜಯತಿಗಳಿಂದ ಕೊಡಲ್ಪಟ್ಟ ಮಧ್ವಾಚಾರ್ಯರ ಸ್ತೋತ್ರ (ರೂಪವಾದ ಮಧ್ವಾಷ್ಟಕ)ದಿಂದ ಈ ಯತಿಗಳು ಜ್ವರಬಾಧೆಯಿಂದ ಬಿಡುಗಡೆ ಹೊಂದಿದರು. ಕೃಷ್ಣನೆಂಬ ಹೆಸರಿನ ಈ ಯತಿಗಳು, ವಾದಿರಾಜಮುನಿಗಳ ಕೀರ್ತಿಯೆಂಬ ಜಯ ಪತಾಕೆಯ ರೂಪದಲ್ಲಿ ಭೂಮಿಯಲ್ಲಿ ಸಂಚರಿಸುತ್ತಿದ್ದರು.

ಶ್ಲೋಕ:– **ಹೃದಯೇ ವಾದಿರಾಜಸ್ಯ ತಪಸ್ಸಕ್ತಸ್ಯ ತತ್ರ ಹಿ ।**
ಭಾಸಮಾನೋ ಹಯಗ್ರೀವೋ ಗುಹಾಯಾಮತ್ರ ಮೇ ಶಿಲಾ ॥28॥
ತಾಮಾನೀಯಾರ್ಚಯ ತ್ವಂ ದ್ರಾಕ್ ಮಮ ಪ್ರೀತಿಂ ಸಮಾರ್ಜಯ ।

ಇತ್ಯಾದಿಶದ್ ಗುಹಾಂ ಗತ್ವಾ ಹಯಗ್ರೀವಶಿಲಾಂ ಗುರುಃ ॥29॥
ಸೂರ್ಯಾಧಿಕಪ್ರಕಾಶೇನ ರಾಜಂತೀಂ ವೀಕ್ಷ್ಯ ಭಕ್ತಿತಃ ।
ನೀತ್ವಾ ನಿತ್ಯಂ ಪೂಜಯನ್ ಸತುತೋಷ ಹರಿಸೇವನೈಃ । ॥30॥

ಅರ್ಥ:– ದ್ವಾರಾವತಿಯಲ್ಲಿ ತಪಸ್ಸನ್ನು ಆಚರಿಸುತ್ತಿದ್ದ ವಾದಿರಾಜರ ಹೃದಯದಲ್ಲಿ ಪ್ರಕಾಶಿಸುತ್ತಿದ್ದ ಹಯಗ್ರೀವನು "ಇಲ್ಲಿ (ಸಮೀಪದಲ್ಲಿರುವ) ಗುಹೆಯಲ್ಲಿ ನನ್ನ ಶಿಲಾ (ರೂಪವಿರುವುದು) ಅದನ್ನು ಶ್ರೀಘ್ರವಾಗಿ ತಂದು ನೀನು ಪೂಜಿಸಿ ನನ್ನ ಪ್ರೀತಿಯನ್ನು ಗಳಿಸು" ಎಂದು ಆಜ್ಞಾಪಿಸಿದನು. ಗುರುಗಳು ಆ ಗುಹೆಗೆ ಹೋಗಿ ಸೂರ್ಯನಿಗಿಂತ ಅಧಿಕವಾದ ತೇಜಸ್ಸಿನಿಂದ ಪ್ರಕಾಶಿಸುತ್ತಿದ್ದ ಹಯಗ್ರೀವ (ಸಾಲಿಗ್ರಾಮ) ಶಿಲೆಯನ್ನು ನೋಡಿ ಭಕ್ತಿಯಿಂದ ತಂದು ನಿತ್ಯದಲ್ಲೂ ಪೂಜಿಸಿ ಹರಿಸೇವನೆಯಿಂದ ಸಂತೋಷಪಟ್ಟರು.

ಶ್ಲೋಕ:– **ಧನೀ ಕಶ್ಚಿತ್ಸುಲೋಭೀತಿ ತಲ್ಲೋಭವಿನಿವೃತ್ತಯೇ ।**
ಹಯಾಸ್ಯಸ್ಯ ಶಿಲಾಮನ್ಯಾಂ ತತ್ಸಮೀಪೇ ನ್ಯಧಾದ್ಗುರುಃ ॥31॥

ಅರ್ಥ:– ಲೋಭಿಯಾದ ಧನಿಕನೋರ್ವನ ಲೋಭಿತನವನ್ನು ನಿವಾರಿಸುವ ಸಲುವಾಗಿ ಗುರುಗಳು ಆ ಧನಿಕನಿಗೆ ಬೇರೊಂದು ಹಯಗ್ರೀವ ಸಾಲಿಗ್ರಾಮವನ್ನು ಪೂಜಿಸಲು ಕೊಟ್ಟರು.

ಶ್ಲೋಕ:– **ತದಾರಭ್ಯ ಧನೀ ಲೋಭಾನ್ಮುಕ್ತೋ ಧರ್ಮಪರೋಽಭವತ್ ।**
ಕಾಲಾಂತರೇ ಸಮಾಗತ್ಯ ವಾದಿರಾಜಃ ಪ್ರಸನ್ನಧೀಃ ॥32॥
ವೈಕುಂಠದಾಸಂ ಧನಿನಂ ಹರಿಭಕ್ತಂ ಚಕಾರ ಹಿ ।

ಅರ್ಥ:– ಅಲ್ಲಿಂದಾಚೆಗೆ ಧನಿಕನು ಲೋಭತನದಿಂದ ಮುಕ್ತನಾಗಿ ಧರ್ಮಿಷ್ಠನಾದನು. ಕಾಲಾಂತರದಲ್ಲಿ ಪ್ರಸನ್ನ ಚಿತ್ತರಾದ ವಾದಿರಾಜರು ಅಲ್ಲಿಗೆ ಬಂದು ಆ ಹರಿಭಕ್ತನಾದ ಧನಿಕನನ್ನು ವೈಕುಂಠದಾಸ(ರೆಂಬ) ಹೆಸರಿನಿಂದ ಪ್ರಸಿದ್ಧರಾಗಿ ದಾಸಕೂಟದಲ್ಲಿರುವವರನ್ನಾಗಿ ಮಾಡಿದರು.

ಶ್ಲೋಕ:– **ಏವಂ ಚರನ್ ಘೂರ್ಜರಾಣಾಂ ದೇಶೇ ತದ್ದೇಶಗಾನ್ಬಹೂನ್ ॥33॥**
ಸ್ವಶಿಷ್ಯಾನಾತತಾನಾಥ ಹರಿಭಕ್ತಾಗ್ರಣೀರ್ಯತಿಃ ।

ಅರ್ಥ:– ಹರಿಭಕ್ತಾಗ್ರೇಸರರಾದ ವಾದಿರಾಜ ಯತಿಗಳು ಈ ರೀತಿ (ಮಹಿಮೆಗಳಿಂದ ಯುಕ್ತರಾಗಿ) ಸಂಚರಿಸುತ್ತಾ ಗುಜರಾಥ್ ದೇಶದಲ್ಲಿ, ಆ ದೇಶದ ಬಹುಮಂದಿಯನ್ನು ತನ್ನ ಶಿಷ್ಯರನ್ನಾಗಿ ಮಾಡಿದರು.(ಇವರಿಂದ ಶಿಷ್ಯ ವರ್ಗವು ವಿಸ್ತಾರವಾಯಿತು.)

ಶ್ಲೋಕ:– **ತತಃ ಪರಮಹಂಸೋಽಯಂ ಪಂಪಾಕ್ಷೇತ್ರಂ ಸಮಾಸದತ್ ॥34॥**

ಅರ್ಥ:– ಆ ಬಳಿಕ ಯತಿಶ್ರೇಷ್ಠರಾದ ಈ ವಾದಿರಾಜರು ಪಂಪಾಕ್ಷೇತ್ರಕ್ಕೆ ಬಂದರು.

ಶ್ಲೋಕ:– **ತತ್ರ ಕೃಷ್ಣಾಚ್ಯುತೌ ಭೂಪೌ ಬಹುದಾರಿದ್ರ್ಯ ಪೀಡಿತೌ ।**
ಶರಣಂ ಪ್ರಾಪತುರ್ಭೂಮೌ ಕಲ್ಪವೃಕ್ಷಾಯಿತಂ ಯತಿಮ್ ॥35॥

ಅರ್ಥ:– ಅಲ್ಲಿ ಆರ್ಥಿಕ ದುರವಸ್ಥೆಯಿಂದ ಪೀಡಿತರಾಗಿದ್ದ (ವಿಜಯನಗರದ ಅರಸರಾಗಿದ್ದ) ಕೃಷ್ಣದೇವರಾಯ ಮತ್ತು ಅಚ್ಯುತರಾಯರೆಂಬ ರಾಜರಿಬ್ಬರು, ಭೂಲೋಕದಲ್ಲಿ ಕಲ್ಪವೃಕ್ಷದಂತಿರುವ ವಾದಿರಾಜಯತಿಗಳ ಬಳಿಗೆ ಶರಣಾಗತರಾಗಿ ಬಂದರು.

ಶ್ಲೋಕ:– **ತಯೋರಭಯದಾಯೀ ಸ ವಾಲಿಗಹ್ವರಮಾವಿಶತ್ ।**
ತತ್ರೋಪಲಂ ಪ್ರೋಕ್ಷ್ಯಮಾಣಂ ವಿದಾರಿತಮಭೂತ್ಕಿಲ ॥36॥

ಅರ್ಥ:– ಅವರಿಬ್ಬರಿಗೆ ಅಭಯವನ್ನಿತ್ತು. ವಾದಿರಾಜರು ವಾಲಿಗುಹೆಯನ್ನು ಪ್ರವೇಶಿಸಿದರು. ಅಲ್ಲಿದ್ದ ಬಂಡೆಯನ್ನು ಪ್ರೋಕ್ಷಿಸಲು ಅದು ಸೀಳಿತು.

ಶ್ಲೋಕ:– **ಪೇಟಿಕಾಭಶಿಲಾ ಮಧ್ಯೇ ಮುಕ್ತರತ್ನಾನಿ ಭೂರಿಶಃ ।**
ದೃಷ್ಟಾನಿ ವಾದಿರಾಡಾಜ್ಞಾ ಬಲಮಾಲಂಬ್ಯ ಭೂಪತೀ ॥37॥
ತಾನ್ಯಾದಾಯ ಪ್ರಾರ್ಥಯತಾಂ ಕಾಮಿತಂ ಗೃಹ್ಯತಾಮಿತಿ ।
ವಿರಕ್ತೋ ಯತಿರಾಟ್ ತತ್ರ ಪ್ರತಿಮಾಯುಗ್ಮಮಾತ್ರಕಮ್ ॥38॥
ಸುಗ್ರೀವಪೂಜಿತಂ ರಾಮಂ ವಿಠ್ಠಲಂ ವಾಲಿಪೂಜಿತಮ್ ।
ಗೃಹೀತವಾನ್ ಸ್ವಪೂಜಾರ್ಥಮನ್ಯನ್ ಮಾಽಸ್ತು ಮಮೇತಿ ಸಃ ॥39॥

ಅರ್ಥ:– ಪೆಟ್ಟಿಗೆಯಂತೆ ಪ್ರಕಾಶಿತವಾದ ಶಿಲಾಮಧ್ಯದಲ್ಲಿ ಬಹು ಮುತ್ತುರತ್ನಗಳು ಕಂಡು ಬಂದವು ವಾದಿರಾಜರ ಆಜ್ಞಾಬಲವನ್ನು ಅವಲಂಬಿಸಿ ಆ ರಾಜರಿಬ್ಬರು ಅವುಗಳನ್ನು ತೆಗೆದುಕೊಂಡು "ಬೇಕಾದಷ್ಟನ್ನು ತಾವು ಸ್ವೀಕರಿಸಿ" ಎಂದು

ಹೇಳಲು ವಿರಕ್ತರಾದ ಯತಿರಾಜರು, ಸುಗ್ರೀವನಿಂದ ಪೂಜಿತವಾದ ರಾಮದೇವರು ಮತ್ತು ವಾಲಿಪೂಜಿತವಾದ ವಿಠಲದೇವರು. ಈ ಎರಡು ವಿಗ್ರಹಗಳನ್ನು ಮಾತ್ರ ತನ್ನ ಪೂಜೆಗೋಸ್ಕರ ಸ್ವೀಕರಿಸಿದರು. ಉಳಿದ ಯಾವುದೂ ತನಗೆ ಬೇಡವೆಂದು ಅವರು ಹೇಳಿದರು.

ಶ್ಲೋಕ:– ಯಥಾऽऽವಯೋರ್ಹರೇಸ್ಸೇವಾಸುಕೃತಂ ಲಪ್ಸ್ಯತೇऽಂಜಸಾ ।
ಅನುಗ್ರಾಹ್ಯೌ ತದೇತ್ಯುಕ್ತಃ ಸ್ವಪರ್ಯಾಯೇ ಘಟಿಷ್ಯತೀ ॥40॥

ಅರ್ಥ:– ನಮ್ಮಿಬ್ಬರಿಗೆ ಶೀಘ್ರವಾಗಿ ಹರಿಸೇವಾ ಸುಕೃತವು ಲಭಿಸುವಂತೆ ಅನುಗ್ರಹಿಸಬೇಕೆಂದು (ರಾಜರಿಬ್ಬರಿಂದ) ಪ್ರಾರ್ಥಿತರಾದ ವಾದಿರಾಜರು ಅದು ತಮ್ಮ (ಕೃಷ್ಣ ಪೂಜಾ) ಪರ್ಯಾಯಕಾಲದಲ್ಲಿ ಆಗುವುದೆಂದು ನುಡಿದರು.

ಶ್ಲೋಕ:– ಇತ್ಯಾಜ್ಞಪ್ತೌ ತದಾಹೂತೌ ರೂಪ್ಯಪೀಠಸ್ಥ ಸನ್ಮಠಮ್ ।
ಶ್ರೀಕೃಷ್ಣಸ್ಯಾತಿಜೀರ್ಣಂ ತಂ ನವೀನಂ ತೇನತುರ್ಮಠಮ್ ॥41॥

ಅರ್ಥ:– ಈ ರೀತಿಯಾಗಿ ಆಜ್ಞಪ್ತರಾದ ಆ ರಾಜರಿಬ್ಬರು, ಆಗ (ಉಡುಪಿಗೆ ಪರ್ಯಾಯ ಕಾಲದಲ್ಲಿ) ಬರಲು ಆಹ್ವಾನಿಸಲ್ಪಟ್ಟರು. ಉಡುಪಿಯಲ್ಲಿರುವ ಶಿಥಿಲವಾದ ಶ್ರೀಕೃಷ್ಣ ಮಠವು ಅವರಿಂದ ನವೀಕರಣ ಮಾಡಲ್ಪಟ್ಟಿತು.

ಶ್ಲೋಕ:– ತತಃ ಕಾಲೇऽಚ್ಯುತೋ ರಾಜಾ ವೈದ್ಯಾಸಾಧ್ಯರುಜಾऽರ್ದಿತಃ ।
ಇತಿ ಶ್ರುತ್ವಾ ವಾದಿರಾಜಃ ಕೃಪಯಾ ತತ್ಪುರಂ ಗತಃ ॥42॥

ಅರ್ಥ:– ಕಾಲಾಂತರದಲ್ಲಿ ವಿಜಯನಗರದ ಅಚ್ಯುತರಾಯನು ವೈದ್ಯರಿಂದ ಗುಣಪಡಿಸಲಾಗದ ಕಾಯಿಲೆಯಿಂದ ನರಳುತ್ತಿರುವುದನ್ನು ಕೇಳಿ, ವಾದಿರಾಜರು ಕೃಪೆಯಿಂದ ಆತನ ನಗರಕ್ಕೆ ಹೋದರು.

ಶ್ಲೋಕ:– ಮಂತ್ರಪೂತಜಲೇನೈವ ಜಹಾರಾಸ್ಯ ರುಜಂ ಗುರುಃ ।
ತುಷ್ಟೋ ರಾಜಾ ತಮಾರೋಪ್ಯ ಸ್ವಸಿಂಹಾಸನಮಾದರಾತ್ ॥43॥

ಅರ್ಥ:– ಗುರುವಾದಿರಾಜರು ಕೇವಲ ಮಂತ್ರಿತಜಲದಿಂದಲೇ ಅರಸನ ಕಾಯಿಲೆಯನ್ನು ಗುಣಪಡಿಸಿದರು. ಆನಂದಿತನಾದ ರಾಜನು ಗುರುಗಳನ್ನು ತನ್ನ ಸಿಂಹಾಸನದಲ್ಲಿ ಆದರದಿಂದ ಕೂಡಿಸಿದನು.

ಶ್ಲೋಕ:– ಛತ್ರಾಸನಾದಿಬಿರುದಾನ್ಯಾರ್ಪಯದ್ಗುರುಪಾದಯೋಃ ।
ತಾನ್ಯದ್ಯಾಪಿ ಸುಪೂಜ್ಯಂತೇ ಗುರುಪುಣ್ಯಾಹನಿ ಸ್ಫುಟಮ್ ॥44॥

ಅರ್ಥ:–ಅಚ್ಯುತರಾಯನು ಗುರುಗಳ ಪಾದಗಳಿಗೆ ಛತ್ರ ಆಸನಾದಿ ಬಿರುದುಗಳನ್ನು ಅರ್ಪಿಸಿದನು. ಈಗಲೂ ಅವುಗಳು ವಾದಿರಾಜರ ಪುಣ್ಯದಿನದಲ್ಲಿ ಪೂಜೆಗೊಳ್ಳುತ್ತಿವೆ.

ಶ್ಲೋಕ:– ಕದಾಚಿತ್ತೌಲವೇ ದೇಶೇ ಸಂಚರನ್ನಂಚಿತಕ್ರಿಯಃ ।
ಪೂರ್ವವೇಣುಗ್ರಾಮಸಂಸ್ಥೇ ಜೈನಾಲಯಸಮೀಪಗಃ ॥45॥

ಅರ್ಥ:– ಸಂತೋಷಗೊಳಿಸುವ ಪ್ರೀತಿಯುಳ್ಳ ವಾದಿರಾಜರು ಒಮ್ಮೆ ತೌಳವ ದೇಶದಲ್ಲಿ ಸಂಚರಿಸುತ್ತಿರುವಾಗ ಮೂಡುಬಿದರೆಗ್ರಾಮದಲ್ಲಿರುವ ಜೈನದೇವಾಲಯದ ಬಳಿಗೆ ಬಂದರು.

ಶ್ಲೋಕ:– ಬಂಗವಂಶ್ಯೋ ಜೈನರಾಜಃ ಸ್ವದೇವಾಗಾರಮೀಕ್ಷ್ಯತಾಮ್ ।
ಇತಿ ನಿರ್ಬಂಧಯಾಮಾಸ ಗುರುಂ ಪ್ರಖ್ಯಾತಕೀರ್ತಿಕಮ್ ॥46॥

ಅರ್ಥ:– (ಆ ಸಮಯದಲ್ಲಿ ಮೂಡಬಿದರೆಯನ್ನು ಆಳುತ್ತಿದ್ದ) ಬಂಗವಂಶಜ ಜೈನರಾಜನು ತಮ್ಮ ಜೈನದೇವಾಲಯವನ್ನು ಸಂದರ್ಶಿಸಲೇಬೇಕು ಎಂಬುದಾಗಿ ಪ್ರಸಿದ್ಧ ಕೀರ್ತಿಯುಳ್ಳ ಗುರುಗಳನ್ನು ನಿರ್ಬಂಧ ಪಡಿಸಿದನು.

ಶ್ಲೋಕ:– ಯತಿರಾಡಾಹ ಮದ್ದೃಷ್ಟ್ಯಾ ಭವದ್ದೇವೋನ್ಯಥಾಕೃತಿಃ ।
ಸ್ಯಾಚ್ಚೇದ್ದೇಯೋ ಭವೇತ್ ತರ್ಹಿ ಪ್ರವಿಶಾಮೀತಿ ಭೂಪತಿಮ್ ॥47॥

ಅರ್ಥ:– ಯತಿರಾಜರು "ನಮ್ಮ ನೋಟದಿಂದಲೇ ನಿಮ್ಮ ದೇವರು ಬೇರೆ ರೂಪ ಹೊಂದಬಹುದು ಹಾಗೇನಾದರೂ ಆದರೆ ಆ ಪ್ರತೀಕವನ್ನು ನಮಗೆ ಕೊಡಲು ನೀವು ಒಪ್ಪುವದಾದರೆ ನಿಮ್ಮ ಜೈನಾಲಯವನ್ನು ಪ್ರವೇಶಿಸುತ್ತೇವೆ" ಎಂದು ಜೈನರಾಜನಿಗೆ ಹೇಳಿದರು.

ಶ್ಲೋಕ:– ಭೂಪಾನುಮೋದಿತೋ ದೇವಸದನಂ ಪ್ರಾವಿಶದ್ ಯತಿಃ ।
ಹರಿದ್ರತ್ನಮಯೀಂ ಬುದ್ಧಪ್ರತಿಮಾಂ ವೀಕ್ಷ್ಯ ಕೌತುಕಾತ್ ॥48॥

ತಸ್ಯಾಂ ರತ್ನಮಯಾರ್ಚಾಯಾಂ ಧ್ಯಾತವಾನ್ ವಿಠಲಾತ್ಮಕಮ್ ।
ತದ್ಧ್ಯಾನಾದ್ಬುದ್ಧಮೂರ್ತಿಸ್ಸಾ ವಿಠಲಾಕಾರಭಾಗಭೂತ್ ॥49॥

ಅರ್ಥ:– ಜೈನರಾಜನು (ವಾದಿರಾಜರ ಕರಾರಿಗೆ) ಸಮ್ಮತಿಸಲು, ಯತಿಗಳು ಜೈನಾಲಯವನ್ನು ಪ್ರವೇಶಿಸಿ, ಪಚ್ಚೆರತ್ನಮಯವಾದ ಬುದ್ಧ ಪ್ರತಿಮೆಯನ್ನು ಕುತೂಹಲದಿಂದ ವೀಕ್ಷಿಸಿ, ರತ್ನಮಯವಾದ ಆ ಪ್ರತಿಮೆಯಲ್ಲಿ ವಿಠ್ಠಲನನ್ನು ಧ್ಯಾನಿಸಿದರು ಅವರ ಧ್ಯಾನದ ದೆಸೆಯಿಂದ ಆ ಬುದ್ಧನ ಪ್ರತಿಮೆಯು ವಿಠ್ಠಲನ ರೂಪ ಹೊಂದಿತು.

ಶ್ಲೋಕ:– **ಭೀತೋಽನೃತಾನ್ನ ಪಾಲೋಽಸೌ ತಾಮರ್ಚಾಂ ಗುರುವೇ ದದೌ ।**
ಅಧುನಾಪಿ ವಿಭಾತ್ಯದ್ಧಾ ವಿಠ್ಠಲಾರ್ಚಾ ಹರಿನ್ಮಣೇಃ ॥50॥

ಅರ್ಥ:– ಸುಳ್ಳಿಗೆ ಹೆದರಿದ (ಆಡಿದ ಮಾತಿನಂತೆ ನಡೆಯದಿರಲು ಹೆದರಿದ) ಆ ಜೈನರಾಜನು ವಾದಿರಾಜಗುರುಗಳಿಗೆ ಆ (ವಿಠ್ಠಲನ) ಪ್ರತಿಮೆಯನ್ನು ಕೊಟ್ಟನು. ಈಗಲೂ ಪಚ್ಚೆವಿಠ್ಠಲ ವಿಗ್ರಹವು (ಸೋದೆ ಮಠದಲ್ಲಿ) ಶೋಭಿಸುತ್ತಿದೆ.

ಶ್ಲೋಕ:– **ಧರ್ಮಸ್ಥಲಾಭಿಧಗ್ರಾಮ ಸಮೀಪೇ ಸಂಚರನ್ ಯತಿಃ ।**
ತತ್ಸ್ಥಲೇಶ ಪ್ರಾರ್ಥಿತಃಸನ್ ಭೂತಸ್ಥಲಮಿದಂ ಪರಮ್ । ॥51॥
ನಾಸ್ಮದಾವಾಸಯೋಗ್ಯಂ ಸ್ಯಾದಿತ್ಯುಕ್ತೇನ ಪ್ರಯಾಚಿತಃ ।
ಮಂಗಲಾಪುರ ಸಪ್ತರ್ಷಿ ಕುಂಡತೀರಗಶಂಕರಮ್ ॥52॥
ಅಂಶತೋ ಲಿಂಗರೂಪಂ ತಮಾನಾಯ್ಯಾಸ್ಥಾಪಯನ್ಮುದಾ ।
ತತ್ರಾರಾಧ್ಯಾರಾಧನೇನ ತತ್ಸ್ಥಲೇಶಂ ಪ್ರಹರ್ಷಯನ್ ॥53॥
ಲಿಂಗೋಪರಿ ನೃಸಿಂಹಸ್ಯ ಶಿಲಾಂ ಕ್ಷೇತ್ರಪ್ರಸಿದ್ಧಯೇ ।
ನ್ಯವೇಶಯತ್ತಥಾ ಭೂತರಾಜಮಾಸ್ಥಾಪತ್ ಸುಧೀಃ ॥54॥

ಅರ್ಥ:– ಧರ್ಮಸ್ಥಳವೆಂಬ ಹೆಸರಿನ ಗ್ರಾಮದ ಸಮೀಪದಲ್ಲಿ ಯತಿಗಳು ಸಂಚಾರ ಮಾಡುತ್ತಿರುವಾಗ (ತಾವು ಇಲ್ಲಿ ವಾಸಿಸಬೇಕೇಂದು) ಆ ಸ್ಥಳದ ಯಜಮಾನನಿಂದ ಪ್ರಾರ್ಥಿಸಲ್ಪಡಲು. "ಇದು ಅಧಿಕವಾಗಿ ಭೂತಸ್ಥಳವು, ನಮ್ಮ ಆವಾಸಕ್ಕೆ ಯೋಗ್ಯವಾದುದಲ್ಲ" ಎಂದು ಹೇಳಿದಾಗ್ಯೂ (ಆಸ್ಥಳೇಶನಿಂದ) ಬಹಳವಾಗಿ ಪ್ರಾರ್ಥಿಸಲ್ಪಟ್ಟು ಮಂಗಳೂರಿನ ಸಪ್ತರ್ಷಿಕುಂಡ ತೀರದ (ಈಶ್ವರನ ಅಂಶ) (ಸಾನ್ನಿಧ್ಯವುಳ್ಳ) ಲಿಂಗರೂಪದ ಮಂಜುನಾಥನನ್ನು(ಭೂತರಾಜರ ಮೂಲಕ) ತರಿಸಿ, ಸಂತೋಷದಿಂದ ಅಲ್ಲಿ ಸ್ಥಾಪಿಸಿದರು. ಅಲ್ಲಿ ಆರಾಧ್ಯದೇವತೆ ಆ ಕ್ಷೇತ್ರವು ಪ್ರಸಿದ್ಧಿಗೆ ಬರಲು, ಲಿಂಗದ ಮೇಲೆ ನರಸಿಂಹ ಸಾಲಿಗ್ರಾಮವನ್ನು ಇಟ್ಟರು. ಹಾಗೆಯೇ ಜ್ಞಾನಿಗಳಾದ ವಾದಿರಾಜರು ಭೂತರಾಜರನ್ನು ಸ್ಥಾಪಿಸಿದರು.

ಶ್ಲೋಕ:– **ನಿತ್ಯಮನ್ನಪ್ರದಾನೇನ ಖ್ಯಾತಿರಸ್ತು ಸ್ಥಲಸ್ಯ ಹಿ ।**
ಇತ್ಯಾಜ್ಞಾಪ್ಯಾಚರದ್ದೇಶೇ ಭಕ್ತಕಲ್ಪದ್ರುಮೋ ಗುರುಃ ॥55॥

ಅರ್ಥ:– ಈ ಧರ್ಮಸ್ಥಳವು ನಿತ್ಯವೂ ಅನ್ನದಾನ ಮಾಡುವ ಮೂಲಕ ಪ್ರಸಿದ್ಧಿ ಹೊಂದಲಿ; ಎಂಬುದಾಗಿ (ಅಲ್ಲಿ ನಿತ್ಯವೂ ಅನ್ನದಾನ ನಡೆಸುವಂತೆ) ಆಜ್ಞಾಪಿಸಿ ಭಕ್ತಕಲ್ಪದ್ರುಮರಾದ ವಾದಿರಾಜರು ಬೇರೆ ದೇಶದೆಡೆಗೆ ಪ್ರಯಾಣಿಸಿದರು.

ಶ್ಲೋಕ:– **ಕುಮಾರಧಾರಾನದ್ಯಾಶ್ಚ ನೇತ್ರಾವತ್ಯಾಶ್ಚ ಸಂಗಮಃ ।**
ಯತ್ರ ತನ್ನಿಕಟೇ ಚಾಸ್ತಿ ನಾವೂರು ಗ್ರಾಮ ಏಕಃ ॥56॥

ಅರ್ಥ:– ಕುಮಾರಧಾರಾ ಹಾಗೂ ನೇತ್ರಾವತಿ ನದಿಗಳ ಸಂಗಮ ಸ್ಥಳದ ಹತ್ತಿರದಲ್ಲಿ 'ನಾವೂರು' ಎಂಬ ಗ್ರಾಮವಿದೆ.

ಶ್ಲೋಕ:– **ತತ್ರಾಗ್ರಹಾರೇ ಪ್ರಥಿತಃ ಕಟಿಪೂರ್ವಶಿವಾಲಯಃ ।**
ಶಿವಲಿಂಗ ಸಹಸ್ರಂ ತು ಪ್ರೋದ್ಭೂತಂ ತತ್ರದೃಶ್ಯತೇ ॥57॥

ಅರ್ಥ:– ಆ ನಾವೂರು ಗ್ರಾಮದ ಅಗ್ರಹಾರದಲ್ಲಿ ಕಟಿಪೂರ್ವಶಿವ ದೇವಾಲಯವು ಪ್ರಸಿದ್ಧವಾದುದು. ಅಲ್ಲಿ ಸಾವಿರ ಲಿಂಗಗಳು ಉದ್ಭವವಾಗಿರುವುದನ್ನು ನೋಡಬಹುದು.

ಶ್ಲೋಕ:– **ತದಾಲೋಕ್ಯ ಗುರುಃ ಪ್ರಾಹ ತದ್ದೇಶಾಧಿಪತಿಂ ಪ್ರತಿ ।**
ಶಿವಲಿಂಗಾಭಿಷೇಕೋಽತ್ರ ಕಾರ್ಯತಾಮಿತಿ ಸೋಽಬ್ರವೀತ್ ॥58॥
ತತ್ರ ತತ್ರೋದಿತಾನಾಂ ಹಿ ಲಿಂಗಾನಾಮುಚ್ಚ ಭೂಸ್ಥಿತೇಃ ।
ಅಭಿಷೇಕೋ ನರೈಃ ಕಥಂ ಕರ್ತುಮಿತಿ ಪ್ರಭುಃ ॥59॥

ಅರ್ಥ:– ಅದನ್ನು ನೋಡಿದ ಗುರುಗಳು ಆ ದೇಶದರಾಜನನ್ನು ಕುರಿತು "ಇಲ್ಲಿ ಶಿವಲಿಂಗಗಳಿಗೆ ಅಭಿಷೇಕ ಮಾಡಬೇಕು" ಎಂದರು. ಆಗ ರಾಜನು. "ಪ್ರಭುಗಳೇ! ಅಲ್ಲಲ್ಲಿ ಉದ್ಭವವಾಗಿರುವ ಲಿಂಗಗಳು ಎತ್ತರವಾದ ಸ್ಥಳದಲ್ಲಿವೆ. ಅವುಗಳ ಅಭಿಷೇಕವು ಮನುಷ್ಯರಿಂದ ಹೇಗೆ ಸಾಧ್ಯ?" ಎಂದು ಹೇಳಿದನು.

ಶ್ಲೋಕ:– **ಗುರುಃ ಸ್ವದಂಡಕೋಟ್ಯಗ್ರಾದ್ರೇಖಾಂ ಕೃತ್ವಾ ಜಲೋದ್ಗಮಮ್ ।**
ದರ್ಶಯಾಮಾಸ ಸಹಸಾ ಪ್ರವಾಹಾಲ್ಲಿಂಗ ಸೇಚನಮ್ ॥60॥
ಕಾರಯಾಮಾಸ ನೃಪತಿರ್ವಿಸ್ಮಿತೋ ಗ್ರಾಮಮಜ್ಜನಾತ್ ।
ಭೀತಃ ಶರಣಮಾಪೇದೆ ನಿಷ್ಪ್ರವಾಹಾಯ ಸದ್ಗುರುಮ್ ॥61॥

ಅರ್ಥ:– ಗುರುಗಳು ತಮ್ಮ ದಂಡದ ತುದಿಯಿಂದ ರೇಖೆಯನ್ನು ಮಾಡಿ (ನದಿಯಿಂದ ಪ್ರಾರಂಭಿಸಿ) ಅದರಿಂದ ಜಲವು ಮೇಲಕ್ಕೆ ಹರಿಯುವುದನ್ನು ತೋರಿಸಿದರು. ಹಠಾತ್ತಾಗಿ ಪ್ರವಾಹೋಪಾದಿಯಲ್ಲಿ ಹರಿದು ಲಿಂಗಗಳಿಗೆ ಅಭಿಷೇಕವಾಗುವಂತೆ ಮಾಡಿದರು. (ಅದನ್ನು ನೋಡಿ) ವಿಸ್ಮಿತನಾದ ರಾಜನು (ಪ್ರವಾಹದಿಂದ) ಗ್ರಾಮ ಮುಳುಗಡೆಯಾಗಬಹುದೆಂದು ಹೆದರಿ ಪ್ರವಾಹವು ನಿಲ್ಲಲು ಸದ್ಗುರುಗಳಿಗೆ ಶರಣು ಬಂದನು.

ಶ್ಲೋಕ:– **ಗುರುಣಾ ತೀರ್ಥಮೇಕಂ ತು ಕೃತ್ವಾಽದರ್ಶನಮಾಪಿತಃ ।**
ಪ್ರವಾಹಸ್ತದ್ದಂಡತೀರ್ಥಂ ಭಾತ್ಯದ್ಯಾಪಿ ಯಶೋಧ್ವಜಮ್ ॥62॥

ಅರ್ಥ:– ಪ್ರವಾಹವು ಅದರ್ಶನವನ್ನು ಹೊಂದಿತು. (ಅಂದರೆ ನಿಂತು ಹೋಯಿತು) ಗುರುಗಳು ಒಂದು ತೀರ್ಥವನ್ನು ನಿರ್ಮಾಣ ಮಾಡಿದರು. (ಗುರುಗಳ) ಜಯ ಪತಾಕೆಯಂತಿರುವ (ಆ) ದಂಡತೀರ್ಥವು ಇಂದಿಗೂ ಕೂಡ ಶೋಭಿಸುತ್ತಿದೆ.

ಶ್ಲೋಕ:– **ರಾಜಾ ತ್ವಾಶ್ಚರ್ಯಮಾಪನ್ನಸ್ತತ್ಸ್ಥಲಂ ಗುರವೇ ದದೌ ।**
ಪುಡಿಬೈಲ್ವಿತಿ ವಿಖ್ಯಾತಂ ತನ್ಮಠೇಶವಶಂ ಖಲು ॥63॥

ಅರ್ಥ:– ಆಶ್ಚರ್ಯದಿಂದ ಯುಕ್ತನಾದ ರಾಜನು ಆ (ದಂಡತೀರ್ಥವಿರುವ) ಸ್ಥಳವನ್ನು ಗುರುಗಳಿಗೆ (ದಾನ) ಒಪ್ಪಿಸಿದನು. ಪುಡಿ (ಪುಂಡಿ) ಬೈಲೆಂದು ವಿಖ್ಯಾತವಾದ ಆ ಸ್ಥಳವು (ಈಗಲೂ) ಸೋದೆ ಮಠದ ವಶದಲ್ಲಿದೆ.

ಶ್ಲೋಕ:– **ಸಾಹಿತ್ಯಾಕಾಶರಾಕೇಶೋ ಮೀಮಾಂಸಾಟವಿ ಕೇಸರೀ ।**
ಶೃತಿಕಾಸಾರ ಮೀನಃ ಸ ವಾದಿತೂಲತನೂನಪಾತ್ ॥64॥

ಅರ್ಥ:– ಸಾಹಿತ್ಯವೆಂಬ ಆಕಾಶದಲ್ಲಿರುವ, ಪೂರ್ಣಚಂದ್ರನಂತೆ, ಮೀಮಾಂಸಾ ಎಂಬ ಅಡವಿಯಲ್ಲಿ (ನಿರಾತಂಕವಾಗಿ ಸಂಚರಿಸುತ್ತಿರುವ) ವನರಾಜ ಸಿಂಹದಂತೆ, ಶೃತಿಗಳೆಂಬ ಕೊಳದಲ್ಲಿರುವ ಮೀನಿನಂತೆ, ಪರವಾದಿಗಳೆಂಬ ಹತ್ತಿಗೆ ಅಗ್ನಿಯಂತೆ ಇರುವವರು ಈ ವಾದಿರಾಜರು.

ಶ್ಲೋಕ:– **ವೇದಾಂತಾಬ್ಧಿ ಮಹಾನಕ್ರಃ ತರ್ಕವಜ್ರಾಯುಧಃ ಕೃತೀ ।**
ಶಬ್ದಚಾಪಧರೋ ಧೀರೋ ವಾದಿರಾಜೋ ವ್ಯರಾಜತ ॥65॥

ಅರ್ಥ:– ವೇದಾಂತ ಸಾಗರದಲ್ಲಿ ಮಹಾಮೊಸಳೆಯಂತಿರುವ ತರ್ಕದಲ್ಲಿ ವಜ್ರಾಯುಧ ದಂತಿರುವ ಶಬ್ದಗಳೆಂಬ ಧನುಸ್ಸನ್ನು ಧರಿಸಿರುವ ಧೀರರಾದ, ಜ್ಞಾನಿಗಳಾದ ವಾದಿರಾಜರು ಶೋಭಿಸಿದರು.

ಶ್ಲೋಕ:– **ಶತಾಧಿಕಗ್ರಂಥಗಣೈಃ ಕೀರ್ತಿಸ್ತಂಭಂ ನ್ಯಚೀಖನತ್ ।**
ಶ್ರೀಯುಕ್ತಿಮಲ್ಲಿಕಾಮುಖ್ಯಾಃ ಭಾಂತಿ ಯತ್ರ ಧ್ವಜಾಯಿತಾಃ ॥66॥

ಅರ್ಥ:– ವಾದಿರಾಜರು ತಾವು ರಚಿಸಿದ ನೂರುಗಿಂತಲೂ ಅಧಿಕವಾದ ಗ್ರಂಥ ಸಮೂಹಗಳಿಂದ ಕೀರ್ತಿ ಎಂಬ ಸ್ತಂಭವನ್ನು ನೆಟ್ಟರು. ಶ್ರೀಯುಕ್ತಿ ಮಲ್ಲಿಕಾದಿ ಪ್ರಮುಖ ಗ್ರಂಥಗಳು ಆ ಕೀರ್ತಿಸ್ತಂಭದಲ್ಲಿ ಧ್ವಜದಂತೆ ಕಂಗೊಳಿಸುತ್ತಿವೆ.

ಶ್ಲೋಕ:– **ಇತಿ ನರಾತಿಗಕಾರ್ಯ ಕಲಾಪತಃ ಪ್ರಥಿತ ಕೀರ್ತಿಚಯೋ**
ಗುರುರಾಣ್ಮುದಾ ಭಜಕಮರ್ತ್ಯಚಯಂ ಹಿ ಸಮುದ್ಧರನ್ನನು ಚಚಾರ ಹಯಾ–ಸ್ಯಪದಾರ್ಚಕಃ ॥67॥

ಅರ್ಥ:– ಈ ರೀತಿಯಾಗಿ ಅತಿ ಮಾನುಷ ಕಾರ್ಯಗಳಿಂದಲೂ ಪ್ರಖ್ಯಾತವಾದ ಕೀರ್ತಿ ಸಮೂಹಗಳಿಂದಲೂ ಹಯವದನ ಪಾದ ಆರಾಧಕರಾದ ಗುರುರಾಜರು ತನ್ನನ್ನು ಸೇವಿಸುವ ಜನರ ಸಮೂಹವನ್ನು ಉದ್ಧರಿಸುತ್ತಾ ಸಂತೋಷ ದಿಂದ ಸಂಚರಿಸಿದರು.

ಶ್ಲೋಕ:– **ಇತಿ ಶ್ರೀವೇದ ನಿಧಿತೀರ್ಥಾಂತೇವಾಸಿ ರಾಮಚಂದ್ರಾಚಾರ್ಯ ವಿರಚಿತೇ ಶ್ರೀ ವಾದಿರಾಜಗುರುವರ ಚರಿತಾಮೃತೇ**
ತೃತೀಯ ಬಿಂದುಃ ಸಮಾಪ್ತಃ

ಅರ್ಥ:– ಇಲ್ಲಿಗೆ ಶ್ರೀ ವೇದನಿಧಿತೀರ್ಥರ ಶಿಷ್ಯರಾದ ರಾಮಚಂದ್ರಾಚಾರ್ಯರಿಂದ ವಿರಚಿತವಾದ ತೃತೀಯ ಬಿಂದು ಸಮಾಪ್ತವಾಯಿತು.

॥ ಚತುರ್ಥಬಿಂದುಃ ॥

॥ ಶ್ರೀ ವಾದಿರಾಜಗುರುಭ್ಯೋ ನಮಃ ॥

ಶ್ಲೋಕ:– **ತದಾತ್ವೇ ವ್ಯಾಸರಾಜಾಖ್ಯಃ ಪ್ರಲ್ಹಾದಾಂಶೋ ಯತೀಶ್ವರಃ ।**
ಶ್ರೀಪದ್ಮನಾಭವಂಶೋತ್ಥ ಮುಕ್ತಾಮಣಿರಭೂದ್ಭುವಿ ॥1॥

ಅರ್ಥ:– ಆ ಕಾಲದಲ್ಲಿ ಪ್ರಹ್ಲಾದ ಅಂಶರಾದ ವ್ಯಾಸರಾಜರೆಂಬ ಹೆಸರಿನ ಶ್ರೇಷ್ಠಯತಿಗಳಿದ್ದರು. ಅವರು ಭೂಮಿಯಲ್ಲಿ ಪದ್ಮನಾಭಯತಿಗಳ ವಂಶದಲ್ಲಿ ಹುಟ್ಟಿದ ಮುತ್ತಿನ ಮಣಿಯಾಗಿದ್ದರು.

ಶ್ಲೋಕ:– **ನ್ಯಾಯಾಮೃತಾದಿಗ್ರಂಥಾನಾಂ ವಾದಿಮೂಕತ್ವದಾಯಿನಾಮ್ ।**
ಪ್ರೌಢಾನಾಂ ಭುವಿ ನಿರ್ಮಾತಾ ವಿಜಯೀಂದ್ರಾದಿಸದ್ಗುರುಃ ॥2॥

ಅರ್ಥ:– ವಿಜಯೀಂದ್ರರೇ ಮೊದಲಾದವರಿಗೆ ಭೂಮಿಯಲ್ಲಿ ಸದ್ಗುರುಗಳಾದ ಶ್ರೀವ್ಯಾಸ ರಾಜರು ವಾದಿಗಳನ್ನು ಮೂಕರನ್ನಾಗಿ ಮಾಡುವ ಪ್ರೌಢಗ್ರಂಥಗಳ ಕರ್ತೃಗಳು.

ಶ್ಲೋಕ:– **ಸ ಕದಾಚಿದ್‌ರೂಪ್ಯಪೀಠಂ ಸಮಾಯಾತಃ ಸಮಾದರಾತ್ ।**
ಶ್ರೀಕೃಷ್ಣದರ್ಶನಂ ಕೃತ್ವಾ ಮಧ್ಯತಾಲಮಠಂ ಹ್ಯಗಾತ್ ॥3॥

ಅರ್ಥ:– ಒಂದು ಸಲ ಉಡುಪಿಗೆ ಆಗಮಿಸಿದ ಅವರು ಭಕ್ತಿಯಿಂದ ಶ್ರೀಕೃಷ್ಣನ ದರ್ಶನವನ್ನು ಮಾಡಿ ಮಧ್ಯತಾಲ ಮಠಕ್ಕೆ ಹೋದರು.

ಶ್ಲೋಕ:– **ತತ್ರ ವ್ಯಾಸಂ ಹ್ಯಷ್ಟಯೋಗಿಪೂಜಾರ್ಹಂ ಮಧ್ವಪೂಜಿತಂ ।**
ಪೂಜಯನ್ನರ್ಚನೋಕ್ತ್ಯೋಽಸೌ ವ್ಯಾಸಮುಷ್ಟಿಂ ನಿನಾಯ ಹಿ ॥4॥

ಅರ್ಥ:– ಮಧ್ಯತಾಲಮಠದಲ್ಲಿ ಮಧ್ವಾಚಾರ್ಯರಿಂದ ಪೂಜಿತವಾದ (ಉಡುಪಿ) ಅಷ್ಟ ಮಠದ ಸ್ವಾಮಿಗಳಿಂದ ಪೂಜಿಸಲರ್ಹವಾದ ವ್ಯಾಸಮುಷ್ಟಿಯನ್ನು ಪೂಜಿಸಿ ತಾವು ಪೂಜಿಸಬೇಕೆಂಬ ಅಪೇಕ್ಷೆಯಿಂದ ಅದನ್ನು ತೆಗೆದುಕೊಂಡು ಹೋದರು.

ಶ್ಲೋಕ:– **ಬದರ್ಯಾಂ ಮಧ್ವಮುನಯೇ ಸಾಕ್ಷಾದ್ವ್ಯಾಸೇನ ಸೇವಿತುಮ್ ।**
ವ್ಯಾಸಸ್ಯ ಮುಷ್ಟಯೋಽಷ್ಟೌ ತು ಪುರಾ ದತ್ತಾ ಇತಿ ಶ್ರುತಮ್ ॥5॥

ಅರ್ಥ:– ಹಿಂದೆ ಬದರೀಕ್ಷೇತ್ರದಲ್ಲಿ 'ಮಧ್ವಮುನಿಗಳಿಗೆ ಪೂಜಿಸುವ ಸಲುವಾಗಿ ಸಾಕ್ಷಾತ್ ವೇದವ್ಯಾಸರಿಂದ ಎಂಟು ವ್ಯಾಸ ಮುಷ್ಟಿಗಳು ಕೊಡಲ್ಪಟ್ಟವು' ಎಂದು ಶ್ರುತವಾಗಿದೆ.

ಶ್ಲೋಕ:– **"ಪ್ರಾಪ ಸ ನಾರಾಯಣತಃ ಶುದ್ಧಶಿಲಾತ್ಮಪ್ರತಿಮಾಃ ।**
ಯಾಸು ಸ ಪದ್ಮಾಸಹಿತೋ ದೋಷ್ಯಹಿತಃ ಸನ್ನಿಹಿತಃ" ॥6॥
ಇತಿ ಮಧ್ವಜಯೋಕ್ತ್ಯಾ ತು ವ್ಯಾಸಮುಷ್ಟ್ಯಾಗತಿಃ ಸ್ಫುಟಾ ।

ಅರ್ಥ:– "ಶ್ರೀ ಮಧ್ವಾಚಾರ್ಯರು (ಭಗವದ್ವೇಷಿಗಳಿಗೆ ಶತ್ರುವಾದ) ಶ್ರೀ ನಾರಾಯಣ (ವೇದವ್ಯಾಸ) ದೇವರಿಂದ ಲಕ್ಷ್ಮೀ ಸಮೇತ ಸದಾ ಸನ್ನಿಹಿತವಾಗಿರುವ ಪವಿತ್ರ ಶಿಲಾರೂಪದ ಪ್ರತಿಮೆಗಳನ್ನು (ವ್ಯಾಸ ಮುಷ್ಟಿಗಳನ್ನು)ಪಡೆದುಕೊಂಡರು." ಈ ರೀತಿಯಾಗಿ ವ್ಯಾಸಮುಷ್ಟಿ ಬಂದದ್ದನ್ನು ಸುಮಧ್ವವಿಜಯದಲ್ಲಿ ಸ್ಪಷ್ಟವಾಗಿ ಹೇಳಿದೆ.

ಶ್ಲೋಕ:– **"ಇಷ್ಟ್ವಾ ವ್ಯಾಸಾಶ್ರಮಂ ಗಚ್ಛನ್ ಮುಖ್ಯಪ್ರೇಷ್ಠೋ ಯತೋ ಮರುತ್॥7॥**
ಪ್ರಣಿಪತ್ಯ ಮಹಾನ್‌ಮಧ್ವೋ ವ್ಯಾಸಂ ನಿಜಗುರುಂ ಪರಮ್ ।
ವಿಜ್ಞಾಪಯಾಮಾಸ ಭೂಮೌ ಸ್ವವ್ಯಾಪೃತಸುದುಷ್ಕರಮ್ ॥8॥
ನಿಶಮ್ಯ ತಸ್ಯ ವಾಕ್ಯಾನಿ ವ್ಯಾಸಃ ಸರ್ವಾಂತರಾತ್ಮಕಃ ।
ಸ್ವಾಧಿಷ್ಠಾನಾನ್ ಪರಂ ಚಾಷ್ಟೌ ಗ್ರಾವ್ಣಸ್ತಾನ್ ಕೃಪಯಾ ದದೌ ॥9॥
ಇತಿ ವಾಯುಪುರಾಣೇಽಪಿ ಪ್ರಮಾಣಂ ಸ್ಪಷ್ಟಮೀರಿತಮ್ ।

ಅರ್ಥ:– ಮುಖ್ಯಪ್ರೇರಕರಾದ ವಾಯುದೇವರ (ಅವತಾರರಾದ) ಮಹಾತ್ಮರಾದ ಮಧ್ವರು ಅಪೇಕ್ಷೆ ಪಟ್ಟು ವ್ಯಾಸಾಶ್ರಮಕ್ಕೆ ಹೋಗಿ ತಮ್ಮ ಗುರುಗಳಾದ ಶ್ರೇಷ್ಠರಾದ ವ್ಯಾಸರಿಗೆ ನಮಸ್ಕರಿಸಿ, ಭೂಮಿಯಲ್ಲಿ ತಮ್ಮ ನಿಯತ ಕಾರ್ಯವು ಬಹು ಕಠಿಣ ವಾದುದೆಂದು ವಿಜ್ಞಾಪಿಸಿದರು. ಅವರ ಮಾತುಗಳನ್ನು ಕೇಳಿ ಸರ್ವಾಂತರ್ಯಾಮಿಯಾದ ವ್ಯಾಸರು ತನ್ನ ಸಾನಿಧ್ಯವುಳ್ಳ ಶ್ರೇಷ್ಠವಾದ ಎಂಟು ಶಿಲೆಗಳನ್ನು (ವ್ಯಾಸಮುಷ್ಟಿಗಳನ್ನು) ಕೃಪೆಯಿಂದ ಕೊಟ್ಟರು. ಹೀಗೆಂದು ವಾಯುಪುರಾಣದಲ್ಲಿಯೂ ಪ್ರಮಾಣವು ಸ್ಪಷ್ಟವಾಗಿ ಉಕ್ತವಾಗಿದೆ.

ಶ್ಲೋಕ:– **ಮಧ್ವೋ ಮುಷ್ಟೀಃ ಬದರ್ಯಾಸ್ತು ಸಮಾನೀಯ ಸಮರ್ಚಯನ್ ॥10॥**
ಶ್ರೀವಿಷ್ಣುತೀರ್ಥಮುನಯೇ ಷಟ್ ಶಿಲಾಃ ಪ್ರದದೌ ಕಿಲ ।
ಅಷ್ಟ ಶಿಷ್ಯಯತೀನಾಂ ತು ಕೃತೇऽಸ್ಥಾಪಯದೇಕಿಕಾಮ್ ॥11॥
ವ್ಯಾಸಮುಷ್ಟಿಂ ಮಧ್ಯತಾಲಮಠೇ ಮಧ್ವಗುರುಸ್ತತಃ ।
ಏಕಾಂ ಪುನರ್ವ್ಯಾಸಮುಷ್ಟಿಂ ಶ್ರೀಕೃಷ್ಣಸ್ಯ ತು ಸನ್ನಿಧೌ ॥12॥
ನ್ಯಧಾತ್‌ಪುನಃ ಸ್ವಾಂಚನಾರ್ಥಂ ಸರ್ವದಾರ್ಚನ ತತ್ಪರಃ॥

ಅರ್ಥ:– ಮಧ್ವರು ಬದರಿಯಿಂದ ವ್ಯಾಸಮುಷ್ಠಿಗಳನ್ನು ತಂದು ಭಕ್ತಿಯಿಂದ ಪೂಜಿಸಿ, ಶ್ರೀ ವಿಷ್ಣುತೀರ್ಥಯತಿಗಳಿಗೆ ಆರು. ಮುಷ್ಟಿಗಳನ್ನು ಕೊಟ್ಟರು. ಅಷ್ಟ ಮಠದ ಯತಿಗಳಿಗಾಗಿ ಒಂದು ವ್ಯಾಸಮುಷ್ಟಿಯನ್ನು ಮಧ್ಯತಾಲ ಮಠದಲ್ಲಿ ಸ್ಥಾಪಿಸಿದರು. ಅನಂತರ ಮಧ್ವಗುರುಗಳು ಪುನಃ ಒಂದು ವ್ಯಾಸಮುಷ್ಠಿಯನ್ನು ಸರ್ವದಾ ಪೂಜಾತತ್ಪರರಾದ ಅವರು, ತಮ್ಮ ಪೂಜೆಗೋಸ್ಕರ ಶ್ರೀಕೃಷ್ಣನ ಸನ್ನಿಧಿಯಲ್ಲಿಟ್ಟರು.

ಶ್ಲೋಕ:– **ತದಾತ್ವೇ ಪದ್ಮನಾಭಾರ್ಯ ಪ್ರಾರ್ಥಯನ್ಮಧ್ವಯೋಗಿನಮ್ ॥13॥**
ಅಷ್ಟಶಿಷ್ಯಪ್ರಾಂಚನಾರ್ಥಂ ಮಧ್ಯತಾಲಮಠೇ ಗುರೋ ।
ಭವತಾ ಸ್ಥಾಪಿತಾ ಮುಷ್ಟಿರ್ವ್ಯಾಸಸ್ಯ ಕೃಪಯಾ ಪ್ರಭೋ ॥14॥
ಪಾದಪದ್ಮೈಕಭಕ್ತಾಯ ಮಹ್ಯಮೇಕಾ ಪ್ರದೀಯತಾಮ್ ।

ಅರ್ಥ:– ಆಗ ಪದ್ಮನಾಭತೀರ್ಥರು ಮಧ್ವಾಚಾರ್ಯರನ್ನು ಕುರಿತು "ಗುರುಗಳೇ, ತಮ್ಮ ಶಿಷ್ಯರಾದ ಅಷ್ಟ ಮಠದ ಯತಿಗಳು ಪೂಜಿಸುವ ಸಲುವಾಗಿ ತಮ್ಮಿಂದ ಒಂದು ವ್ಯಾಸಮುಷ್ಟಿಯು ಮಧ್ಯತಾಳಮಠದಲ್ಲಿ ಸ್ಥಾಪಿತವಾಗಿದೆ. ಹೇ ಪ್ರಭೋ! ತಮ್ಮ ಪಾದ ಪದ್ಮಾರಾಧಕನಾದ ನನಗೆ ಒಂದು (ವ್ಯಾಸ ಮುಷ್ಟಿಯನ್ನು) ಕೃಪೆಯಿಂದ ದಯ ಪಾಲಿಸಬೇಕು." ಎಂದು ಪ್ರಾರ್ಥಿಸಿದರು.

ಶ್ಲೋಕ:– **ಇತ್ಯರ್ಥಿತೋ ಮಧ್ವಗುರುಃ ಪದ್ಮನಾಭಸುಯೋಗಿನೇ ॥15॥**
ಶ್ರೀಕೃಷ್ಣಸನ್ನಿಧೌ ನ್ಯಸ್ತಾಂ ಶಿಲಾಮೇಕಾಮದಾದ್ ಗುರುಃ ।
ಶ್ರೀ ಪದ್ಮನಾಭವಂಶಸ್ಥೈಃ ಸಾ ಶಿಲೈಕಾ ಪ್ರಪೂಜ್ಯತೇ ॥16॥

ಅರ್ಥ:– ಈ ರೀತಿಯಾಗಿ ಶ್ರೇಷ್ಠಯೋಗಿಗಳಾದ ಶ್ರೀ ಪದ್ಮನಾಭ ತೀರ್ಥರಿಂದ ಪ್ರಾರ್ಥಿತರಾದ ಶ್ರೀ ಮಧ್ವಗುರುಗಳು (ಉಡುಪಿ) ಶ್ರೀ ಕೃಷ್ಣ ಸನ್ನಿಧಾನದಲ್ಲಿ ಇಟ್ಟ ವ್ಯಾಸಮುಷ್ಟಿಯೊಂದನ್ನು ಅವರಿಗೆ ಕೊಟ್ಟರು ಆ ವ್ಯಾಸಶಿಲೆಯು ಶ್ರೀ ಪದ್ಮನಾಭತೀರ್ಥರ ವಂಶದವರಿಂದ ಪೂಜಿಸಲ್ಪಡುತ್ತಿದೆ.

ಶ್ಲೋಕ:– **ಶ್ರೀ ವಿಷ್ಣುತೀರ್ಥವಶಗಾ ಸುಬ್ರಮಣ್ಯಮಠೇऽಧುನಾ ।**
ಅಭೇದ್ಯ ಸಂಪುಟೇ ಭಾತಿ ಪಂಚಕಂ ಬಹಿರೇಕಿಕಾ ॥17॥
ಸ್ಪಷ್ಟಂ ಪ್ರದರ್ಶತೇ ವ್ಯಾಸಶಿಲಾ ಭದ್ರಾऽಧುನಾऽಪಿ ಹಿ ।

ಅರ್ಥ:– ಶ್ರೀ ವಿಷ್ಣುತೀರ್ಥರ ವಶದಲ್ಲಿದ್ದ (ಆರು ವ್ಯಾಸ ಮುಷ್ಟಿಗಳು) ಇಂದಿಗೂ ಕೂಡ ಸುಬ್ರಮ್ಮಣ್ಯ ಮಠದಲ್ಲಿ ಐದು ಅಭೇದ್ಯ ಸಂಪುಟದಲ್ಲಿಯೂ ಒಂದು ಹೊರಗಡೆಯೂ ಶೋಭಿಸುತ್ತಿದೆ. ಮಂಗಳಕರಗಳಾದ ವ್ಯಾಸಮುಷ್ಟಿಗಳು ಇಂದಿಗೂ ಸ್ಪಷ್ಟವಾಗಿ ಕಾಣುತ್ತಿವೆ.

ಶ್ಲೋಕ:– **ಮಧ್ಯತಾಲಗತೋ ವಿಪ್ರಸ್ತಾಂ ಶಿಲಾಂ ನ ಚ ದೃಷ್ಟವಾನ್ ॥18॥**

ಅರ್ಥ:– (ವ್ಯಾಸರಾಯರು ಮಧ್ಯತಾಳಮಠದಲ್ಲಿ ಇದ್ದ ವ್ಯಾಸ ಮುಷ್ಟಿಯನ್ನು ತೆಗೆದುಕೊಂಡು ಹೋದ ಕಾರಣ) ಮಧ್ಯತಾಳ ಮಠದಲ್ಲಿದ್ದ ವ್ಯಾಸಶಿಲೆಯು ಅಲ್ಲಿದ್ದ ಬ್ರಾಹ್ಮಣನಿಗೆ ಕಾಣಿಸಲಿಲ್ಲ.

ಶ್ಲೋಕ:– **ಭೀತೋ ರೂಪ್ಯಾಲಯಸ್ಥೇಭ್ಯೋ ಗುರುಭ್ಯಃ ಸ ನ್ಯವೀವಿದತ್ ।**
ಕರ್ತವ್ಯಮೂಢಾ ಯತಯಃ ವಾದಿರಾಜಗುರುಂ ಪ್ರತಿ ॥19॥
ಶಕ್ತಸ್ತ್ವಮೇವ ಕಾರ್ಯೇಽಸ್ಮಿನ್ ವ್ಯಾಸಾರ್ಚಾನಯನೇ ದ್ರುತಮ್ ।
ಯದ್ಯಾನೇಷ್ಯಸಿ ತತ್ಪೂಜಾಂ ತ್ವಮೇವ ಕುರು ಸನ್ಮತೇ ॥20॥
ಇತಿ ದೇಶಾಂತರಸ್ಥಸ್ಸ ಬೋಧಿತೋ ವಾದಿರಾಟ್ ಕೃತೀ ।
ವ್ಯಾಸಂಗವ್ಯಾಜಮಾಸಾದ್ಯ ವ್ಯಾಸಾರ್ಯಂ ಸಮುಪಾಗತಃ ॥21॥

ಅರ್ಥ:– ಭೀತನಾದ ಆ ಬ್ರಾಹ್ಮಣನು ಉಡುಪಿಯಲ್ಲಿರುವ ಗುರುಗಳಿಗೆ (ಅಷ್ಟ ಮಠಾಧೀಶರಿಗೆ) (ಮಧ್ಯಕಾಲಮಠದಲ್ಲಿದ್ದ ವ್ಯಾಸಮುಷ್ಟಿಕೆಯನ್ನು ವ್ಯಾಸರಾಜರು ತೆಗೆದುಕೊಂಡು ಹೋಗಿರುವ ವಿಷಯವನ್ನು ನಿವೇದಿಸಿದನು. ಏನು ಮಾಡಬೇಕೆಂದು ಅರಿಯದ ಆ ಯತಿಗಳು ವಾದಿರಾಜರನ್ನು ಕುರಿತು "ವ್ಯಾಸಮುಷ್ಟಿಯನ್ನು ಶೀಘ್ರವಾಗಿ ಮರಳಿ ತರುವ ಈ ಕಾರ್ಯದಲ್ಲಿ ತಾವೊಬ್ಬರೇ ಶಕ್ತರು. ತಾವು ಮರಳಿ ತಂದರೆ ಆ ವ್ಯಾಸಮುಷ್ಟಿಯ ಪೂಜೆಯನ್ನು ತಮ್ಮ ಮಠದಲ್ಲಿ ತಾವೇ ಮಾಡಿರಿ. ಎಂದು ಬೇರೆ ದೇಶದಲ್ಲಿದ್ದ ವಾದಿರಾಜರಿಗೆ ತಿಳಸಲ್ಪಡಲು, ಜ್ಞಾನಿಗಳಾದ ವಾದಿರಾಜರು (ಅದನ್ನು ತರಲು) ವ್ಯಾಸಂಗನೆಪದಿಂದ ವ್ಯಾಸರಾಯರಲ್ಲಿಗೆ ಹೋದರು.

ಶ್ಲೋಕ:– **ಶ್ರೀಮಾನ್ ರಾಮೋ ರಾವಣಾದಿಹತ್ಯಾಂ ಕೃತ್ವಾಽಘವರ್ಜಿತಃ ।**
ತಥಾಪಿ ದ್ವಿಜಘಾತೇನ ದೋಷೋಽಸ್ತೀತಿ ಪ್ರದರ್ಶಯನ್ ॥22॥
ಲೋಕಶಿಕ್ಷಾರ್ಥಮೇವಾಸೌ ಸೇತೌ ರಾಮೇಶ್ವರಾಭಿಧಮ್ ।
ಶಿವಲಿಂಗಮ್ ಪ್ರತಿಷ್ಠಾಪ್ಯ ಬ್ರಹ್ಮಹತ್ಯಾಘಸಂಚಯಮ್ ॥23॥
ಪ್ರತಿಗೃಹ್ಣಾತಿ ಮತ್ತೋಯಸ್ತಂ ದ್ವಿಜೋತ್ತಮಮಂಜಸಾ॥
ಉದ್ಧರಿಷ್ಯೇಹಮಿತ್ಯೂಚೇ ತದಾ ಕಶ್ಚಿತ್ ತಪೋಧನಃ ॥24॥
ಪ್ರತಿಗೃಹ್ಣಾ ಮ್ಯಹಂ ತ್ವತ್ತಃ ಸೀತಾಜಾನೇ ಪ್ರದೇಹಿ ಮೇ॥
ಲೋಕಮೋಹಕವಾಕ್ಯಸ್ಯ ತಾತ್ಪರ್ಯಮವಿದನ್ ದ್ವಿಜಃ
ಸ್ವಪ್ರತಿಷ್ಠಾಖ್ಯಾಪನಾಯ ಗೃಹ್ಣಾಮೀತ್ಯಬ್ರವೀತ್ ಪ್ರಭುಮ್ ॥25॥

ಅರ್ಥ:– (ತ್ರೇತಾಯುಗದಲ್ಲಿ ರಾವಣಾದಿಗಳನ್ನು ಸಂಹಾರ ಮಾಡಿದ ಮೇಲೆ) ಪಾಪರಹಿತರಾದಾಗ್ಯೂ, ರಾವಣಾದಿಗಳನ್ನು ಕೊಂದ ಮೇಲೆ ಶ್ರೀರಾಮದೇವರು ಬ್ರಹ್ಮಹತ್ಯಾ ದೋಷ ಬಂದಿತೆಂದು ಪ್ರದರ್ಶಿಸುತ್ತಾ ಲೋಕಶಿಕ್ಷಾರ್ಥವಾಗಿ ರಾಮೇಶ್ವರದಲ್ಲಿ (ಸೇತುವಿನಲ್ಲಿ) 'ರಾಮೇಶ್ವರ'ನೆಂಬ ಹೆಸರಿನ ಶಿವಲಿಂಗವನ್ನು ಸ್ಥಾಪಿಸಿ "ಯಾರಾದರೂ ನನ್ನ ಬ್ರಹ್ಮಹತ್ಯಾ ಪಾಪ ಸಮೂಹವನ್ನು ಸ್ವೀಕರಿಸಿದರೆ ಅಂತಹ ಬ್ರಾಹ್ಮಣ ಶ್ರೇಷ್ಠನನ್ನು ನಿಶ್ಚಯವಾಗಿಯೂ ಉದ್ಧಾರ ಮಾಡುವೆನು." ಎಂದು ಹೇಳಿದರು. ಆಗ ಲೋಕಮೋಹಕವಾದ ಮಾತಿನ ತಾತ್ಪರ್ಯವನ್ನು ಗ್ರಹಿಸದೆ, ಅಲ್ಲಿದ್ದ ತಪೋಧನನೊಬ್ಬನು ತನ್ನ ಪ್ರತಿಷ್ಠೆಯನ್ನು ಪ್ರಖ್ಯಾತಗೊಳಿಸಲು "ಹೇ ಸೀತಾಪತೇ! ನಿನ್ನಿಂದ ನಾನು ಸ್ವೀಕರಿಸುವೆನು ಕೊಡು" ಎಂಬುದಾಗಿ ಪ್ರಭುವಾದ ಶ್ರೀ ರಾಮದೇವರಿಗೆ ಹೇಳಿದನು.

ಟಿಪ್ಪಣಿ:– (ಇದು ಪ್ರಾರಬ್ಧಕರ್ಮ ಭೋಗಕ್ಕೆ ನಿಮಿತ್ತಕಾರಣವಾಗಿ ಆ ತಪೋಧನನಿಗೆ ಬ್ರಹ್ಮರಾಕ್ಷಸ ಜನ್ಮ ಬರುವಂತಾಯಿತು)

ಶ್ಲೋಕ:– **ಕೃಪಾವಾನ್ ರಾಮಭದ್ರಸ್ತು ಪ್ರಸೀದನ್ನಿದಮಬ್ರವೀತ್ ।**
ಬ್ರಹ್ಮರಾಕ್ಷಸತಾಂ ಪ್ರಾಪ್ತೋ ಭಾವಿವಾಯು ನಿಷೇವಣಾತ್ ॥26॥
ಭಾವಿರುದ್ರಪದಂ ಪ್ರಾಪ್ಯ ಲೋಕಪೂಜ್ಯೋ ಭವಿಷ್ಯಸಿ ।
ಸ ಬ್ರಹ್ಮರಾಕ್ಷಸೋ ಭೂತ್ವಾ ಬದರೀಕಾನನೇಽವಸತ್ ॥27॥

ಅರ್ಥ:– ಕೃಪಾವಂತರಾದ ಶ್ರೀರಾಮದೇವರು ಅವನನ್ನು ಅನುಗ್ರಹಿಸುತ್ತಾ "ಬ್ರಹ್ಮರಾಕ್ಷಸತನವನ್ನು ಹೊಂದುವ ನೀನು ಭಾವೀ ವಾಯುದೇವರನ್ನು ಸೇವಿಸುವುದರಿಂದ ಭಾವೀ ರುದ್ರ ಪದವಿಯನ್ನು ಹೊಂದಿ ಲೋಕ ಪೂಜ್ಯನಾಗುವಿ" ಎಂದು ಹೇಳಿದರು. ಆ ಬ್ರಾಹ್ಮಣನು ರಾಕ್ಷಸನಾಗಿ ಬದರಿಕಾಶ್ರಮ ವನವನ್ನು ಪ್ರವೇಶಿಸಿದನು.

ಶ್ಲೋಕ:– **ಏಕಾಂಶೇನಾಥ ಸಂಜಜ್ಞೇ ದ್ವಿಜವಂಶೇಕತಾ ಕಲೌ ಯುಗೇ ।**
ನಾರಾಯಣಾಚಾರ್ಯನಾಮಾ ನಾರಲಗ್ರಾಮಗೋ ದ್ವಿಜಃ ॥28॥

ಅರ್ಥ:– ಕಲಿಯುಗದಲ್ಲಿ ಆ ಬ್ರಾಹ್ಮಣನು ಒಂದಂಶದಿಂದ ಬ್ರಾಹ್ಮಣ ಕುಲದಲ್ಲಿ ನಾರಳಗ್ರಾಮದಲ್ಲಿ ನಾರಾಯಣಾಚಾರ್ಯರೆಂಬ ಹೆಸರಿನಿಂದ ಹುಟ್ಟಿದನು.

ಶ್ಲೋಕ:– **ಶ್ರೀ ವಾದಿರಾಜಭೃತ್ಯಸ್ಸನ್ನುವಾಸ ಗುರುಸನ್ನಿಧೌ ।**
ಸಾಧನದ್ವಾದಶೀ ತಿಥ್ಯಾಂ ವ್ಯಾಸರಾಜೋ ನಿರೀಕ್ಷತೇ ॥29॥
ಭಿಕ್ಷಾರ್ಥಮಿತಿ ಹಿ ಶ್ರುತ್ವಾ ಸ್ನಾತಃ ಶೀಘ್ರಂ ಸ ವಾದಿರಾಟ್ ।
ಭಿಕ್ಷಾಂ ಸ್ವೀಕೃತ್ಯ ಪಶ್ಚಾತ್ತು ನದ್ಯಾಸ್ತೀರೇ ಪುನಸ್ಸುಧೀಃ ॥30॥
ಯಥಾಭುಕ್ತಂ ಭುಕ್ತವಸ್ತು ನಿಚಯಾನ್ಮುಖತಃ ಕ್ಷಿಪನ್ ।
ಸಂಶುದ್ಧಜಠರಃ ಸ್ನಾತ್ವಾ ಜಪ್ಯಾನ್ಮಂತ್ರಾಂ ಜಪನ್ನಭೂತ್ ॥31॥

ಅರ್ಥ:– ಆ ನಾರಾಯಣಾಚಾರ್ಯರು ಶ್ರೀ ವಾದಿರಾಜರ ಸೇವಕರಾಗಿ, ಗುರುಗಳ ಸನ್ನಿಧಿಯಲ್ಲಿ ವಾಸವಾಗಿದ್ದರು. (ಶ್ರೀ ವಾದಿರಾಜರು ವ್ಯಾಸಮುಷ್ಟಿಯನ್ನು ತರಲು ಶ್ರೀ ವ್ಯಾಸರಾಯರ ಬಳಿಗೆ ಹೋದಾಗ. ಶ್ರೀ ನಾರಾಯಣಾಚಾರ್ಯರೂ ಅವರೊಂದಿಗೆ ಹೋದರು.) ಸಾಧನದ್ವಾದಶಿ ತಿಥಿಯೊಂದರಲ್ಲಿ ವ್ಯಾಸರಾಯರು ಭಿಕ್ಷೆ ಸ್ವೀಕರಿಸಲು ತಮ್ಮ ನಿರೀಕ್ಷೆಯ ಲ್ಲಿರುವುದನ್ನು ಕೇಳಿದ ವಾದಿರಾಜರೂ ಶೀಘ್ರವಾಗಿ ಸ್ನಾನ ಮಾಡಿ (ಜಪಾದಿ ಅನುಷ್ಠಾನ ರಹಿತರಾಗಿ) ಭಿಕ್ಷೆಯನ್ನು ಸ್ವೀಕಾರ ಮಾಡಿ, ಅನಂತರ ನದಿಯ ತೀರಕ್ಕೆ ಹೋಗಿ ಜ್ಞಾನಿಗಳಾದ ಅವರು ಪುನಃ ಊಟ ಪದಾರ್ಥಗಳನ್ನು ಊಟ ಮಾಡುವ ಮುಂಚೆ ಇದ್ದ ಸ್ಥಿತಿಯಲ್ಲಿಯೇ ಬಾಯಿಯಿಂದ ಹೊರಗೆ ತೆಗೆದು ಇರಿಸಿದರು. ಶುದ್ಧ ಜಠರವುಳ್ಳವರಾಗಿ ವಾದಿರಾಜರು ಸ್ನಾನ ಮಾಡಿ ಮಂತ್ರಗಳನ್ನು ಜಪಿಸುತ್ತಾ ಜಪವನ್ನು ಮಾಡಿದರು.

ಶ್ಲೋಕ:– **ನಾರಾಯಣಾರ್ಯೋಽಕೃತನಿತ್ಯಕೃತ್ಯಕಂ ಗುರುಂ ಸುಭುಕ್ತಂ ಕುತುಕಾತ್ಪರೀಕ್ಷಿತುಮ್। ನದೀ ತಟೇ**
ವಿಸ್ಮಯಕಾರಿತತ್ಕ್ರಿಯಾಂ ದೃಷ್ಟ್ವಾ ತರೋಃ ಸ್ಕಂಧಗತೋ ನ್ಯಲೀಯತ ॥32॥

ಅರ್ಥ:– ನಿತ್ಯ ಕರ್ಮಗಳನ್ನು ಆಚರಿಸದೆ ಗುರುಗಳು ಊಟ ಮಾಡಿದುದನ್ನು (ವೀಕ್ಷಿಸಿದ) ನಾರಾಯಣಾಚಾರ್ಯರು ಕುತೂಹಲದಿಂದ(ರಹಸ್ಯವನ್ನು) ಪರೀಕ್ಷಿಸುವದಕ್ಕಾಗಿ (ಅವರನ್ನು ಹಿಂಬಾಲಿಸಿದರು.) ನದೀ ತೀರದಲ್ಲಿ ವಿಸ್ಮಯಜನಕ ಈ ಕಾರ್ಯಗಳನ್ನು ನೋಡಿ ಮರದ ಮೇಲೆ ಅವಿತುಕೊಂಡರು.

ಶ್ಲೋಕ:– **ವಾದಿರಾಜಃ ಸಮಾಪ್ಯಾತ್ಮಜಪಕರ್ಮ ಸಮುತ್ಥಿತಃ ।**
ಸಮಾಗಚ್ಛಂಸ್ತರೋರ್ಮಧ್ಯೇ ನಿಲೀನಂ ದ್ವಿಜಮೈಕ್ಷತ ॥33॥

ಅರ್ಥ:– ತಮ್ಮ ಜಪಕರ್ಮವನ್ನು ಮುಗಿಸಿ, ಆಸನದಿಂದ ಎದ್ದು, ವಾದಿರಾಜರು ಹಿಂತಿರುಗುವಾಗ ಮಠದ ಮಧ್ಯದಲ್ಲಿ ಅವಿತುಕೊಂಡಿದ್ದ ಬ್ರಾಹ್ಮಣನನ್ನು ನೋಡಿದರು.

ಶ್ಲೋಕ:– **ಪರೀಕ್ಷಾಮಂತುನಾ ಕ್ರುದ್ಧಃ ಬ್ರಹ್ಮರಕ್ಷೋ ಭವೇತಿ ಸಃ ।**
ಶಶಾಪ ಗುರುರಾಜಸ್ತಂ ದ್ವಿಜಂ ಶರಣಮಾಗತಮ್ ॥34॥
ಆಕಾಮಾವೈನ ಕಃ ಸ್ನಾತ ಇತ್ಯಾಕ್ರೋಶನ್ವನೇ ಚರ ।
ಯಸ್ಮಾತ್ ಪ್ರಾಪ್ಸ್ಯಸ್ಯುತ್ತರಂ ತಂ ಮುಕ್ತಶಾಪಸ್ತತೋ ಭವೇಃ ॥35॥

ಅರ್ಥ:– ಸಿಟ್ಟುಗೊಂಡ ಗುರುಗಳು, ಪರೀಕ್ಷಿಸಿದ ಅಪರಾಧಕ್ಕಾಗಿ ಆ ಬ್ರಾಹ್ಮಣನನ್ನು ಬ್ರಹ್ಮರಾಕ್ಷಸನಾಗೆಂದು ಶಪಿಸಿದರು. ಶರಣಾಗತನಾದ ಆ ಬ್ರಾಹ್ಮಣನಿಗೆ "ಆ ಕಾಮಾವೈಸ್ನಾನ ಮಾಡದವರು ಯಾರು? ಎಂಬುದಾಗಿ ಕೂಗುತ್ತಾ ಕಾಡಿನಲ್ಲಿ ಸಂಚರಿಸುತ್ತಿರು. ನೀನು ಸರಿಯಾದ ಉತ್ತರವನ್ನು ಪಡೆದಾಗ ಶಾಪದಿಂದ ಬಿಡುಗಡೆ ಹೊಂದುವಿ"

ಶ್ಲೋಕ:– **ಇತ್ಯಾಜ್ಞಪ್ತಸ್ಸ ದುರ್ದೈವಾದ್ಬ್ರಹ್ಮರಾಕ್ಷಸತಾಂ ಗತಃ ।**
ವನಾದ್ವನಂ ವ್ರಜನ್ ಘೋರೋ ಬದರೀಮಾಗತಸ್ತತಃ ॥36॥

ಅರ್ಥ:– ಈರೀತಿಯಾಗಿ (ಶ್ರೀವಾದಿರಾಜರಿಂದ) ಆಜ್ಞಾಪ್ತನಾದ ಆ ಬ್ರಾಹ್ಮಣನು ದುರ್ದೈವದಿಂದ ಬ್ರಹ್ಮರಾಕ್ಷಸತನವನ್ನು ಹೊಂದಿದನು. ಅವನು ಕಾಡಿನಿಂದ ಕಾಡಿಗೆ ತಿರುಗುತ್ತಾ ಬದರೀಕಾಶ್ರಮದ ಘೋರವಾದ ವನವನ್ನು ಬಂದು ಸೇರಿದನು.

ಶ್ಲೋಕ:– **ತತ್ರ ಸ್ವಾಂಶಂ ಬ್ರಹ್ಮರಕ್ಷೋರೂಪಂ ದೃಷ್ಟ್ವಾಽಥ ವಿಸ್ಮಿತಃ ।**
ತೇನೈಕ್ಯಂ ಸಹಸಾ ಪ್ರಾಪ್ಯ ತತ್ರೈವಾಚರದಾದರಾತ್ ॥37॥

ಅರ್ಥ:– ಅಲ್ಲಿ ತನ್ನ ಅಂಶವಾದ ಬ್ರಹ್ಮರಾಕ್ಷಸ ರೂಪವನ್ನು ನೋಡಿ ವಿಸ್ಮಿತನಾದನು. ಆ ರೂಪದಲ್ಲಿ ಕೂಡಲೇ ಐಕ್ಯ ಹೊಂದಿ (ಶಾಪದಿಂದ ಬಿಡುಗಡೆಯಾಗುವ) ಆಸೆಯಿಂದ ಅಲ್ಲಿಯೇ ಸಂಚರಿಸುತ್ತಿದ್ದನು.

ಶ್ಲೋಕ:– **ಕಾಲಾಂತರೇ ಗುರುಂ ಬದರೀಕ್ಷೇತ್ರ ಗಾಮಿನಮ್ ।**
ವಾದಿರಾಜಂ ಸಮಾಲೋಕ್ಯ ಬ್ರಹ್ಮರಾಕ್ಷಸಯೋನಿಗಃ ॥38॥

ಅರ್ಥ:– ಕಾಲಾಂತರದಲ್ಲಿ ಬದರೀಕ್ಷೇತ್ರಕ್ಕೆ ಹೋಗುತ್ತಿದ್ದ ವಾದಿರಾಜಗುರುಗಳನ್ನು ಬ್ರಹ್ಮರಾಕ್ಷಸನು ನೋಡಿದನು.

ಶ್ಲೋಕ:– **ಯಥಾ ಪ್ರಾಗ್ ಗುರುಣಾಽಽದಿಷ್ಟಂ ಕ್ರೂರೋಽಪೃಚ್ಛತ್ತಥೈವ ಹಿ ।**
ಆಷಾಢೇ ಕಾರ್ತಿಕೇ ಮಾಘೇ ವೈಶಾಖೇ ಸ್ನಾನತತ್ಪರಃ ॥39॥
ಬ್ರಹ್ಮರಾಕ್ಷಸ ಪೈಶಾಚಯೋನೇರ್ಮುಕ್ತೋ ಭವೇದ್ ಧ್ರುವಮ್ ।
ಇತಿ ಶ್ರೀವಾದಿರಾಜಸ್ಯ ಪ್ರತ್ಯುತ್ತರ ವಚೋಽಮೃತಾತ್ ॥40॥
ಬ್ರಹ್ಮರಾಕ್ಷಸತಾಂ ತ್ಯಕ್ತ್ವಾ ಸುರೂಪೋಽಗ್ರೇ ಗುರುರ್ನಮನ್ ।

ಅರ್ಥ:– ಹಿಂದೆ ಗುರುಗಳಿಂದ ಹೇಗೆ ಆದಿಷ್ಟವಾಗಿತ್ತೋ ಹಾಗೆಯೇ ಕ್ರೂರನಾದ ಬ್ರಹ್ಮರಾಕ್ಷಸನು ಅವರನ್ನೇ ಪ್ರಶ್ನಿಸಿದನು. (ಆಗ ವಾದಿರಾಜರು) ಆಷಾಢಮಾಸದಲ್ಲಿ ಕಾರ್ತೀಕ ಮಾಸದಲ್ಲಿ ಮಾಘಮಾಸದಲ್ಲಿ ವೈಶಾಖಮಾಸದಲ್ಲಿ ಸ್ನಾನ ತತ್ಪರನಾದವನು ಬ್ರಹ್ಮರಾಕ್ಷಸ ಪೈಶಾಚಿಕ ಜನ್ಮದಿಂದ ನಿಶ್ಚಯಾಗಿಯೂ ಮುಕ್ತನಾಗುವನು. ಎಂದರು. ವಾದಿರಾಜರ ಪ್ರತ್ಯುತ್ತರ ವಚನಾಮೃತದಿಂದ (ಆ ದ್ವಿಜನು) ಬ್ರಹ್ಮರಾಕ್ಷಸತವನ್ನು ಬಿಟ್ಟು ಸುರೂಪ ಹೊಂದಿ ವಾದಿರಾಜಗುರುಗಳ ಮುಂದೆ ನಿಂತು ನಮಸ್ಕರಿಸಿದನು.

ಶ್ಲೋಕ:– **ಇತಃ ಪರಂ ಭೂತರಾಜ ಇತಿ ಖ್ಯಾತೋ ಮದಂತಿಕೇ ॥41॥**
ವಸನ್ನಗ್ರೇ ವಹಂದೋಲಾಂ ಮದೀಯಾಂ ಸುಕೃತೀ ಭವೇಃ ।
ಭಾವಿಜನ್ಮನಿ ರುದ್ರಸ್ತ್ವಂ ಭವಿತಾ ನಾತ್ರ ಸಂಶಯಃ ॥42॥

ಅರ್ಥ:– "ಇನ್ನು ಮುಂದೆ ಭೂತರಾಜನೆಂದು ಪ್ರಸಿದ್ಧನಾಗಿ ನನ್ನ ಸಮೀಪದಲ್ಲೆ ಇರುತ್ತಾ, ನನ್ನ ಪಲ್ಲಕ್ಕಿಯ ಮುಂಭಾಗವನ್ನು ಹೊರುತ್ತಾ ಸುಕೃತವುಳ್ಳವನಾಗು, ಮುಂದಿನ ಜನ್ಮದಲ್ಲಿ ಬ್ರಹ್ಮಕಲ್ಪದಲ್ಲಿ, ರುದ್ರನಾಗುವಿ ಈ ವಿಷಯದಲ್ಲಿ ಸಂಶಯವಿಲ್ಲ" ಎಂದು ನುಡಿದರು.

ಶ್ಲೋಕ:– **ಭಾವಿರುದ್ರಾನುಗ್ರಹಸ್ಯ ಕರಣಾದೃಜುತಾಂ ಸ್ವಯಮ್ ।**
ಭಾವಿವಾಯುತ್ವಮಪಿ ಚ ಸ್ವಸ್ಮಿನ್ಸೂಚಿತವಾನ್ ಗುರುಃ ॥43॥

ಅರ್ಥ:– ಭಾವಿರುದ್ರರಿಗೆ ಅನುಗ್ರಹಿಸಿದ ಕಾರಣ; ತಮಗೆ ಋಜುತನವನ್ನೂ ಹಾಗೂ ಭಾವಿವಾಯುತ್ವವನ್ನೂ, ಸ್ವಯಂ ವಾದಿರಾಜಗುರುಗಳೇ ಸೂಚಿಸಿದ್ದಾರೆ

ಶ್ಲೋಕ:– **ಇತಿ ಶ್ರೀಭಾವಿರುದ್ರತ್ವಪದಯೋಗ್ಯೋಽಘ ಮೋಚಿತಃ ।**
ವಾದಿರಾಜಸ್ಯ ರಾಮಸ್ಯ ಪ್ರಸಾದಾದವಸತ್ಕೃತೀ ॥44॥

ಅರ್ಥ:– ಹೀಗೆ ಪಾಪ ಮೋಚನೆ ಹೊಂದಿದ ಭಾವಿರುದ್ರಪದವಿಯೋಗ್ಯ ಭೂತರಾಜರು, ವಾದಿರಾಜರ, ರಾಮದೇವರ ಪ್ರಸಾದದಿಂದ ಸುಕೃತವುಳ್ಳವರಾಗಿ ವಾಸಮಾಡಿದರು.

ಶ್ಲೋಕ:– **ಕದಾಚಿದ್ ವ್ಯಾಸಯತಿನಾ ಸ್ವರ್ಚ್ಯದೇವಸ್ಯ ಪೂಜನೇ ।**
ಪ್ರಾಭಾತಿಕೇ ನಿಯುಕ್ತಸ್ಸ ವಾದಿರಾಡರ್ಚನಾ ತ್ವರಮ್ ॥45॥

ಅರ್ಥ:– ಒಮ್ಮೆ ತಮ್ಮದೇವರನ್ನು ಪೂಜಿಸಲು ವ್ಯಾಸರಾಯಯತಿಗಳಿಂದ ಪ್ರಾತಃ ಕಾಲದಲ್ಲಿ ನಿಯೋಜಿತರಾದ ವಾದಿರಾಜರು ಪೂಜೆಯಾದ ನಂತರ

ಶ್ಲೋಕ:– **ವ್ಯಾಸಮುಷ್ಟಿಂ ಗೃಹಿತ್ವಾಽಥ ಪ್ರತ್ಯಾಗಾನ್ಮಧ್ವವಾಟಕಮ್ ।**
ವ್ಯಾಸರಾಜೋ ಮಠೀಯೈಸ್ತದ್ವಿಜ್ಞಾಯ ಪ್ರಹಸನ್ನವೈತ್ ॥46॥
ನಿಕೃತೇರ್ನಿಕೃತಿರ್ನೈವ ದೋಷಾಯ ಭವತಿ ಕ್ವಚಿತ್ ।
ಅಲಮೇತಾವತಾ ವ್ಯಾಸಪೂಜಾಪುಣ್ಯೇನ ನಸ್ತ್ವಿತಿ ॥ ॥47॥

ಅರ್ಥ:– ವ್ಯಾಸಮುಷ್ಠಿಯನ್ನು ತೆಗೆದುಕೊಂಡು ಮಧ್ವವಾಟ ಮಠವನ್ನು ಕುರಿತು ಪ್ರಯಾಣಿಸಿದರು. ತಮ್ಮ ಮಠದವರಿಂದ ತಿಳಿದ ವ್ಯಾಸರಾಜರು ನಗುತ್ತಾ "ಹೇಗೆ ಬಂತೋ, ಹಾಗೆ ಹೋಯಿತು ನಮಗಾದರೋ ಇಲ್ಲಿಯವರೆಗಿನ ಪೂಜೆಯ ಪುಣ್ಯವೇ ಸಾಕು" ಎಂದರು.

ಶ್ಲೋಕ:– **ತದಾರಭ್ಯ ವ್ಯಾಸಮುಷ್ಟಿರ್ಮಧ್ವತಾಲಮಠೇ ಪುನಃ ।**
ಶ್ರೀವಾದಿರಾಜವಶತಾಮಾಪಾದ್ಯಾಪಿ ತದೀಕ್ಷ್ಯತೇ ॥48॥

ಅರ್ಥ:– ಅಂದಿನಿಂದ ಪುನಃ ವ್ಯಾಸಮುಷ್ಟಿಯು ಮಧ್ವತಾಳ ಮಠದಲ್ಲಿ ಶ್ರೀ ವಾದಿರಾಜರ ವಶದಲ್ಲಿರುವುದಾಯಿತು. ಈಗಲೂ ನೋಡಬಹುದು.

ಟಿಪ್ಪಣಿ:– ವ್ಯಾಸಮುಷ್ಟಿಯು ಈಗ ಸೋದೆ ಮಠದಲ್ಲಿಯೇ ಇದೆ.

ಶ್ಲೋಕ:– ಮಾಸದ್ವಿತಯ ಪರ್ಯಾಯಪೂಜಾಂ ಮಧ್ವಸುಕಲ್ಪಿತಾಮ್ ।
ವರ್ಷದ್ವಿತಯ ಪರ್ಯಂತಾಂ ಕಲ್ಪಯಾಮಾಸ ಸನ್ಮತಿಃ ॥49॥

ಅರ್ಥ:– ಮಧ್ವಾಚಾರ್ಯರಿಂದ ವ್ಯವಸ್ಥಿತವಾದ ಎರಡು ತಿಂಗಳುಕಾಲದ (ಶ್ರೀಕೃಷ್ಣ) ಪರ್ಯಾಯ ಪೂಜೆಯನ್ನು ಜ್ಞಾನಿಗಳಾದ ವಾದಿರಾಜರು ಎರಡು ವರ್ಷಗಳ ಕಾಲಕ್ಕೆ ವಿಸ್ತರಿಸಿದರು.

ಶ್ಲೋಕ:– ಕಲ್ಪಯಾಮಾಸ ಸಂಚಾರೇ ಸೌಕರ್ಯಂ ಯತಿನಾಂ ತತಃ ।
ತಥಾ ಪ್ರತ್ಯೇಕಮಷ್ಟಾನಾಂ ಯತೀನಾಂ ನಿರ್ಮಮೇ ಮಠಮ್ ॥50॥

ಅರ್ಥ:– ಅದರಿಂದ (ಅಷ್ಟಮಠದ) ಯತಿಗಳಿಗೆ ಸಂಚಾರ ಮಾಡಲು ಸೌಕರ್ಯವನ್ನುಂಟು ಮಾಡಿದರು. ಹಾಗೆಯೇ ಅಷ್ಟ ಮಠದ ಯತಿಗಳಿಗೆ ಪ್ರತ್ಯೇಕ ಪ್ರತ್ಯೇಕ ಮಠವನ್ನು ನಿರ್ಮಿಸಿದರು.

ಶ್ಲೋಕ:– ತತಃ ಪ್ರಭೃತಿ ಶ್ರೀಕೃಷ್ಣ ಪರ್ಯಾಯಮಹ ಸಂಭ್ರಮಃ ।
ಅತ್ಯಂತಕೌತುಕೋತ್ಸಾಹಹೇತುಃ ಸಮ್ಯಗ್ ವಿಜೃಂಭತೇ ॥51॥

ಅರ್ಥ:– ಅಲ್ಲಿಂದ ಶ್ರೀ ಕೃಷ್ಣಪರ್ಯಾಯವು ಮಹಾಸಂಭ್ರಮಯುಕ್ತವಾಗಿ ಅತ್ಯಂತ ಕುತೂಹಲಕಾರಕ ಉತ್ಸಾಹಕ್ಕೆ ಕಾರಣವಾಗಿ ಚೆನ್ನಾಗಿ ಶೋಭಿಸಿತು.

ಶ್ಲೋಕ:– ಪುನಃ ಸಂಚರಣಾಸಕ್ತೋ ಗತೋऽಯೋಧ್ಯಾಂ ಪುರೀಂ ಮುನಿಃ ।
ತತ್ರತ್ಯ ಹನುಮತ್‌ತಾರ್ಕ್ಷ್ಯ ಪ್ರತಿಮೇ ರೂಪ್ಯ ಪೀಠಕಮ್ ॥52॥
ಆನೀಯ ಕೃಷ್ಣಪುರತಃ ಸ್ಥಾಪಯಾಮಾಸ ಮೋದತಃ

ಅರ್ಥ:– ಸಂಚಾರಸಕ್ತರಾದ ಶ್ರೀ ವಾದಿರಾಜಮುನಿಗಳು ಪುನಃ ಅಯೋಧ್ಯಾಪಟ್ಟಣಕ್ಕೆ ಬಂದರು. ಅಲ್ಲಿದ್ದ ಗರುಡಮುಖ್ಯಪ್ರಾಣರ ಪ್ರತಿಮೆಗಳನ್ನು ಉಡುಪಿಗೆ ತಂದು ಕೃಷ್ಣನ ಎದುರಿಗೆ ಸಂತೋಷದಿಂದ ಪ್ರತಿಷ್ಠಾಪಿಸಿದರು.

ಶ್ಲೋಕ:– ವಾದಿರಾಜೇ ವಿದೇಶಸ್ಥೇ ಪರ್ಯಾಯೇऽನ್ಯೆ ಮಠೇಶ್ವರಾಃ ॥53॥
ಅನಂತಾಸನದೇವಸ್ಯ ಸವಿಧೆ ಮಧ್ವಯೋಗಿನಮ್ ।
ಅರ್ಚಿತುಂ ಹ್ಯಾಗತಾಸ್ತತ್ರ ಸ್ಥಾನಗೇನಾವರೋಧಿತಾಃ ॥54॥

ಅರ್ಥ:– ಬೇರೆಯವರ ಪರ್ಯಾಯ ಕಾಲದಲ್ಲಿ ಶ್ರೀವಾದಿರಾಜರು ಪರಸ್ಥಳದಲ್ಲಿರುವಾಗ, ಮಠಾಧೀಶರುಗಳು ಅನಂತಾಸನದೇವರ ಸನ್ನಿಧಿಯಲ್ಲಿರುವ ಮಧ್ವಾಚಾರ್ಯರನ್ನು ಪೂಜಿಸಲು ಆಗಮಿಸಿದಾಗ ಅಲ್ಲಿರುವವರಿಂದ ತಡೆಯಲ್ಪಟ್ಟರು.

ಶ್ಲೋಕ:– ಮಾರ್ಗೇऽಪ್ಯುಚ್ಛಿಷ್ಟ ವಿಕ್ಷೇಪಾದ್ ಬಾಧಿತಾಃ ಖಿನ್ನಮಾನಸಾಃ ।
ನ್ಯವೇದಯನ್ ವಾದಿರಾಜೇ ಕ್ಷಿಪ್ರಮಾಗಾತ್ಸ ಯೋಗಿರಾಟ್ ॥55॥

ಅರ್ಥ:– ಅನಂತಾಸನದೇವಸ್ಥಾನಕ್ಕೆ ಹೋಗುವ ಮಾರ್ಗದಲ್ಲಿ ಎಂಜಲು ವಸ್ತುಗಳನ್ನು ಎಸೆದು ಪೀಡಿಸಲು, ಖಿನ್ನ ಮನಸ್ಕರಾದ ಮಠಾಧೀಶರು ವಾದಿರಾಜರಲ್ಲಿ (ಈ ವಿಷಯವನ್ನು) ವಿಜ್ಞಾಪಿಸಿದರು. ಆ ಯೋಗಿವರ್ಯರು ಕೂಡಲೇ ಉಡುಪಿಗೆ ಆಗಮಿಸಿದರು.

ಶ್ಲೋಕ:– ಕೃಷ್ಣ ಗೇಹೋತ್ತರೇ ಭಾಗೇ ಶ್ರೀಮಧ್ವಂ ಯತಿಶೇಖರಮ್ ।
ಸ್ಥಾಪಯಾಮಾಸ ಮೇಧಾವೀ ನಿರ್ವಿಘ್ನಾರ್ಚನ ಸಿದ್ಧಯೇ ॥56॥

ಅರ್ಥ:– ನಿರ್ವಿಘ್ನವಾಗಿ ಪೂಜೆಮಾಡುವುದಕ್ಕಾಗಿ ಕೃಷ್ಣದೇವರ ಗರ್ಭಗುಡಿಯ ಉತ್ತರ ಭಾಗದಲ್ಲಿ ಯತಿಶೇಖರರಾದ ಮಧ್ವಾಚಾರ್ಯರ ಪ್ರತಿಮೆಯನ್ನು ಮೇಧಾವಿಗಳಾದ ವಾದಿರಾಜರು ಸ್ಥಾಪಿಸಿದರು.

ಶ್ಲೋಕ:– ಚೋರಾನ್‌ದ್ರುತಂ ಜಹೀತ್ಯೇಕಾಂ ಭಾಷಾಗೀತಿಂ ಚಕಾರ ಹಿ ।
ಯತ್ಪಾಠಾದ್ವಿಘ್ನಕರ್ತಾರಸ್ತೇ ಚೋರಾಃ ನಾಶಮಾಯಯುಃ ॥57॥

ಅರ್ಥ:– "ಕೊಲ್ಲು ಬೇಗ ಕಳ್ಳರ" ಎನ್ನುವ (ಕನ್ನಡ) ಭಾಷೆಯ ಕೀರ್ತನೆಯನ್ನು ವಾದಿರಾಜರು ರಚಿಸಿದರು. ಅದರ ಪಠಣದಿಂದ (ಮಧ್ವಾಚಾರ್ಯರ) ಪೂಜೆಗೆ ವಿಘ್ನಪಡಿಸುತ್ತಿದ್ದ ಆ ಕಳ್ಳರು ನಾಶವಾದರು.

ಶ್ಲೋಕ:– ಸೋದಾಕ್ಷೇತ್ರೇ ತಥಾ ಮಧ್ವಪ್ರತಿಮಾಂ ವಾದಿರಾಟ್ ಗುರುಃ ।
ಐಚ್ಛತ್ ಸ್ಥಾಪಯಿತುಂ ಶ್ರುತ್ವಾ ಪಾಜಕಸ್ಥ ಮಠೇಶಿತಾ ॥57॥

ಕಾಣ್ವಾಭಿದಕ್ಷೇತ್ರಗತ ಮಠಾಧಿಪತಿ ಯೋಗಿರಾಟ್।
ಪ್ರತಿಮಾಂ ತಾಂ ಪಾಜಕಾಖ್ಯೇಕ್ಷೇತ್ರೇ ಮಧ್ವಪದಾಗ್ರತಃ ॥ ॥59॥
ಸ್ಥಾಪಯಿತ್ವಾ ಸ್ವಭಕ್ತೇಷು ಪ್ರಸಾದಂ ಕರ್ತುಮರ್ಹಸಿ।
ಇತ್ಯರ್ಥಿತೋ ವಾದಿರಾಜಸ್ತಾಂ ಮಧ್ವಪ್ರತಿಮಾಂ ಶುಭಾಮ್ ॥60॥
ಪಾಜಕೇ ವಾಸುದೇವಾಂಘ್ರಿ ನಿಕಟೇ ನ್ಯದಧಾತ್ಕಿಲ ।
ಯಾಮಾರಾಧ್ಯ ಲಭಂತೇ ಸ್ಮ ಭುಕ್ತಿಂ ಮುಕ್ತಿಂ ಚ ಸೇವಕಾಃ ॥61॥

ಅರ್ಥ:– ಹಾಗೆಯೇ, ವಾದಿರಾಜಗುರುಗಳು ಸೋದಾಕ್ಷೇತ್ರದಲ್ಲಿ (ತಮ್ಮ ಬಳಿಯಿದ್ದ ಇನ್ನೊಂದು) ಮಧ್ವಾಚಾರ್ಯರ ಪ್ರತಿಮೆಯನ್ನು ಸ್ಥಾಪಿಸಬೇಕೆಂದಿರುವವರೆಂದು ಕೇಳಿ ಪಾಜಕ ಕ್ಷೇತ್ರದಲ್ಲಿರುವ ಮಠದ ಒಡೆಯರಾದ ಕಾಣಿಯೂರು ಮಠಾಧೀಶ ಯೋಗಿವರ್ಯರು "ಆ ಮಧ್ವಾಚಾರ್ಯರ ಪ್ರತಿಮೆಯನ್ನು ಪಾಜಕಕ್ಷೇತ್ರದಲ್ಲಿ ಮಧ್ವಾಚಾರ್ಯರ ಪಾದಗಳ ಮುಂಭಾಗದಲ್ಲಿ ಸ್ಥಾಪಿಸಿ, ತಮ್ಮ ಭಕ್ತರಲ್ಲಿ ಅನುಗ್ರಹ ಮಾಡುವವರಾಗಬೇಕು" ಎಂಬುದಾಗಿ ಪ್ರಾರ್ಥಿಸಿದರು. ಯಾರನ್ನು ಪೂಜಿಸಿದರೆ ಭಕ್ತರು (ಇಹದಲ್ಲಿ) ಭಕ್ತಿಯನ್ನು ಹಾಗೂ (ಪರದಲ್ಲಿ) ಮುಕ್ತಿಯನ್ನು ಹೊಂದುವರೋ ಅಂತಹ ಶುಭಕರವಾದ ಮಧ್ವಾಚಾರ್ಯರ ಪ್ರತಿಮೆಯನ್ನು ಪಾಜಕಕ್ಷೇತ್ರದಲ್ಲಿ ವಾಸುದೇವರ (ಮಧ್ವಾಚಾರ್ಯರು) ಪಾದದ ಸಮೀಪದಲ್ಲಿ ವಾದಿರಾಜರು ಸ್ಥಾಪಿಸಿದರು.

ಟಿಪ್ಪಣಿ:– ಈಗಿನ ಕಾಣಿಯೂರು ಸ್ಥಳಕ್ಕೆ ಹಿಂದೆ ಕಣ್ವಕ್ಷೇತ್ರವೆಂಬ ಹೆಸರಿತ್ತು.

ಶ್ಲೋಕ:– **ಪಂಡಿತಮ್ಮನ್ಯಕಾಃ ಕೇಚಿನ್ಮತ್ಸರಾದ್ವಾದಿರಾಜಕೇ ।**
ಕೋಲಾಪುರೇ ವಟುಂ ಕಂಚಿತ್ ಸಂಗೋಪ್ಯಾಽಽಖ್ಯಾಪಯನ್ಪ್ರಥಾಮ್ ॥62॥
ಮಾರಿತೋ ವಾದಿರಾಜೇನ ವಟುರಿತ್ಯಪವಾದಕಮ್ ।
ಶ್ರುತ್ವಾ ಮೂಕಾಂಬಿಕೈ ವೈತಜ್ಜಾನಾತೀತಿ ಯತಿರ್ವದನ್ ॥63॥
ಸ್ವಸ್ಥ ಬುದ್ದಿರಭೂತ್ ಕೃಷ್ಣ ಮಹೋತ್ಸವ ಸುಸಂಭ್ರಮೇ ।
ಸೈವ ದೇವೀ ವಟುಂ ತಂ ಹಿ ನಿರ್ಭರ್ತ್ಸ್ಯ ಗುರು ಸನ್ನಿಧಿಮ್ ॥64॥
ಪ್ರೇಷಯಾಮಾಸ ಕೃಪಯಾ ಹ್ಯೇಕಾಂತಿಕ ಜನಪ್ರಿಯಾ ।

ಅರ್ಥ:– ವಾದಿರಾಜರಲ್ಲಿ ಮಾತ್ಸರ್ಯವುಳ್ಳ ಪಂಡಿತಮಾನಿಗಳು ಒಬ್ಬ ಬ್ರಹ್ಮಚಾರಿಯನ್ನು ಕೊಲ್ಲೂರಿನಲ್ಲಿ ಅಡಗಿಸಿಟ್ಟು ಆ ಬ್ರಹ್ಮಚಾರಿಯನ್ನು ವಾದಿರಾಜರು ಕೊಲ್ಲಿಸಿದ್ದಾರೆ. ಎಂದು ಸುದ್ದಿಯನ್ನು ಹಬ್ಬಿಸಿದರು ಈ ಅಪವಾದವನ್ನು ಕೇಳಿ "ಮೂಕಾಂಬಿಕೆಯು ಇದನ್ನು ತಿಳಿದಿದ್ದಾಳೆ" ಎಂದು ಯತಿವರ್ಯರು ಹೇಳಲು, ಏಕಾಂತಭಕ್ತಜನಪ್ರಿಯಳಾದ ಮೂಕಂಬಿಕಾದೇವಿಯೇ ಆ ವಟುವನ್ನು ಹೆದರಿಸಿ ಸ್ವಸ್ಥ ಚಿತ್ತರಾದ ಶ್ರೀ ವಾದಿರಾಜರು ಕೃಷ್ಣನ ಉತ್ಸವ ಸಂಭ್ರಮದಲ್ಲಿರಲು ಗುರುಗಳ ಸನ್ನಿಧಿಗೆ ಕೃಪೆಯಿಂದ ಕಳುಹಿಸಿದಳು.

ಶ್ಲೋಕ:– **ಧಾವನ್ನಾಗತ್ಯ ಶರಣಂ ವಟುರಾಪ್ತೋಽರಿ ಸಂಚಯನ್. ॥65॥**
ಮಲಿನಾಸ್ಯಂ ಚಕಾರಾರಿ ದುಷ್ಕೃತ್ಯಂ ಗುರವೇಽಬ್ರವೀತ್

ಅರ್ಥ:– ಆ ವಟುವು ಓಡುತ್ತಾ ಬಂದು ಶರಣಾಗತನಾಗಿ "ದೂಷಿತರಾದ ಶತ್ರುಗಳ ಗುಂಪು ಈ ದುಷ್ಕೃತ್ಯವನ್ನು ಮಾಡಿತು" ಎಂದು ಗುರುಗಳಿಗೆ ಹೇಳಿದನು.

ಶ್ಲೋಕ:– **ಉಂಡಾರುನಾಮಕಗ್ರಾಮೇ ವಸನ್ ಯತಿವರೋ ನಿಶಿ । ॥66॥**
ಗ್ರಾಮೇಶರಾಮಕೃಷ್ಣಾಖ್ಯ ಪ್ರಭುಣಾ ಸ ಭಟೇನ ಹಿ
ರುದ್ಧಸ್ತದಗ್ರತೋ ಗಚ್ಛನ್ನ ದೃಷ್ಟೋ ಬಹಿರಾಗಮತ್ ॥67॥

ಅರ್ಥ:– ಉಂಡಾರುಯೆಂಬ ಹೆಸರಿನ ಗ್ರಾಮದಲ್ಲಿ ಯತಿವರರು ವಾಸ ಮಾಡುತ್ತಿರಲು ಒಂದು ರಾತ್ರಿ ರಾಮಕೃಷ್ಣ ಎಂಬ ಹೆಸರಿನ ಗ್ರಾಮಾಧಿಪತಿ ಭಟರಿಂದ ಸಹಿತನಾಗಿ (ಮಠವನ್ನು ಮುತ್ತಿ ಯಾರೂ ಹೊರಗೆ ಹೋಗದಂತೆ) ತಡೆದನು. (ಯತಿವರರು) ಅವರ ಎದುರಿಗೇ ನಡೆದು ಹೊರಗೆ ಬಂದರೂ ಅವರಿಂದ ಕಾಣಲ್ಪಡಲಿಲ್ಲ.

ಶ್ಲೋಕ:– **ರುಂಧಂತೋ ದಶ್ಯವೋ ಹ್ಯಂಧಾ ಆಪ್ರಾತಃ ಪರಿತೋ ಮಠಮ್।**
ಭೀತಾಃ ಪಲಾಯಿತಾಃ ಪ್ರಾತರ್ವಾದಿರಾಜ ತಪೋಬಲಾತ್ ॥68॥

ಅರ್ಥ:– ವಾದಿರಾಜರ ತಪಸ್ಸಿನ ಪ್ರಭಾವದಿಂದ ಮಠವನ್ನು ಸುತ್ತಲೂ ಸುತ್ತುವರೆದಿದ್ದ ಕಳ್ಳರು ಪ್ರಾತಃ ಕಾಲದವರೆಗೂ ಅಂಧರಾಗಿದ್ದು ಬೆಳಗಾಗಲು ಭೀತರಾಗಿ ಪಲಾಯನ ಮಾಡಿದರು.

ಶ್ಲೋಕ:– **ಸ್ವರ್ಣಕಾರಶ್ಚಿಕೀರ್ಷನ್ ಶ್ರೀ ಹೇರಂಬ ಪ್ರತಿಮಾಂ ಶುಭಾಮ್ ।**
ಪಂಚಲೋಹದ್ರವಂ ಸಿಂಚನ್ನಶ್ವಾಸ್ಯಾಕೃತಿಮೈಕ್ಷತ ॥69॥

ಅರ್ಥ:– ಓರ್ವ ಸ್ವರ್ಣಕಾರನು ಒಳ್ಳೆಯ ಗಣಪತಿಯ ಪ್ರತಿಮೆಯನ್ನು ಮಾಡಲಪೇಕ್ಷಿಸಿ ಪಂಚಲೋಹದ ದ್ರವವನ್ನು (ಅಚ್ಚಿಗೆ) ಸುರಿಯಲು ಅದು ಹಯಗ್ರೀವ ಆಕೃತಿ ಆದುದನ್ನು ನೋಡಿದನು.

ಶ್ಲೋಕ:– **ಯತಮಾನೋಽನ್ಯಥಾಕರ್ತುಮಶಕ್ತಸ್ತದ್ವಿಧಾರಣೇ ।**
ಟಂಕೇನ ತಾಡಯಶ್ಚಿತ್ರಮಭೇದ್ಯಾಂ ವಿಸ್ಮಿತೋ ನಿಶಿ ॥70॥
ಸ್ವಪ್ನೇ ವಿಪ್ರೇಣ ಮೂಢ ತ್ವಂ ಮಾ ಮುಧಾ ಭಿಂಧಿ ತಾಡನೈಃ ।
ದೇವತಾಸನ್ನಿಧಾನೇ ತಾಂ ಶ್ವೋ ದೇಹ್ಯರ್ಥಯತೇ ಮುದಾ ॥71॥

ಅರ್ಥ:– ಪ್ರಯತ್ನ ಮಾಡಿದರೂ ಸರಿಪಡಿಸಲು ಅಶಕ್ತನಾದ ಸ್ವರ್ಣಕಾರನು ವಿಗ್ರಹವನ್ನು ಒಡೆಯಲು ಕಲ್ಲುಳಿಯಿಂದ ಹೊಡೆದರೂ ತುಂಡಾಗದಿರುವದನ್ನು ನೋಡಿ ವಿಸ್ಮಿತನಾದನು. ಅವನಿಗೆ ಸ್ವಪ್ನದಲ್ಲಿ ಒಬ್ಬ ಬ್ರಾಹ್ಮಣನು **"ಹೇಮೂಢನೇ!** ನೀನು ವ್ಯರ್ಥವಾಗಿ ಹೊಡೆದು ತುಂಡು ಮಾಡಬೇಡ. ದೇವತಾಸನ್ನಿಧಾನವಿರುವ ಈ ವಿಗ್ರಹವನ್ನು ಕೊಡು ಎಂದು ನಾಳೆ ಸಂತೋಷದಿಂದ (ಒಬ್ಬರು) ಕೇಳುತ್ತಾರೆ**"** ಎಂದು ಹೇಳಿದನು.

ಶ್ಲೋಕ:– **ಇತಿ ಸಂಚೋದಿತಃ ಪ್ರಾತರಾಗತಾಯ ತಪಸ್ವಿನೇ।**
ಸ್ವಪ್ನಸೂಚಿತವೃತ್ತಾಯ ವಾದಿರಾಜಾಯ ತಾಂ ದದೌ ॥72॥

ಅರ್ಥ:– ಈ ರೀತಿಯಾಗಿ ಸ್ವಪ್ನದಲ್ಲಿ ಬೋಧಿತನಾದ ಸ್ವರ್ಣಕಾರನು ಪ್ರಾತಃಕಾಲದಲ್ಲಿ ಆಗಮಿಸಿದ ಸ್ವಪ್ನದಲ್ಲಿ ಸೂಚಿತರಾದ ತಪಸ್ವಿಗಳಾದ ಶ್ರೀ ವಾದಿರಾಜರಿಗೆ ಆ ಹಯವದನ ಮೂರ್ತಿಯನ್ನು ಅರ್ಪಿಸಿದನು.

ಶ್ಲೋಕ:– **ಯತಿರಾಡಶ್ವವದನಂ ಸಾದರಂ ಪರಿಗೃಹ್ಯ ಸಃ ।**
ಅಧಿವಾಸಾಭಿಷೇಕಾದಿವಿದಿಭಿಃ ಪರಿಶೋಧ್ಯ ತಾಮ್ ॥73॥
ಪೂಜಯನ್ ಸ್ವರ್ಣಕಾರಂ ತಂ ಸಾನುಗಂ ಶಿಷ್ಯಮಾತನೋತ್ ।
ತತಃ ಸ್ವರ್ಣಕೃತಾಂ ವರ್ಗಸ್ತನ್ಮಠಚ್ಛಾತ್ರತಾಮಗಾತ್ ॥74॥

ಅರ್ಥ:– ಶ್ರೀವಾದಿರಾಜಯತಿಗಳು ಆ ಹಯವದನನ್ನು ಭಕ್ತಿಪೂರ್ವಕ ಸ್ವೀಕರಿಸಿ ಆ ಮೂರ್ತಿಗೆ ಅಧಿವಾಸ ಅಭೀಷೇಕಾದಿಗಳಿಂದ ಶುದ್ಧಿಗೊಳಿಸಿ ಪೂಜಿಸಿದರು. ತಮ್ಮನ್ನು ಹಿಂಬಾಲಿಸಿದ ಆಸ್ವರ್ಣಕಾರನನ್ನು ಶಿಷ್ಯನನ್ನಾಗಿ ಸ್ವೀಕರಿಸಿದರು. ಅನಂತರ ಸ್ವರ್ಣಕಾರವರ್ಗದವರು ಮಠದ ಶಿಷ್ಯರಾದರು.

ಶ್ಲೋಕ:– **ತದನು ಹಯಮುಖಂ ತು ಕೋಲಮಪ್ಯಾದೃತಾತ್ಮಾ**
ಮಣಿಕನಕ ಮನೋಜ್ಞೇ ವಿಷ್ಟರೇ ಭಕ್ತಿನಮ್ರಃ ।
ವಿವಿಧರುಚಿರಭಕ್ಷ್ಯೈರ್ಹಂತ ರಾಜೋಪಚಾರೈಃ
ನಿರತಮವನಿಪೂಜ್ಯಃ ಪೂಜಯನ್ ರಾಜತೇ ಸ್ಮ ॥75॥

ಅರ್ಥ:– ಅನಂತರ ಆ ಹಯಗ್ರೀವದೇವರನ್ನೂ ಹಾಗೂ ತಮ್ಮ ಪಟ್ಟದ ವರಾಹ ದೇವರನ್ನೂ ಮನೋಹರವಾದ ಮಣಿಗಳಿಂದ ಖಚಿತ ಸುವರ್ಣಪೀಠದಲ್ಲಿಟ್ಟು ರುಚಿಕರವಾದ ವಿವಿಧ ಭಕ್ಷ್ಯಗಳಿಂದಲೂ, ರಾಜೋಪಚಾರಗಳಿಂದಲೂ ಭಕ್ತಿ ನಮ್ರರಾಗಿ ಪೂಜಿಸುತ್ತಾ ಆದರಲ್ಲೇ ಆಸಕ್ತರಾಗಿ ವಾದಿರಾಜರು ಶೋಭಿಸಿದರು.

ಶ್ಲೋಕ:– **ಇತಿ ಶ್ರೀವೇದನಿಧಿತೀರ್ಥಾಂತೇವಾಸಿ ರಾಮಚಂದ್ರಾಚಾರ್ಯವಿರಚಿತೇ**
ಶ್ರೀ ವಾದಿರಾಜಗುರುವರಚರಿತಾಮೃತೇ ಚತುರ್ಥಬಿಂದುಃ ಸಮಾಪ್ತಃ

ಅರ್ಥ:– ಇಲ್ಲಿಗೆ ಶ್ರೀ ವೇದನಿಧಿತೀರ್ಥರ ವಿದ್ಯಾಶಿಷ್ಯರಾದ ರಾಮಚಂದ್ರಾಚಾರ್ಯರಿಂದ ರಚಿತವಾದ ಶ್ರೀ ವಾದಿರಾಜಗುರುವರ ಚರಿತಾಮೃತದಲ್ಲಿ ನಾಲ್ಕನೇಯ ಬಿಂದು: ಮುಗಿಯಿತು.

॥ ಪಂಚಮ ಬಿಂದುಃ ॥

ಶ್ಲೋಕ:– **ಇಂದ್ರಪ್ರಸ್ಥೇಶಯವನಭೂಪೇನ ಪ್ರೇಷಿತೈಃ ಪುನಃ ।**
ಸುವರ್ಣೈಃ ಕೃಷ್ಣಮಠಗವಲಭ್ಯಾ ಚ್ಛಾದನಾಯ ಸಃ ॥1॥
ಇಚ್ಛನ್ ಸ್ವಪ್ನೇ ನಿಷಿದ್ಧಃ ಸನ್ ಮಠೋದೀಚ್ಯಾಮಿಲಾತಲೇ ।
ತಾನಿ ಭರ್ಮಾಣಿ ಸಂಸ್ಥಾಪ್ಯ ತದೂರ್ಧ್ವಂ ಸರ್ಪಮೂರ್ತಿಕಾಮ್ ॥2॥
ಸ್ಥಾಪಯಾಮಾಸ ನಾಗಸ್ತು ತತ್ರದ್ಯಾಪಿ ಸುಪೂಜ್ಯತೇ !
ಅನ್ಯಚ್ಚ ಕಾರಣಂ ನಾಗಸ್ಥಾಪನೇ ಶ್ರುತಮತ್ರ ಹಿ ॥3॥

ಅರ್ಥ:– ಇಂದ್ರಪ್ರಸ್ಥದ (ದೆಹಲಿ) ಅರಸನಾದ ಯವನರಾಜನಿಂದ ಪುನಃ ಕಳುಹಿಸಲ್ಪಟ್ಟ ಚಿನ್ನದಿಂದ ಕೃಷ್ಣಮಠದ ತೊಲೆಗಳನ್ನು ಆಚ್ಛಾದಿಸಬೇಕೆಂಬ ಅಪೇಕ್ಷೆಯುಳ್ಳ ವಾದಿರಾಜರಿಗೆ ಬೇಡವೆಂದು ಸ್ವಪ್ನದಲ್ಲಿ ಸೂಚನೆಯಾಗಲು ಮಠದ ಪೂರ್ವದಿಕ್ಕಿನ ಭೂಮಿಯಲ್ಲಿ ಆ ಚಿನ್ನವನ್ನು ಹುಗಿಸಿ ಅದರ ಮೇಲ್ಭಾಗದಲ್ಲಿ ಸರ್ಪಮೂರ್ತಿಯನ್ನು ವಾದಿರಾಜರು ಪ್ರತಿಷ್ಠಾಪನೆ ಮಾಡಿದರು. ಆ ನಾಗನು ಆ ಸ್ಥಳದಲ್ಲಿ ಇಂದಿಗೂ ಪೂಜಿಸಲ್ಪಡುತ್ತಿರುವನು. ನಾಗಸ್ಥಾಪನೆಗೆ ಬೇರೊಂದು ಕಾರಣವೂ ಶ್ರುತವಾಗಿದೆ.

ಶ್ಲೋಕ:– **ಕರ್ಕೋಟಕಸ್ಯ ಗೋಕರ್ಣೇ ಪಾತಾಲಬಿಲ ಮಾದೃತಮ್ ।**
ಸುಬ್ರಮಣ್ಯೇ ವಾಸುಕೇಸ್ತು ಬಿಲಂ ಖ್ಯಾತಮಿಲಾತಲೇ ॥4॥
ರೂಪ್ಯಪೀಠೇ ತಕ್ಷಕಸ್ಯ ಬಿಲಂ ಪ್ರಥಿತಮಸ್ತಿ ಹಿ

ಅರ್ಥ:– ಕಾರ್ಕೋಟಕನಿಗೆ ಪಾತಾಳ(ಕ್ಕೆ ಹೋಗುವ) ಬಿಲವು ಗೋಕರ್ಣದಲ್ಲಿಯೂ, ವಾಸುಕಿಯ ಬಿಲವು ಸುಬ್ರಮಣ್ಯದಲ್ಲಿಯೂ, ತಕ್ಷಕನ ಬಿಲವು ಉಡುಪಿಯಲ್ಲಿಯೂ ಇದೆ ಎಂದು ಭೂಮಿಯಲ್ಲಿ ಪ್ರಸಿದ್ಧವಾಗಿದೆ.

ಶ್ಲೋಕ:– **ಕ್ವಚಿತ್ತಕ್ಷಕನಿಃಶ್ವಾಸತೈಕ್ಷ್ಣ್ಯೇನ ಬೃಶಬಾಧಿತಾಃ ॥5॥**
ಪೌರಾಃ ಶ್ರೀ ವಾದಿರಾಜಾರ್ಯಂ ಪ್ರಾರ್ಥಯಾಮಾಸುರಾದರಾತ್ ।
ತತ್ಪೀಡಾ ಪರಿಹಾರಾರ್ಥಂ ಬಿಲಾಸ್ಯಮುಪಲೇನ ತತ್ ॥6॥
ಸಂಛಾದ್ಯೋಪರಿ ನಾಗಸ್ಯ ಮೂರ್ತಿಮಾಸ್ಥಾಪಯದ್ಗುರುಃ ।

ಅರ್ಥ:– ಕೆಲವು ಜಾಗಗಳಲ್ಲಿ ತಕ್ಷಕನ ತೀಕ್ಷ್ಣತೆಯಿಂದ ಬಹಳವಾಗಿ ಪೀಡಿತರಾದ ಪೌರರು ಭಕ್ತಿಯಿಂದ ವಾದಿರಾಜರನ್ನು (ತಮ್ಮ ಕಷ್ಟವನ್ನು ಪರಿಹರಿಸುವಂತೆ) ಪ್ರಾರ್ಥಿಸಿದರು. ಅವರಿಗಿರುವ ತೊಂದರೆಯನ್ನು ಪರಿಹರಿಸುವುದಕ್ಕಾಗಿ ಬಿಲದ ಬಾಯಿಯನ್ನು ಶಿಲೆಯಿಂದ ಮುಚ್ಚಿಸಿ ಅದರ ಮೇಲೆ ನಾಗನ ಮೂರ್ತಿಯನ್ನೂ ಗುರುಗಳು ಸ್ಥಾಪಿಸಿದರು.

ಶ್ಲೋಕ:– **ಸ್ವರ್ಣರಕ್ಷಾಂ ಪೌರಪೀಡಾಹೃತಿಂ ನಾಗಪ್ರತಿಷ್ಠಯಾ ॥7॥**
ಕಾರ್ಯದ್ವಯೀಂ ವಾದಿರಾಜಃ ಸಾಧಯಾಮಾಸ ಕೌಶಲಾತ್ ।
ತನ್ಮಹಿಮ್ನಾ ನಾಗರಾಜಃ ಪೂಜಿತಃ ಕಾಮದೋऽಸ್ತಿ ಹಿ ॥8॥

ಅರ್ಥ:– ಸ್ವರ್ಣಸಂಪತ್ತನ್ನು ರಕ್ಷಿಸುವ ಹಾಗೂ ಪುರಜನರ ತೊಂದರೆಯನ್ನು ನಿವಾರಿಸುವ, ಎರಡು ಕಾರ್ಯಗಳನ್ನು ವಾದಿರಾಜರು ನಾಗಪ್ರತಿಷ್ಠೆ ಮಾಡುವ ಮೂಲಕ ಕುಶಲತೆಯಿಂದ ಸಾಧಿಸಿದರು, ಆ ಮಹಿಮೆಯಿಂದ ನಾಗರಾಜನು ಪೂಜಿಸಿದವರಿಗೆ ಅಭೀಷ್ಟಗಳನ್ನು ಕೊಡುವನು.

ಶ್ಲೋಕ:– **ಅವಶಿಷ್ಟ ಸ್ವರ್ಣಭಾರಂ ಸ್ವಮಠೇ ಭೂಗತಂ ತದಾ ।**
ಕೃತ್ವೋಪರಿಷ್ಟಾತ್ತಸ್ಯಾಥ ಭೂತರಾಜಂ ನ್ಯಧಾನ್ಮುದಾ ॥9॥

ಅರ್ಥ:– ವಾದಿರಾಜರು ಉಳಿದ ಚಿನ್ನವನ್ನು ತಮ್ಮ ಮಠದಲ್ಲಿ ಭೂಗತಮಾಡಿ ಅದರ ಮೇಲೆ ಭೂತರಾಜರನ್ನು ಸಂತೋಷದಿಂದ ಸ್ಥಾಪನೆ ಮಾಡಿದರು

ಶ್ಲೋಕ:– **ಮಿಥ್ಯಾವಾದಾಘತಪ್ತಾಸ್ತೇ ಕೋಟೀಶ್ವರಗ ಭೂಸುರಾಃ ।**
ಆಗತಾಃ ಶರಣಂ ವಾದಿರಾಜಾರ್ಯೇಣ ಹಿ ಪಾವಿತಾಃ ॥10॥
ವಿಷ್ಣುದೀಕ್ಷಾಪ್ರದಾನೇನ ತಪ್ತಮುದ್ರಾಂಕನಾದಿನಾ

ಅರ್ಥ:– ಮಾಯಾವಾದ ಮತದ ಪಾಪದಿಂದ ತಪ್ತರಾದ ಕೋಟೇಶ್ವರ (ಮಾಗಣೆಯ) ಬ್ರಾಹ್ಮಣರು ಶರಣು ಬರಲು, ಶ್ರೀ ವಾದಿರಾಜರು ತಪ್ತಮುದ್ರಾಧಾರಣೆಗಳಿಂದ ವಿಷ್ಣು ದೀಕ್ಷೆಯನ್ನಿತ್ತು ಅದರನ್ನು ಪವಿತ್ರಗೊಳಿಸಿದರು.

ಟಿಪ್ಪಣಿ:– ಈ ವಿಷಯದಲ್ಲಿ ಕೆಲವು ಗ್ರಂಥಗಳಲ್ಲಿ ಉಕ್ತವಾಗಿರುವ ಐತಿಹ್ಯವು ಕಾಲ್ಪನಿಕ ಕಥೆಯಾಗಿದೆ. ಗ್ರಾಮದ ಗಡಿಯ ವಿಷಯದಲ್ಲಿ ಜಗಳ ಬಂದಾಗ ಕೋಟೇಶ್ವರದವರು ಶ್ರೀ ವಾದಿರಾಜರಿಗೆ ಶರಣು ಹೋದಾಗ ವೈಷ್ಣವ ದೀಕ್ಷೆಯನ್ನಿತ್ತರೆಂದು ಉಕ್ತವಾಗಿದೆ. ಆದರೆ ಗಡಿ ವಿಚಾರದಲ್ಲಿನ ಜಗಳಕ್ಕೂ ವೈಷ್ಣವ ದೀಕ್ಷೆಗೂ ಸಂಬಂಧವಿಲ್ಲ. ಹಾಗೆಯೇ ಕೋಟೇಶ್ವರದ ಎಲ್ಲ ಜನರನ್ನೂ ವೈಷ್ಣವರನ್ನಾಗಿ ಮಾಡಲಿಲ್ಲ. ಕೇವಲ ಬ್ರಾಹ್ಮಣರಿಗೆ ವೈಷ್ಣವದೀಕ್ಷೆಯನ್ನು ಕೊಟ್ಟಿರುವರು. ಇದರಿಂದಾಗಿ ಪ್ರಚಲಿತ ಐತಿಹ್ಯವು ಕಾಲ್ಪನಿಕವಾಗಿದೆ. ಶ್ಲೋಕದಲ್ಲಿರುವ 'ಮಿಥ್ಯಾವಾದ' ಎನ್ನುವ ಪದಕ್ಕೆ ಮಾಯಾವಾದಮತದ ಅನುಸರಣೆಯೆಂದು ಅರ್ಥ ಮಾಡದಿರುವದೇ ಕಾರಣವಾಗಿದೆ. ಅಲ್ಲಿಯ ಬ್ರಾಹ್ಮಣರು ಮಾಯಾವಾದ ಮತಾವಲಂಬಿಗಳಾಗಿದ್ದರು. ತಮ್ಮ ದಿವ್ಯದೃಷ್ಟಿಯಿಂದ ಅವರೆಲ್ಲರೂ ಮುಕ್ತಿಯೋಗ್ಯ ಸಜ್ಜನರೆಂದು ತಿಳಿದ ವಾದಿರಾಜರು ಅವರಿಗೆ ವೈಷ್ಣವ ದೀಕ್ಷೆಯನ್ನಿತ್ತು ಉದ್ಧಾರ ಮಾಡಿದರು.

ಶ್ಲೋಕ:– **ಯಮಾವತಾರೀ ಕನಕದಾಸನಾಮಾऽಥ ಶೂದ್ರಜಃ ॥11॥**
ಶ್ರೀ ಕೃಷ್ಣಮಾಭಜನ್ಗಾಯನ್ ರೂಪ್ಯಪೀಠೇऽವಸತ್ತದಾ

ಅರ್ಥ:– ಶೂದ್ರಯೋನಿಯಲ್ಲಿ ಜನಿಸಿದ ಯವನ ಅವತಾರೂಪಿಯಾದ ಕನಕದಾಸನೆಂಬುವರು ಆಸಮಯದಲ್ಲಿ ಶ್ರೀಕೃಷ್ಣನನ್ನು ಕೀರ್ತನೆಗಳಿಂದ ಭಜಿಸುತ್ತಾ ಉಡುಪಿಯಲ್ಲಿ ವಾಸವಾಗಿದ್ದರು.

ಶ್ಲೋಕ:– **ತದ್ಯೋಗ್ಯತಾವಿದಾ ವಾದಿರಾಜಾಸಮ್ಮಾನಿತೋಽಪಿ ಸಃ ॥12॥**
ಈರ್ಷ್ಯಾಲುಭಿರದತ್ತಾನ್ನಃ ಶ್ರೀಕೃಷ್ಣಂ ಶರಣಂ ಗತಃ ।

ಅರ್ಥ:– ಕನಕದಾಸರ ಯೋಗ್ಯನೆಯನ್ನರಿತ ವಾದಿರಾಜರಿಂದ ಅವರು ಸನ್ಮಾನಿಸಲ್ಪಟ್ಟಗ್ಯೂ, ಹೊಟ್ಟೆ ಕಿಚ್ಚುಳ್ಳುವರಿಂದ ಊಟ ಹಾಕದಿರಲು ಕನಕದಾಸರು ಶ್ರೀ ಕೃಷ್ಣನಿಗೆ ಶರಣು ಹೊಂದಿದರು.

ಶ್ಲೋಕ:– **ಏಕೈಕಭೂಷಾದಾನೇನ ಕೃಷ್ಣೇನ ನಿಶಿ ಸತ್ಕೃತಃ ॥13॥**
ನಿಕ್ಷಿಪ್ಯ ಭೂಷಾಂ ತತ್ರಾಪ್ತವಸ್ತುನಾ ವರ್ತಯನ್ನ ಭೂತ್ ।

ಅರ್ಥ:– ರಾತ್ರಿ ಕಾಲದಲ್ಲಿ ಒಂದೊಂದು ಆಭರಣಗಳನ್ನು ದಾನ ಪಡೆದು, ಗೌರವಿಸಲ್ಪಟ್ಟ ಕನಕದಾಸರು, ಆಭರಣಗಳನ್ನು ಒತ್ತೆಯಿಟ್ಟು ಅದರಿಂದ ಪ್ರಾಪ್ತವಾದ ವಸ್ತುಗಳಿಂದ ಜೀವಿಸಿದರು.

ಶ್ಲೋಕ:– **ಭೂಷಾಧಿಕೃದ್ಭಿರೇಕೈಕ ಭೂಷಾಽದರ್ಶನದುಃಖಿತೈಃ ॥14॥**
ಪ್ರಾರ್ಥಿತೋ ವಾದಿರಾಡ್ಯೋಗೀ ಕನಕಂ ವಣಿಜಂ ಚ ತಮ್ ।
ಪೃಷ್ಟವಾನ್ವಿದಿತೋದಂತೋ ದ್ರವ್ಯದಾನಾತ್ತಭೂಷಣಃ ॥15॥
ಮಠೀಯಾನ್ಭರ್ತ್ಸಯನ್ ತಸ್ಮೈ ದೇವಾರ್ಪಿತಮದಾಪಯತ್ ।

ಅರ್ಥ:– ಶ್ರೀಕೃಷ್ಣನ ಒಂದೊಂದೆ ಆಭರಣಗಳು ಕಾಣದಂತಾಗಲು ದುಃಖಿತನಾದ ಅಧಿಕಾರಿಯಿಂದ ಪ್ರಾರ್ಥಿಸಲ್ಪಟ್ಟ ವಾದಿರಾಜಯೋಗಿಗಳು ಕನಕದಾಸರನ್ನು ಹಾಗೂ ವ್ಯಾಪಾರಿಯನ್ನು ಕರೆಯಿಸಿ (ಕನಕದಾಸರಿಗೆ ಊಟವನ್ನು ಹಾಕದಿದ್ದಕ್ಕಾಗಿ) ಮಠದವರನ್ನು ನಿಂದಿಸಿ ಕೃಷ್ಣನಿಗೆ ಅರ್ಪಿತವಾದ ನೈವೇದ್ಯವನ್ನು ಕೊಡಿಸಿದರು (ಮುಂದೆಯೂ ಕೊಡುವ ವ್ಯವಸ್ಥೆಯನ್ನು ಮಾಡಿದರು.)

ಶ್ಲೋಕ:– **ಕದಾಚಿದ್ಬಹಿರಾಯಾತಮನ್ನಮಂಡಂ ಪ್ರಗೃಹ್ಯಸಃ ॥16॥**
ಕನಕಃ ಪಿಷ್ಟಭಕ್ಷ್ಯಂ ಚ ಕೃತ್ವಾ ಕೃಷ್ಣಾರ್ಪಿತಂ ವ್ಯಧಾತ್ ।
ವಾದಿರಾಡರ್ಪಯನ್ನನ್ನಂ ತದರ್ಪಿತಮಮನ್ಯತ ॥17॥
ಪುನಃ ಪಾಕಂ ಕಾರಯಿತ್ವಾ ಕೃಷ್ಣಪೂಜಾಂ ಸಮಾಪಯತ್ ।

ಅರ್ಥ:– ಒಂದು ಸಲ (ಅಡುಗೆ ಮನೆಯಿಂದ) ಹೊರಗೆ ಬರುತ್ತಿದ್ದ ಅನ್ನದ ಗಂಜಿಯನ್ನು ಕನಕನು ಸಂಗ್ರಹಿಸಿ ಅದರೊಡನೆ ಹಿಟ್ಟಿನಿಂದ ಭಕ್ಷ್ಯವನ್ನು ಮಾಡಿ ಕೃಷ್ಣನಿಗೆ ಅರ್ಪಿಸಿದನು. ವಾದಿರಾಜರು ಅನ್ನವನ್ನು ಸಮರ್ಪಿಸುವಾಗ ಅದು ಮೊದಲೇ (ಕನಕನಿಂದ) ಅರ್ಪಿತವಾಗಿದೆಯೆಂದು ತಿಳಿದರು. ಪುನಃ ಅನ್ನವನ್ನು ಅಡುಗೆಯನ್ನು ಮಾಡಿಸಿ ಕೃಷ್ಣ ಪೂಜೆಯನ್ನು ಮುಗಿಸಿದರು.

ಶ್ಲೋಕ:– **ತತ್ಕಥಾಸ್ಮರಣಾರ್ಥಂಸಃ ಪಿಷ್ಟಭಕ್ಷಂಸಮಂಡಕಮ್ ॥18॥**
ಕೃಷ್ಣಪ್ರೀತ್ಯೈ ಸಮರ್ಪ್ಯಂ ತನ್ನಿಯುಯೋಜ ಮುನೀಶ್ವರಃ ।

ಅರ್ಥ:– ಈ ಘಟನೆಯ ಸ್ಮರಣಾರ್ಥವಾಗಿ ಗಂಜಿ ಸಹಿತ ಹಿಟ್ಟಿನ ಭಕ್ಷ (ಗಟ್ಟಿವಡೆ)ಯನ್ನು ಶ್ರೀಕೃಷ್ಣನ ಪ್ರೀತಿಗಾಗಿ ಸಮರ್ಪಿಸುವ ವ್ಯವಸ್ಥೆಯನ್ನು ಮುನಿಶ್ರೇಷ್ಠರಾದ ವಾದಿರಾಜರು ಮಾಡಿದರು.

ಶ್ಲೋಕ:– **ಅದ್ವೈತಪಂಡಿತಃ ಕಶ್ಚಿದ್ವಾದಾರ್ಥಂ ಪತ್ರಮಾಲಿಖತ್ ॥19॥**

ಅರ್ಥ:– ಅದ್ವೈತ ಪಂಡಿತನೊಬ್ಬನು (ವಾದಿರಾಜರೊಂದಿಗೆ) ವಾದ ಮಾಡಲು ಪತ್ರವನ್ನು ಬರೆದನು.

ಶ್ಲೋಕ:– **ಏತದ್ದಿನೇ ಸ್ಥಲೇ ತತ್ರ ವಾದೋ ನಿಶ್ಚಯತೋ ಭವೇತ್ ।**
ಇತಿ ಪತ್ರಾರ್ಥಮಾಲೋಕ್ಯ ವಾದಿರಾಟ್ ತತ್ಸಲಂ ಗತಃ ॥20॥

ಅರ್ಥ:– ಇಂತಹ ದಿನ ಇಂತಹ ಸ್ಥಳದಲ್ಲಿ ವಾದವು ನಿಶ್ಚಯಿಸಲ್ಪಡಲಿದೆ ಎನ್ನುವ ಪತ್ರಾರ್ಥವನ್ನು ತಿಳಿದು ವಾದಿರಾಜರು (ಆದಿನ ಆ ಸ್ಥಳಕ್ಕೆ ಹೋದರು)

ಶ್ಲೋಕ:– **ನಿಶ್ಚಿತೇ ವಾಸರೇ ನಾಹಮಾಗಂತುಂ ಪ್ರಭವಾಮ್ಯತಃ ।**
ಇತಸ್ತೃತೀಯೇ ದಿವಸೇ ಸಮಾಗಂತೇತಿ ಸೂಚಿತಃ ॥21॥

ಅರ್ಥ:– 'ನಿಶ್ಚಿತದಿನ ತನಗೆ ಬರಲು ಸಾಧ್ಯವಾಗುವುದಿಲ್ಲವಾದ್ದರಿಂದ ಇಂದಿನಿಂದ ಮೂರನೇ ದಿನ ಬರುವೆನು" ಎಂಬುದಾಗಿ (ಆದ್ವೈತ ಪಂಡಿತನು) ಸೂಚಿಸಿದನು.

ಶ್ಲೋಕ:– **ಪ್ರತೀಕ್ಷಮಾಣೋ ನಾಪಶ್ಯದ್ವಾದಿನಂ ವಾದಿರಾಣ್ಮುನಿಃ ।**
ಸಾಮೀಪ್ಯಾತ್ಕೃಷ್ಣಪರ್ಯಾಯ ಪೂಜಾಯಾಃ ಗಮನೋದ್ಯತಃ ॥22॥

ಅರ್ಥ:– ಕಾದು ನೋಡುತ್ತಿದ್ದರೂ ಅದ್ವೈತ ಪಂಡಿತನು ಬಾರದಿರಲು ಶ್ರೀಕೃಷ್ಣ ಪರ್ಯಾಯ ಪೂಜೆ ಸಮೀಪಿಸಿರುವುದರಿಂದ ವಾದಿರಾಜಮುನಿಗಳು ಉಡುಪಿಗೆ ಹೋಗಲು ಉದ್ಯುಕ್ತರಾದರು.

ಶ್ಲೋಕ:– **ಪಾಂಡುರಂಗ್ಯನ್ವಯೋದ್ಭೂತ ಮಾನಂದಾಖ್ಯಂ ಬುಧೋತ್ತಮಮ್ ।**
ನ್ಯಯೂಯುಜತ್ತಜ್ಜಯಾಯ ದದೌ ಮಂತ್ರಾಕ್ಷತಾನ್ಗುರುಃ ॥23॥

ಅರ್ಥ:– ಪಾಂಡುರಂಗಿ ವಂಶದಲ್ಲಿ ಹುಟ್ಟಿದ ಆನಂದನೆಂಬ ಹೆಸರಿನ ಪಂಡಿತನನ್ನು ವಾದಮಾಡಲು ನಿಯೋಜಿಸಿ, ಜಯಗೊಳಿಸಲು ಗುರುಗಳಾದ ವಾದಿರಾಜರು ಅವನಿಗೆ ಮಂತ್ರಾಕ್ಷತೆಯನ್ನು ಕೊಟ್ಟರು.

ಶ್ಲೋಕ:– **ತದಾಗಮನ ಪರ್ಯಂತಮತ್ರ ಸ್ಥಿತ್ವಾ ವಿಜಿತ್ಯ ತಮ್ ।**
ರೂಪ್ಯಪೀಠಂ ಸಮಾಗಚ್ಛ ಕಾಮಿತಂ ಸೇತ್ಸ್ಯತೀತಿ ತಮ್ ॥24॥

ಅರ್ಥ:– "ಅದ್ವೈತ ಪಂಡಿತನು ಬರುವವರೆಗೆ ಇಲ್ಲಿಯೇ ಇದ್ದು ಅವನನ್ನು (ವಾದದಲ್ಲಿ)ಗೆದ್ದು ಉಡುಪಿಗೆ ಬನ್ನಿರಿ, ನಿಮ್ಮ ಅಭೀಷ್ಠವನ್ನು ಪಡೆಯುವಿರಿ." (ಎಂಬುದಾಗಿ ವಾದಿರಾಜರು ಆನಂದಭಟ್ಟರಿಗೆ ಅಪ್ಪಣೆ ಕೊಡಿಸಿದರು)

ಶ್ಲೋಕ:– **ಆನಂದಭಟ್ಟಃ ಪಶ್ಚಾತ್ತಮಾಗತಂ ವಾದಿನಂ ಜಯನ್ ।**
ತಸ್ಮಾದ್ವಾದಪರಾಭೂತಿಪತ್ರಂ ಪ್ರಾಪ್ಯ ಸಮಾಗತಃ ॥25॥

ಅರ್ಥ:– (ವಾದಿರಾಜರು ಉಡುಪಿಗೆ ಹೋದ) ನಂತರ ಬಂದ ವಾದಿಯನ್ನು ಜಯಿಸಿ. ವಾದದಲ್ಲಿ ಪರಾಜಿತನಾದ ಅವನಿಂದ ಜಯಪತ್ರವನ್ನು ಪಡೆದು ಆನಂದಭಟ್ಟರು (ಉಡುಪಿಗೆ) ಆಗಮಿಸಿದರು.

ಶ್ಲೋಕ:– **ಕೃಷ್ಣಪರ್ಯಾಯಸಕ್ತ ಶ್ರೀ ವಾದಿರಾಜಾಯ ಪತ್ರಕಮ್ ।**
ಅರ್ಪಯಾಮಾಸ ದಯಯಾ ಭವತಾಂ ವಿಜಿತೋ ಬಲೀ ॥26॥
ಇತ್ಯಾವೇದಯದಾನಂದಭಟ್ಟಃ ಸಂತಾನಕಾಂಕ್ಷಯಾ ।
ವಾದಿರಾಜಂ ಪ್ರಾರ್ಥಯನ್ಸಃ ಪುತ್ರಾವಾಪ್ತಿರ್ಭವೇದಿತಿ ॥27॥
ಗುರುರಾಜಾದ್ವರಂ ಪ್ರಾಪ್ಯ ತುಷ್ಟಃ ಸ್ವಗೃಹಮಾಯಯೌ

ಅರ್ಥ:– ಕೃಷ್ಣಪರ್ಯಾಯದಲ್ಲಿ ನಿರತರಾದ ಶ್ರೀ ವಾದಿರಾಜರಿಗೆ ಜಯಪತ್ರವನ್ನು ಅರ್ಪಿಸಿದರು. "ತಮ್ಮ ದಯೆಯಿಂದ ಬಲಿಷ್ಠನಾದ ವಾದಿಯನ್ನು ಗೆಲ್ಲಲು ಸಾಧ್ಯವಾಯಿತು." ಎಂಬುದಾಗಿ ಆನಂದಭಟ್ಟರು ಹೇಳಿದರು. ಅವರು ಸಂತಾನಾಕಾಂಕ್ಷೆಯಿಂದ ವಾದಿರಾಜರನ್ನು ಪ್ರಾರ್ಥಿಸಲು, "ಪುತ್ರರನ್ನು ಪಡೆಯುವಿರಿ" ಎಂಬುದಾಗಿ ಗುರುರಾಜರಿಂದ ವರವನ್ನು ಪಡೆದು ಸಂತೋಷದಿಂದ ತಮ್ಮ ಮನೆಗೆ ಹೋದರು

ಶ್ಲೋಕ:– **ಗುರೂತ್ತಮಾನುಗ್ರಹೇಣ ಪುತ್ರಂ ಪ್ರಾಪ್ಯ ಕೃತೀ ಮುದಾ ॥28॥**
ಗುರುರಾಜಾಭಿದಾನಂ ತಂ ಚಕಾರಾನಂದ ಭಟ್ಟಕಃ ।
ಪಿತ್ರೋರಾನಂದದಾಯೀ ಸ ವವೃಧೇ ಶುಕ್ಲ ಚಂದ್ರವತ್ ॥29॥

ಅರ್ಥ:– ಉತ್ತಮಗುರುಗಳಾದ ವಾದಿರಾಜರ ಅನುಗ್ರಹದಿಂದ ಪುತ್ರನನ್ನು ಪಡೆದು ಅದೃಷ್ಟವಂತರಾದ ಆನಂದಭಟ್ಟರು ಸಂತೋಷದಿಂದ ಆ ಮಗುವಿಗೆ ಗುರುರಾಜನೆಂದು ನಾಮಕರಣ ಮಾಡಿದರು. ತಂದೆಗೆ ಆನಂದಪ್ರದನಾದ ಆ ಬಾಲಕನು ಶುಕ್ಲ ಪಕ್ಷದ ಚಂದ್ರನಂತೆ ಬೆಳೆದನು.

ಟಿಪ್ಪಣಿ:– (ಆ ಬಾಲಕನಿಗೆ ನರಸಿಂಹಾಚಾರ್ಯರೆಂಬ ಇನ್ನೊಂದು ಹೆಸರಿತ್ತು) ಇವರೇ ಮುಂದೆ 1541ನೇ ಇಸ್ವಿಯಲ್ಲಿ ಶ್ರೀಉತ್ತರಾದಿ ಮಠದ 16ನೇ ಯತಿಗಳಾಗಿ ಪಟ್ಟವೇರಿ ವಿದ್ಯಾಧೀಶರೆಂದು ಪ್ರಖ್ಯಾತರಾಗಿದ್ದಾರೆ.

ಶ್ಲೋಕ:– **ವಾದಿರಾಜಃ ಸ್ವೀಯಡೋಲಾಂ ಭೂತರಾಜೋದ್ಧೃತಾಂ ಪುರಃ ।**
ಭಕ್ತೋದ್ಧೃತಾಂ ಪೃಷ್ಠಭಾಗೇ ಸಮಾರುಹ್ಯ ಯದಾ ವ್ರಜೇತ್ ॥30॥

ಅರ್ಥ:– ವಾದಿರಾಜರು ಯಾವಾಗ ಪಲ್ಲಕ್ಕಿಯನ್ನೇರಿ ಹೊರಡುತ್ತಿದ್ದರೋ (ಪಲ್ಲಕ್ಕಿಯ) ಮುಂಭಾಗವನ್ನು ಭೂತರಾಜರು ಹೊರುತ್ತಿದ್ದರು. ಹಿಂಭಾಗವನ್ನು ಭಕ್ತರು ಹೊರುತ್ತಿದ್ದರು.

ಶ್ಲೋಕ:– **ಜನಃ ಪುರೋ ನರೈಃ ಶೂನ್ಯಂ ವಿಲೋಕ್ಯಾಽಽಶ್ಚರ್ಯ ಮಾದದೌ ।**
ಅಥ ಯಾನಾಗಮೊತ್ಥೇನ ವಾದಿರಾಡ್ ಯಶಸಾ ಯತಿಃ ॥31॥
ಈರ್ಷಯಾಽನ್ಯೋ ಮಂತ್ರಸಿದ್ಧ್ಯಾ ಭೂತೈರ್ಯಾನಮಧಾರಯತ್ ।

ಅರ್ಥ:– ಪಲ್ಲಕ್ಕಿಯು (ಮುಂಭಾಗದಲ್ಲಿ ಹೊರುವವರಿಲ್ಲದೆ) ಹೋಗುವ ರೀತಿಯಿಂದ ಉಂಟಾದ ವಾದಿರಾಜರ ಕೀರ್ತಿಯನ್ನು ಸಹಿಸದ ಅನ್ಯಯತಿಯು ಮಂತ್ರಸಿದ್ಧಿ ಮೂಲಕ ಭೂತಗಳಿಂದ (ತನ್ನ) ಪಲ್ಲಕ್ಕಿಯನ್ನು ಹೊರಿಸಿದರು.

ಶ್ಲೋಕ:– **ವಾದಿರಾಜಸ್ಯ ಯಾನಾಗ್ರಂ ಭೂತರಾಜೋದ್ಧೃತಂ ಹಿ ಚೇತ್ ॥32॥**
ಮಮ ಯಾನಸ್ಯ ಭಾಗೌದ್ವೌಧ್ರಿಯತೇ ಹಂತ ಭೂತಕೈಃ ।
ಇತ್ಯಾಘೋಷಿತ ಮಾಕರ್ಣ್ಯ ವಾದಿರಾಟ್ ಸ್ಫುಟಮೇಷ್ಯತಿ ॥33॥
ಅನ್ಯೋನ್ಯಮಿಲನೇ ತದ್ಧಿತ್ಯಾಹ್ಯಾಥ ಮಿಲನೇ ಕ್ವಚಿತ್ ।
ಭೂತರಾಜಂ ರುದ್ರರೂಪಂ ವೀಕ್ಷ್ಯ ಭೂತಾಃ ಪಲಾಯಿತಾಃ ॥34॥
ಯಾನಂ ತು ಭೂಮೌ ಪತಿತಂ ತದ್ಯೋಗಿಹ್ರೀಕರಂ ಹ್ಯಭೂತ್ ।

ಅರ್ಥ:– "ವಾದಿರಾಜರ ಪಲ್ಲಕ್ಕಿಯ ಮುಂಭಾಗವು ಭೂತರಾಜರಿಂದ ಹೊರಲ್ಪಡುವುದಾದರೆ ನನ್ನ ಪಲ್ಲಕ್ಕಿಯ ಮುಂಭಾಗ ಹಿಂಭಾಗಗಳೆರಡೂ ಭೂತಗಳಿಂದ ಹೋರಲ್ಪಡುತ್ತದೆ." ಎಂದು (ಅನ್ಯಯತಿಯು) ಘೋಷಿಸುತ್ತಿದ್ದುದನ್ನು ಕೇಳಿ, ವಾದಿರಾಜರು "ಪರಸ್ಪರ ಎದುರು ಬದುರಾದಾಗ ಚೆನ್ನಾಗಿ ತಿಳಿಯುತ್ತದೆ" ಎಂದರು. ಒಂದು ಸ್ಥಳದಲ್ಲಿ (ಎರಡು ಪಲ್ಲಕ್ಕಿಗಳು) ಸಂಧಿಸಲು, ಭಯಂಕರರೂಪರಾದ ಭೂತರಾಜರನ್ನು ನೋಡಿ ಭೂತಗಳು ಪಲಾಯಾನ ಮಾಡಿದವು. ಪಲ್ಲಕ್ಕಿಯು ಭೂಮಿಯಲ್ಲಿ ಬಿದ್ದಿತು. ಯೋಗಿಗಳು ಲಜ್ಜಾಯುಕ್ತರಾದರು.

ಶ್ಲೋಕ:– **ಕದಾಚಿಲ್ಲಕ್ಷದೀಪಾಖ್ಯೇ ಮಹೇ ವೃಷ್ಟಿ ನಿರೋಧಿತೇ ॥ ॥35॥**
ಯತಿಭಿಃ ಪ್ರಾರ್ಥಿತೋ ವಾದಿರಾಜೋ ವೃಷ್ಟಿಮಶಾಮಯತ್ ।

ಅರ್ಥ:– ಒಂದು ಸಲ (ಉಡುಪಿಯ) ಲಕ್ಷದೀಪೋತ್ಸವವು ಮಳೆಯಿಂದ ನಿಂತು ಹೋಗುವಂತಾಗಲು (ಇತರ) ಯತಿಗಳಿಂದ ಪ್ರಾರ್ಥಿತರಾದ ವಾದಿರಾಜರು ಮಳೆಯನ್ನು ನಿಲ್ಲಿಸಿದರು.

ಶ್ಲೋಕ:– **ಸ್ವಯಂ ಸ್ಯಂದನರಜ್ಜುಂ ತಮಾಕರ್ಷನ್ ಗಾನ ತತ್ಪರಃ ॥36॥**
ನಿರ್ವಿಘ್ನಂ ಕೃಷ್ಣದೇವಸ್ಯ ದೀಪೋತ್ಸವಮಕಾರಯತ್
ವೇಲೂರಕೇಶವಸ್ಯಾಪಿ ರಥಂ ರುದ್ಧಮಯಾಪಯತ್ ॥37॥

ಅರ್ಥ:– ಪರಮಾತ್ಮನ ಕೀರ್ತನೆಯಲ್ಲಿ ನಿರತರಾಗಿ ವಾದಿರಾಜರು ಸ್ವತಃ ರಥದ ಹಗ್ಗವನ್ನು ಎಳೆಯುತ್ತಾ ಶ್ರೀ ಕೃಷ್ಣದೇವರ ಲಕ್ಷ ದೀಪೋತ್ಸವ ನಿರ್ವಿಘ್ನವಾಗಿ ನೆರವೇರಿಸಿ ಕೊಟ್ಟರು. ಚಲಿಸದೆ ನಿಂತಿದ್ದ ಬೇಲೂರು ಶ್ರೀ ಚನ್ನಕೇಶವದೇವರ ರಥವನ್ನೂ ಸಹ ಚಲಿಸುವಂತೆ ಮಾಡಿದರು.

ಟಿಪ್ಪಣಿ:– ಬೇಗ ಬಾರೋ ಬೇಗ ಬಾರೋ ನೀಲಮೇಘವರ್ಣ । ಬೇಗ ಬಾರೋ ವೇಲಾಪುರ ಚನ್ನ ॥ ಎಂಬ ಪದ.

ಶ್ಲೋಕ:– **ಚತುಷ್ಷಷ್ಟಿಕಲಾಭಿಜ್ಞೋ ವಾದಿರಾಜ ಇತಿ ಪ್ರಥಾ ।**
ವೃಥೇತಿ ಚರ್ಮಕಾರಸ್ಯ ರಟತಃ ಪುರತೋ ಯತಿಃ ॥38॥
ಛಿತ್ವಾ ಕೃಷ್ಣಾಜಿನಂ ಚರ್ಮಕಾರಕಾರ್ಯಕ್ರಮೇಣ ಹಿ ।
ಅಯಶ್ಯಲಾಕಾಂ ನಾಸಾಯಾ ಮೂಲೇ ಸ್ವಿನ್ನೇ ನಿಧಾಯ ತಾಮ್ ॥39॥
ಅಜಿನಂ ಛಿದ್ರಯಾಮಾಸ ವಿಸ್ಮಿತಶ್ಚರ್ಮಕೃನ್ನಮನ್ ।
ಕ್ಷಂತವ್ಯಮಾಗ ಇತ್ಯುಕ್ತ್ವಾ ಮಾನಿತೋಽಗಾದ್ಗೃಹಂ ಸ್ವಕಮ್ ॥40॥

ಅರ್ಥ:– ವಾದಿರಾಜರು 64 ಕಲೆಗಳನ್ನು ತಿಳಿದವರು ಎನ್ನುವ ಪ್ರಖ್ಯಾತಿಯು ಸುಳ್ಳು ಎಂದು ಅರಚುತ್ತಿದ್ದ ಚಮ್ಮಾರನ ಎದುರಿನಲ್ಲಿ, ಯತಿಗಳಾದ ವಾದಿರಾಜರು ಕೃಷ್ಣಾಜಿನವನ್ನು ಹರಿದು, ಚಮ್ಮಾರನ ಕೆಲಸದಂತೆ, ಕಬ್ಬಿಣದ ಸೂಜಿಯನ್ನು ಮೂಗಿನ ಬುಡದಲ್ಲಿರುವ ಬೆವರಿನಲ್ಲಿ ಲೇಪಿಸಿ ಕೃಷ್ಣಾಜಿನದಲ್ಲಿ ರಂಧ್ರವನ್ನು ಮಾಡಿ (ಹೊಲಿದರು) (ಆ ಕಾರ್ಯಕೌಶಲ್ಯವನ್ನು ನೋಡಿ) ಚಮ್ಮಾರನು. ಆಶ್ಚರ್ಯಚಕಿತನಾಗಿ ಅವರನ್ನು ನಮಸ್ಕರಿಸುತ್ತಾ ತನ್ನನ್ನು ಕ್ಷಮಿಸಬೇಕೆಂದು ಹೇಳಿ, ಅವಮಾನಿತನಾಗಿ ತನ್ನ ಮನೆಗೆ ಹೋದನು.

ಶ್ಲೋಕ:– **ಯಲ್ಲೂರು ಗ್ರಾಮದೇವಸ್ಯ ಶಿವಸ್ಯಾರಾಧಕೈರ್ದ್ವಿಜೈಃ ।**
ಪ್ರಾರ್ಥಿತೋ ವಾದಿರಾಟ್ ತುಷ್ಟಃ ಶ್ರೀ ನೃಸಿಂಹಶಿಲಾಂ ನ್ಯಧಾತ್ ॥41॥

ಅರ್ಥ:– ಎಲ್ಲೂರು ಗ್ರಾಮದೇವತೆಯಾದ ಶಿವನನ್ನು ಆರಾಧಿಸುವ ಬ್ರಾಹ್ಮಣರಿಂದ ಪ್ರಾರ್ಥಿತರಾದ ವಾದಿರಾಜರು ಸಂತೃಪ್ತರಾಗಿ ಶ್ರೀ ನರಸಿಂಹಸಾಲಿಗ್ರಾಮವನ್ನು (ಶಿವನ ಮಸ್ತಕದ ಮೇಲೆ) ಸ್ಥಾಪಿಸಿದರು.

ಶ್ಲೋಕ:– **ಶಿವಾಂತರ್ಯಾಮಿನ್ನೃಹರೇಃ ಪೂಜಾ ಕಾರ್ಯೇತಿ ತತ್ರ ಹಿ ।**
ನಿಯುಜ್ಯ ಶಿವಮಸ್ತೌಷೀತ್ ಪೂಜಕೋದ್ಧಾರಹೇತವೇ ॥42॥
ತತ್ರತ್ಯ ವೃಷಭೇಂದ್ರೇಣ ಪ್ರಾರ್ಥಿತೋಽಸ್ತೌಚ್ಛಿವದ್ವಜಮ್ ।

ಅರ್ಥ:– ಪೂಜಕನ ಉದ್ಧಾರಕ್ಕಾಗಿ ಶಿವನ ಅಂತರ್ಯಾಮಿಯಾದ ನರಸಿಂಹ ಪೂಜೆಯನ್ನು ಮಾಡಬೇಕೆಂದು ಅಲ್ಲಿ ಆಜ್ಞೆ ಮಾಡಿ, ಶಿವನನ್ನು ಸ್ತುತಿಸಿದರು ಅಲ್ಲಿರುವ ನಂದೀಶ್ವರನಿಂದ ಪ್ರಾರ್ಥಿತರಾದ ವಾದಿರಾಜರು ಶಿವಧ್ವಜನಾದ ನಂದೀಶ್ವರನನ್ನು ಸ್ತುತಿಸಿದರು.

ಶ್ಲೋಕ:– **ಅರ್ಥಿತೋಽಥ ಜ್ವರೇಣಾಯಂ ತಂ ಪ್ರವೇಶ್ಯ ತನೌ ಗುರುಃ ।**
ಅರ್ಚಾಕಾಲಂ ಪರಿತ್ಯಜ್ಯ ಮುಮೋಚಾಥ ಸ್ವಯಂ ಸುಧೀಃ ।

ಅರ್ಥ:– (ದೇಹವನ್ನು ಪ್ರವೇಶಿಸಲು) ಪ್ರಾರ್ಥಿಸಿದ ಜ್ವರವು (ಜ್ವರಾಭಿಮಾನಿಯು) ಗುರುಗಳ ದೇಹದಲ್ಲಿ ಪೂಜಾಕಾಲವನ್ನು ಬಿಟ್ಟು (ಇತರ ಸಮಯದಲ್ಲಿ) ಪ್ರವೇಶಮಾಡಿರುತ್ತಿತ್ತು. (ಸ್ವಲ್ಪ ಕಾಲದ) ಅನಂತರ ಜ್ಞಾನಿಗಳಾದ ಗುರುಗಳು ತಾವೇ ಅದನ್ನು ಬಿಡುಗಡೆ ಮಾಡಿದರು.

ಶ್ಲೋಕ:– **ನಿಡಂಬೂರುಸ್ಥಲಾಧೀಶಂ ವಿನೀತಂ ಸೇವನೋತ್ಸುಕಮ್ ॥44॥**
ಅನುಗೃಹ್ಯ ವರಾಹಾರ್ಚ್ಯಾಂ ಪ್ರದಾಯ ತ್ರಿಸ್ವರೂಪಕಮ್ ।
ಋಜುಮಾಲಂಕೃತಂ ತಂ ಸ್ಥಾಪಯಾಮಾಸ ಮಾರುತಿಮ್ ॥45॥

ಅರ್ಥ:– ವಿಧೇಯರಾದ ಸೇವೆಯನ್ನು ಮಾಡಲು ಉತ್ಸುಕರಾದ ನಿಡಂಬೂರು ಸ್ಥಳಾಧಿಪತಿಯಾದ ಬಲ್ಲಾಳರನ್ನು ಅನುಗ್ರಹಿಸಿ (ಅವರಿಗೆ) ವರಾಹದೇವರ ವಿಗ್ರಹವನ್ನು ಕೊಟ್ಟು ಋಜುಗಳ ಪಂಕ್ತಿಯಲ್ಲಿ ಅಲಂಕೃತನಾದ, (ಹನುಮ, ಭೀಮ, ಮಧ್ವವೆಂಬ) ಮೂರು ರೂಪಗಳುಳ್ಳ ಮುಖ್ಯಪ್ರಾಣನನ್ನು ಅವರ ಸ್ಥಳದಲ್ಲಿ ಸ್ಥಾಪಿಸಿದರು.

ಶ್ಲೋಕ:– **ತತ್ಪಾರ್ಶ್ವೇ ಭೂತರಾಜಂ ಚ ಬಲ್ಲಾಲಾನುಗ್ರಹೋತ್ಸುಕಃ ।**
ಕೆಮ್ಮುಂಡಲೌ ದ್ವಿಜಾಗ್ರ್ಯಾಯ ಲಕ್ಷ್ಮೀನಾರಾಯಣಂ ದದೌ ॥46॥

ಅರ್ಥ:– ಬಲ್ಲಾಳರನ್ನು ಅನುಗ್ರಹಿಸಲು ಉತ್ಸುಕರಾದ ವಾದಿರಾಜರು ಮಾರುತಿ ಪ್ರತಿಮೆಯ ಪಕ್ಕದಲ್ಲಿ ಭೂತರಾಜರನ್ನು ಸ್ಥಾಪಿಸಿದರು. ಹಾಗೂ ಕೆಮ್ಮುಂಡಲುಯೆಂಬ ಗ್ರಾಮದಲ್ಲಿರುವ ಶ್ರೇಷ್ಠ ಬ್ರಾಹ್ಮಣನನ್ನು ಅನುಗ್ರಹಿಸಿ ಲಕ್ಷ್ಮೀನಾರಾಯಣ ಪ್ರತಿಮೆಯನ್ನು (ಅವರಿಗೆ) ಕೊಟ್ಟರು.

ಶ್ಲೋಕ:– **ಇತ್ಯಾದಿ ಭೂರಿಚರಿತೈರ್ಜನತಾಮುದಾರಃ**
ಪ್ರೋದ್ಧೃತ್ಯ ಸಾಂದ್ರ ಕರುಣಃ ಶರಣಂ ಸತಾಂ ಹಿ ।
ಶ್ರೀವಾದಿರಾಜಯತಿರಾಡತುಲಪ್ರಭಾವಃ
ಶ್ರೀಮಧ್ವಸನ್ಮತಸುವೃದ್ಧಿಕರೋಽಬಭಾಸೇ ॥47॥

ಅರ್ಥ:– (ಪ್ರಸಿದ್ಧವಾದ, ದಾನಿ, ತ್ಯಾಗಶೀಲ, ಘನತೆಹೊಂದಿದ ಔದಾರ್ಯವುಳ್ಳ) ಇವೇ ಮೊದಲಾದ ಮಹಿಮೆಗಳಿಂದ ಜನರ ವಿಷಯದಲ್ಲಿ ಔದಾರ್ಯವುಳ್ಳ; ಶರಣಾಗತರಾದ ಸಜ್ಜನರನ್ನು ಉದ್ಧರಿಸಿದ ಮಹಾ ಕರುಣಾಶಾಲಿಯಾದ, ಅತುಲ ಪ್ರಭಾವಯುಕ್ತರಾದ, ಮಧ್ವಸನ್ಮತದ ಅಭಿವೃದ್ಧಿಕರವಾದ ಶ್ರೀ ವಾದಿರಾಜಯತಿಗಳು ಶೋಭಿಸಿದರು.

ಶ್ಲೋಕ:– **ಇತಿ ಶ್ರೀ ವೇದನಿಧಿತೀರ್ಥಾಂತೆವಾಸಿ ರಾಮಚಂದ್ರಾರ್ಯವಿರಚಿತೇ**
ಶ್ರೀ ವಾದಿರಾಜಗುರುವರಚರಿತಾಮೃತೇ ಪಂಚಮಬಿಂದುಃ ಸಮಾಪ್ತಃ ।

ಅರ್ಥ:– ಇಲ್ಲಿಗೆ ಶ್ರೀ ವೇದನಿಧಿತೀರ್ಥರ ಶಿಷ್ಯರಾದ ರಾಮಚಂದ್ರಾಚಾರ್ಯರಿಂದ ರಚಿತವಾದ ಶ್ರೀ ವಾದಿರಾಜ ಗುರುವರ ಚರಿತಾಮೃತದಲ್ಲಿ ಐದನೆಯ ಬಿಂದುವು ಮುಗಿಯಿತು.

॥ ಷಷ್ಠ ಬಿಂದುಃ ॥

ಶ್ಲೋಕ:– **ಸೋದಾರಾಜ್ಯೇ ನೃಪಾಲಸ್ಯ ಲಿಂಗಾಯತಗುರುಸ್ತದಾ ।**
ಇಂದ್ರಜಾಲಪ್ರವೀಣತ್ವಾದಭ್ರಚಾರೀ ಸ್ವಯಂ ತ್ವಹಮ್ ॥1॥
ಕೈಲಾಸಸ್ಥ ಶಿವೌ ವೀಕ್ಷ್ಯ ತದನುಗ್ರಹಭಾಗಿತಿ ।
ವಂಚಯನ್ನಂಚಿತಕೃತಿಃ ಶಿವಾದೇಶಾದ್ದ್ವಿಜೋತ್ಕರಾನ್ ॥2॥
ಲಿಂಗಾಯತಾನ್ಕರೋಮೀತಿ ನೃಪಸಾಹಾಯ್ಯತೋ ಬಲಾತ್ ।
ವಶೀಕರ್ತುಂ ದ್ವಿಜಾನ್ಪ್ರಾಹ ನ ವಶ್ಯಾನ್ ದಂತಿಪಾದತಃ ॥3॥
ಘಾತಯಿಷ್ಯೇಽಥವಾ ಶೂಲೇ ಕ್ಷೇಪಯೇ ಛಿನ್ನನಾಸಿಕಾನ್ ।
ಇತ್ಥಂ ವಿಪ್ರೈರ್ಭೀಷಿತೈರ್ದ್ರಾಕ್ ಪ್ರಾರ್ಥಿತೋ ಗುರುರಾಟ್ ತದಾ ॥4॥
ಸೋದಾಪುರಂ ಗತೋ ದೂರೇ ವನೇ ತಪಸಿ ತಸ್ಥಿವಾನ್ ।
ಶಾಲ್ಮಲೀಸರಿತಸ್ತೀರೇ ಪ್ರಥಿತಂ ಯತ್ತಪೋವನಮ್ ॥5॥

ಅರ್ಥ:– ಆ ಕಾಲದಲ್ಲಿ ಸೋದಾರಾಜ್ಯದಲ್ಲಿದ್ದ ಅರಸನ ಲಿಂಗಾಯತಗುರುವು ಇಂದ್ರಜಾಲದಲ್ಲಿ ಪ್ರವೀಣನಾಗಿದ್ಧರಿಂದ ಗಗನ ಸಂಚಾರಿಯಾಗಿದ್ದನು. ಸ್ವಯಂ ತಾನಾದರೋ ಕೈಲಾಸದಲ್ಲಿರುವ ಶಿವನನ್ನು ನೋಡಿ ಅವನ ಅನುಗ್ರಹಕ್ಕೆ ಭಾಗಿಯಾಗಿದ್ದೇನೆ. ಎಂದು ವಂಚಿಸುತ್ತಾ ಕೀಳು ಕಾರ್ಯವನ್ನು ಮಾಡುವ ಅವನು 'ಶಿವನ ಆಜ್ಞಾನುಸಾರವಾಗಿ ಬ್ರಾಹ್ಮಣರನ್ನು ಲಿಂಗಾಯತರನ್ನಾಗಿ ಮಾಡುತ್ತೇನೆಂದು (ಹೇಳುತ್ತಾ) ರಾಜನ ಸಹಾಯದಿಂದ ಬಲಾತ್ಕಾರವಾಗಿ ವಶಮಾಡಿಕೊಳ್ಳಲು ಬ್ರಾಹ್ಮಣರಿಗೆ ವಶವಾಗದವರನ್ನು ಆನೆಕಾಲಿನಿಂದ ತುಳಿಸುತ್ತೇನೆ ಅಥವಾ ಶೂಲಕ್ಕೆ ಹಾಕಿಸುತ್ತೇನೆ ಅಥವಾ ಮೂಗನ್ನು ಕತ್ತರಿಸುತ್ತೇನೆ' ಎಂದು ಹೇಳುತ್ತಿದ್ದನು. ಇದರಿಂದ ಭೀತರಾದ ಬ್ರಾಹ್ಮಣರಿಂದ ಪ್ರಾರ್ಥಿತರಾದ ವಾದಿರಾಜಗುರುಗಳು ಶೀಘ್ರವಾಗಿ ಸೋದಾಪುರಿಗೆ ಹೋಗಿ ಶಾಲ್ಮಲೀ ನದಿ ತೀರದಲ್ಲಿ ದೂರದಲ್ಲಿರುವ ಪ್ರಖ್ಯಾತವಾದ (ತಪೋ) ವನದಲ್ಲಿ ತಪಸ್ಸನಾಚರಿಸುತ್ತಾ ಇರುವವರಾದರು.

ಶ್ಲೋಕ:– **ತದಾಽರಿಭಿರ್ಜಿತೋ ಯುಧಿ ಪ್ರಧಾವಿತೋ ವನಂ ವಿಶನ್।**
ತಪಸ್ವಿನಃ ಸುತೇಜಸಾ ಪ್ರತಪ್ತದೇಹ ಐಕ್ಷತ ॥6॥
ಸಮಂತತೋಽಥ ವಿಸ್ಮಿತಸ್ತಪಸ್ವಿನಂ ದದರ್ಶ ಸಃ ।
ಸುಭಕ್ತಿತಃ ಪ್ರಣಮ್ಯ ತಂ ಪ್ರಪಾಹಿ ಮಾಂ ಪರಾಜಿತಮ್ ॥7॥

ಅರ್ಥ:– (ಸೋದಾಪುರಿರಾಜನು) ಯುದ್ಧದಲ್ಲಿ ವೈರಿಗಳಿಂದ ಪರಾಜಿತನಾಗಿ ಓಡುತ್ತಾ ತಪೋವನವನ್ನು ಪ್ರವೇಶಿಸಿ, ತಪಸ್ವಿಗಳಾದ ವಾದಿರಾಜರ ಅತಿಶಯವಾದ ತೇಜಸ್ವಿನಿಂದ ಸುಡುತ್ತಿರುವ ಸ್ಥಳವನ್ನು ಸುತ್ತಲೂ ನೋಡಿದನು. ಆಶ್ಚರ್ಯಭರಿತನಾದ ಅವನು ತಪಸ್ವಿಗಳನ್ನು ನೋಡಿದನು ಅತಿಶಯವಾದ ಭಕ್ತಿಯಿಂದ ಅವರಿಗೆ ನಮಸ್ಕರಿಸಿ, ಪರಾಜಿತನಾದ ತನ್ನನ್ನು ರಕ್ಷಿಸಬೇಕೆಂದು (ಪ್ರಾರ್ಥಿಸಿದನು)

ಶ್ಲೋಕ:– **ಇತಿ ದೀನಂ ಪ್ರಾರ್ಥಯಂತಂ ಕೋಽಸಿ ಕಿಂ ಭಯಮಿತ್ಯಥ ।**
ಪೃಚ್ಛತೇ ವಾದಿರಾಜಾಯ ಸ್ವನಾಮಾ ಽಽರ್ತಿಂ ಚ ಸೋಽಬ್ರವೀತ್ ॥8॥

ಅರ್ಥ:– ಹೀಗೆ ದೀನನಾಗಿ ಪ್ರಾರ್ಥಿಸುತ್ತಿರುವ ರಾಜನನ್ನು ಕುರಿತು ನೀನು ಯಾರು? ನಿನಗೆ ಏನು ಭಯ? ಎಂದು ವಾದಿರಾಜರು ಕೇಳಿದರು. ಅವರಿಗೆ ತನ್ನ ಹೆಸರು ಮತ್ತು ತನ್ನ ಕಷ್ಟವನ್ನು ರಾಜನು ಹೇಳಿದನು.

ಶ್ಲೋಕ:– **ತದಾ ಗುರುವರಃ ಕ್ರೋಧಾದಪೈಹಿ ದ್ವಿಜಬಾಧಕ ।**
ವಿಪ್ರದ್ರೋಹಾಜ್ಜಿತೋಽಸಿ ತ್ವಮರಿಭಿಃ ಸ್ವಗುರುಂ ವ್ರಜ ॥9॥
ವಂಚಕಂ ತ್ವಿತಿ ಸಂಪ್ರೋಕ್ತಃ ಶರಣಂ ಪಾಹಿ ಮಾಂ ಪ್ರಭೋ ।
ಆಗಸ್ಕೃತಮಪೀತ್ಯದ್ದಾ ಪಶ್ಚಾತ್ತಾಪಿನಮೂಚಿವಾನ್ ॥10॥

ಅರ್ಥ:– ಆಗ ಗುರುವರ್ಯರು ಕ್ರೋಧದಿಂದ "ಹೇ ವಿಪ್ರಬಾಧಕನೇ ! (ಇಲ್ಲಿಂದ) ಹೋಗು. ವಿಪ್ರದ್ರೋಹದಿಂದ ನೀನು ಶತ್ರುಗಳಿಂದ ಪರಾಜಿತನಾಗಿರುವಿ. ನಿನ್ನ ವಂಚಕ ಗುರುವಿನ ಬಳಿಗೆ ಹೋಗು"ಎಂದರು.

ಹೀಗೆ ಹೇಳಿಸಿಕೊಳ್ಳಲ್ಪಟ್ಟ ರಾಜನು "ಪ್ರಭೋ! ಶರಣಾಗತನಾಗಿ ಬಂದಿರುವ, ಪಶ್ಚಾತ್ತಾಪವುಳ್ಳ ನನ್ನನ್ನು ಅಪರಾಧಿಯಾದಾಗ್ಯೂ ಕೂಡ ರಕ್ಷಿಸಿರಿ" ಎಂದು ಹೇಳಿದನು.

ಶ್ಲೋಕ:– **ಮಂತ್ರಾಕ್ಷತಾನ್ ಪ್ರದತ್ತಾಂಸ್ತ್ವಂ ಗೃಹೀತ್ವಾ ಸ್ವಪುರೀಂ ವಿಶ ।**
ತದಾನೀಮೇವ ಶತ್ರುಸ್ತೇ ಸಗಣೋ ಧಾವತಿ ಧ್ರುವಮ್ ॥11॥
ರಾಜ್ಯಂ ತವ ವಶಂ ಯಾತಿ ತತಃ ಸಾಧಯ ಮದ್ವಚಃ ।
ಇತ್ಯುಕ್ತಃ ಪ್ರಣಿಪತ್ಯಾಶು ಸ್ವಪುರಂ ಗತವಾನ್ ನೃಪಃ ॥12॥

ಅರ್ಥ:– "ನಿನಗೆ ಕೊಟ್ಟ ಮಂತ್ರಾಕ್ಷತೆಯನ್ನು ತೆಗೆದುಕೊಂಡು ನಿನ್ನ ಪಟ್ಟಣವನ್ನು ಪ್ರವೇಶಿಸು. ಆಕೂಡಲೇ ನಿನ್ನ ಶತ್ರುವು ಸೈನ್ಯ ಸಮೇತನಾಗಿ ನಿಶ್ಚಯವಾಗಿಯೂ ಓಡಿ ಹೋಗುವನು. ರಾಜ್ಯವು ನಿನ್ನ ವಶವಾಗುವುದು ಅನಂತರ ನನ್ನ ವಚನವನ್ನು ಪಾಲಿಸು" ಎಂದು ಹೇಳಲು ರಾಜನು ಕೂಡಲೇ (ಗುರುಗಳಿಗೆ) ನಮಸ್ಕರಿಸಿ. ತನ್ನ ಪಟ್ಟಣಕ್ಕೆ ಹೋದನು.

ಶ್ಲೋಕ:– **ತತ್ಪುರಸ್ತಾದ್ಧಯಾಃ ಶುಭ್ರಾಶ್ಚಕ್ರಶಂಖಾದಿಚಿನ್ಹಿತಾಃ ।**
ಧಾಟಿಭೀಃಸ್ತೋಷಯಂತೋನ್ನ್ಯೂನ್ ಭೀಷಯಂತೋಽರಿಸಂಹತಿಮ್॥13॥

ಅರ್ಥ:– ರಾಜನ ಮುಂದೆ ಶಂಖ ಚಕ್ರಾದಿಗಳಿಂದ ಚಿಹ್ನಿತವಾದ ಶುಭ್ರವಾದ ಅಶ್ವಗಳು ರಾಜನಿಗೆ ಸಂತೋಷವನ್ನುಂಟು ಮಾಡುತ್ತಾ, ಶತ್ರು ಸಮೂಹಕ್ಕೆ ಹೆದರಿಕೆಯನ್ನುಂಟು ಮಾಡುತ್ತಾ ಶತ್ರುಗಳಿಗೆ ಎದುರಾಗಿ ಹೋದವು.

ಶ್ಲೋಕ:– **ಹಯಘಾತಿತಸೈನ್ಯೋಽರಿಃ ಪುರಂ ತ್ಯಕ್ತ್ವಾ ಪಲಾಯತ ।**
ಸೋದಾರಾಜೋ ರಾಜತಾತನಾಯಕೋ ವಶಯನ್ ಪುರೀಮ್ ॥15॥
ಸ್ವರ್ಣದೋಲಾಂ ಸಮಾನೀಯ ವಾದಿರಾಜಾಂತಿಕಂ ಗತಃ ।
ಭಕ್ತ್ಯಾ ನತ್ವಾ ನಿವೇದ್ಯಾರಿವಿಜಯಂ ಗುರುಮಾನಯತ್ ॥15॥

ಅರ್ಥ:– ಅಶ್ವಗಳಿಂದ ಪ್ರಹಾರವನ್ನು ಪಡೆದ ಶತ್ರುಸೈನ್ಯವು ಸೋದಾಪುರಿಯನ್ನು ತ್ಯಜಿಸಿ ಪಲಾಯನ ಮಾಡಿದವು. ಸೋದಾಪುರಿಯ ರಾಜನಾದ ಅರಸಪ್ಪ ನಾಯಕನು ಪಟ್ಟಣವನ್ನು ವಶಪಡಿಸಿಕೊಂಡು, ಚಿನ್ನದ ಪಲ್ಲಕ್ಕಿಯನ್ನು ತಗೆದುಕೊಂಡು ವಾದಿರಾಜರ ಬಳಿಗೆ ಹೋದನು. ಭಕ್ತಿಯಿಂದ ನಮಸ್ಕರಿಸಿ ಶತ್ರುವನ್ನು ಗೆದ್ದ ವಿಷಯವನ್ನು ತಿಳಿಸಿ, ಗುರುಗಳನ್ನು ಕರೆ ತಂದನು.

ಶ್ಲೋಕ:– **ಆಜ್ಞಾಪ್ಯತಾಂಮಯಾ ಕಾರ್ಯಂ ತ್ವದೀಯೋಽಸ್ಮ್ಯನುಗೃಹ್ಯತಾಮ್ ।**
ಇತ್ಯರ್ಥಿತೋ ಯತಿಃ ಪ್ರಾಹ ವಿದ್ವಜ್ಜನಸಭಾಂ ಕುರು ॥16॥
ಗುರುಣಾ ತವ ವಾದೋಽಯಂ ಪ್ರಚಾಲ್ಯೋ ಮಮ ಸರ್ವಥಾ ।
ಇತ್ಯಾಜ್ಞಯಾ ತಥಾ ಕೃತ್ವಾ ಸಮಾಹ್ವಯತ ತಂ ಗುರುಮ್ ॥17॥

ಅರ್ಥ:– "ನನ್ನಿಂದ ಆಗಬೇಕಾದ ಕಾರ್ಯವನ್ನು ಆಜ್ಞಾಪಿಸಿ, ನಿಮ್ಮವನೇ ಆಗಿದ್ದೇನೆ; ಅನುಗ್ರಹಿಸಬೇಕು." ಎಂದು ಪ್ರಾರ್ಥಿಸಲು, ಯತಿಗಳಾದ ವಾದಿರಾಜರು "ವಿದ್ವಜ್ಜನರ ಸಭೆಯನ್ನು ಸೇರಿಸು. ಎಲ್ಲ ರೀತಿಯಿಂದಲೂ ನಿನ್ನ ಗುರುವಿನೊಂದಿಗೆ ನನ್ನ ವಾದವು ನಡೆಯಬೇಕು." ಎಂದು ಹೇಳಿದರು. ಈ ಆಜ್ಞೆಯಂತೆ ಹಾಗೆ (ಅಂದರೆ ವಿದ್ವಜ್ಜನರಸಭೆಯನ್ನು) ಸೇರಿಸಿ ಆ ವೀರಶೈವ ಗುರುವನ್ನು ಆಹ್ವಾನಿಸಿದನು.

ಶ್ಲೋಕ:– **ಮಾಯಯಾಽಽಕಾಶಯಾನೋಽಸೌ ಗುರುಮಂತ್ರಪ್ರವಾದಿತಃ ।**
ಪಪಾತ ಸದಸೋ ಮಧ್ಯೇ ಲಜ್ಜಾಭಯಸಮನ್ವಿತಃ ॥18॥

ಅರ್ಥ:– ಆ ಗುರುವು ಮಾಯೆಯಿಂದ ಆಕಾಶದಲ್ಲಿ ಬರುತ್ತಿರಲು, ವಾದಿರಾಜ ಗುರುಗಳ ಮಂತ್ರೋಚ್ಚಾರಣೆಯಿಂದ ಸಭೆಯ ಮಧ್ಯದಲ್ಲಿ ಲಜ್ಜಾಭಯಗಳಿಂದ ಯುಕ್ತನಾಗಿ ಬಿದ್ದನು.

ಶ್ಲೋಕ:– **ಉತ್ಥಿತಸ್ಸ ಗುರುಃ ಪಶ್ಯನ್ನತಿತೇಜಸ್ವಿನಂ ಮುನಿಮ್ ।**
ಭೀತಃ ಸ್ವಿನ್ನಃ ಸ್ವಕಾಪಟ್ಯಮದ್ಯ ಪ್ರಕಟಮೇಷ್ಯತಿ ॥19॥
ಇತಿ ಖಿನ್ನೋಽಪಿ ವಿಕೃತಿಮಾಚ್ಛಾದ್ಯಾಽಽಸನಮಾಭಜತ್ ।

ಅರ್ಥ:– ಎದ್ದು ನಿಂತ ಆ ಗುರುವು ಅತಿ ತೇಜಸ್ವಿಯಾದ (ವಾದಿರಾಜ) ಮುನಿಗಳನ್ನು ನೋಡುತ್ತಾ ಹೆದರಿ ಬೆದರಿದನು. ತನ್ನ ಕಪಟವು ಈಗ ಬಯಲಾಗುವದೆಂದು ದುಃಖಿತನಾದರೂ ಕೂಡ, ವಿಕಾರವನ್ನು ಮುಚ್ಚಿಕೊಂಡು ಆಸನದಲ್ಲಿ ಕುಳಿತುಕೊಂಡನು.

ಶ್ಲೋಕ:– **ರಾಜಾಽಥ ಸಮಿತೌ ಪ್ರಾಹ ಮಹಾತ್ಮಾ ವಾದಮಿಚ್ಛತಿ ॥20॥**
ಗುರುಣಾ ಮಮ ಸಾರ್ಧಂ ತದ್ವಾದಃ ಪ್ರಕ್ರಮ್ಯತಾಮತಃ ।
ಯತೀಶ್ವರೋ ಬಭಾಷೇಽಥ ನೀತಿಜ್ಞನೃಪಶೇಖರ ॥21॥

ಅರ್ಥ:– ಬಳಿಕ ನೀತಿಯನ್ನು ಬಲ್ಲ ಶ್ರೇಷ್ಠನಾದ ರಾಜನು ಸಭೆಯಲ್ಲಿ "ಮಹಾತ್ಮರಾದ (ವಾದಿರಾಜ) ಗುರುಗಳು ನನ್ನ ಗುರುವಿನೊಂದಿಗೆ ವಾದ ಮಾಡಲಿಚ್ಛಿಸುವರು ಆದ್ದರಿಂದ ಆ ವಾದವು ಪ್ರಾರಂಭವಾಗಲಿ" ಎಂದು ಹೇಳಿದನು. ಅನಂತರ ಯತಿ ಶ್ರೇಷ್ಠರಾದ ವಾದಿರಾಜರು ಹೇಳಿದರು.

ಶ್ಲೋಕ:– **ವಿದ್ವದ್ವರಾಃ ಶೃಣುಧ್ವಂ ಭೋಃ ನೃಪಸ್ಯ ಗುರುರೇಷ ಹಿ ।**
ಬಾಧತೇ ಬ್ರಾಹ್ಮಣಾನ್ಮಾಯಾವಿದ್ಯಯಾ ವಂಚಯನ್ ಜನಾನ್ ॥22॥

ಅರ್ಥ:– "ಶ್ರೇಷ್ಠರಾದ ವಿದ್ವಾಂಸರೇ ! ಕೇಳಿರಿ ರಾಜನ ಈ ಗುರುವು ಮಾಯ ವಿದ್ಯೆಯಿಂದ ಜನರನ್ನು ವಂಚಿಸುತ್ತಾ, ಬ್ರಾಹ್ಮಣರನ್ನು ಪೀಡಿಸುತ್ತಿದ್ದಾನೆ.

ಶ್ಲೋಕ:– **ಸಾಕ್ಷಾತ್ಕೃತಾಽದ್ಯ ಸಾ ಮಾಯಾ ಸಭ್ಯೈರತ್ರಾಗ್ರತೋ ಮಮ ।**
ಅಧುನಾ ವಿಪ್ರಬಾಧಾ ತು ಪಾರ್ವತೀಶಸ್ಯ ಸಮ್ಮತಾ ॥23॥
ಭವೇನ್ನವೇತಿ ದ್ರಷ್ಟವ್ಯಂ ವಾದೇ ಜಯನಿಮಿತ್ತತಃ ।

ಅರ್ಥ:– ಇಲ್ಲಿಗೆ ಬಂದ ಸಭೆಗೆ ಸಂಬಂಧಿಸಿದ (ಅಥವಾ ವಿಶ್ವಾಸಕ್ಕೆ ಅರ್ಹನಾದ ಅಥವಾ ಸಾಧು ಪುರುಷನಾದ) ನನ್ನಿಂದ ಈಗ ಆ ಮಾಯೆಯು ಪ್ರತ್ಯಕ್ಷವಾಗಿ ತೋರಿಸಲ್ಪಟ್ಟಿತು. ವಿಪ್ರರಿಗೆ ಕೊಡುತ್ತಿರುವ ಹಿಂಸೆಯು ಪಾರ್ವತಿ ಪತಿಗೆ ಸಮ್ಮತವಾದುದೋ ಅಲ್ಲವೋ ಎನ್ನುವದು ಈಗ ವಾದದಲ್ಲಿ ಜಯಗಳಿಸುವುದರ ಮೂಲಕ ಕಾಣಬೇಕು.

ಶ್ಲೋಕ:– **ಪ್ರಥಮೇ ಸಪ್ತಕೇऽಹ್ನಾಂ ತು ವಾದಃ ಕಾರ್ಯೋಽಹ್ಯನೇನ ಹಿ ॥24॥**
ಉತ್ತರೇ ಸಪ್ತಕೇऽಹ್ನಾಂ ತು ಮಯಾತೂತ್ತರಮುಚ್ಯತೇ ।
ವಿಜಿತಶ್ಚೇದಸ್ಯ ಮತಂ ಪ್ರವೇಕ್ಷ್ಯಾಮ್ಯಹಮಾದರಾತ್ ॥25॥

ಅರ್ಥ:– 'ಪ್ರಥಮ ಏಳುದಿನಗಳಕಾಲ ಅವನು ವಾದವನ್ನು ಮಾಡಬೇಕು. ನಂತರದ ಏಳುದಿನಗಳಲ್ಲಿ ನನ್ನಿಂದ ಉತ್ತರವು ಕೊಡಲ್ಪಡುತ್ತದೆ. ಅವನು (ವಾದದಲ್ಲಿ) ಗೆದ್ದರೆ ನಾನು ಅವನ ಮತವನ್ನು ಆದರದಿಂದ ಸ್ವೀಕರಿಸುತ್ತೇನೆ.'

ಶ್ಲೋಕ:– **ಪರಾಜಿತೋ ಯದಾಯಂ ಹಿ ಭವೇದ್ವೇಶ್ಯಾಂಘ್ರಿತಾಡಿತಃ ।**
ಇತಿ ಕೃತ್ವಾ ಪಣಂ ತತ್ರ ಚತುರ್ದಶದಿನೇ ಮುನಿಃ ॥26॥
ಪರಾಜಿತ್ಯ ಗುರುಂ ತತ್ರ ವೇಶ್ಯಾಪದತಲಾಹತಮ್ ।
ಕಾರಯಾಮಾಸ ಸ ಗುರುರ್ಲಜ್ಜಯಾ ದುದ್ರುವೇ ದ್ರುತಮ್ ॥27॥

ಅರ್ಥ:– ಈ ಮಾಯಾವಾದಿಯು ಪರಾಜಿತನಾದರೆ ವೇಶ್ಯಯರ ಪಾದದಿಂದ ಒದೆಯಲ್ಪಡುವನು ಈ ರೀತಿ ಪಣವನ್ನಿಟ್ಟು ವಾದದಲ್ಲಿ ಹದಿನಾಲ್ಕನೆಯದಿನ ವಾದಿರಾಜ ಮುನಿಗಳು ವೀರಶೈವಗುರುವನ್ನು ಸೋಲಿಸಿ ವೇಶ್ಯೆಯರಿಂದ ಒದೆಸಿದರು ಆ ಗುರುವು ಲಜ್ಜೆಯಿಂದ ಕೂಡಲೇ ಪಲಾಯನ ಮಾಡಿದನು.

ಶ್ಲೋಕ:– **ವೃಷಭಾಂಕಿತಘಂಟಾಂ ತಾಂ ತದೀಯಾಮಗ್ರಹೀದ್ಯತಿಃ ।**
ತದ್ವಾದವಿಜಯಾಂಕಾಂ ಸ ರಾಜಾ ತುಷ್ಟಮನಾಸ್ತದಾ ॥28॥

ಅರ್ಥ:– ಆಗ ಸಂತುಷ್ಟ ಮನಸ್ಕನಾದ ಆ ರಾಜನು ವಿಜಯದ ಸಂಕೇತವಾಗಿ ಆ ಗುರುವಿನ ಬಸವ ಮೂರ್ತಿಯುಕ್ತವಾದ ಘಂಟೆಯನ್ನು ಕೊಡಲು, ವಾದಿರಾಜ ಯತಿಗಳು ಸ್ವೀಕರಿಸಿದರು.

ಶ್ಲೋಕ:– **ಮುಕ್ತಾಸಿಂಹಾಸನಂ ಛತ್ರಚಾಮರೇ ಮುಕುಟಾದಿಕಮ್ ।**
ಅಷ್ಟಾದಶನೃಪಾಂಕಂ ತಂ ಯತಯೇಽರ್ಪಿತವಾನ್ಮುದಾ ॥29॥

ಅರ್ಥ:– (ಮುತ್ತಿನ) ಸಿಂಹಾಸನ ಛತ್ರ ಚಾಮರ ಹಾಗೂ ಕಿರೀಟಾದಿ (ಮುಕುಟಾದಿ) ಹದಿನೆಂಟು ರಾಜ ಚಿನ್ಹೆಗಳನ್ನು ಆ ರಾಜನು ಸಂತೋಷದಿಂದ ವಾದಿರಾಜ ಯತಿಗಳಿಗೆ ಅರ್ಪಿಸಿದನು.

ಶ್ಲೋಕ:– **ವೃಷಘಂಟಾऽಧುನಾಪ್ಯದ್ಧಾ ಪೂಜಾಯ್ಯೆ ಗೃಹ್ಯತೇ ಮಠೇ ।**
ರಾಜದತ್ತಾನ್ಯಮಾಲ್ಯಾನಿವಸ್ತೂನಿ ಸ್ವಮಠೇऽಧುನಾ ॥30॥
ದೃಶ್ಯಂತೇ ಸ್ತ್ರೀಪದಾಘಾತೋ ಹ್ಯಧುನಾऽಪಿ ಪ್ರಚಾಲ್ಯತೇ ।
ಶ್ರೀವಾದಿರಾಜಪೂಜ್ಯಶ್ರೀಪಾದಪುಣ್ಯದಿನೋತ್ಸವೇ ॥31॥
ಗೋಧೂಮಪಿಷ್ಟಮಾಹತ್ಯ ಪದ್ಭ್ಯಾಂ ಕ್ರೀಡಂತಿ ಸಸ್ತ್ರಿಯಃ ॥32॥

ಅರ್ಥ:– ಈಗಲೂ ಮಠದಲ್ಲಿ ಪೂಜೆಗಾಗಿ ಬಸವ ಘಂಟೆಯು ಸ್ವೀಕರಿಸಲ್ಪಡುತ್ತಿದೆ. ರಾಜನಿಂದ ಅರ್ಪಿಸಲ್ಪಟ್ಟ ಅಮೂಲ್ಯವಸ್ತುಗಳನ್ನು ಈಗಲೂ ಮಠದಲ್ಲಿ ಕಾಣಬಹುದು. (ಲಿಂಗಾಯತ ಗುರುವಿಗೆ ಮಾಡಿಸಿದ ವೇಶ್ಯಾ) ಸ್ತ್ರೀ ಪಾದಾಘಾತವು ಈಗಲೂ ಶ್ರೀ ವಾದಿರಾಜ ಪೂಜ್ಯ ಶ್ರೀ ಪಾದರ ಆರಾಧನೆಯ ದಿನ ಪ್ರಚಲಿತವಾಗಿದೆ. ಸ್ತ್ರೀಯರು ಗೋಧಿ ಹಿಟ್ಟನ್ನು ಪಾದಗಳಿಂದ ಮರ್ದಿಸುವ (ಕುರುಹುವಿಗಾಗಿ ಒನಕೆಯಿಂದ ಕುಟ್ಟುತ್ತಾ) ಕ್ರೀಡಿಸುತ್ತಾರೆ.

ಶ್ಲೋಕ:– **ರಾಜ್ಞೋऽಸ್ಯ ಪುತ್ರೀ ಮೃತವಲ್ಲಭಾऽಗಾ**
ದ್ಯತಿಂ ಶರಣ್ಯಂ ಶರಣಂ ವಿಷಣ್ಣಾ ।
ನಾರಾಯಣಾಷ್ಟೋತ್ತರಕೀರ್ತನೇನ
ತಂ ಜೀವಯನ್ ಭೂಪಸುತಾಮಮೋದಯತ್ ॥33॥

ಅರ್ಥ:– ಆ ರಾಜನ ಪುತ್ರಿಯ ಪತಿಯು ಮೃತನಾಗಲು, ದುಃಖದಿಂದ ಯತಿಗಳಿಗೆ ಶರಣಾಗತಳಾಗಿ ಬಂದಳು ನಾರಾಯಣ ಅಷ್ಟೋತ್ತರ ಉಚ್ಚರಿಸುತ್ತಾ ಅವನನ್ನು ಬದುಕಿಸಿ, ರಾಜ ಪುತ್ರಿಯನ್ನು ಸಂತೋಷಪಡಿಸಿದರು.

ಶ್ಲೋಕ:– **ಸೋದಾರಾಜಃ ಶ್ರೇಷ್ಠ ದೇವಾಲಯಾರ್ಥಂ**
ನತ್ವಾಸ್ತುತ್ವಾ ವಾದಿರಾಜಂ ಯಯಾಚೇ ।

ಯೋಗಿಶ್ರೇಷ್ಠೋ ಭೂತರಾಜಂ ತದರ್ಥಂ
ಪ್ರೋಚೇಗತ್ವಾ ವ್ಯಾಸಮಧ್ವೌ ಪ್ರಣಮ್ಯ ॥34॥
ಮಧ್ವಾದಿಷ್ಟಾಂ ಮೂರ್ತಿಮಾಶ್ವಾನಯೇಸ್ತ್ವಾ
ಮಿತ್ಯಾದಿಷ್ಟೋ ವ್ಯಾಸವಾಸಂ ಜಗಾಮ ।
ಯತ್ರ ವ್ಯಾಸೋ ಮಧ್ವಮುಖ್ಯೈರ್ಮುನೀಂದ್ರೈ
ರಾಸೇವ್ಯಾಂಘ್ರಿಸ್ತತ್ವವಾದೀ ವಿಭಾತಿ । ॥35॥

ಅರ್ಥ:– ಸೋದಾಪುರಿಯ ರಾಜನು (ತನ್ನ ರಾಜ್ಯದಲ್ಲಿ! ಶ್ರೇಷ್ಠವಾದ ದೇವಾಲಯ ನಿರ್ಮಾಣಕ್ಕಾಗಿ ಶ್ರೀ ವಾದಿರಾಜಯತಿಗಳಿಗೆ ನಮಿಸಿ, ಅವರನ್ನು ಸ್ತುತಿಸಿ, ಪ್ರಾರ್ಥಿಸಿದನು. ದೇವಾಲಯಕ್ಕಾಗಿ ಶ್ರೇಷ್ಠ ಯೋಗಿಗಳಾದ ವಾದಿರಾಜರು ಭೂತರಾಜರಿಗೆ "ಬದರೀ ಕ್ಷೇತ್ರಕ್ಕೆ ಹೋಗಿ ವೇದವ್ಯಾಸ ಮತ್ತು ಮಧ್ವರಿಗೆ ನಮಸ್ಕರಿಸಿ, ಮಧ್ವರಿಂದ ಆದೇಶಿಸಲ್ಪಟ್ಟ ದೇವರ ಮೂರ್ತಿಯನ್ನು ಶೀಘ್ರವಾಗಿ ತನ್ನಿರಿ" ಎಂದು ಹೇಳಿದರು; ಈ ರೀತಿ ಆಜ್ಞಪ್ತರಾದ ಭೂತರಾಜರು ವೇದವ್ಯಾಸರಿಗೆ ವಾಸಸ್ಥಾನವಾದ (ಬದರೀ ಕ್ಷೇತ್ರಕ್ಕೆ) ಹೋದರು. ಅಲ್ಲಿ ಮಧ್ವರೇ ಮೊದಲಾದ ಮುನಿಶ್ರೇಷ್ಠರುಗಳಿಂದ ಸೇವಿತವಾದ ಪಾದಕಮಲಗಳವುಳ್ಳ, ತತ್ವವಾದಿಗಳಾದ ವೇದವ್ಯಾಸರು ಶೋಭಿಸುತ್ತಾರೆ.

ಶ್ಲೋಕ:– **ಸುಂದರಂ ಮಂದಿರಂ ದೇವಪ್ರತಿಷ್ಠಾಯೈ ನೃಪೋತ್ತಮಃ ।**
ನಿದೇಶಾದ್ ವಾದಿರಾಜಸ್ಯ ಶಿಲಾಭಿಃ ಕರ್ತುಮುದ್ಯತಃ ॥36॥

ಅರ್ಥ:– ದೇವರ ಪ್ರತಿಷ್ಠೆಗಾಗಿ ಸುಂದರವಾದ ಮಂದಿರ ನಿರ್ಮಾಣವಾಗಬೇಕೆಂದು ವಾದಿರಾಜರಿಂದ ಆದೇಶಿಸಲ್ಪಟ್ಟ ರಾಜನು ಶಿಲೆಗಳಿಂದ ಮಂದಿರವನ್ನು ಕಟ್ಟಲು ಪ್ರಾರಂಭಿಸಿದನು.

ಶ್ಲೋಕ:– **ನೃಪಾಜ್ಞಯಾಶ್ಮಕುಟ್ಟಕಸ್ತದೂರ್ಧ್ವಮಾನಯಚ್ಛಿಲಾಮ್ ।**
ಅಧೋಮುಖಂ ಗತಾಂ ದ್ರುತಂ ಜನೋಪಮರ್ದಭೀತಿತಃ ॥37॥
ಗುರೋಃ ಪದಾಚ್ಛಪಾಮೀತಿ ಪ್ರೋಚೇ ತತ್ರನಸಾಽಪತತ್ ।
ತದಾಕರ್ಣ್ಯ ಸ್ವಯಂ ಯೋಗೀ ಹ್ಯಕ ಏವ ಶಿಲಾಂ ದೃಢಾಮ್ ॥38॥
ಬಹೂದ್ಧಾರ್ಯಾಮೂರ್ಧ್ವಭಾಗೇ ನಿಚಿಕ್ಷೇಪ ಮಹಾಬಲಃ ।
ಅಶ್ಮಕುಟ್ಟೈರಭೇದ್ಯಾಂ ಚ ಶಿಲಾಮಂಗುಷ್ಠತೋಽಭಿನತ್ ॥39॥

ಅರ್ಥ:– ರಾಜನ ಆದೇಶದಂತೆ ದೇವಾಲಯ ನಿರ್ಮಿಸುತ್ತಿರುವ ಕಲ್ಲುಕುಟ್ಟಿಕನು (ದೊಡ್ಡ) ಶಿಲೆಯೊಂದನ್ನು ಮೇಲಕ್ಕೆ ತಂದನು ಅದು ಶೀಘ್ರವಾಗಿ ಕೆಳಗೆ ಬೀಳಲು ಪ್ರಾರಂಭಿಸಿತು. (ಕೆಳಗಿರುವ) ಜನರು ಹಿಂಸಿಸಲ್ಪಡುವರೆಂಬ ಭೀತಿಯಿಂದ. ಅವನು (ಬಿದ್ದರೆ) "ಗುರುಗಳ ಪಾದದಾಣೆ ಎಂದನು (ಆಗ) ಅದು ಅಲ್ಲಿ ಬೀಳಲಿಲ್ಲ. ಇದನ್ನು ಕೇಳಿದ ಮಹಾಬಲಿಷ್ಠರಾದ ಯೋಗಿವರರಾದ ವಾದಿರಾಜರು ತಾವು ಸ್ವತಃ ಒಬ್ಬರೇ ಬಹುತೂಕದ ಶಿಲೆಯನ್ನು ಎತ್ತಿ ಮೇಲು ಭಾಗದಲ್ಲಿಟ್ಟರು. ಹಾಗೂ ಕಲ್ಲುಕುಟ್ಟುಕರಿಂದ ಒಡೆಯಲಾಗದ ಶಿಲೆಯನ್ನು ತಮ್ಮ ಅಂಗುಷ್ಠದಿಂದ ತುಂಡು ಮಾಡಿದರು.

ಶ್ಲೋಕ:– **ಭೂತರಾಜಸ್ತಥಾ ದೇವಮಾನೇತುಂ ಬದರೀಂ ಗತಃ ॥**
ಯತ್ರ ವ್ಯಾಸೋ ಮಧ್ವಮುಖ್ಯೈರ್ಯೋಗಿಭಿಃ ಪರ್ಯುಪಾಸ್ಯತೇ ॥40॥

ಅರ್ಥ:– ಎಲ್ಲಿ ವೇದವ್ಯಾಸರು ಮಧ್ವರೇ ಮೊದಲಾದ ಯೋಗಿಗಳಿಂದ ಚೆನ್ನಾಗಿ ಸೇವಿಸಲ್ಪಡುತ್ತಾರೆಯೋ, ಅಂತಹ ಬದರೀಕಾಶ್ರಮಕ್ಕೆ ಭೂತರಾಜರು ದೇವರ ಮೂರ್ತಿಯನ್ನು ತರಲು ಹೋದರು.

ಶ್ಲೋಕ:– **ವ್ಯಾಸಂ ಮಧ್ವಂ ತಥಾ ನತ್ವಾ ವಿನೀತಃ ಸನ್ನ್ಯವೇದಯತ್ ।**
ವಾದಿರಾಜೋಕ್ತಮಾಕರ್ಣ್ಯ ತ್ರಿವಿಕ್ರಮಮೃಜೂತ್ತಮೈಃ ॥41॥

ಅರ್ಥ:– ವ್ಯಾಸರನ್ನು ಹಾಗೂ ಮಧ್ವರನ್ನು ನಮಸ್ಕರಿಸಿ, ವಿನೀತರಾಗಿ (ತಾವು ಬಂದ ಕಾರಣವನ್ನು) ತಿಳಿಸಿದರು. ವಾದಿರಾಜರು ಹೇಳಿ (ಕಳುಹಿಸಿ)ದ್ದನ್ನು ಕೇಳಿ, "ಉತ್ತಮ ಋಜುಗಳಿಂದ ತ್ರಿವಿಕ್ರಮನು ಪೂಜನೀಯನು (ತ್ರಿವಿಕ್ರಮ ಮೂರ್ತಿಯನ್ನು) ತೆಗೆದುಕೊಂಡು ಹೋಗಿ" ಎಂದು ಕರುಣಾನಿಧಿಗಳು ಆಜ್ಞಾಪಿಸಿದರು.

ಶ್ಲೋಕ:– **ಅರ್ಚನೀಯಂ ನಯೇತ್ಯಾಜ್ಞಾಮದಿಶತ್ಕರುಣಾನಿಧಿಃ ।**
ತ್ರಿವಿಕ್ರಮಂ ಸಹರಥಮಾನಯನ್ರಕ್ಷಸಾ ಪಥಿ ॥42॥
ರುದ್ರಃ ಕ್ರುದ್ಧೋ ರಥಗತಚಕ್ರೀಣೈನಂ ನಿಹತ್ಯ ಹಿ ।
ಸುಮುಹೂರ್ತೇ ನಿಶ್ಚಿತೇಽಥ ಯತಯೇಽರ್ಪಿತವಾನ್ರಥಮ್ ॥43॥

ಅರ್ಥ:– ರಥ ಸಹಿತ ತ್ರಿವಿಕ್ರಮನನ್ನು ತರುತ್ತಿರುವಾಗ ಮಾರ್ಗದಲ್ಲಿ ರಾಕ್ಷಸ(ನೊಬ್ಬನು) ತಡೆಯಲು ಕುಪಿತರಾಗಿ (ಭೂತರಾಜರು) ರಥದ ಚಕ್ರವೊಂದರಿಂದ ಆತನನ್ನು ಕೊಂದು, ನಿಶ್ಚಿತವಾದ ಸುಮೂಹೂರ್ತದಲ್ಲಿ ಯತಿಗಳಿಗೆ ರಥವನ್ನು ಅರ್ಪಿಸಿದರು.

ಶ್ಲೋಕ:– **ರಾಜ್ಞಾ ಸಹ ಯತೀಂದ್ರೋಽಸೌ ತ್ರಿವಿಕ್ರಮಮುದಾರಧೀಃ ।**
ಪ್ರಾತಿಷ್ಠಿಪದ್ರಥೇ ತತ್ರ ದೇವಸ್ಯಾಗಾರಮಧ್ಯಗೇ ॥44॥

ಅರ್ಥ:– ಉದಾರಬುದ್ಧಿಯುಳ್ಳ ಯತಿ ಶ್ರೇಷ್ಠರಾದ ಶ್ರೀ ವಾದಿರಾಜರು ರಾಜನೊಂದಿಗೆ ಆ ದೇವಾಲಯದ ಮಧ್ಯೆ ರಥದಲ್ಲಿ ತ್ರಿವಿಕ್ರಮ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿದರು.

ಶ್ಲೋಕ:– **ಹಯಗ್ರೀವಸಮುದ್ರಸ್ಯ ನಿಕಟೇ ಶ್ರಿಯಮಾದರಾತ್ ।**
ಸೋಽಯಂ ತ್ರಿವಿಕ್ರಮರಥಸ್ತ್ರಿಚಕ್ರೋಽದ್ಯಾಪಿ ಶೋಭತೇ ॥45॥

ಅರ್ಥ:– ಹಯಗ್ರೀವ ಸಮುದ್ರದ ಸಮೀಪದಲ್ಲಿ ಶ್ರೀ ರಮಾದೇವಿಯರ ವಿಗ್ರಹವನ್ನು ಆದರದಿಂದ ಸ್ಥಾಪಿಸಿದರು. (ಈಗ ತ್ರಿವಿಕ್ರಮ ಗುಡಿಯಲ್ಲಿ ಇದೆ.) ಮೂರು ಚಕ್ರವುಳ್ಳ, ಆ ತ್ರಿವಿಕ್ರಮ ರಥವು ಈಗಲೂ ಶೋಭಿಸುತ್ತದೆ.

ಶ್ಲೋಕ:– **ತ್ರಿವಿಕ್ರಮಸ್ತಸ್ಯ ಮಧ್ಯೇ ಸಿತೋಪಲಮಯಃ ಶುಭಃ ।**
ಭಕ್ತಾನುಗ್ರಹದಾತಾಽಸೌ ಯತಿಭಿಃ ಪೂಜ್ಯತೇಽಧುನಾ ॥46॥

ಅರ್ಥ:– ಆ ರಥದೊಳಗೆ ಶುಭಕರವಾದ, ಭಕ್ತರನ್ನು ಅನುಗ್ರಹಿಸುವ ಶ್ವೇತ ಶಿಲಾಮಯನಾದ ತ್ರಿವಿಕ್ರಮನು ಈಗಲೂ ಯತಿಗಳಿಂದ ಪೂಜಿಸಲ್ಪಡುತ್ತಿದ್ದಾನೆ.

ಶ್ಲೋಕ:– **ದೇವಾಲಯೋತ್ತರೇ ಭಾಗೇ ನಿರ್ಮಮೇ ಸ ಸರೋವರಮ್ ।**
ಯೋಽಸೌ ಧವಲಗಂಗಾಖ್ಯೋ ಗಂಗಾಸಾನ್ನಿಧ್ಯಪಾತ್ರತಃ ॥47॥

ಅರ್ಥ:– ತ್ರಿವಿಕ್ರಮ ದೇವಾಲಯದ ಉತ್ತರದಿಕ್ಕಿನಲ್ಲಿ ಗಂಗಾಸನ್ನಿಧಾನಕ್ಕೆ ಪಾತ್ರಳಾದ (ಅಂದರೆ ಸನ್ನಿಧಾನವುಳ್ಳ) ಧವಳಗಂಗಾ ಎಂಬ ಹೆಸರಿನ ಸರೋವರವನ್ನು ನಿರ್ಮಾಣ ಮಾಡಿದರು.

ಶ್ಲೋಕ:– **ತತ್ತೀರೇ ವೇಣುಗೋಪಾಲಂ ಹನೂಮಂತಂ ಶಿವಂ ಪುನಃ ।**
ಸ್ಥಾಪಯಾಮಾಸ ಭಕ್ತನಾಂ ಸೇವನಾಯ ಯತೀಶ್ವರಃ ॥48॥

ಅರ್ಥ:– ಭಕ್ತರುಗಳು ಸೇವಿಸಲು ವೇಣುಗೋಪಾಲ ಹನುಮಂತ ಮತ್ತು ಶಿವನನ್ನು ಆ ಸರೋವರದ ತೀರದಲ್ಲಿ ಯತೀಶ್ವರರಾದ ವಾದಿರಾಜರು ಸ್ಥಾಪಿಸಿದರು.

ಶ್ಲೋಕ:– **ಪೂರ್ವಭಾಗೇ ವ್ಯಾಸದೇವಂ ಜಟಾಮಂಡಲಭಾಸಿತಮ್ ।**
ಪ್ರತಿಷ್ಠಾಪ್ಯ ಪರೋ ಹಂಸಃ ಕೃತಕೃತ್ಯೋಽಭವನ್ಮುದಾ ॥49॥

ಅರ್ಥ:– (ಸರೋವರದ) ಪೂರ್ವದಿಕ್ಕಿನಲ್ಲಿ ಜಟಾಮಂಡಲದಿಂದ ಶೋಭಿಸುವ ವ್ಯಾಸ ದೇವರನ್ನು ಪ್ರತಿಷ್ಠಾಪಿಸಿ ಕೃತಕೃತ್ಯರಾದ ಪರಮಹಂಸರಾದ ವಾದಿರಾಜರು ಸಂತೋಷಪಟ್ಟರು.

ಶ್ಲೋಕ:– **ಪ್ರತಿವರ್ಷಂ ಫಾಲ್ಗುನೇಽಥ ಪೌರ್ಣಮಾಸ್ಯಾಂ ಮಹೋತ್ಸವಃ ।**
ಸಪ್ತೋತ್ಸವಕ್ರಮಾತ್ಕಾರ್ಯ ಇತ್ಯಾಜ್ಞಾಪಿತವಾನ್ಮುನಿಃ ॥50॥

ಅರ್ಥ:– ಅನಂತರ ಪ್ರತಿವರ್ಷ ಫಾಲ್ಗುಣ ಮಾಸ ಹುಣ್ಣಿಮೆಯ ದಿವಸ, ಸಪ್ತೋತ್ಸವ ಕ್ರಮದಲ್ಲಿ ಮಹೋತ್ಸವವನ್ನು ಆಚರಿಸಬೇಕೆಂದು ವಾದಿರಾಜ ಮುನಿಗಳು ಆಜ್ಞಾಪಿಸಿದರು.

ಶ್ಲೋಕ:– **ಏವಂ ಶ್ರೀಕೃಷ್ಣದೇವಸ್ಯ ಪರ್ಯಾಯಾರ್ಚನಮಂಜಸಾ ।**
ಚತುರ್ವಾರಮನುಷ್ಠಾಪ್ಯ ಸಜ್ಜನಾನುದ್ಧರನ್ ಬಭೌ ॥51॥

ಅರ್ಥ:– (ಶ್ರೀ ವಾದಿರಾಜರು) ಶ್ರೀಕೃಷ್ಣದೇವರ ಪರ್ಯಾಯ ಪೂಜೆಯನ್ನು ನಾಲ್ಕುಸಲ ಚೆನ್ನಾಗಿ ಮಾಡಿ, ಸಜ್ಜನರನ್ನು ಉದ್ಧರಿಸುತ್ತಾ ಇದ್ದರು.

ಶ್ಲೋಕ:– **ತಚ್ಛಿಷ್ಯೋ ವೇದವೇದ್ಯಾಖ್ಯೋ ವೃದ್ಧೋ ಭೂತ್ವಾತ್ವಖಿದ್ಯತ ।**
ಪರ್ಯಾಯಪೂಜಾ ನ ಮಮೇತ್ಯಂತರಂಗವಿದಾಂ ವರಃ ॥52॥
ವಾದಿರಾಜಃ ಸ್ವಶಿಷ್ಯಂ ತಂ ಪರ್ಯಾಯೇ ಪಂಚಮೇಽತ್ರ ಹಿ ।
ತ್ವಾಮಾವಿಶ್ಯಾಚರಿಷ್ಯಾಮಿ ಬಹಿಸ್ಸೋದಾಪುರೇ ಸ್ಥಿತಃ ॥53॥

ಇತ್ಯಾಜ್ಞಾಪ್ಯಾಗತಸ್ಸೋದಾಂ ವೇಣುಗೋಪಾಲಮರ್ಚಯನ್ ।
ಉಭಯತ್ರ ಸ್ವ ಪರ್ಯಾಯಪೂಜಾಂ ಸ ಕೃತವಾನ್ ಕಿಲ ॥54॥

ಅರ್ಥ:– ಶ್ರೀ ವಾದಿರಾಜರ ಶಿಷ್ಯರಾದ ಶ್ರೀ ವೇದ ವೇದ್ಯರೆಂಬುವರು ವೃದ್ಧರಾಗಿ ತನಗೆ ಪರ್ಯಾಯ ಪೂಜಾ (ಭಾಗ್ಯ)ವಿಲ್ಲವೆಂದು ದುಃಖಿತರಾದರು. ಅಂತರಂಗವನ್ನು ತಿಳಿಯುವರಲ್ಲಿ ಶ್ರೇಷ್ಠರಾದ ವಾದಿರಾಜರು, ಶಿಷ್ಯರನ್ನು ಉಡುಪಿಯಲ್ಲಿ ಐದನೆಯ ಪರ್ಯಾಯ ಪೂಜೆಗೆ ಆಜ್ಞಾಪಿಸಿ, ತಾನು ಬಾಹ್ಯದಲ್ಲಿ ಸೋದಾಪುರಿಯಲ್ಲಿ ಸ್ಥಿತನಾಗಿ, ಹಾಗೆಯೇ ಆ ಶಿಷ್ಯರಲ್ಲಿ ಆವಿಷ್ಟನಾಗಿದ್ದು (ಪರ್ಯಾಯ ಪೂಜೆಯನ್ನು) ಮಾಡುವನೆಂದು ಸೋದಾಪುರಿಗೆ ಬಂದು ವೇಣುಗೋಪಾಲಮೂರ್ತಿಯನ್ನು ಅರ್ಚಿಸುತ್ತಾ ಉಭಯತ್ರ (ಉಡುಪಿ ಮತ್ತು ಸೋದಾಪುರಿಯಲ್ಲಿ) ತನ್ನ ಪರ್ಯಾಯ ಪೂಜೆಯನ್ನು ನೆರವೇರಿಸಿದರು.

ಶ್ಲೋಕ:– **ಕೃಷ್ಣಪರ್ಯಾಯೋತ್ಸವಾರ್ಥಂ ಯಿಯಾಸುರ್ಜನತಾ ಕಿಲ ।**
ಸ್ವಪ್ನಸೂಚಿತಮಹಾತ್ಮ್ಯಾಸೋದಾಮೇತ್ಯಾಭಜದ್ಗುರುಮ್ ॥55॥

ಅರ್ಥ:– ಶ್ರೀ ಕೃಷ್ಣಪರ್ಯಾಯೋತ್ಸವಕ್ಕೆ ಹೋಗಲಿಚ್ಛಿಸಿದ ಸಜ್ಜನರಿಗೆ ಸ್ವಪ್ನದಲ್ಲಿ ಈ ಮಹಾತ್ಮೆಯು ಸೂಚಿತವಾಗಿ (ಅವರುಗಳು) ಸೋದಾಪುರಿಗೆ ಹೋಗಿ ಗುರುಗಳನ್ನು ಸೇವಿಸಿದರು.

ಶ್ಲೋಕ:– **ಅಶ್ವತ್ಥಚೂತಪನಸಾಮ್ಲಸುನಾರಿಕೇಲ**
ಧಾತ್ರೀಕ್ಷುದಂಡಕದಲೀವನಮಧ್ಯಗಾ ಯಾ।
ವೃಂದಾವನಾಷ್ಟಕಪಿನಾಕಿಹನೂಮತಾಂ ಚ
ಮಧ್ಯೇಸ್ಥಿತಾ ತು ಧವಲೇತಿ ಸುದಿವ್ಯನಾಮ್ನೀ ॥
ನ್ಯಧಾದಷ್ಟತಸ್ನನ್ಯಾಂಸ್ತ ಇತ್ಯಾಖ್ಯಾನೇ ಪ್ರಕೀರ್ತಿತಾಃ ।
ಇತಿ ಭಾವಿಸಮೀರೋಽಸೌ ವಾದಿರಾಜೋಽದ್ಭುತಕ್ರಿಯಃ ॥56॥

ಅರ್ಥ:– ಅಶ್ವತ್ಥ, ಮಾವು, ಹಲಸು, ಹುಣಸೆ, ತೆಂಗು, ನೆಲ್ಲಿ, ಕಬ್ಬು, ಬಾಳೆ, ವನಗಳ ಮಧ್ಯದಲ್ಲೂ ಎಂಟು ತುಳಸಿ ವೃಂದಾವನ ರುದ್ರ ದೇವರು ಹನುಮಂತದೇವರು, ಇವರ ಮಧ್ಯದಲ್ಲೂ ಧವಳ (ಗಂಗಾ) ಎನ್ನುವ ದಿವ್ಯವಾದ ಹೆಸರುಳ್ಳ (ಸರೋವರ) ಮತ್ತು ಅಷ್ಟಕಗಳಿಂದ ಬೇರೆಯಾದುದನ್ನು ಸ್ಥಾಪಿಸಿದರು. ಈ ರೀತಿಯಾಗಿ ಸ್ವಾಪ್ನ ವೃಂದಾದನಖ್ಯಾನದಲ್ಲಿ ಉಕ್ತವಾಗಿದೆ.

ಟಿಪ್ಪಣಿ:– ಅಶ್ವತ್ಥ, ಮಾವು, ಹಲಸು, ಹುಣಸೆ, ತೆಂಗು, ನೆಲ್ಲಿ, ಕಬ್ಬು, ಬಾಳೆ,–ಎಂಟು ತುಳಸಿ ವೃಂದಾವನ ಎಂಟು, ವೇಣುಗೋಪಾಲ, ರುದ್ರ, ಹನುಮಂತ, ಧವಳಗಂಗಾ ವೇದವ್ಯಾಸ, ಭೂತರಾಜರು, ಪಾಪನಾಶಿನಿ, ಪಂಚವೃಂದಾವನಸ್ಥ ತ್ರಿವಿಕ್ರಮ ದೇವರು ಮೇಲು ಭಾಗದಲ್ಲಿ.

ಶ್ಲೋಕ:– **ಲೋಕಾನುಗ್ರಹಮಾತೇನೇ ಶ್ರೀಮಧ್ವಮತವರ್ಧಕಃ ।**
ಅಮೋಘಬಹುಲಗ್ರಂಥೈಃ ಶತಾಧಿಕಸುಸಂಖ್ಯಯಾ ॥57॥

ಅರ್ಥ:– ಹೀಗೆ ಅದ್ಭುತ ಕಾರ್ಯಗಳನ್ನು ಮಾಡಿದ, ಭಾವೀ ಸಮೀರರಾದ ಮಧ್ವಮತ ವರ್ಧಕರಾದ ಶ್ರೀ ವಾದಿರಾಜರು (ತಾವು ರಚಿಸಿದ) ನೂರಕ್ಕಿಂತಲೂ ಅಧಿಕವಾದ ಅಮೋಘವಾದ ಬಹು ಗ್ರಂಥಗಳಿಂದ ಲೋಕಾನುಗ್ರಹವನ್ನು ಮಾಡಿದರು.

ಶ್ಲೋಕ:– **ಅಮಾನುಷಕ್ರಿಯಾಭಿಶ್ಚ ಲೋಕೋಪಕೃತಿಭಿರ್ಯತಿಃ ।**
ಮಧ್ವಸ್ಯ ಗುರುಸಮ್ರಾಜೋ ಯುವರಾಜಾಯಿತಃ ಕೃತೀ ॥58॥

ಅರ್ಥ:– ಅಮಾನುಷ ಲೀಲೆಯಿಂದಲೂ, ಲೋಕೋಪಕಾರಕ ಕಾರ್ಯದಿಂದಲೂ ಜ್ಞಾನಿಗಳಾದ ಯತಿ ವಾದಿರಾಜರು ಮಧ್ವಗುರುಗಳ ಸಾಮ್ರಾಜ್ಯದಲ್ಲಿ ಯುವರಾಜರಂತೆ ಕಂಗೊಳಿಸಿದರು.

ಶ್ಲೋಕ:– **ಸ್ವಾವತಾರಕ್ರಿಯಾಪೂರ್ತಿರಾಸೀದಿತಿ ವಿಚಿಂತಯನ್ ।**
ಪಂಚವೃಂದಾವನಂ ಮತ್ಸ್ಯಕೂರ್ಮಾದ್ಯಾಕೃತಿಶೋಭಿತಮ್ ॥59॥
ಹನುಮದ್ಭೀಮಮಧ್ವಾತ್ಮಚತುರಾಕೃತಿಸುಂದರಮ್ ।
ಉಪರಿಷ್ಟಾದ್ಧಯಗ್ರೀವ ಮೂರ್ತಿರಾಜಿತಮುನ್ನತಮ್ ॥60॥
ಕಾರಯಿತ್ವಾಽಗಾರಮಧ್ಯೇ ಪಶ್ಚಿಮೇ ವ್ಯಾಸಸನ್ಮುಖೇ

ಅರ್ಥ:– ತಮ್ಮ ಅವತಾರಕಾರ್ಯ ಪೂರ್ತಿಯಾಯಿತೆಂದು ಆಲೋಚಿಸಿ, ಮತ್ಸ್ಯಕೂರ್ಮಾದಿ ಆಕೃತಿಗಳಿಂದ ಶೋಭಿತವಾದ (ನಾಲ್ಕು ಉಪವೃಂದಾವನಗಳನ್ನೂ) ಹನುಮ, ಭೀಮ, ಮಧ್ವ ಮತ್ತು ತಮ್ಮ ನಾಲ್ಕು ಆಕೃತಿಗಳಿಂದ (ಮತ್ತು

ಮುಂಭಾಗದ) ಮೇಲ್ಭಾಗದಲ್ಲಿ ಹಯಗ್ರೀವ ಮೂರ್ತಿಯಿಂದ ಅಲಂಕೃತವಾದ ಸುಂದರವಾದ ಎತ್ತರವಾದ (ವೃಂದಾವನ–ಹೀಗೆ) ಪಂಚವೃಂದಾವನವನ್ನು ಮಾಡಿಸಿ ಗುಡಿಯ ಮಧ್ಯಭಾಗದಲ್ಲಿ ಪಶ್ಚಿಮ ದಿಕ್ಕಿನಲ್ಲಿ ವೇದವ್ಯಾಸರ ಎದುರಿಗೆ ಸ್ಥಾಪಿಸಿದರು.

ಶ್ಲೋಕ:– ಪಂಚವೃಂದಾವನಸ್ಯಾಥ ಭೂತರಾಜಂ ಚ ದಕ್ಷಿಣೇ ॥61॥
ತ್ರಿವಿಕ್ರಮಸ್ಯ ಚೈಶಾನ್ಯಾಂ ಕ್ಷೇತ್ರಪಾಲಸ್ಥಲೇ ಪುನಃ ।
ಭೂತರಾಜಂ ಪ್ರತಿಷ್ಠಾಪ್ಯ ತ್ರಿವಿಕ್ರಮರಥೋತ್ಸವಮ್ ॥62॥
ಕಾರಯನ್ ಸ್ವೇಷ್ಟವೇತ್ತ್ರಾ ತು ಶಕ್ರೇಣ ಪ್ರೇಷಿತಂ ಶುಭಮ್ ।
ವಿಮಾನಂ ಪಿಪ್ಪಲಸ್ಯಾಗ್ರೇ ತಿಷ್ಠತ್ವಾಂತಂ ಮಹಸ್ಯ ಹಿ ॥63॥
ಮಹೋತ್ಸವಂ ಸಮಾಪ್ಯಾಥ ಭಕ್ತಾನಾಮಕ್ಷತಾನ್ ದದತ್ ।

ಅರ್ಥ:– ಭೂತರಾಜರನ್ನು ವೃಂದಾವನದ ದಕ್ಷಿಣ ದಿಕ್ಕಿನಲ್ಲಿ (ಸ್ಥಾಪಿಸಿ) ಪುನಃ ಭೂತರಾಜನ್ನು ತ್ರಿವಿಕ್ರಮ ದೇವರ ಈಶಾನ್ಯ ದಿಕ್ಕಿನಲ್ಲಿ ಕ್ಷೇತ್ರಪಾಲನ ಸ್ಥಳದಲ್ಲಿ ಸ್ಥಾಪಿಸಿದರು. ತ್ರಿವಿಕ್ರಮ ರಥೋತ್ಸವನ್ನು ನೆರವೇರಿಸುತ್ತಾ, ತನಗೆ ಇಷ್ಟವಾದುದನ್ನೇ ತಿಳಿದ ಇಂದ್ರನಿಂದ ಕಳುಹಿಸಲ್ಪಟ್ಟ ಶುಭವಾದ ವಿಮಾನವನ್ನು ಅಶ್ವತ್ಥ ವೃಕ್ಷದ ಮೇಲ್ಭಾಗದಲ್ಲಿ ನಿಲ್ಲಿಸಿದರು. ಸಂತೋಷಕಾರ್ಯದ ಕೊನೆಯಲ್ಲಿ ತ್ರಿವಿಕ್ರಮ ಮಹೋತ್ಸವನ್ನು ಮುಗಿಸಿ. ಭಕ್ತರಿಗೆ ಮಂತ್ರಾಕ್ಷತೆಯನ್ನು ಕೊಟ್ಟರು.

ಶ್ಲೋಕ:– ಮಧ್ಯವೃಂದಾವನಸ್ಯಾಂತಃ ಪ್ರವಿಶ್ಯ ಜಪತೋ ಮಮ ॥64॥
ಯದಾ ಹಸ್ತಾದಕ್ಷಮಾಲಾ ಪತೇದಗ್ರಶಿಲಾ ಶುಭಾ ।
ಆಚ್ಛಾದ್ಯತಾಮಿತಿ ಸ್ವೀಯಾನಾಜ್ಞಾಪ್ಯ ಪ್ರಾತರಂಜಸಾ ॥65॥
ಸಂಪೂಜ್ಯಾಶ್ವಾಸ್ಯಮಾನಮ್ಯ ತದ್ವೃಂದಾವನಮಧ್ಯಗಃ ।
ಜಪನ್ ಸ್ಥಿತೋಽಥ ತದ್ಧಸ್ತಾಜ್ಜಪಮಾಲಾ ಪಪಾತ ಹಿ ॥66॥
ಆಚ್ಛಾದಿತೇಽಗ್ರಪಾಷಾಣೇ ಗಗನೇ ಘಂಟಕಾಧ್ವನಿಮ್ ।
ಶೃಣ್ವಂತೋ ದದೃಶುರ್ಭಕ್ತಾ ಮಿಮಾನಸ್ಥಮೃಜೂತ್ತಮಮ್ ॥67॥

ಅರ್ಥ:– ಮಧ್ಯದಲ್ಲಿರುವ ವೃಂದಾವನದೊಳಗೆ ಪ್ರವೇಶಿಸಿ ಜಪಮಾಡುವ ನನ್ನ ಕೈಯಲ್ಲಿರುವ ಅಕ್ಷಮಾಲೆಯು ಬಿದ್ದ ಕೂಡಲೇ (ವೃಂದಾವನದ) ಅಗ್ರಭಾಗವನ್ನು ಉತ್ತಮವಾದ ಶಿಲೆಯಿಂದ ಮುಚ್ಚತಕ್ಕದ್ದು ಎಂದು ತಮ್ಮವರಿಗೆ ಆಜ್ಞಾಪಿಸಿ ಪ್ರಾತಃಕಾಲದಲ್ಲಿ ಹಯಗ್ರೀವ ದೇವರನ್ನು ಅತಿಶಯವಾಗಿ ಪೂಜಿಸಿ ನಮಸ್ಕರಿಸಿ ಆ ವೃಂದಾವನದ ಮಧ್ಯಭಾಗದ ಲ್ಲಿರುವವರಾಗಿ ಜಪಮಾಡುತ್ತ ಕುಳಿತುಕೊಂಡರು. ಜಪಮಾಲೆಯು ಬಿದ್ದಿತು. (ವೃಂದಾವನದ) ಅಗ್ರಭಾಗವನ್ನು ಶಿಲೆಯಿಂದ ಮುಚ್ಚಿದ ಕೂಡಲೇ ಆಕಾಶದಿಂದ (ಬರುತ್ತಿದ್ದ) ಘಂಟೆ ಶಬ್ಧವನ್ನು ಕೇಳಿದ ಭಕ್ತರು ವಿಮಾನದಲ್ಲಿ ಸ್ಥಿತರಾದ ಉತ್ತಮ ಋಜುಗಳಾದ ವಾದಿರಾಜರನ್ನು ದರ್ಶನ ಮಾಡಿದರು.

ಶ್ಲೋಕ:– ಕರುಣಾಲೋ ನ ಮುಂಚಾಸ್ಮಾನ್ ಪದಭಕ್ತಾನನಾಥಕಾನ್ ।
ಕಾ ಗತಿರ್ನ ಇತಿ ಪ್ರೋಚ್ಚೈರಾಕ್ರಂದನಪರಾನ್ ಸ್ವಕಾನ್ ॥68॥
ಆಶ್ವಾಸಯನ್ ಸ್ವೀಯಶಾಟೀಂ ಪಾದುಕೇ ಚ ಹಿರಣ್ಮಯೇ ।
ಅಧಃ ಪ್ರಕ್ಷಿಪ್ಯ ಮಾ ಭೈಷ್ಟ ಮಧ್ವೃಂದಾವನಗಸ್ತ್ವ ಹಮ್ ॥69॥
ಏಕಾಂಶೇನೇಷ್ಟದಾತಾಽಸ್ಮೀತ್ಯುಕ್ತ್ವಾಽಗಾತ್ಸ ಸುರಾಲಯಮ್ ।
ಭಕ್ತಾಃ ಶಾಟೀಂ ಪಾದುಕೇ ಚ ಪೂಜಯಾಮಾಸುರಾದರಾತ್ ॥70॥

ಅರ್ಥ:– **"**ಹೇ ದಯಾಲುವೇ! ನಿಮ್ಮ ಪಾದ ಭಕ್ತರಾದ ನಮ್ಮನ್ನು ಬಿಡಬೇಡಿರಿ ನಮಗೆ ಗತಿ ಏನು?**"** ಎಂದು ಉಚ್ಚಸ್ವರದಿಂದ ಆಕ್ರಂದನ ಮಾಡಿದರು.

ತಮ್ಮವರಿಗೆ ಆಶ್ವಾಸನೆನ್ನೀಯುತ್ತಾ ತನ್ನ ಕಾವಿಶಾಟಿ ಮತ್ತು ಹಿರಣ್ಮಯವಾದ ಪಾದುಕೆಯನ್ನು ಕೆಳಗೆ ಹಾಕಿ, **"**ಹೆದರಬೇಡಿ, ಒಂದು ಅಂಶದಿಂದ ನನ್ನ ವೃಂದಾವನದಲ್ಲಿದ್ದು ಅಭೀಷ್ಟವನ್ನು ಪೂರೈಸುವೆನು**"** ಎಂದು ಹೇಳಿ ದೇವಲೋಕಕ್ಕೆ ಹೋದರು. ಭಕ್ತರು ಕಾವಿಶಾಟಿಯನ್ನು ಮತ್ತು ಪಾದುಕೆಯನ್ನು ಭಕ್ತಿಯಿಂದ ಪೂಜಿಸಿದರು.

ಶ್ಲೋಕ:– ಶತೇವಿಂಶತ್ಯುತ್ತರೇ ತು ವತ್ಸರಾಣಾಂ ಮಹೀತಲೇ ।
ವಾದಿರಾಜೋಽವಸದ್ದೃಶ್ಯೋ ಮಧ್ವಸಿದ್ಧಾಂತವೃದ್ಧಯೇ ॥71॥

ಅರ್ಥ:– ಮಧ್ವ ಸಿದ್ಧಾಂತದ ಅಭ್ಯುದಯಕ್ಕಾಗಿ ಭೂಮಿಯಲ್ಲಿ ಶ್ರೀವಾದಿರಾಜರು ನೂರಾ ಇಪ್ಪತ್ತು ವರ್ಷಗಳ ಕಾಲ ದೃಷ್ಟಿಗೋಚರರಾಗಿ ವಾಸಿಸಿದರು.

ಶ್ಲೋಕ:– **ಸ್ವಸ್ತಿ ಶ್ರೀ ಜಯ ಶಾಲಿವಾಹನಶಕೆ ಸಾರ್ಧಾತ್ಸಹಸ್ರಾತ್ಪರಂ**
ದ್ವಾವಿಂಶೇ ಶರದಾಂಗತೇ ಪ್ರಭವತಿ ಶ್ರೀ ಶಾರ್ವರೀವತ್ಸರೇ ।
ಮಾಸೇ ಫಾಲ್ಗುನಿಕೇ ಸಿತೇತರತೃತೀಯಾಯಾಂ ತಿಥೌ ವಿದ್ದಿನೇ
ಸ್ವಾತಿಹರ್ಷಣಸಂಯುತೇ ಹರಿಪದಂ ಶ್ರೀವಾದಿರಾಜೋಽಗಮತ್ ॥72॥

ಅರ್ಥ:– ಸ್ವಸ್ತಿ ಶ್ರೀ ಶಾಲಿವಾಹನ ಶಕೆಯಲ್ಲಿ 1522 ವರ್ಷಗಳು ಕಳೆಯಲು, ಶ್ರೀ ಶಾರ್ವರೀ ಸಂವತ್ಸರವು ಪ್ರಾರಂಭವಾಗಲು ಪಾಲ್ಗುಣಮಾಸ ಕೃಷ್ಣ ಪಕ್ಷ ತೃತೀಯ ತಿಥಿ, ಸ್ವಾತಿ ನಕ್ಷತ್ರ, ಹರ್ಷಣಯೋಗದಿಂದ ಕೂಡಿದ ಬುಧವಾರ ಹರಿಪಾದವನ್ನು ಶ್ರೀವಾದಿರಾಜರು ಸೇರಿದರು.

ಶ್ಲೋಕ:– **ಇತಿ ಶ್ರೀ ವೇದನಿಧಿತೀರ್ಥಾಂತೇವಾಸಿ ಶ್ರೀರಾಮಚಂದ್ರಾಚಾರ್ಯವಿರಚಿತೇ**
ಶ್ರೀ ವಾದಿರಾಜಗುರುವರಚರಿತಾಮೃತೇ ಷಷ್ಠಬಿಂದುಃ ಸಮಾಪ್ತಃ ।

ಅರ್ಥ:– ಇಲ್ಲಿಗೆ ಶ್ರೀ ವೇದನಿಧಿತೀರ್ಥರ ವಿದ್ಯಾಶಿಷ್ಯರಾದ ರಾಮಚಂದ್ರಾಚಾರ್ಯ ರಿಂದ ವಿರಚಿತವಾದ ಶ್ರೀ ವಾದಿರಾಜ ಗುರುವರ ಚರಿತಾಮೃತದಲ್ಲಿ ಆರನೆಯ ಬಿಂದು ಮುಗಿಯಿತು.

॥ ಸಪ್ತಮ ಬಿಂದುಃ ॥

ಶ್ಲೋಕ:– **ಸಾಕ್ಷಾಚ್ಛಿಷ್ಯೋ ವೇದವೇದ್ಯಃ ಪಶ್ಚಾದ್ದರ್ಶನಭಾಷಣೇ ।**
ಸ್ವಗುರೋಃ ಕಾಂಕ್ಷಮಾಣಃ ಸನ್ನಿತ್ಯಸೇವಪರೋಽಭವತ್ ॥1॥

ಅರ್ಥ:– (ವಾದಿರಾಜರು ವೃಂದಾವನ ಪ್ರವೇಶ ಮಾಡಿದ) ನಂತರ ಸಾಕ್ಷಾತ್ ಶಿಷ್ಯರಾದ ವೇದವೇದ್ಯರು ತಮ್ಮ ಗುರುಗಳ ದರ್ಶನ ಮತ್ತು ಸಂಭಾಷಣ ನಡೆಸಬೇಕೆಂಬ ಅಪೇಕ್ಷೆಯುಳ್ಳವರಾಗಿ ಪ್ರತಿದಿನ ಸೇವಾಮಾಡುವವರಾದರು.

ಶ್ಲೋಕ:– **ಉಭಯಂ ದುರ್ಲಭಂ ತ್ವೇಕಂ ದಾಸ್ಯಾಮೀತಿ ಪ್ರಭೋಧಿತಃ ।**
ಸ್ವಪ್ನೇ ದರ್ಶನಮೈಚ್ಛತ್ಸ ವೃಂದಾವನ ಪುರೋಗತಃ ॥2॥

ಅರ್ಥ:– (ದರ್ಶನ ಹಾಗೂ ಸಂಭಾಷಣೆ) ಎರಡೂ ಸಾಧ್ಯವಿಲ್ಲ ಆದರೆ ಒಂದನ್ನು ಕೊಡುವೆನು ಎಂಬುದಾಗಿ ಸ್ವಪ್ನದ ಲ್ಲಿ (ಗುರುಗಳಿಂದ) ತಿಳಿಸಲ್ಪಟ್ಟರು. ವೇದವೇದ್ಯರು ದರ್ಶನ ಪಡೆಯಲು ಅಪೇಕ್ಷೆಯುಳ್ಳವರಾಗಿ ವಾದಿರಾಜರ ವೃಂದಾವನದ ಮುಂದೆ ಹೋದರು.

ಶ್ಲೋಕ:– **ಭೂತರಾಜಾಪನೀತಾಯಾಂ ಶಿಲಾಯಾಮಗ್ರತೋ ಗುರುಮ್ ।**
ಧ್ಯಾನಾಸಕ್ತಂ ದಿವ್ಯತೇಜೋಮೂರ್ತಿಂ ಪರಮುದೈಕ್ಷತ ॥3॥
ಭಕ್ತ್ಯಾ ನಮನ್ ವಿವಕ್ಷುಃ ಸ ದದರ್ಶಾಗ್ರಾಶ್ಮಬಂಧನಮ್ ।

ಅರ್ಥ:– ಭೂತರಾಜರಿಂದ ಶಿಲೆಯು ಸರಿಸಲ್ಪಡಲು, ಮುಂದಿನಿಂದ, ಧ್ಯಾನಾಸಕ್ತರಾದ, ದಿವ್ಯ ತೇಜೋಮೂರ್ತಿಯಾದ ವಾದಿರಾಜರನ್ನು ಪರಮ ಸಂತೋಷದಿಂದ ನೋಡಿದರು. ಭಕ್ತಿಯಿಂದ ನಮಸ್ಕರಿಸುತ್ತಾ ಮಾತನಾಡಲು ಇಚ್ಛಿಸಿದಾಗ ಮುಂದುಗಡೆ ಕಲ್ಲು ಮುಚ್ಚಿರುವುದನ್ನು ಅವರು ನೋಡಿದರು.

ಶ್ಲೋಕ:– **ವೇದವೇದ್ಯಗುರೋಃ ಶಿಷ್ಯೋ ವೇದನಿಧ್ಯಾಖ್ಯಯೋಗಿರಾಟ್ ॥4॥**
ಯಂ ವದಂತಿ ಮಹಾಪ್ರಾಜ್ಞಾ ಗರುಡಸ್ಯಾಂಶಸಂಭವಮ್ ।
ಸುಪೌತ್ರನಿರ್ವಿಶೇಷಂ ತಂ ವಾದಿರಾಟ್ಪ್ರೇಮಭಾಜನಮ್ ॥5॥

ಅರ್ಥ:– ವೇದ–ನಿಧಿಯೆಂಬ ಯೋಗಿವರ್ಯರು ವೇದವೇದ್ಯ ಗುರುಗಳ ಶಿಷ್ಯರು. ಅವರು ಮಹಾಜ್ಞಾನಿಗಳು ಮತ್ತು ಗರುಡಾಂಶ ಸಂಭೂತರು ಎಂದು ಹೇಳುತ್ತಾರೆ. ಅವರು ವಾದಿರಾಜರ ಅತ್ಯಂತ ಪ್ರೀತಿಗೆ ಪಾತ್ರರಾಗಿದ್ದರು.

ಶ್ಲೋಕ:– **ಅಭ್ಯಂಗಪಾತ್ರಹೇತೋರ್ಹಿ ಸೋದಾಭೂಪಾಲಕಂ ಪುರಾ ।**
ಕಾರಾಯಾಂ ವಾಸಯಾಮಾಸ ಸ್ವಯಂ ರಾಜ್ಯಂ ಸ್ಮ ಪಾತಿ ಹಿ ॥6॥

ಅರ್ಥ:– ಹಿಂದೆ ಅಭ್ಯಂಗ ಪಾತ್ರೆಯ ನಿಮಿತ್ತದಿಂದ ಸೋದಾರಾಜನನ್ನು ಕಾರಾಗೃಹದಲ್ಲಿ ವಾಸಿಸುವಂತೆ ಮಾಡಿ ತಾವೇ ಸ್ವತಃ ರಾಜ್ಯಭಾರ ಮಾಡುತ್ತಿದ್ದರು.

ಶ್ಲೋಕ:– **ತಚ್ಛ್ರುತ್ವಾ ವಾದಿರಾಟ್ ಪ್ರಾಪ್ತಃ ವಿಮೋಚ್ಯ ನೃಪಮಾದರಾತ್ ।**
ಶಶಾಸ ಸ್ವಪ್ರಶಿಷ್ಯಂ ತು ಮೌಢ್ಯಾದ್ರಾಜ್ಯಪ್ರಶಾಸನಾತ್ ॥7॥

ಅರ್ಥ:– ಆ ವಿಷಯವನ್ನು ಕೇಳಿ ವಾದಿರಾಜರು ಸೋದಾಪುರಿಗೆ ಬಂದು ರಾಜನನ್ನು ಗೌರವದಿಂದ ಬಿಡುಗಡೆ ಮಾಡಿ, ಮೂಢತನದಿಂದ ರಾಜ್ಯವನ್ನಾಳಿದ ತಮ್ಮ ಪ್ರಶಿಷ್ಯನನ್ನು ಶಿಕ್ಷಿಸಿದರು.

ಶ್ಲೋಕ:– ಯದಘಂ ನರಕಾವಾಪ್ತಿಕಾರಣಂ ತತ್ಪ್ರಶಾಂತಯೇ ।
ಏಕವಿಂಶದ್ದಿನೇ ಹ್ಯತ್ರ ನರಕಾಯಿತಕುಂಡಕೇ ॥8॥
ವಸ್ತವ್ಯಂ ಭವತೇತ್ಯಾರ್ಯಶಾಸನಾದ್ಗುರುರಾಣ್ಮಮ ।
ಉವಾಸ ಕುಂಡಕೇ ತತ್ರ ಗುರ್ವಾಜ್ಞಾಗೌರವಾತ್ ಸ್ವಯಮ್ ॥9॥

ಅರ್ಥ:– (ರಾಜ್ಯವಾಳಿದ) ಪಾಪವು ನರಕವಾಸಕ್ಕೆ ಕಾರಣವು, ಅದರ ಪರಿಹಾರಕ್ಕೆ ಇಪ್ಪತ್ತೊಂದು ದಿನಗಳು ಇಲ್ಲಿ (ಸೋದಾಕ್ಷೇತ್ರದಲ್ಲಿ) ನರಕವನ್ನು ಅನುಭವಿಸುವ ಕುಂಡದಲ್ಲಿ ವಾಸಿಸಬೇಕು ಎನ್ನುವ ತಮ್ಮ ಪರಮ ಗುರುಗಳಾದ ಗುರುರಾಜರ ಶಾಸನದಂತೆ, ಗುರ್ವಾಜ್ಞೆಯನ್ನು ಗೌರವಿಸಲು ತಾವೇ ಆ ಕುಂಡದಲ್ಲಿ ವಾಸಿಸಿದರು.

ಶ್ಲೋಕ:– ತತೋ ಗುರುಪದಾರೂಢಃ ಶ್ರೀವೇದನಿಧಿಯೋಗಿರಾಟ್ ।
ಅತ್ಯುನ್ನತಂ ಧ್ವಜಸ್ತಂಭಂ ರಾಜಮಾನಂ ಶಿಲಾಮಯಮ್ ॥10॥
ಶ್ರೀವಾದಿರಾಜತೀರ್ಥಸ್ಯ ಕೀರ್ತಿಸ್ತಂಭಮಿವಾವನೌ ।
ಸ್ಥಾಪಯಾಮಾಸ ಪರಮಭಕ್ತ್ಯಾ ಲಕ್ಷ್ಮೀಪತೇಃ ಪುರಃ ॥11॥

ಅರ್ಥ:–ಅನಂತರ ಗುರುಪೀಠಾರೋಹಣ ಮಾಡಿದ ಶ್ರೀ ವೇದನಿಧಿ ಯೋಗಿವರ್ಯರು ಅತಿ ಎತ್ತರವಾದ, ಶಿಲಾಮಯವಾದ, ರಾಜ ಚಿಹ್ನೆಯಾದ, ಭೂಮಿಯಲ್ಲಿ ಶ್ರೀವಾದಿರಾಜರ ಕೀರ್ತಿಕಂಭರೂಪವಾದ ಸ್ತಂಭವನ್ನು ಲಕ್ಷ್ಮೀಪತಿಯಾದ ತ್ರಿವಿಕ್ರಮ ದೇವರ ಮುಂಭಾಗದಲ್ಲಿ ಬಹಳ ಭಕ್ತಿಯಿಂದ ಸ್ಥಾಪಿಸಿದರು.

ಶ್ಲೋಕ:– ಶಿಲಾಸ್ತಂಭೋಽಪತತ್ತತ್ರ ಸ್ಥಾಪಿತೋಽಪಿ ಪುನಃ ಪುನಃ ।
ಗುರುರಾಟ್ ಖಿನ್ನಹೃದಯೋ ವಾದಿರಾಜಮಥಾರ್ಥಯತ್ ॥12॥

ಅರ್ಥ:– ಅಲ್ಲಿ ಪುನಃ ಪುನಃ ಸ್ಥಾಪಿಸಲ್ಪಟ್ಟರೂ ಕೂಡ ಶಿಲಾಮಯವಾದ ಧ್ವಜಸ್ತಂಭವು ಬಿದ್ದಿತು. ಅದರಿಂದ ಖಿನ್ನ ಮನಸ್ಕರಾದ ವೇದನಿಧಿಗುರುಗಳು ವಾದಿರಾಜರನ್ನು ಪ್ರಾರ್ಥಿಸಿದರು.

ಶ್ಲೋಕ:– ತನ್ನಿಶಿ ಸ್ವಪ್ನಕೇ ವತ್ಸ ಹಂಸಾರೂಢಾಕೃತಿಂ ಮಮ ।
ಉತ್ಕೃತ್ಯಾಥ ಶಿಲಾಸ್ತಂಭೇ ನ್ಯಸೇಶ್ಚೇತ್ತಿಷ್ಠತಿ ಸ್ಥಿರಃ ॥13॥
ಇತಿ ಶ್ರೀವಾದಿರಾಜಾರ್ಯೈಃ ಪರಮೈರ್ಗುರುಭಿಃ ಸ್ಫುಟಮ್ ।
ಸೂಚಿತಾರ್ಥಸ್ತಥಾ ಚಕ್ರೇ ಸ್ತಂಭೋಽತಿಷ್ಠದವಿಘ್ನತಃ ॥14॥

ಅರ್ಥ:– ಆದಿನ ರಾತ್ರಿ (ವೇದನಿಧಿಗಳ) ಸ್ವಪ್ನದಲ್ಲಿ "ವತ್ಸ ! ಹಂಸರೂಢರಾದ ನನ್ನ ಆಕೃತಿಯನ್ನು ಶಿಲಾಸ್ತಂಭದ ಲ್ಲಿ ಕೆತ್ತಿಸಿದರೆ, ಅದು ಸ್ಥಿರವಾಗಿ ನಿಲ್ಲುವುದು" ಎಂದು ಪರಮಗುರುಗಳಾದ ವಾದಿರಾಜರಿಂದ ಸ್ಪಷ್ಟವಾಗಿ ಸೂಚಿತವಾಯಿತು, ಹಾಗೆಯೇಮಾಡಿಸಲು ಸ್ತಂಭವು ನಿರ್ವಿಘ್ನವಾಗಿ ಸ್ಥಾಪಿತವಾಯಿತು.

ಶ್ಲೋಕ:– ತ್ರಿವಿಕ್ರಮಾಗ್ರೇ ಸೋದಯಾಮದ್ಯಾಪಿ ಪರಿದೃಶ್ಯತೇ।
ಹಂಸಾರೂಢಲಸದ್ವಾದಿರಾಜಮೂರ್ತಿ : ಶಿಲಾಮಯಃ ॥ ೧೫ ॥

ಅರ್ಥ:– ಸೋದಾಕ್ಷೇತ್ರದಲ್ಲಿ ಈಗಲೂ ಕೂಡ ತ್ರಿವಿಕ್ರಮ ದೇವರ ಮುಂಭಾಗದಲ್ಲಿ ಶಿಲಾಮಯವಾದ ಶೋಭಿಸುವ ಹಂಸಾರೂಢ ವಾದಿರಾಜರ ಮೂರ್ತಿಯು (ಧ್ವಜಸ್ತಂಭದಲ್ಲಿ) ಚೆನ್ನಾಗಿ ಕಾಣುತ್ತದೆ.

ಶ್ಲೋಕ:– ಅಸ್ಮದ್ಗುರೌ ವೇದನಿಧೌ ಪ್ರಸಾದೋ ವಾದಿರಾಣ್ಮುನೇಃ ।
ಕಿಂ ವಕ್ತವ್ಯೋ ಯತೋಽಸ್ಮಾಭಿಃ ಪ್ರತ್ಯಕ್ಷೀಕೃತ ಏವ ಯತ್ ॥ ೧೬ ॥

ಅರ್ಥ:– ಪ್ರತ್ಯಕ್ಷವಾಗಿ ನೋಡಿದ ನನಗೆ ನನ್ನ ಗುರುಗಳಾದ ವೇದನಿಧಿಗಳ ಮೇಲೆ ವಾದಿರಾಜ ಮುನಿಗಳ ಅನುಗ್ರಹವು ಎಷ್ಟಿದೆ ಎಂದು ಏನು ಹೇಳಲಿ ? (ಅಂದರೆ ವರ್ಣಿಸಲಸಾಧ್ಯವಾದಷ್ಟು ಅನುಗ್ರಹವು ಇತ್ತೆಂದು ಭಾವ)

ಶ್ಲೋಕ:– ಏಡಮೂಕಂ ದ್ವಿಜಂ ಸ್ವಪ್ನೇ ಬೋಧಯನ್ನಾತ್ಮವೃತ್ತಕಮ್ ।
ಶ್ರೀಮದ್ವೃಂದಾವನಾಖ್ಯಾನಂ ಪಠತಾಂ ಸರ್ವಸಿದ್ಧಿದಮ್ ॥ ೧೭ ॥
ತೋಷಯನ್ ಸಜ್ಜನಮನಃ ಸ್ವಮಹಾತ್ಮ್ಯಾವಭೋಧಕಮ್ ।
ಮಂತ್ರತುಲ್ಯಂ ಮಹಾಗ್ರಂಥಂ ರಚಯಾಮಾಸ ವಾದಿರಾಟ್ ॥ ೧೮ ॥

ಅರ್ಥ :– ಕಿವುಡ ಮತ್ತು ಮೂಕ ಬ್ರಾಹ್ಮಣನಿಗೆ ಸ್ವಪ್ನದಲ್ಲಿ ಆತ್ಮವೃತ್ತಾಂತವನ್ನು ಬೋಧಿಸುತ್ತಾ ಪಠಿಸುವವರಿಗೆ ಸರ್ವಾಭೀಷ್ಟವನ್ನು ಕೊಡುವ, ಸಜ್ಜನರ ಮನಸ್ಸನ್ನು ಸಂತೋಷಪಡಿಸುವ ತಮ್ಮ ಮಹಾತ್ಮೆಯನ್ನು ತಿಳಿಸುವ, ಮಂತ್ರತುಲ್ಯವಾದ ಶ್ರೀ ಮದ್ವೃಂದಾವನಾಖ್ಯಾನವೆಂಬ ಮಹಾಗ್ರಂಥವನ್ನು ವಾದಿರಾಜರು ರಚಿಸಿದರು.

ಶ್ಲೋಕ:– ಪ್ರಾತಸ್ತದ್ವದನಾಚ್ಚಿತ್ರಂ ನಿಸ್ಸೃತಂ ಗುರುರಾಣ್ಮಮ ।
ಶ್ರೀವೇದನಿಧಿರಾಕರ್ಣ್ಯ ಲೇಖಯಾಮಾಸ ಮತ್ಕರಾತ್ ॥ ೧೯ ॥

ಅರ್ಥ:– ಪ್ರಾತಃಕಾಲದಲ್ಲಿ ಆಶ್ಚರ್ಯಕರವಾಗಿ (ಏಡಮೂಕ ವಿಪ್ರನ) ಮುಖದಿಂದ ಹೋರಬರುತ್ತಿದ್ದ (ಆಖ್ಯಾನ ಶ್ಲೋಕಗಳನ್ನು) ನನ್ನ ಗುರುಗಳಾದ ವೇದನಿಧಿಗಳು ಕೇಳಿ (ಅದನ್ನು) ನನ್ನ ಕೈಯಿಂದ ಬರೆಸುತ್ತಿದ್ದರು.

ಶ್ಲೋಕ:– ಸ್ವಪ್ನಜ್ಞಾತಂ ಗುರುಪ್ರೋಕ್ತಂ ಪ್ರಭಾತೇ ಕೀರ್ತಯನ್ ಜಡಃ ।
ತತಃ ಪರಂ ಮೂಕ ಏವ ಸಾಕ್ಷೀ ಚಾಹಂ ಚ ಮೇ ಗುರುಃ ॥ ೨೦ ॥

ಅರ್ಥ:– ಗುರುಗಳು ಹೇಳಿ ಸ್ವಪ್ನದಲ್ಲಿ ಕೇಳಿದುದನ್ನು ಜಡ ಸದೃಶ್ಯನಾದ (ಏಡ ಮೂಕ ವಿಪ್ರನು) ಬೆಳಿಗ್ಗೆ (ವೇದನಿಧಿಗಳಮುಂದೆ) ಹೇಳುತ್ತಿದ್ದುದ್ದು. ನಂತರದಲ್ಲಿ ಮೂಕನೇ ಆಗುತ್ತಿದ್ದನು. ಇದಕ್ಕೆ ನಾನು ಮತ್ತು ನನ್ನ ಗುರುಗಳೇ ಸಾಕ್ಷಿ.

ಶ್ಲೋಕ:– ಅಣುವೃಂದಾವನಾಖ್ಯಾನಂ ಶ್ರೀವೇದನಿಧಿಸದ್ಗುರುಃ ।
ಸ್ವಾಪ್ನವೃಂದಾವನಾಖ್ಯಾನಾತ್ಸಂಗೃಹ್ಯಾಲೇಖ್ಯ ಭಕ್ತಿತಃ ॥ ೨೧ ॥
ಲೇಖಯಿತ್ವಾ ಶಿಲಾಯಾಂ ಸ ವೃಂದಾವನತಟೇ ಬಹಿಃ ।
ಸ್ಥಾಪಯಾಮಾಸ ಭಕ್ತಾನಾಂ ನಿರಂತರಜಪಾಯ ಹಿ ॥ ೨೨ ॥

ಅರ್ಥ:– ಸ್ವಾಪ್ನ ವೃಂದಾವನಾಖ್ಯಾನದಿಂದ (೧೫ ಶ್ಲೋಕಗಳನ್ನು) ಸಂಗ್ರಹಿಸಿ (ತಮ್ಮ ಮೂರು ಶ್ಲೋಕಗಳಿಂದ) ಭಕ್ತಿಯಿಂದ ಬರೆದ ಅಣುವೃಂದಾವನಾಖ್ಯಾನವನ್ನು ಶ್ರೀ ವೇದನಿಧಿ ಸದ್ಗುರುಗಳು ಶಿಲೆಯಲ್ಲಿ ಕೆತ್ತಿಸಿ ವಾದಿರಾಜರ ವೃಂದಾವನದ ಸಮೀಪದಲ್ಲಿ ಹೊರಭಾಗದಲ್ಲಿ ಭಕ್ತರುಗಳು ನಿರಂತರವಾಗಿ ಪಠಿಸುವ ಸಲುವಾಗಿ ಸ್ಥಾಪಿಸಿದರು.

ಶ್ಲೋಕ:– ರಘುನಾಥಾಚಾರ್ಯನಾಮ್ನಾ ವಾದಿರಾಜಗುರೋಃ ಪುರಾ ।
ಶಿಷ್ಯೇಣ ರಚಿತೋ ಭಾತಿ ವೃತ್ತರತ್ನಸುಸಂಗ್ರಹಃ ॥ ೨೩ ॥

ಅರ್ಥ:– ವಾದಿರಾಜಗುರುಗಳ ಶಿಷ್ಯ ರಘುನಾಥಾಚಾರ್ಯರೆಂಬ ಹೆಸರಿನವರು ಹಿಂದೆ ರಚಿಸಿದ **"**ವೃತ್ತರತ್ನ ಸಂಗ್ರಹ**"** ಎಂಬ ಗ್ರಂಥವು ಪ್ರಸಿದ್ಧವಾಗಿದೆ.

ಶ್ಲೋಕ:– ಯತ್ರ ರತ್ನಾಭವೃತ್ತಾನಿ ವರ್ಣಿತಾನಿ ಸಭಕ್ತಿಕಮ್ ।
ಅವತಾರಕೃತಾನ್ಯದ್ಧಾ ವಾದಿರಾಜಮಹಾಮುನೇಃ ॥ ೨೪ ॥

ಅರ್ಥ:– ಅದರಲ್ಲಿ ವಾದಿರಾಜ ಮುನಿಗಳ ಅವತಾರ ಕಾಲದ ಕಾರ್ಯಗಳು ರತ್ನಗಳ ಪ್ರಕಾಶದಂತೆ, ವರ್ಣಗಳ ಜೋಡಣೆಯಿಂದ ಭಕ್ತಿಯಿಂದ ಚೆನ್ನಾಗಿ ವರ್ಣಿತವಾಗಿವೆ.

ಶ್ಲೋಕ:– ಸ್ವಾಪ್ನವೃಂದಾವನಾಖ್ಯಾನಂ ದಿವ್ಯಾದ್ಬುತಕಥಾಶ್ರಯಮ್ ।
ಪಠತಾಂ ಶೃಣ್ವತಾಂ ಚೈವ ಕಾಮಿತಪ್ರದಮಂಜಸಾ ॥ ೨೫ ॥

ಅರ್ಥ:– ದಿವ್ಯವೂ ಅದ್ಭುತವೂ ಆದ ಕಥಾವಸ್ತುವನ್ನೊಳಗೊಂಡ ಸ್ವಾಪ್ನ ವೃಂದಾವನಾಖ್ಯಾನವು ಪಠಿಸುವವರಿಗೆ ಹಾಗೂ ಕೇಳುವವರಿಗೆ ಇಷ್ಟಾರ್ಥವನ್ನು ಕೊಡುತ್ತದೆ.

ಶ್ಲೋಕ:– ಭೂತರಾಜಾವೇಕ್ಷಣಂ ಪ್ರಾಕ್ ಫಲದ್ವಯನಿವೇದನಮ್ ।
ತ್ರಿವಿಕ್ರಮಾವೇಕ್ಷಣಂ ಚ ಗಂಗಾಪಂಚಕಸೇವನಮ್ ॥ ೨೬ ॥
ಪಂಚವೃಂದಾವನಸ್ಯಾತ್ರ ಭಜನಂ ವ್ಯಾಸದರ್ಶನಮ್ ।
ಸ್ವಾಪ್ನವೃಂದಾವನಾಖ್ಯಾನಪಠನಂ ಸರ್ವಕಾಮದಮ್ ॥ ೨೭ ॥

ಅರ್ಥ:– ಮೊದಲು ಭೂತರಾಜರ ದರ್ಶನಮಾಡಿ ಎರಡು ತೆಂಗಿನಕಾಯಿಗಳ ಅರ್ಪಣೆ, ತ್ರಿವಿಕ್ರಮದೇವರದರ್ಶನ ಮತ್ತು ಪಂಚಗಂಗಾಸೇವನೆ, ಪಂಚವೃಂದಾವನದ ಸೇವೆ, ವೇದ ವ್ಯಾಸರ ದರ್ಶನ. ಸ್ವಾಪ್ನ ವೃಂದಾವನಾಖ್ಯಾನದ ಪಾರಾಯಣ ಇವು ಸರ್ವಾಭೀಷ್ಟಗಳನ್ನು ಕೊಡುವವು.

ಶ್ಲೋಕ:– ಯೇ ಪುತ್ರಧನಧಾನ್ಯಾದಿವೃದ್ಧಿಕಾಮಾಃ ಕಲೌಯುಗೇ ।
ರೋಗಗ್ರಹಪಿಶಾಚಾದಿಬಾಧಾನಾಶಸಮುತ್ಸುಕಾಃ ॥ ೨೮ ॥

ತೇ ಪ್ರಾತಃ ಶುದ್ಧಗಂಗಾಯಾಂ ಸ್ನಾತಾಃ ಸದ್ಗುರುಸೇವಕಾಃ ।
ವ್ಯಾಸಂ ತ್ರಿವಿಕ್ರಮಂ ಚೈವ ಪಂಚವೃಂದಾವನಂ ಗುರೋಃ ॥ ೨೯ ॥
ಅಶ್ವತ್ಥಂ ಚ ಹನೂಮಂತಂ ವೇಣುಗೋಪಾಲಕಂ ಶಿವಮ್ ।
ಪ್ರದಕ್ಷಿಣೀಕೃತ್ಯ ಪುನಃ ಪ್ರಣಮ್ಯ ಚ ಸಮಾದರಾತ್ ॥ ೩೦ ॥
ಅಷ್ಟೋತ್ತರಶತಂ ವಾಪಿ ತದರ್ಧಂ ವಾ ತದರ್ಧತಃ ।
ಅಷ್ಟಚತ್ವಾರಿಂಶದಹಸ್ತದರ್ಧದಿನಸಂಖ್ಯಯಾ ॥ ೩೧ ॥
ಸ್ನಾನಂ ಪ್ರದಕ್ಷಿಣಂ ಚೈವ ವಂದನಂ ಸ್ತವನಂ ಕ್ರಮಾತ್ ।
ಕುರ್ವಂತೋ ಗುರುಸೇವಾಂ ಹಿ ಗುರ್ವರ್ಪಿತಸುಭೋಜಿನಃ ॥ ೩೨ ॥

ಅರ್ಥ:– ಕಲಿಯುಗದಲ್ಲಿ ಪುತ್ರಧನ ಧಾನ್ಯಾದಿಗಳನ್ನಿಚ್ಛಿಸುವ, ರೋಗ ಗ್ರಹಪೀಡಾದಿಗಳ ಬಾಧೆಯನಾಶವನ್ನಿಚ್ಛಿಸುವ ಸಮಸ್ತ ಭಕ್ತರುಗಳು. ಪ್ರಾತಃ ಕಾಲದಲ್ಲಿ ಧವಳ ಗಂಗೆಯಲ್ಲಿ ಸ್ನಾನ ಮಾಡಿ, ವೇದವ್ಯಾಸ, ತ್ರಿವಿಕ್ರಮ, ಗುರುಗಳ ಪಂಚವೃಂದಾವನ, ಅಶ್ವತ್ಥ, ಹನುಮಂತ ವೇಣುಗೋಪಾಲ ಮತ್ತು ರುದ್ರದೇವರು ಇವರುಗಳ ಪ್ರದಕ್ಷಿಣೆ ಮಾಡಿ ಮತ್ತು ನಮಸ್ಕರಿಸಿ ಪುನಃ ಭಕ್ತಿಯಿಂದ ನೂರೆಂಟು ಅಥವಾ ಅದರ ಅರ್ಧ, ಅಥವಾ ಅದರ ಅರ್ಧಸಂಖ್ಯೆಯಿಂದ ಕ್ರಮವಾಗಿ ಸ್ನಾನ, ಪ್ರದಕ್ಷಿಣೆ, ನಮಸ್ಕಾರ ಸ್ತೋತ್ರಗಳನ್ನು ನಲವತ್ತೆಂಟು ಅದರ ಅರ್ಧ (ಅಂದರೆ ಇಪ್ಪತ್ತು ನಾಲ್ಕು ದಿನಗಳಕಾಲ) ಗುರುಸೇವೆಯನ್ನು ಮಾಡುತ್ತಾ ಗುರ್ವರ್ಪಿತ ಪ್ರಸಾದವನ್ನು ಸ್ವೀಕರಿಸಬೇಕು.

ಶ್ಲೋಕ:– **ಇಷ್ಟಾರ್ಥಸೂಚನಾಂ ಲಬ್ಧ್ವಾ ಗುರ್ವನುಗ್ರಹಮಾಪ್ಯ ಚ ।**
ಸೇವಾಫಲಂ ಲಭಂತೇಽದ್ಧಾ ಕಾಮಧೇನುರ್ಯತೋ ಗುರುಃ ॥ ೩೩ ॥

ಅರ್ಥ:– (ಹಿಂದೆ ತಿಳಿಸಿದಂತೆ ಸೇವೆ ಮಾಡಿದರು) ಗುರುಗಳ ಅನುಗ್ರಹವನ್ನು ಸಂಪಾದಿಸಿ. (ಸ್ವಾಪ್ನಾದಿಗಳ ಮೂಲಕ) ಇಷ್ಟಾರ್ಥ ಸೂಚಿತರಾಗಿ. ಕಾಮಧೇನುವಿನಂತಿರುವ ಗುರುಗಳಿಂದ ಸೇವಾಫಲವನ್ನು ಪಡೆಯುತ್ತಾರೆ.

ಶ್ಲೋಕ:– **ಆಕಾಶಗಂಗಾಽಮೃತಗಂಗಯಾ ಚ**
ಪಾತಾಲಗಂಗಾಂಽತರಗಂಗಯಾ ಚ ।
ಸಾರ್ಧಂ ಚಕಾಸ್ತೋಽತ್ರ ಪವಿತ್ರಪುರ್ಯಾಂ
ಕಃ ಶಕ್ನುಯಾತ್ ಸ್ತೋತುಮಿಮಾಂ ಹಿ ಸೋದಾಮ್ ॥ ೩೪ ॥

ಅರ್ಥ:– ಪವಿತ್ರವಾದ ಈ ಸೋದಾಪಟ್ಟಣವು (ತ್ರಿವಿಕ್ರಮ ದೇವಾಲಯದಲ್ಲಿರುವ) ಆಕಾಶಗಂಗಾ ಎನ್ನುವ ಅಮೃತಗಂಗೆಯಿಂದಲೂ, ಮತ್ತು ಮಠದ ಪಶ್ಚಿಮ ಭಾಗದಲ್ಲಿರುವ) ಪಾತಾಳಗಂಗಾ ಎನ್ನುವ ಅಂತರ ಗಂಗೆಯಿಂದಲೂ ಸಹಿತವಾಗಿ ಶೋಭಿಸುತ್ತಿದೆ. ಇದನ್ನೂ ಸ್ತೋತ್ರಮಾಡಲು ಯಾರು ಶಕ್ತರಾದಾರು ?

ಶ್ಲೋಕ:– **ಜಯತಿ ಧವಲಗಂಗಾ ಜಾಹ್ನವೀಸನ್ನಿಧಾನಾ**
ದಘನಿಚಯನಿಹಂತ್ರೀ ಪಂಚವೃಂದಾವನಂ ಚ ।
ಭಜಕ ಶುಭಕರಂ ಶ್ರೀ ವಿಷ್ಣುವಾಯು ಪ್ರತೀಕೈಃ
ಲಸಿತಮುತ ಬತ ಶ್ರೀ ವಾದಿರಾಡರ್ಚಯಾ ಚ ॥ ೨೫ ॥

ಅರ್ಥ:– ಗಂಗಾ ಸನ್ನಿಧಾನದಿಂದ ಪಾಪಗಳ ಸಮೂಹವನ್ನು ನಾಶಮಾಡುವ ಧವಳಗಂಗೆಯು ಉತ್ಕೃಷ್ಟಳಾಗಿದ್ದಾಳೆ. ಮತ್ತು ಶ್ರೀ ವಿಷ್ಣು ವಾಯುಗಳ ಮೂರ್ತಿಗಳಿಂದಲೂ ಶ್ರೀ ವಾದಿರಾಜರ ಪ್ರತಿಮೆಯಿಂದಲೂ ಶೋಭಿಸುವ, ಸೇವಿಸುವವರಿಗೆ ಶುಭವನ್ನೀಯುವ ಪಂಚಮೃಂದಾವನವು ಉತ್ಕೃಷ್ಟ ವಾಗಿದೆ.

ಶ್ಲೋಕ:– **ಇತಿ ಶ್ರೀ ವೇದನಿಧಿತೀರ್ಥಂತೇವಾಸಿ ಶ್ರೀ ರಾಮಚಂದ್ರಾಚಾರ್ಯವಿರಚಿತೇ**
ಶ್ರೀ ವಾದಿರಾಜಗುರುವರಚರಿತಾಮೃತೇ ಸಪ್ತಮಬಿಂದುಃ ಸಮಾಪ್ತಃ ।

ಇಲ್ಲಿಗೆ ಶ್ರೀ ವೇದನಿಧಿತೀರ್ಥರ ವಿದ್ಯಾಶಿಷ್ಯರಾದ ರಾಮಚಂದ್ರಾರ್ಯ ರಿಂದ ವಿರಚಿತವಾದ ಶ್ರೀ ವಾದಿರಾಜ ಗುರುವರ ಚರಿತಾಮೃತದಲ್ಲಿ ಏಳನೆಯ ಬಿಂದುವು ಮುಗಿಯಿತು.

॥ ಅಷ್ಟಮ ಬಿಂದುಃ ॥

ಶ್ಲೋಕ:– **ಬಿಂದಾವಸ್ಮಿನ್ ವಾದಿರಾಜ ಋಜುರ್ಜೀವೋತ್ತಮಸ್ತ್ವಿತಿ ।**
ಪ್ರಮಾಣೈಸ್ಸಾಧ್ಯತೇ ವೇದನಿಧ್ಯಾರ್ಯಾಜ್ಞಾಬಲಾನ್ಮಯಾ ॥ ೧ ॥

ಅರ್ಥ:– ಈ ಅಧ್ಯಾಯದಲ್ಲಿ ವೇದನಿಧಿಯತಿಗಳ ಆಜ್ಞಾಬಲದಿಂದ ವಾದಿರಾಜರು ಜೀವೋತ್ತಮರಾದ ಋಜುಗಳು ಎಂದು ನನ್ನಿಂದ ಪ್ರಮಾಣಪೂರ್ವಕವಾಗಿ ಸಾಧಿಸಲ್ಪಡುತ್ತದೆ.

ಶ್ಲೋಕ:– **"ಗುಹ್ಯಾದೇಶಾ ಬ್ರಹ್ಮಪದೇ ಯೇ ಯೋಗ್ಯಾ ದೇವತಾಗಣಾಃ ।**
ಸರ್ವೇ ಗುಹ್ಯೋಪದೇಷ್ಟಾರಃ ಸರ್ವೇಷಾಂ ಗುರವೋ ಹಿ ತೇ"
ಇತಿ ಛಾಂದೋಗ್ಯಭಾಷ್ಯೋಕ್ತಪ್ರಮಾಣಾತ್ಸಿದ್ಧ್ಯತೇ ಗಣಃ ।
ರುದ್ರಾದೀನಾಂ ತತ್ವಬೋಧಕಾರಣಂ ಕೀರ್ತಿತೋಽಂಜಸಾ ॥ ೨ ॥ಅರ್ಥ:– "ಬ್ರಹ್ಮಪದವಿಗೆ ಯೋಗ್ಯವಾದ ದೇವತಾಗಣವು (ರುದ್ರಾದಿಗಳಿಗೆ) ಗೌಪ್ಯತತ್ವಗಳನ್ನು ಉಪದೇಶಿಸುವರು (ಹಾಗೆ ಉಪದೇಶ ಮಾಡುವ ಮಾಡುವರಾದ್ದರಿಂದ ಅವರು) ಗುಹ್ಯಾದೇಶರು (ಎಂದೆನಿಸುವರು) ಅವರು ಎಲ್ಲರಿಗೂ ಗುರುಗಳು"

ಹೀಗೆ ಛಾಂದೋಗ್ಯ ಭಾಷ್ಯೋದಲ್ಲಿ ಉಕ್ತವಾದ ಪ್ರಮಾಣದಿಂದ ಸಿದ್ಧವಾಗುತ್ತದೆ. ರುದ್ರಾದಿಗಳಿಗೆ ತತ್ವವನ್ನು ಬೋಧಿಸುವರಾದ ಕಾರಣ ಅವರು ಚನ್ನಾಗಿ ಸ್ತುತಿಸಲ್ಪಟ್ಟಿದ್ದಾರೆ.

ಶ್ಲೋಕ:– "ಬ್ರಹ್ಮತ್ವಯೋಗ್ಯಾ ಋಜುವೋ ನಾಮ ದೇವಾಃ ಪೃಥಗ್ಗಣಾಃ ।
ತೈರೇವಾಪ್ಯಂ ತತ್ವದಂ ತು ನೈವಾನ್ಯೈಃ ಸಾಧನೈರಪಿ ।"
ಇತಿ ನಿರ್ಣಯಸಂಪ್ರೋಕ್ತಪ್ರಮಾಣಾದೃಜುನಾಮಕಾಃ ।
ಬ್ರಹ್ಮತ್ವಯೋಗ್ಯಾ ಇತ್ಯೇವ ಸಾಧಿತಾ ಸಾಧುತುಷ್ಟಯೇ ॥ ೩ ॥

ಅರ್ಥ:– ಬ್ರಹ್ಮಪದವಿಗೆ ಯೋಗ್ಯವಾದ ಋಜುಗಳು ಎಂಬ ಹೆಸರಿನ ಪ್ರತ್ಯೇಕ ದೇವತೆಗಳ ಸಮೂಹವಿದೆ. ಆ ಗಣದವರು ಮಾತ್ರ ಆ ಪದವಿ ಹೊಂದಲು ಸಾಧ್ಯ, ಇತರರಿಂದ ಸಾಧನೆ ಮಾಡಿದರೂ ಕೂಡ ಆ ಪದವಿಯನ್ನು ಹೊಂದಲು ಸಾಧ್ಯವಿಲ್ಲ.

ಈ ರೀತಿಯಾಗಿ ನಿರ್ಣಯದಲ್ಲಿ ಹೇಳಿದ ಪ್ರಮಾಣದಿಂದ ಋಜುಗಳು ಎಂಬ ಹೆಸರಿನವರು ಬ್ರಹ್ಮಪದವಿಯೋಗ್ಯರು ಎಂದು ಸಜ್ಜನರ ಸಂತೋಷಕ್ಕಾಗಿ ಸಾಧಿಸಲ್ಪಟ್ಟಿತು.

ಶ್ಲೋಕ:– **"ಕಲ್ಕೀ ಸುತೇಜಾ ದಾಸಶ್ಚ ಧರ್ಮಶ್ಚಾಧರ್ಮಖಂಡನಃ ।**
ವರ್ಚಸ್ವೀ ಖಿಷಣಶ್ಚೈವ ಸಾಧುಶ್ಚೈವ ಮಹೀಪತಿಃ ।
ಧರ್ಮಾಶ್ಚ ಧರ್ಮಜಶ್ಚೈವ ಸಂಪೂರ್ಣಃ ಶುಚಿವೈಕೃತೌ ।
ಅಂಜನಃ ಸರ್ಷಪಶ್ಚೈವ ಖರ್ಪಟಶ್ಚ ತಥೈವ ಚ ।
ಶ್ರದ್ಧಾಲುಶ್ಚೈವ ಸದ್ಧ್ಯಾನೋ ಜ್ಞಾನೋ ವಿಜ್ಞಾನ ಏವ ಚ ।
ಕೀರ್ತನಶ್ಚೈವ ಸಂಕೀರ್ಣಃ ಕತ್ಥನಶ್ಚ ತಥೈವ ಚ ।
ಮಹಾಬುದ್ಧಿರ್ಜಯಶ್ಚೈವ ತಥೈವ ಚ ಮಹತ್ತರಃ ।
ಸುವೀರ್ಯಶ್ಚೈವ ಮೇಧಾವೀ ವಿಜಯೋ ಜಯ ಏವ ಚ ।
ಮನುರ್ಮೋದಃ ಪ್ರಮೋದಶ್ಚಸಂತ ಆನಂದ ಏವ ಚ ।
ಸಂತುಷ್ಟಶ್ಚೈವ ಚಾರ್ವಂಗಸ್ತಥಾ ಚಾರುಸುಬಾಹುಕಃ ।
ತಥಾ ಚಾರುಪದಶ್ಚಾಪಿ ತಥೈವಚ ಸುಲೋಚನಃ ।
ಸಾರಸ್ವತಃ ಸುವೀರಶ್ಚ ಪ್ರಾಜ್ಞಃ ಕಪಿಸ ಏವ ಚ ।
ಲಂಪಟಶ್ಚೈವ ಸರ್ವಜ್ಞಃ ಸರ್ವಜಿನ್ಮಿತ್ರ ಏವ ಚ ।
ತಥಾ ಪಾಪವಿನಾಶಶ್ಚ ಏತೇ ಪಂಚಾಶದೀರಿತಾಃ ।
ತಥಾ ಧರ್ಮೋವಿನೀತಶ್ಚ ಶಾರದೋಜಾಸ್ತಥೈವ ಚ ।
ಸುತಪಸ್ಕಶ್ಚ ತೇಜಸ್ವೀ ದಾನಶೀಲಸ್ತಥೈವ ಚ ।
ಸುಶೀಲಶ್ಚೈವ ಯಜ್ಞಶ್ಚ ಸುಕರ್ತಾ ಚ ತಥೈವ ಚ ।
ಯಾಗವರ್ತಕಯಜ್ವೀ ಚ ಪ್ರಾಣಶ್ಚಾಪಿ ತಥೈವ ಚ ।
ತಥಾ ತ್ರಾಣಶ್ಚಾಮ ಋಷಿರುಪದೇಷ್ಟಾ ತಥೈವ ಚ ।
ತಾರಕಶ್ಚ ತಥಾ ಕಾಲಕ್ರೀಡನಶ್ಚ ತಥೈವ ಚ ।
ಸುಕಾರ್ತಾ ಚ ಸುಕಾಲಜ್ಞಃ ಕಾಲಸೂಚಕ ಏವ ಚ ।
ತಥಾ ಚ ಕಲಿಸಂಹರ್ತಾ ಕಲಿಃ ಕಾಲಸ್ತಥೈವ ಚ ।
ಸ್ವಾಮರೇತಃ ಸದಾರತಸ್ತತಶ್ಚ ಸುಬಲಸ್ತಥಾ ।
ಸಹಃ ಸದಾಕಪಿಶ್ಚೈವ ಗಮ್ಯೋ ಜ್ಞಾನಸ್ತಥೈವ ಚ ।
ತಥೈವ ಸ್ಯಾದ್ಧಶಕಲಃ ಶ್ರೋತವ್ಯಶ್ಚ ತಥೈವ ಚ ।
ಸಂಕೀರ್ತಿತವ್ಯೋ ಮಂತವ್ಯಃ ಕವ್ಯೋ ದ್ರಷ್ಟವ್ಯ ಏವ ಚ ।

ತಥಾ ಸಖ್ಯಶ್ಚ ಗಂತವ್ಯಃ ಕ್ರವ್ಯಃ ಸ್ಮರ್ತವ್ಯ ಏವ ಚ ।
ಸೇವ್ಯಃ ಸುಭಾವ್ಯಃ ಸ್ವರ್ಗವ್ಯೋ ಭಾವ್ಯೋ ಜ್ಞಾತವ್ಯ ಏವ ಚ ।
ವಕ್ತವ್ಯಶ್ಚೈವ ಗವ್ಯಶ್ಚ ಲಾತವ್ಯಶ್ಚ ತಥೈವ ಚ ।
ವಾಯುಶ್ಚೈವ ತಥಾ ಬ್ರಹ್ಮೇತ್ಯೇವಂ ಪಂಚಾಶದೀರಿತಾಃ ।
ಇತ್ಯೇತಚ್ಛತಕಂ ನಾಮ ಋಜೂನಾಂ ಯಃ ಪಠೇತ್ಸದಾ ।
ತೈರ್ದತ್ತಾಂ ಪದವಿಂ ಯಾತಿ ವಾಸುದೇವಾಭಿವೀಕ್ಷಿತಾಮ್ ।"

೧) ಕಲ್ಕಿ ೨) ಸುತೇಜ ೩) ದಾಸ ೪) ಧರ್ಮ ೫) ಅಧರ್ಮಖಂಡನ ೬)ವರ್ಚಸ್ವಿ ೭) ಋಷಣ ೮) ಸಾಧು ೯) ಮಹೀಪತಿ ೧೦) ಸದ್ಧರ್ಮ ೧೧) ಧರ್ಮಜ ೧೨) ಸಂಪೂರ್ಣ ೧೩) ಶುಚಿ ೧೪) ವೈಕೃತ ೧೫) ಅಂಜನ ೧೬)ಸರ್ಷಪ ೧೭) ಖರ್ಪಟ ೧೮) ಶೃದ್ಧಾಲು ೧೯) ಸಧ್ಯಾನ ೨೦) ಜ್ಞಾನ ೨೧) ವಿಜ್ಞಾನ ೨೨) ಕೀರ್ತನ ೨೩) ಸಂಕೀರ್ಣ ೨೪) ಕತ್ಥನ ೨೫) ಮಹಾಬುದ್ಧಿ ೨೬) ಜಯ ೨೭) ಮಹತ್ತ ೨೮) ಸುವೀರ್ಯ ೨೯) ಮೇಧಾವಿ ೩೦) ವಿಜಯ ೩೧) ಜಯ ೩೨) ಮನು ೩೩) ಮೋದ ೩೪) ಪ್ರಮೋದ ೩೫) ಸಂತ ೩೬) ಆನಂದ ೩೭) ಸಂತುಷ್ಟ ೩೮) ಚಾರ್ವಂಗ ೩೯) ಚಾರು ೪೦) ಸುಭಾಹು ೪೧) ಚಾರುಪದ ೪೨) ಸುಲೋಚನ ೪೩) ಸಾರಸ್ವತ ೪೪) ಸುವೀರ ೪೫) ಪ್ರಾಜ್ಞ ೪೬) ಕವಿಸ ೪೭) ಅಲಂಪಟ ೪೮) ಸರ್ವಜ್ಞ ೪೯) ಸರ್ವಜಿತ ೫೦) ಮಿತ್ರ

ಇಲ್ಲಿಗೆ ಐವತ್ತು ಹೆಸರುಗಳು ಹೇಳಲ್ಪಟ್ಟಿತ್ತು

೫೧) ಪಾಪ ವಿನಾಶನ ೫೨) ಧರ್ಮ ೫೩) ವಿನೀತ ೫೪) ಶಾರದೋಜ ೫೫)ಸುತಪ ೫೬) ತೇಜಸ್ವಿ ೫೭) ದಾನಶೀಲ ೫೮) ಸುಶೀಲ ೫೯) ಯಜ್ಞ ೬೦) ಸುಕರ್ತ ೬೧) ಯೋಗ ವರ್ತಕ ಯಜ್ವೀ ೬೨) ಪ್ರಾಣ ೬೩) ತ್ರಾಣ ೬೪) ಅಮಋಷಿ ೬೫) ಉಪ ದೇಷ್ಟ ೬೬) ತಾರಕ ೬೭) ಕಾಲಕ್ರೀಡನ ೬೮) ಸುಕರ್ತ ೬೯) ಸುಕಾಲಜ್ಞ ೭೦) ಕಾಲ ಸೂಚಕ ೭೧) ಕಲಿಸಂಹರ್ತ ೭೨) ಕಲಿ ೭೩) ಕಾಲ ೭೪) ಸ್ವಾಮರೇತ ೭೫) ಸದಾರತ ೭೬) ಸುಬಲ ೭೭) ಸಹ ೭೮) ಸದಾಕಪಿ ೭೯) ಗಮ್ಯ ೮೦) ಜ್ಞಾನ ೮೧) ದಶಕಲ ೮೨) ಶ್ರೋತವ್ಯ ೮೩) ಸಂಕೀರ್ತವ್ಯ ೮೪) ಮಂತವ್ಯ ೮೫) ಕವ್ಯ ೮೬) ದ್ರಷ್ಟವ್ಯ ೮೭) ಸಖ್ಯ ೮೮) ಗಂತವ್ಯ ೮೯) ಕ್ರವ್ಯ ೯೦) ಸ್ಮರ್ತವ್ಯ ೯೧) ಸೇವ್ಯ ೯೨) ಸುಭಾವ್ಯ ೯೩) ಸ್ವರ್ಗವ್ಯ ೯೪) ಭಾವ್ಯ ೯೫) ಜ್ಞಾತವ್ಯ ೯೬) ವಕ್ತವ್ಯ ೯೭) ಗವ್ಯ ೯೮) ಲಾತವ್ಯ ೯೯) ವಾಯು ೧೦೦) ಬ್ರಹ್ಮ

ಹೀಗೆ ಇನ್ನು ಐವತ್ತು ಹೆಸರುಗಳು ಹೇಳಲ್ಪಟ್ಟಿತು.

ಶ್ಲೋಕ:– **ಇತ್ಯೇವಮೃಜುದೇವಾನಾಂ ಶತಂ ವಾಮನಸಂಜ್ಞಕಾತ್ ।**
ಪುರಾಣಾಚ್ಚ ಪ್ರಸಿದ್ಧಂ ತತ್ ಲಾತವ್ಯೋ ಭಾವಿಮಾರುತಃ ॥ ೪ ॥
ಮಾರುತೋ ಬ್ರಹ್ಮತಾಮೇತಿ ಹ್ಯೇವಂ ಸಿದ್ಧಂ ನ ಸಂಶಯಃ ।

ಅರ್ಥ:– ಈ ನೂರು ಋಜುದೇವತೆಗಳ ಹೆಸರುಗಳು ವಾಮನ ಪುರಾಣದಲ್ಲಿ ಪ್ರಸಿದ್ಧವಾಗಿದೆ. ಅವರಲ್ಲಿ ಲಾತವ್ಯರೇ ಭಾವೀ ವಾಯುವು, ವಾಯುವೇ ಬ್ರಹ್ಮ ದೇವರು ಹೀಗೆ ಸಿದ್ಧವಾಗಿದೆ ಅದರಲ್ಲಿ ಸಂಶಯವಿಲ್ಲ.

ಶ್ಲೋಕ:– **"ಅನಾದಿಕಾಲತಃ ಸರ್ವೇ ದೋಷಹೀನಾ ಗುಣಾಧಿಕಾಃ ।**
ಋಜೂನಾಮೇಕ ಏವಾಸ್ತಿ ಪರಮೋತ್ಸಾಹವರ್ಜನಮ್ ।"
ಇತಿ ಸತ್ತತ್ವಮಾಲಾಯಾಮುಕ್ತವಾಕ್ಯಾದದೋಷತಾ ॥ ೫ ॥

ಅರ್ಥ:– "ಅನಾದಿಕಾಲದಿಂದಲೂ ಎಲ್ಲಾ (ಋಜುಗಳೂ) ದೊಷರಹಿತರು, ಗುಣಾಧಿಕ್ಯವುಳ್ಳವರು ಋಜುಗಳಿಗೆ ಅತ್ಯುತ್ಸಾಹ ವಿಲ್ಲದಿರುವಿಕೆ ಎನ್ನುವುದೊಂದಿದೆ." ಹೀಗೆ ಸತ್ತತ್ವ ಮಾಲಾಗ್ರಂಥದಲ್ಲಿ ಯುಕ್ತವಾದ ವಾಕ್ಯದ ದೆಸೆಯಿಂದ (ಋಜುಗಳು) ದೋಷಹೀನರು.

ಶ್ಲೋಕ:– **"ದುರ್ವಿಜ್ಞೇಯಮತಃ ಸರ್ವೈರ್ಭಾರತಂ ತು ಸುರೈರಪಿ ।**
ಸ್ವಯಂ ವ್ಯಾಸೋ ಹಿ ತದ್ವೇದ ಬ್ರಹ್ಮಾ ವಾ ತತ್ಪ್ರಸಾದತಃ ।"
ತಾತ್ಪರ್ಯನಿರ್ಣಯೋಕ್ತಿಶ್ಚೇತ್ಥಂ ಭಾರತತತ್ವಕಮ್ ।
ವ್ಯಾಸಬ್ರಹ್ಮೋಭಯಜ್ಞೇಯಂ ಪ್ರಾಹ ತನ್ಮರುದಬ್ರವೀತ್ । ॥ ೬ ॥

ಅರ್ಥ:– "ಮಹಾಭಾರತವು ಸರ್ವರಿಂದಲೂ, ದೇವತೆಗಳಿಂದಲೂ ಕೂಡ ತಿಳಿಯಲಶಕ್ಯವು ಸ್ವಯಂ ವೇದವ್ಯಾಸರು ಹೇಳಿದ್ದಾರೆ. ಅವರ ಪ್ರಸಾದದಿಂದ ಬ್ರಹ್ಮನು ತಿಳಿದಿದ್ದಾನೆ" ಹೀಗೆ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಉಕ್ತವಾಗಿದೆ. ಮಹಾಭಾರತದ ತತ್ವಗಳನ್ನು ವ್ಯಾಸ. ಬ್ರಹ್ಮ ಇವರಿಬ್ಬರು ತಿಳಿದಿರುವರೆಂದು (ಮಧ್ವರೂಪಿ) ವಾಯುದೇವರು ನುಡಿದಿದ್ದಾರೆ.

ಶ್ಲೋಕ:– **ಭಾರತಾರ್ಥಸ್ಯ ತಾತ್ಪರ್ಯನಿರ್ಣಯಂ ಮಧ್ವರೂಪಭಾಕ್ ।**
ಲಕ್ಷಾಲಂಕಾರತೋ ವಾದಿರಾಜೋಽಪ್ಯೂಚೇ ತದರ್ಥಕಮ್ ॥ ೭ ॥
ವಾದಿರಾಜಸ್ತತೋ ಭಾವಿಬ್ರಹ್ಮಾ ವಾಯುರಿತೀರ್ಯತೇ ।

ಅರ್ಥ:– ಭಾರತಾರ್ಥದ ತಾತ್ಪರ್ಯ ನಿರ್ಣಯವು ಮಧ್ವರೂಪೀ (ವಾಯುವಿನ) ಭಾಗ. ವಾದಿರಾಜರೂ ಕೂಡ ಲಕ್ಷಲಂಕಾರ ಗ್ರಂಥದಲ್ಲಿ ಭಾರತಾರ್ಥವನ್ನು ಹೇಳಿದ್ದಾರೆ. ಆದ್ದರಿಂದ ವಾದಿರಾಜರು ಭಾವೀವಾಯು, ಭಾವೀ ಬ್ರಹ್ಮನೆಂದು ಹೇಳಲ್ಪಡುತ್ತದೆ.

ಶ್ಲೋಕ:– **"ಯಾವಜ್ಞಾನಂ ಚಾಸ್ತಿ ಮೇ ವಾಸುದೇವೇ**
ತಾವಜ್ಞಾನಂ ವಾಯುದೇವಸ್ಯ ಚಾಸ್ತಿ !
ಯಾವಜ್ಞಾನಂ ವಾಯುದೇವಸ್ಯ ಚಾಸ್ತಿ
ತಾವಜ್ಞಾನಂ ಚಾಸ್ತಿ ವೈ ತದೃಜೂನಾಮ್ ।"
ಇತಿ ಗಾರುಡವಾಕ್ಯಾತ್ತು ಋಜೂನಾಂ ಜ್ಞಾನಸಾಮ್ಯಕಮ್ ॥ ೮ ॥
ಸಿಧ್ಯತ್ಯೇವ ತಥಾ ಸ್ವಾಪ್ನವೃಂದಾವನವಚಸ್ತ್ವಿದಮ್ ।

ಅರ್ಥ:– "ವಾಸುದೇವನ ವಿಷಯದಲ್ಲಿ ನನಗೆ (ಬ್ರಹ್ಮನಿಗೆ) ಎಷ್ಟು ಜ್ಞಾನ ವಿದೆಯೋ ಅಷ್ಟು ಜ್ಞಾನ ವಾಯುದೇವನಿಗೂ ಇದೆ. ವಾಯುದೇವರಿಗೆ ಇರುವಷ್ಟು ಜ್ಞಾನ ಎಲ್ಲಾ ಋಜುದೇವತೆಗಳಿಗೂ ಇದೆ." ಈ ಗರುಡ ಪುರಾಣವಾಕ್ಯದಿಂದ ಋಜುಗಳಿಗೆ ಜ್ಞಾನ ಸಾಮ್ಯವು ಸಿದ್ಧವಾಗುತ್ತದೆ. ಹಾಗೆಯೇ ಸ್ವಾಪ್ನವೃಂದಾವನಾಖ್ಯಾನ ವಚನದಿಂದಲೂ ಇದನ್ನು ಸಾಧಿಸಿದ್ದಾರೆ.

ಶ್ಲೋಕ:– **ಲಕ್ಷಾಲಂಕಾರಕರಣೇ ವ್ಯಾಸಾಜ್ಞಾಂ ಸಾಧಯತ್ಯಲಮ್ ॥ ೯ ॥**
"ಪ್ರಯಾಗೇ ಬ್ರಹ್ಮಣಃ ಸಂಧ್ಯಾಮಠೇ ಜಪಪರಾಯಣಃ ।
ಅಹಮಾಸಂ ತದಾ ಲಕ್ಷಾಲಂಕಾರಂ ಕುರ್ವಿತಿ ಪ್ರಭುಃ ।"

ಅರ್ಥ:– "ಪ್ರಯಾಗದಲ್ಲಿ ಬ್ರಹ್ಮದೇವರು ಯಾಗ ಮಾಡಿದ ಸ್ಥಳದಲ್ಲಿರುವ, ಸಂಧ್ಯಾಮಠದಲ್ಲಿ ಜಪಮಾಡುತ್ತಿದ್ದೆನು ಆಗ ಪ್ರಭುಗಳಾದ ವೇದವ್ಯಾಸರು ಲಕ್ಷಾಲಂಕಾರಗ್ರಂಥವನ್ನು ರಚಿಸು" ಎಂದು ಲಕ್ಷಾಲಂಕಾರ ಗ್ರಂಥರಚನೆಗೆ ವೇದವ್ಯಾಸರ ಆಜ್ಞೆಯನ್ನು (ತಿಳಿಸುತ್ತಾ ವಾದಿರಾಜರು ತಮಗೂ ವಾಯುದೇವರಿಗೂ ಜ್ಞಾನ ಸಾಮ್ಯ(ವಿರುವುದನ್ನು) ಸಾಧಿಸಿದ್ದಾರೆ. (ಇದರಿಂದ ತಾವು ಋಜುಗಳೆಂದೂ ಸಾಧಿಸಿದಂತಾಯಿತು.)

ಶ್ಲೋಕ:– **"ದುರ್ವಾದಿನಃ ಪ್ರಮಥ್ಯಾಶು ಮತ್ಪದಂ ಯಾತುಮರ್ಹತಿ ।**
ಸ್ಥಾಪಯಿಷ್ಯತಿ ಮಚ್ಛಾಸ್ತ್ರಂ ತೇನ ಮೋಕ್ಷೋ ಭವೇದ್ಧಿ ವಃ ।"
ಇತ್ಯೂಚೇ ಬ್ರಹ್ಮವೈವರ್ತಪುರಾಣೇ ಸ್ಪಷ್ಟವಾಕ್ಯತಃ ।

ಅರ್ಥ:– "ದುರ್ವಾದಿಗಳನ್ನು (ಮತ್ತು ಅವರ ದುಃಶಾಸ್ತ್ರಗಳನ್ನು) ವಿನಾಶಗೊಳಿಸಿ ನನ್ನ ಸ್ಥಾನವನ್ನು ಹೊಂದಲು ಅರ್ಹರಾಗಿರುವಿರಿ. ನನ್ನ ಶಾಸ್ತ್ರವನ್ನು (ನಾನು ವಾಯು ಪದವಿಯಲ್ಲಿದ್ದಾಗ ಮಧ್ವರೂಪದಿಂದ ಹೇಳಿದ ಶಾಸ್ತ್ರವನ್ನು ಪುನಃ) ಸ್ಥಾಪಿಸುತ್ತೀರಿ. ಅದರಿಂದ ನಿಮಗೆ ಮೊಕ್ಷವಾಗುವುದು." ಎಂದು ಬ್ರಹ್ಮವೈವರ್ತ ಪುರಾಣದಲ್ಲಿ (ಬ್ರಹ್ಮದೇವರ) ಸ್ಪಷ್ಟವಚನವು (ಶ್ರೀ ವಾದಿರಾಜರನ್ನು ಕುರಿತು ಹೇಳಿರುವುದು) ಉಕ್ತವಾಗಿದೆ.

ಶ್ಲೋಕ:– **"ತಂ ಮಧ್ವಂ ಮಾರುತಂ ಸರ್ವೇ ಪರಿವಾರತಯಾ ಸದಾ ।**
ಸಂಸೇವಿತುಂ ಸುರಾ ಭೂಮಾವವತೇರುರಿತಿ ಶ್ರುತಮ್ ।
ತೇ ತು ತಚ್ಛಿಷ್ಯತಾಮಾಪ್ಯ ತನ್ಮತಂ ತು ವ್ಯಘೋಷಯನ್ ।

ತೇಷು ಮುಖ್ಯೌ ವಿಷ್ಣುತೀರ್ಥಪದ್ಮನಾಭಾಖ್ಯಯೋಗಿನೌ ।
ಅತ್ಯಕ್ತದೇಹಸ್ತತ್ರಾದ್ಯೋ ವರ್ತಯಿಷ್ಯತಿ ತನ್ಮತಮ್ ।
ತತ್ಪೂರ್ವಮಸ್ಯ ವಂಶೇ ಚ ಋಜುಸ್ಥೋ ಹಿ ಸುರೇಶ್ವರಃ ।
ವಾದಿರಾಜೋ ಯತಿರ್ಭೂತ್ವಾ ಚೈತದ್ವಿಸ್ತಾರಯಿಷ್ಯತಿ ।"

ಇತಿ ಪಾದ್ಮಪುರಾಣೋಕ್ತರೂಪ್ಯಪೀಠಸುವರ್ಣನೇ ।
ವಾದಿರಾಜಋಜುತ್ವಂ ಹಿ ಸಾಧಿತಂ ಸ್ಫುಟವಾಕ್ಯತಃ ॥ ೧೦ ॥

ಅರ್ಥ:– ಆ ಮಧ್ವರೂಪಿ ವಾಯುವನ್ನು ಸದಾ ಸೇವಿಸಲು ಎಲ್ಲಾ ದೇವತೆಗಳು ಪರಿವಾರ ಸಮೇತರಾಗಿ ಭೂಮಿಯ ಲ್ಲಿ ಅವತರಿಸುವರೆಂದು ಶ್ರುತವಾಗಿದೆ. ಆ ದೇವತೆಗಳು ಅವರ ಶಿಷ್ಯತ್ವವನ್ನು ಹೊಂದಿ ಅವರ ಮತವನ್ನು

ಪ್ರಚಾರಪಡಿಸುತ್ತಾರೆ. ವಿಷ್ಣುತೀರ್ಥರು ಮತ್ತು ಪದ್ಮನಾಭಯತಿಗಳು ಅವರಲ್ಲಿ ಮುಖ್ಯರಾದವರು ಅವರಲ್ಲಿ ಮೊದಲನೆಯವರಾದ ವಿಷ್ಣುತೀರ್ಥರು ಅತ್ಯಕ್ತದೇಹಿಗಳಾಗಿದ್ದು ಆ ಮತವನ್ನು ಭವಿಷ್ಯತ್‌ಕಾಲದಲ್ಲಿಯೂ ಪ್ರಸಾರ ಮಾಡುತ್ತಾರೆ. ಹೀಗೆ ಪ್ರಸಾರ ಮಾಡುವ ಪೂರ್ವದಲ್ಲಿ ಆ ವಿಷ್ಣುತೀರ್ಥರ ವಂಶದಲ್ಲಿ ಋಜಗಣಸ್ಥರೂ ಸುರೇಶ್ವರರೂ ಆದ (ಲಾತವ್ಯರು) ವಾದಿರಾಜಯತಿಗಳಾಗಿ ಅವತರಿಸಿ (ಮಧ್ವಮತವನ್ನು) ವಿಸ್ತರಿಸುತ್ತಾರೆ. ಈ ರೀತಿಯಾಗಿ ಪದ್ಮಪುರಾಣದಲ್ಲಿ ರೂಪ್ಯಪೀಠ ವರ್ಣನೆಯೆಂಬ ಭಾಗದಲ್ಲಿ ವಾದಿರಾಜರ ಋಜುತ್ವವು ಸ್ಪಷ್ಟವಾದ ವಾಕ್ಯಗಳಿಂದ ಸಮರ್ಥಿತವಾಗಿದೆ.

ಶ್ಲೋಕ:– **"ಅಪರೋಕ್ಷ ವಿಶೇಷಣ ಸಂಯುತಾ ಬ್ರಹ್ಮ ಪೂರ್ವಕಾಃ ।**
ಕಲ್ಕ್ಯಂತಾ ಋಜುವಃ ಪ್ರೋಕ್ತಾ ಪ್ರಾರಬ್ಧಫಲಭೋಗಿನಃ ।
ಬ್ರಹ್ಮಣೋ ನಾವತಾರೋऽಸ್ತಿ ಶತಮಧ್ಯೇ ಪರಾಜ್ಞಯಾ ।
ವಾಯುಮಾರಭ್ಯ ಕಲ್ಕ್ಯಂತಾ ಜನಿಮಂತ್ರೋऽತ್ರ ಭಾರತೇ ।
ಹನುಮದ್ಭೀಮಮಧ್ವಾಖ್ಯರೂಪೋ ವಾಯುರ್ಭವಿಷ್ಯತಿ ।
ಸ್ವಯಂವರಸಮುದ್ಯೋಗೇ ರುಕ್ಮಿಣೀ ಪತ್ರಮಾದರಾತ್ ।
ಕೃಷ್ಣಾಯಾದಾದ್ಗೃಹೀತ್ವಾ ಯೋ ಹ್ಯಂತಃಪುರಗತೋ ದ್ವಿಜಃ ।
ಸರ್ವಾದೃಷ್ಟಸ್ತದೈವಾಯಮೃಜುರ್ಲಾತವ್ಯನಾಮಕಃ ।
ವಾಯುಸ್ಥಾನಸಮಾರೋಹಯೋಗ್ಯೋऽಯಂ ಯತಿರೂಪವಾನ್ ।
ಆಕಲ್ಪಂ ಬ್ರಹ್ಮಣಃ ಕೃಷ್ಣಪ್ರಸಾದಸ್ಯೈಕಭಾಜನಮ್ ।
ಕೃಷ್ಣಾರ್ಚಕೋ ಯತಿರ್ಭೂತ್ವಾ ವಾದಿರಾಜೋ ವದಿಷ್ಯತಿ ।
ಶ್ರೀ ರುಕ್ಮಿಣೀಶವಿಜಯಂ ಕಲೌ ಕೃಷ್ಣಪ್ರಸಾದಭಾಕ್ ।"
ವಾಮನಾದಿಪುರಾಣೋಕ್ತ್ಯಾ ಪ್ರಸಿದ್ಧಂ ವಾದಿರಾಣ್ಮುನೇಃ ।
ಋಜುತ್ವಮವತಾರೇಷು ಕೃಷ್ಣಸೇವಾಫಲಂ ಸ್ಫುಟಮ್ ॥ ೧೧ ॥

ಅರ್ಥ:– ಅಪರೋಕ್ಷ ವಿಶೇಷದಿಂದ ಕೂಡಿರುವ ಬ್ರಹ್ಮನಿಂದ ಮೊದಲುಗೊಂಡು ಕಲ್ಕಿ ಪರ್ಯಂತವಾಗಿರುವ ಋಜುಗಳು ಪ್ರಾರಬ್ಧಫಲಭೋಗಿಗಳೆಂದು ಹೇಳಲ್ಪಟ್ಟಿದ್ದಾರೆ. ಈ ನೂರು ಜನರ ಮಧ್ಯದಲ್ಲಿ ಪರಮಾತ್ಮನ ಆಜ್ಞೆಯಿಂದ ಬ್ರಹ್ಮನಿಗೆ ಅವತಾರವಿಲ್ಲ. ವಾಯುವಿನಿಂದ ಪ್ರಾರಂಭಿಸಿ ಕಲ್ಕಿಯವರೆಗಿನವರು ಭಾರತದಲ್ಲಿ ಜನ್ಮ ವುಳ್ಳವರು. ವಾಯು ಹನುಮ ಭೀಮ ಮಧ್ವರೆಂಬ (ಮೂರು) ರೂಪವುಳ್ಳವರಾಗಿರುತ್ತಾರೆ. (ಅಂದರೆ ಆ ಮೂರು ರೂಪಗಳಿಂದ ಅವತರಿಸುತ್ತಾರೆ) ರುಕ್ಮಿಣೀ ಸ್ವಯಂವರಕಾರ್ಯದಲ್ಲಿ ಯಾರಿಗೂ ಕಾಣದಂತೆ ಯಾವ ಬ್ರಾಹ್ಮಣನು ಅಂತಃಪುರಕ್ಕೆ ಹೋಗಿ ಆದರದಿಂದ ರುಕ್ಮಿಣೀ ದೇವಿಯವರ ಪತ್ರವನ್ನು ಕೃಷ್ಣನಿಗೆ ತಂದು ಕೊಟ್ಟನೋ ಅವನು ಲಾತವ್ಯನಾಮಕ ಋಜುವು. ವಾಯುಪದವಿಗೆ ಏರಲು ಯೋಗ್ಯನಾದ ಈ ಋಜುವು ವಾದಿರಾಜನೆಂಬ ಯತಿರೂಪವುಳ್ಳವನಾಗಿ ಕೃಷ್ಣಾರ್ಚಕನಾಗಿ ಬ್ರಹ್ಮಕಲ್ಪ ಪರ್ಯಂತವಾಗಿ ಕೃಷ್ಣ ಪ್ರಸಾದಕ್ಕೆ ಮುಖ್ಯಪಾತ್ರ ನಾಗುತ್ತಾನೆ. ಕೃಷ್ಣ ಪ್ರಸಾದಕ್ಕೆ ಭಾಗಿಯಾಗಿ ಕಲಿಯುಗದಲ್ಲಿ ರುಕ್ಮಿಣೀಶ ವಿಜಯವನ್ನು ಹೇಳುತ್ತಾನೆ. ಹೀಗೆ ಶ್ರೀ ವಾದಿರಾಜ ಮುನಿಗಳ ಋಜುತ್ವವು, ಅವತಾರಗಳಲ್ಲಿ ಕೃಷ್ಣ ಸೇವಾಫಲವೂ ವಾಮನಾದಿ ಪುರಾಣದಿಗಳಲ್ಲಿರುವ ಉಕ್ತಿಗಳಿಂದ ಪ್ರಸಿದ್ಧವಾಗಿದೆ.

ಟಿಪ್ಪಣಿ :– ಮುಂದಿನ ಶ್ಲೋಕಗಳಲ್ಲಿ ಒಳಿತ್ಥಾ ಸೂಕ್ತವನ್ನು ಲಾತವ್ಯ ಪರವಾಗಿ ಅರ್ಥಮಾಡಿ ಹೇಳಿದ್ದಾರೆ.

ಶ್ಲೋಕ:– **"ಸಹೋರೂಪಸ್ಯ ದೇವಸ್ಯ ಲಾತವ್ಯಸ್ಯ ಬಲಾತ್ಮಕಮ್ ।**
ಮೂಲರೂಪಂ ಜ್ಞಾನತತಂ ಜಗದ್ಧರಣಕಂ ಯತಃ ।
ಜಾತಂ ತದಾತ್ಮಕಂ ಸರ್ವಚೇಷ್ಟಕೇನ ಮಹಾತ್ಮನಾ ।
ರೂಪತ್ರಯಾವತಾರಾಯ ನಿಹಿತಂ ಹರಿಣಾ ಸ್ವಯಮ್ ।
ಅಂಡಾದ್ಬಹಿಃ ಸ್ಥಿತಂ ಮೂಲಂ ಸತ್ಯಲೋಕಸ್ಥಿತಂ ಮಹತ್ ।
ಗೃಹೀತ್ವಾ ರುಕ್ಮಿಣೀಪತ್ರಂ ಕೃಷ್ಣಾಂತಿಕಮುಪಾಗತಮ್ ।
ವಾದಿರಾಜಾಭಿಧಂ ಚೇತಿ ಮೂಲಭೇದವಿವರ್ಜಿತಮ್ ।
ತತ್ರ ಪ್ರಥಮಕಂ ರೂಪಂ ವಿಶ್ವರೂಪಾಂತಿಕೇ ಸ್ಥಿತಮ್ ।
ಅಮೃತಸ್ರಾವಿಣೀರ್ವಾಚಃ ಪಂಚರಾತ್ರಾದಿನಾಮಿಕಾಃ ।
ಋತರೂಪಸ್ಯ ವಿಷ್ಣೋರ್ಹಿ ಔತ್ಕರ್ಷಪ್ರತಿಪಾದಿಕಾಃ ।
ಅನಯಂತ ಸ್ವಶಿಷ್ಯೇಷು ದ್ವಿತೀಯಂ ಪೃಕ್ಷನಾಮಕಮ್ ।
ಮಾಗಧಾದಿಮಹಾಸೇನಾದುರ್ಮಾನಕ್ಷಯಕಾರಕಮ್ ।
ಕೃಷ್ಣದತ್ತವಿಚಿತ್ರಾನ್ನ ಭೋಕ್ತೃ ತತ್ಪ್ರಿಯಮುತ್ತಮಮ್ ।"

ಇತ್ಥಂ ಬ್ರಹನ್ನಾರದೀಯಪ್ರಮಾಣಾದ್ವಾಯುಸೂಕ್ತಕಮ್ ।
ಬಳಿಥ್ಯೇತ್ಯಾದಿಕಂ ಭಾವಿವಾಯುತ್ರಿತನು ಸಾಧಕಮ್ ॥ ೧೨ ॥

ಅರ್ಥ:– ಶತ್ರುವೇಗ ಸಹನ ಸಮರ್ಥರೂಪವಾದ ಲಾತವ್ಯದೇವರ ಮೂಲರೂಪವು ಬಲಾತ್ಮಕವಾದುದು, ವ್ಯಾಪ್ತಜ್ಞಾನವುಳ್ಳದ್ದು ಜಗತ್ತನ್ನು ಪೋಷಿಸುವಂತಹದು ಆ ಮೂಲರೂಪದಿಂದ, ಮೂಲರೂಪದಂತೆ ಬಲಜ್ಞಾನತ್ಮಕವಾದ ರೂಪಗಳು ಹುಟ್ಟಿದವು. ಸರ್ವಚೇಷ್ಟಕನಾದ ಮಹಾತ್ಮನಾದ ಶ್ರೀ ಹರಿಯಿಂದಲೇ ಸ್ವತಃ ರೂಪತ್ರಯಗಳು ಅವತಾರಕ್ಕಾಗಿ ಅನುಗ್ರಹಿಸಿ ಕೊಡಲ್ಪಟ್ಟಿವೆ. ಮೂಲವು ಬ್ರಹ್ಮಾಂಡದ ಹೊರಗೆ ಸ್ಥಿತವಾಗಿದೆ. ಜಗತ್ಪೂಜ್ಯ ರೂಪವು ಸತ್ಯಲೋಕದಲ್ಲಿ ಸ್ಥಿತವಾಗಿದೆ. (ಎರಡನೆ ರೂಪವು) ರುಕ್ಮಿಣಿಯಿಂದ ಪತ್ರವನ್ನು ತೆಗೆದುಕೊಂಡು ಶ್ರೀ ಕೃಷ್ಣನ ಬಳಿ ಹೋಯಿತು. (ಮೂರನೆಯ ರೂಪವು) ವಾದಿರಾಜನೆಂಬ ಹೆಸರನ್ನುಳ್ಳದ್ದು. ಹೀಗೆ ಮೂಲರೂಪದಿಂದ ಭೇದವಿಲ್ಲದ ಅವತಾರ ರೂಪಗಳು. ಅದರಲ್ಲಿ ಮೊದಲನೆಯ ರೂಪವು ವಿಶ್ವರೂಪಿಯಾದ ಪರಮಾತ್ಮನ ಸಮೀಪದಲ್ಲಿರುವುದು. ಸತ್ಯರೂಪನಾದ ಶ್ರೀವಿಷ್ಣುವಿನ ಸರ್ವೋತ್ತಮತ್ವ ಪ್ರತಿಪಾದಕ ಪಂಚರಾತ್ರಾದಿಗಳಲ್ಲಿರುವ ಅಮೃತ ಸ್ರವಿಸುವ ವಾಕ್ಯಗಳನ್ನು ತನ್ನ ಶಿಷ್ಯರಿಗೆ ಮುಟ್ಟಿಸಿತು. ಎರಡನೆಯ ರೂಪವು ಪೃಕ್ಷ (ಪೃಕ್ಷ ಬಹು ಸೈನ್ಯವನ್ನು ನಾಶ ಮಾಡುವವನೆಂದು ಅರ್ಥ) ವೆಂಬ ಹೆಸರುಳ್ಳದ್ದು ದುರಾಭಿಮಾನಿಗಳಾದ ಜರಾಸಂಧಾದಿಗಳ ನಾಶಕ್ಕೆ ಕಾರಣವಾಯಿತು. ಕೃಷ್ಣನು ಕೊಟ್ಟ ವಿಚಿತ್ರಾನ್ನವನ್ನು ಭೋಜನ ಮಾಡಿದ ಮತ್ತು ಅವನಿಗೆ ಅತ್ಯಂತ ಪ್ರಿಯವಾದ ರೂಪವು ಹೀಗೆ ಬೃಹತ್ ನಾರದೀಯ ಪುರಾಣೋಕ್ತ ಪ್ರಮಾಣದಿಂದ ಬಳಿತ್ಥಾ ಇತ್ಯಾದಿ ವಾಯುಸೂಕ್ತವು (ವಾದಿರಾಜರಿಗೆ) ಭಾವೀ ವಾಯುವಿನ ಮೂರುರೂಪಗಳಿಗೆ ಸಾಧಕವಾದುದು ಲಾತವ್ಯರ ಅವತಾರವು ಶ್ರುತಿ ಪ್ರಸಿದ್ಧವಾದದ್ದು ಹೀಗೆ ಸ್ಫುಟವಾಗಿ ತಿಳಿಯುತ್ತದೆ.

ಟಿಪ್ಪಣಿ :– ೧. **"ಕೃಷ್ಣದತ್ತ ವಿಚಿತ್ರಾನ್ನ ಭೋಕ್ತೃ ತತ್ಪ್ರಿಯಮುತ್ತಮಮ್"** ಇದು ವಾದಿರಾಜ ರೂಪವೆಂದು ತಿಳಿಯಬಹುದು.

೨. ಬಳಿತ್ಥಾ ಸೂಕ್ತದಲ್ಲಿ ವಾಯುದೇವರ ಅವತಾರ ತ್ರಯಗಳಲ್ಲಿಯೂ ಇದೇಪ್ರಕಾರ ಮೊದಲಿನರೂಪ ವಿಶ್ವರೂಪ ಶ್ರೀರಾಮನ ಸಂದೇಶವನ್ನು ಸೀತಾದೇವಿಗೆ ಮುಟ್ಟಿಸಿತು. ಎರಡನೇ ಭೀಮರೂಪವು ಕೌರವರ ಸೈನ್ಯವನ್ನೇ ನಾಶಮಾಡಿತು ಮೂರನೆಯ ಮಧ್ವರೂಪ ಶ್ರೀ ಕೃಷ್ಣನಿಗೆ ಅತ್ಯಂತ ಪ್ರಿಯವಾದರೂಪವು ಹೀಗೆವಾಯು ಮತ್ತು ಲಾತವ್ಯರ ಪರವಾಗಿದೆ.

ಶ್ಲೋಕ:– **ಲಾತವ್ಯಸ್ಯಾವತಾರಶ್ಚ ಶ್ರುತಿಸಿದ್ಧಾ ಇತಿ ಸ್ಫುಟಮ್ ।**
ಶ್ರುತೇಃ ತ್ರ್ಯರ್ಥಪರತ್ವಾತ್ತು ಸೂಕ್ತೇ ವರ್ಣ್ಯಾಸ್ತ್ರಯೋಽಪಿ ಹಿ ।
ಹರಿರ್ವಾಯುಶ್ಚ ಲಾತವ್ಯ ಇತಿ ಸ್ಮೃತಿರಿಯಂ ಜಗೌ ॥ ೧೩ ॥

ಅರ್ಥ :– ವೇದಗಳಿಗೆ ಮೂರು ಅರ್ಥಗಳಿರುವ ಪ್ರಯುಕ್ತ (ಬಳಿತ್ಥಾ ಇತ್ಯಾದಿ ವಾಯು) ಸೂಕ್ತಗಳಿಗೆ ಹರಿವಾಯು ಲಾತವ್ಯ – ಈ ಮೂರರ ಪರ ವರ್ಣನೆಯೂ ಕೂಡ (ಸಾಧ್ಯವೆಂದು) ಈ ಸ್ಮೃತಿಯು (ಬೃಹತ್ ನಾರದೀಯ) ಪುರಾಣವು ಹೇಳುತ್ತದೆ.

ಶ್ಲೋಕ:– **"ಋಗಾದ್ಯಾ ಇತಿಹಾಸಾಶ್ಚ ಪುರಾಣಂ ಪಂಚರಾತ್ರಕಮ್ ।**
ಪ್ರೋಕ್ತಾಃ ಸಪ್ತಶಿವಾಸ್ತಾಶ್ಚ ಮಾತರಸ್ತತ್ರ ಸಂಸ್ಥಿತಮ್ ।
ತದ್ವಿಚಾರಪರಂ ಪ್ರೋಕ್ತಂ ಜ್ಞಾನದೊಗ್ಧೃ ತೃತೀಯಕಮ್ ।
ಲಾತವ್ಯಸ್ಯ ಋಜೋಸ್ತಸ್ಯ ದಶಪ್ರಮತಿನಾಮಕಮ್ ।
ವಾದಿನಾಂ ಜ್ಞಾನದಾನೈಕಶೀಲಾನಾಂ ರಾಜನಂ ಯತಃ ।
ವೇತಿ ಜ್ಞಾನಂ ಸಮುದ್ದಿಷ್ಟಂ ದೇತಿ ದಾನಮುದಾಹೃತಮ್ ।
ಪ್ರೋಕ್ತಂ ಶೀಲಮಿಕಾರೇಣ ರಾಜನಂ ರಾಜಶಬ್ದಿತಮ್ ।
ವಾದಿರಾಜಾಭಿಧಂ ರೂಪಂ ದಶಪ್ರಮತಿಸಂಜ್ಞಿತಮ್ ।
ಪೂರ್ಣಜ್ಞಾನಂ ವಿನಾ ಪ್ರೋಕ್ತಂ ರಾಜನಂ ತು ಕಥಂ ಭವೇತ್ ।
ದಶೇತಿ ಪೂರ್ಣಮುದ್ದಿಷ್ಟಂ ಜ್ಞಾನಂ ಪ್ರಮತಿಸಂಜ್ಞಿತಮ್ ।
ಯೋಽಷಣೋಽಜನಯಂತೈತದ್ ವಾದಿರಾಜಾಭಿಧಂ ವಪುಃ ।
ತಸ್ಮಾದೇವ ಜ್ಞಾನರೂಪಾನ್ಮಹಿಷಸ್ಯ ಹರೇರ್ಗುಣಾನ್ ।
ಪಾಲನಾದ್ವರಣೀಯತ್ವಾದ್ವರ್ಪಾ ಇತ್ಯಭಿ ಶಬ್ದಿತಾನ್ ।
ರುದ್ರಾದ್ಯಾಃ ಸೂರಯಶ್ಚಾನ್ಯೇ ಜ್ಞಾನವಂತಃ ಸುಖೇನ ತು ।
ಪ್ರಕೃಷ್ಟಜ್ಞಾನರೂಪೋ ಯೋ ಭಾವಿಮಧ್ವಃ ಪ್ರಕೀರ್ತಿತಃ ।
ಮಧುಶಾಸ್ತ್ರಂ ಮಧ್ವಶಾಸ್ತ್ರಂ ಸಮ್ಯಗ್ ವೇತ್ತಾ ಗುರುಸ್ತದಾ ।
ಪ್ರಮಾಣ ರೂಪವೇದಾದೌ ಗತಿಮಾನ್ ಗೂಹಿತಂ ಹರಿಮ್ ।

ಆಸಮಂತಾತ್ಪತಿತ್ವೇತು ಮಥ್ನಾತ್ಯಾಮ್ನಾಯಶಾಸ್ತ್ರತಃ ।
ರೂಪತ್ರಯಂ ಪ್ರೇರ್ಯತೇ ಯತ್ ಪಿತ್ರಾ ಸ್ವಸ್ಯ ಪರಾತ್ಮನಾ ।
ಪ್ರಶ್ನರೂಪಾಂಸ್ತೃಣಾದೀನ್ ಸ ದಂತೇಷ್ವಾರೋಪ್ಯ ಜಕ್ಷತಿ ।
ಲಾತವ್ಯಾಚಾರ್ಯವರ್ಯಸ್ಯ ಯಸ್ಯರೂಪತ್ರಿಕಂ ಹ್ಯುಭೌ ।
ರಮಾನಾರಾಯಣೌ ಸಾಕ್ಷಾದಿನ್ವತಸ್ತತ್ಕೃಪಾ ಶುಚಿಃ ।
ಅಭ್ಯಾಮೇವಾವರಃ ಪ್ರೋಕ್ತಸ್ತಯೋರಾಜ್ಞಾನುಸಾರತಃ ।
ವಿಶೇಷೇಣಾಭಿವೃದ್ಧೋಽಭೂದ್ಋಗಾದ್ಯಾಸ್ವಾರುಹತ್ಕ್ರಮಾತ್ ।
ಸನಾತನಾಸು ವಾಚಾಸು ನೂತನಾಸ್ವವರಾಸು ಚ ।
ಪಂಚರಾತ್ರಪುರಾಣೇತಿಹಾಸಾಖ್ಯವಿವಿಧಾಸು ಚ ।
ಇತಿ ಸೂಕ್ತಗತಂ ರೂಪತ್ರಯಮೇತನ್ಮಹಾತ್ಮನಃ ।
ಯೋವೇದ ವೇದವಿತ್ಸಸ್ಯಾತ್ತತ್ವವಿತ್ತತ್ಪ್ರಸಾದತಃ ।
ಇತಿ ಋಕ್‌ಸಂಹಿತಾವಾಕ್ಯಾದ್ ಬಳಿತ್ಥಾಸೂಕ್ತಮೇವ ತತ್ ।
ಲಾತವ್ಯಸ್ಯಾವತಾರಾಣಾಂ ವರ್ಣಯತ್ಯಂಜಸಾ ತ್ರಯಮ್ ॥ ೧೪ ॥

ಅರ್ಥ:– ಋಗಾದಿ (ನಾಲ್ಕು ವೇದಗಳು) (ಮೂಲರಾಮಾಯಣ) ಮಹಾಭಾರತ ವೆಂಬ ಇತಿಹಾಸಗಳು (ಸಾತ್ವಿಕ) ಪುರಾಣಗಳು ಪಂಚರಾತ್ರಗಮ – ಈ ಏಳು ಮಂಗಳಕರವಾದ ಶಾಸ್ತ್ರಗಳು ಇವುಗಳಲ್ಲಿ ಪ್ರಮಾಣಗಳು ಸಂಸ್ಥಿತವಾಗಿವೆ. ಈ ವಿಚಾರಪರವು ಋಜುಗಳಾದ ಲಾತವ್ಯರ ಜ್ಞಾನವನ್ನು ಕರೆಯುವ ದಶಪ್ರಮತಿ ಎಂಬ ಹೆಸರಿನ ಮೂರನೇ ರೂಪದಿಂದ ಹೇಳಲ್ಪಟ್ಟಿದೆ. (ಈ ದಶಪ್ರಮತಿ ಎಂಬ ನಾಮಕನು) ಜ್ಞಾನದಾನವೇ ಮುಖ್ಯ ಶೀಲವಾಗಿಯುಳ್ಳ ವಾದಿಗಳಿಗೆ "ರಾಜನಂ" ಆದ ಕಾರಣ 'ವಾ' ಎಂದರೆ ಜ್ಞಾನವೆಂದೂ 'ದ' ಎಂದರೆ ದಾನವೆಂದೂ 'ಇ' ಎಂದರೆ ಶೀಲ ವೆಂದು ಹೇಳಲ್ಪಟ್ಟಿದೆ. 'ರಾಜ' ಶಬ್ಧದಿಂದ 'ರಾಜನಂ' ಹೇಳಲ್ಪಟ್ಟಿದೆ (ಆದ್ದರಿಂದ) ವಾದಿರಾಜ ಎನ್ನುವ ಹೆಸರು 'ದಶಪ್ರಮತಿ' ಸೂಚಕವಾಗಿದೆ ಪೂರ್ಣಜ್ಞಾನ ವಿಲ್ಲದೆ ಹೇಗೆ 'ರಾಜನಂ' ಎಂದು ಹೇಳಲ್ಪಡುತ್ತದೆ ? ದಶ ಎಂದರೆ 'ಪೂರ್ಣ' ಎಂಬುದಾಗಿಯೂ ಪ್ರಮತಿ ಎನ್ನುವುದು ಜ್ಞಾನವನ್ನೂ ಸೂಚಿಸುತ್ತದೆ. ಈ ವಾದಿರಾಜವೆನ್ನುವ ಹೆಸರಿನ ಶರೀರವನ್ನು (ಜ್ಞಾನ, ದಾನ, ಶೀಲ, ಶರೀರವನ್ನು) (ಜ್ಞಾನ ದೋಹನಕ್ಕಾಗಿ) ಸ್ತ್ರೀಯರು ಹಡೆದರು. (ಗುರುವಿನ ತಾಯಿಯಾದ್ದರಿಂದ ಸ್ತ್ರೀ ಯರೆಂದು ಬಹುವಚನವು ಪ್ರಯೋಗಿಸಲ್ಪಟ್ಟಿದೆ. ಮತ್ತು ಲಕ್ಷ್ಮೀದೇವಿಯ ಶ್ರೀ, ಭೂ, ದುರ್ಗಾರೂಪಗಳ ಸನ್ನಿಧಾನ ವಿಶೇಷದಿಂದಲೇ ಗುರುವಿನ ತಾಯಿ ಹಡೆದಳೆಂದು ತಿಳಿಯಬೇಕು. ರಕ್ಷಿಸುವುದರಿಂದಲೂ, ವರಣೀಯ ವಾದುದರಿಂದಲೂ "ವರ್ಷಾ" ಶಬ್ಧಿತವಾದ ಪರಮ ಪೂಜ್ಯನಾದ ಶ್ರೀ ಹರಿಯ ಜ್ಞಾನರೂಪ ಗುಣಗಳನ್ನು ಅವನಿಂದಲೇ (ಲಾತವ್ಯನಿಂದಲೇ) ರುದ್ರಾದಿ ದೇವತೆಗಳು ಮತ್ತು ಅನ್ಯ ಜ್ಞಾನಿಗಳು ಸುಖವಾಗಿ ತಿಳಿದರು. ಶ್ರೇಷ್ಠವಾದ ಜ್ಞಾನರೂಪವುಳ್ಳ (ಈ ವಾದಿರಾಜನು) ಭಾವೀಮಧ್ವ ನೆಂದು ಸ್ತುತಿಸಲ್ಪಟ್ಟಿದ್ದಾರೆ. ಮಧು ಶಾಸ್ತ್ರವಾದ ಮಧ್ವಶಾಸ್ತ್ರವನ್ನು ಚೆನ್ನಾಗಿ ತಿಳಿದ ಈ ಗುರುಗಳು ಪ್ರಮಾಣರೂಪವಾದ ವೇದಾದಿಗ್ರಂಥಗಳಲ್ಲಿ ಸದ್ಗತಿಯುಳ್ಳವರು. (ಅಸತ್ ಶಾಸ್ತ್ರಗಳಿಂದ) ಗೌಪ್ಯ ಮಾಡಲ್ಪಟ್ಟ ಶ್ರೀಹರಿಯನ್ನು ಸರ್ವೋತ್ತಮವನ್ನಾಗಿ ವೇದಶಾಸ್ತ್ರಗಳಿಂದ ಮಥಿಸಿದರು. ತನ್ನ ತಂದೆಯಾದ ಪರಮಾತ್ಮನಿಂದ ಪ್ರೇರಿತವಾದ ರೂಪತ್ರಯಗಳಿಂದ ಪ್ರಶ್ನರೂಪವಾದ ತೃಣಾದಿಗಳನ್ನೇ ಹಲ್ಲುಗಳಲ್ಲಿ ಅಗಿದು ಪುಡಿಮಾಡಿದರು. ಶ್ರೇಷ್ಠರಾದ ಲಾತವ್ಯಾಚಾರ್ಯ ಮೂರು ರೂಪಗಳನ್ನು ಸಾಕ್ಷಾತ್ ಲಕ್ಷ್ಮೀ ನಾರಾಯಣರಿಬ್ಬರು ಪ್ರೇರಿಸುವರು. ಅವರ ಕೃಪೆಯಿಂದ ಪವಿತ್ರರಾದ ಅವರಿಬ್ಬರಿಗಿಂತ ಅವರರಾದ ಇವರು, ಅದರ ಆಜ್ಞಾನುಸಾರವಾಗಿ (ವ್ಯಾಖ್ಯಾನ ಮಾಡಿದರು ಸನಾತನವಾದ ಋಗಾದಿ ವೇದಗಳಲ್ಲಿರುವ ವಾಕ್ಯಗಳೂ ನೂತನವಾದ ಅವರಗಳಾದ ಪಂಚರಾತ್ರ, ಪುರಾಣ, ಇತಿಹಾಸವೇ ಮೊದಲಾದ ವಿವಿಧ ಶಾಸ್ತ್ರಗಳ ವಾಕ್ಯಗಳೂ (ಇವರ ವ್ಯಾಖ್ಯಾನದಿಂದಾಗಿ) ಆರೋಹಣ ಕ್ರಮದಲ್ಲಿ ವಿಶೇಷವಾಗಿ ಅಭಿವೃದ್ಧಿಯನ್ನು ಹೊಂದಿದವು (ಅಂದರೆ ಅವುಗಳ ಯಥಾರ್ಥವಾದ ಅರ್ಥವು ಎಲ್ಲಾಕಡೆಯಲ್ಲೂ ಪ್ರಚಾರವಾಯಿತೆಂದು ಭಾವ) ಹೀಗೆ ಈ ಮಹಾತ್ಮರ ಬಳಿತ್ಥಾದಿ – ಸೂಕ್ತ ಪ್ರತಿಪಾದಿತ ರೂಪತ್ರಯಗಳನ್ನು ಯಾರು ತಿಳಿಯುತ್ತಾನೋ ಅವನು ಅವರ ಪ್ರಸಾದದಿಂದ ವೇದ ಮತ್ತು ತತ್ವಗಳನ್ನು ತಿಳಿದವನಾಗುತ್ತಾನೆ. ಹೀಗೆ ಋಕ್ ಸಂಹಿತೆಯಲ್ಲಿರುವ ವಾಕ್ಯಗಳಿಂದಲೂ, ಬಳಿತ್ಥಾ ಸೂಕ್ತದಲ್ಲಿ ಹೇಳಲ್ಪಟ್ಟಿದೆ. ಲಾತವ್ಯ ಋಜುಗಳ ಅವತಾರ ತ್ರಯಗಳನ್ನೇ ಚನ್ನಾಗಿ ವರ್ಣಿಸಿರುತ್ತದೆ.

ಶ್ಲೋಕ:– **ಕೃಶಂ ಕೃತಘ್ನಮಿತ್ಯಾದ್ಯಂ ಶ್ರೀಭಾಗವತನಾಮಕೇ ।**
ಬ್ರಹ್ಮಣಾ ವರ್ಣಿತಂ ದೋಷಂ ವಾದಿರಾಟ್ ಸ ಋಜೂತ್ತಮಃ ॥ ೧೫ ॥
ಕೃತೌ ಸರಸಭಾರತ್ಯಾಮೇವಂ ವರ್ಣಿತವಾನ್ ಯಥಾ ।
"ಇತಿ ಸ್ವಪಿತರಿ ಶ್ರೀಶೇ ಭಕ್ತ್ಯಾ ಯಸ್ತು ಪಿತಾಮಹಃ ।
ಅದರ್ಶಯಸ್ತ್ವ ದೋಷಾನ್ನಃ ಕುಲವೃದ್ಧೋ ಗುರುರ್ಮಮ ।"
ಇತಿ ಬ್ರಹ್ಮಾಣಮಾತ್ಮೀಯಕುಲವೃದ್ಧಂ ಪ್ರಕೀರ್ತಯನ್ ॥ ೧೬ ॥

ಅರ್ಥ:– 'ಕೃಶಂ, ಕೃತಘ್ನಂ' ಇತ್ಯಾದಿಯಾಗಿ ಬ್ರಹ್ಮದೇವರು ಭಾಗವತ ಪುರಾಣದಲ್ಲಿ ದೋಷಗಳನ್ನು ವರ್ಣಿಸಿದ್ದಾರೆ. ಋಜೋತ್ತಮರಾದ ವಾದಿರಾಜರು ತಾವುರಚಿಸಿರುವ ಸರಸಭಾರತೀ ವಿಲಾಸ ಗ್ರಂಥದಲ್ಲಿ ಅದನ್ನು ಈ ರೀತಿಯಾಗಿ ವರ್ಣಿಸಿದ್ದಾರೆ. "ಹೀಗೆ ತನ್ನ ಪಿತನಾದ ಶ್ರೀಶನಲ್ಲಿ ಭಕ್ತಿಯಿಂದ ಪಿತಾಮಹನಾದ, ನಮ್ಮ ಕುಲದಲ್ಲಿ ವೃದ್ಧರಾದ ನನ್ನ ಗುರುಗಳಾದ ಬ್ರಹ್ಮದೇವರು ತಮ್ಮ ದೋಷಗಳನ್ನು ತೋರಿಸಿದ್ದಾರೆ." ಈ ರೀತಿ ಬ್ರಹ್ಮದೇವರನ್ನು ತಮ್ಮ (ಋಜುಗಳ) ಕುಲವೃದ್ಧರೆಂದು ಸ್ತುತಿಸಿದ್ದಾರೆ.

ಶ್ಲೋಕ:– **ಆತ್ಮಾನಮೃಜುವಂಶಸ್ಥಂ ಪ್ರಾಬ್ರವೀತ್ ಕರುಣಾನಿಧಿಃ ।**
ಮೂಕಾಂಬಿಕಾಂ ತಥಾ ದೇವಿಮೇಕಾಂತಿಕಜನಪ್ರಿಯಾಮ್ ॥ ೧೭ ॥
ತೀರ್ಥಪ್ರಬಂಧೇ ಪ್ರಾವೋಚಸ್ಸ್ವಯಮೇಕಾಂತಿಕಂ ತ್ವಿತಿ ।

ಅರ್ಥ:– ತಮ್ಮನ್ನು ಋಜುವಂಶದಲ್ಲಿರುವವರೆಂದು ಕರುಣಾನಿಧಿಗಳಾದ ವಾದಿರಾಜರು ಹೇಳಿದ್ದಾರೆ.

(ತಮ್ಮಿಂದ ರಚಿತವಾದ) ತೀರ್ಥ ಪ್ರಬಂಧ ಗ್ರಂಥದಲ್ಲಿ "ಮೂಕಾಂಬಿಕಾ ದೇವಿಯು ಏಕಾಂತ ಭಕ್ತ ಜನ ಪ್ರಿಯಳು" (ಎಂದು ಹೇಳಿರುವಲ್ಲಿ) ತಮ್ಮನ್ನು ಏಕಾಂತಭಕ್ತರೆಂದು ಹೇಳಿರುವರು. ಋಜುಗಳು ಏಕಾಂತ ಭಕ್ತರು.

ಶ್ಲೋಕ:– **ಕಶ್ಚಿದ್ವಿಜವರಶ್ರೇಷ್ಠ ಇತಿ ಭಾಗವತೋಕ್ತಿತಃ ॥ ೧೮ ॥**
ರುಕ್ಮಿಣೀಪತ್ರನೇತಾರಂ ಕಿಮಾ ಬ್ರಹ್ಮೇತಿ ಸಂಜಗೌ ।
ಕಶಬ್ದೋ ಬ್ರಹ್ಮವಾಚೀತಿ ಭಾವಿಬ್ರಹ್ಮಾsತ್ರ ಕೀರ್ತಿತಃ ॥ ೧೯ ॥

ಅರ್ಥ :– "ಕಶ್ಚಿದ್ವಿಜವರಶ್ರೇಷ್ಠ" ನೆಂಬ ಭಾಗವತದ ವಾಕ್ಯದಿಂದ, ರುಕ್ಮಿಣೀ ಪತ್ರವನ್ನು (ಶ್ರೀ ಕೃಷ್ಣನ ಬಳಿ) ತೆಗೆದುಕೊಂಡ ಹೋದ ದ್ವಿಜ ಶ್ರೇಷ್ಠನು ಬ್ರಹ್ಮನೆಂದು ಹೇಳಿದೆ. (ಕಶ್ಚಿನ ಪದದಲ್ಲಿರುವ) 'ಕ' ಪದವು ಬ್ರಹ್ಮನನ್ನು ಹೇಳುತ್ತದೆ. ಇಲ್ಲಿ ಭಾವಿ ಬ್ರಹ್ಮನು ಹೇಳಲ್ಪಟ್ಟಿದ್ದಾನೆ.

ಟಿಪ್ಪಣಿ :– ರುಕ್ಮಿಣಿಯಿಂದ ಶ್ರೀಕೃಷ್ಣನಿಗೆ ಪತ್ರವನ್ನು ತೆಗೆದುಕೊಂಡು ಹೋದ ಬ್ರಾಹ್ಮಣನಿಗೆ 'ದ್ವಿಜವರ ದ್ವಿಜಶ್ರೇಷ್ಠ' ಎಂಬ ಶಬ್ದವನ್ನು ಭಾಗವತದಲ್ಲಿ ಬಳಸಲಾಗಿದೆ. ರುಕ್ಮಿಣೀಶವಿಜಯದಲ್ಲಿ ವಾದಿರಾಜರು " ಅಜಯಾಪ್ರೇಷಿತಂ ಪತ್ರಂ ದ್ವಿಜಃ ಕಶ್ಚಿದುಪಾಹರತ" ಎಂದು ಹೇಳಿದ್ದಾರೆ. ಇವುಗಳಲ್ಲಿ ದ್ವಿಜ :– ಗರುಡನಿಂದ ಅಥವಾಶ್ರೇಷ್ಠ, ಎಂದರೆ ಋಜುಗಳೇ ಇದನ್ನು ಕಶ್ಚಿತ್ ಪದದಲ್ಲಿ ಕ :– ಬ್ರಹ್ಮಪದ ಯೋಗ್ಯನು ಚಿತ್ :– ಜ್ಞಾನಿ ಎನ್ನುವ ಅರ್ಥವನ್ನು ಸೂಚಿಸುತ್ತದೆ. ಹೀಗೆ ಗ್ರಂಥಗಳ ಶಬ್ದಗಳಿಗೆ ಐಕ್ಯಾರ್ಥ ಬಂದದ್ದಕ್ಕೆ ಶ್ರೀವಾದಿರಾಜರೇ ಪತ್ರವನ್ನು ಒಯ್ಯುವರೆಂದು ಪ್ರಾಜ್ಞ ಪರಂಪರಾ ಪ್ರಸಿದ್ಧಿಯಿದೆ. ಇವರೇ ಒಯ್ದರೆನ್ನುವದು ಸ್ವಾಪ್ನವೃಂದಾವನಾಖ್ಯಾನದಲ್ಲಿ "ವೈದ್ಯೋಧನ್ವಂತರಿ" "ಕೃಷ್ಣ ಶಾಪಾಖ್ಯ ರೋಗಹಾ" ಎಂದು ಹೇಳಿದ ವಿಷಯದಿಂದಲೂ ಸ್ಪಷ್ಟವಾಗುತ್ತದೆ.

ಶ್ಲೋಕ:– **"ರುದ್ರೇಂದ್ರವರುಣಾದ್ಯಾಸ್ತು ದೇವಾಃ ಸರ್ವೇ ಹ್ಯುಪಾಸತೇ ।**
ಪಂಚವೃಂದಾವನೇsಶ್ವಾಸ್ಯ" ಮಿತಿ ಸ್ವವಚನಾದ್ಗುರುಃ ॥ ೨೦ ॥

ಅರ್ಥ:– "ರುದ್ರ, ಇಂದ್ರ, ವರುಣರೇ ಮೊದಲಾದ ಎಲ್ಲಾ ದೇವತೆಗಳು ಪಂಚವೃಂದಾವನ ದಲ್ಲಿ ಹಯವದನನ್ನು ಉಪಾಸಿಸುತ್ತಾರೆ." ಎನ್ನುವ ತಮ್ಮ ವಚನದಿಂದಲೇ ಗುರುಗಳು

ಶ್ಲೋಕ:– **ಅಶ್ವಾಸ್ಯಪ್ರತಿಮಾಭೂತಮಾತ್ಮಾನಂ ಸುರಪೂಜಿತಮ್ ।**
ಪಂಚವೃಂದಾವನಾಖ್ಯಾನೇ ಸ್ವಯಮೂಚೇ ದ್ವಿಜಾಸ್ಯತಃ ॥ ೨೧ ॥

ಅರ್ಥ :– "ಹಯವದನನಿಗೆ ಪ್ರತಿಮಾಭೂತನಾದ ತಾನು ಆ ದೇವತೆಗಳಿಂದ ಪೂಜಿತನಾದೆನು" ಎಂದು ವಿಪ್ರನ ಮುಖದ್ವಾರ ಪಂಚವೃಂದಾವನಾಖ್ಯಾನದಲ್ಲಿ ಸ್ವಯಂಹೇಳಿದ್ದಾರೆ.

ಶ್ಲೋಕ:– **"ಯೋಮಾಮೇವಂ ವಿಜಾನಾತಿ ಋಜುಸ್ಥಂ ಪುಣ್ಯಕೃನ್ನರಃ ।**
ಸ ಯಾತಿ ಚಾಲಯಂ (ನಿಲಯಂ) ಪುಣ್ಯಂ ಯುದ್ಗತ್ವಾ ನ ನಿವರ್ತತೇ ।
"ಬ್ರಹ್ಮಣೋದಕ್ಷಿಣೇಕರ್ಣೇ ವಾಯೋಃ ಕರ್ಣೇ ತು ವಾಮಕೇ
ಸವಿಂದಂ ತು ಕರೋಮ್ಯದ್ಯ ವಿಷ್ಣೋಸ್ತತ್ವಸ್ಯ ನಿರ್ಣಯೇ ।"
"ತವ ಶ್ವಾಸಪ್ರಣೇತಾಹಂ ಭವಿಷ್ಯಾಮಿ ನ ಸಂಶಯಃ ।
ಮಮಾಪಿ ಜೀವೋತ್ತಮತ್ವಂ ಶ್ರುತ್ವಾಸರ್ವೇ ಮಮಪ್ರಿಯಾಃ ।"
"ಗರ್ವಂ ಹಿತ್ವಾ ಪ್ರದಾಸ್ಯಂತು ಗುರ್ವಂತರ್ಯಾಮಿಣಃ ಕರಮ್ ।
ಹಯಗ್ರೀವಾಜ್ಞಯಾ ವಾತವಿರಂಚೌ ಸ್ವಂ ಚ ವೈಭವಮ್ ।"
ವಿನಾ ವಾಣೀಪತಿತ್ವಂ ಮೇ ದತ್ತವಂತೌ ಚ ಕಿಂ ವದ ।

ಅಹಮೇಕೇನ ರೂಪೇಣ ಶೋಕಂ ಪರಿಹರನ್ ಸದಾ ।
ಶ್ಲೋಕಾನ್ ವಕ್ತುಂ ಪ್ರವಿಷ್ಟೋಽಹಂ ಕಾಕಬುದ್ಧೌ ದ್ವಿಜೋತ್ತಮೇ ।
ತಥೈಕೇನೈವ ರೂಪೇಣ ಮತ್ತೋಕೇ ಚ ಪ್ರವಿಶ್ಯತು ।
ಲೋಕಸ್ಯ ದರ್ಶನಾತ್ಸದ್ಯಃ ಶೋಕಂ ಪರಿಹಾರಾಮ್ಯಹಮ್ ।
ದೇವವೃಂದ ಸಮಾಯುಕ್ತೋ ಮದ್ವೃಂದಾವನಸಂಸ್ಥಿತಃ ।
ಸದ್ವೃಂದಾನಾಂ ಪ್ರಯಚ್ಛಾಮಿ ಚೇಷ್ಟವೃಂದಾನಿ ಸರ್ವದಾ" ।
ಇತ್ಯಾದ್ಯಾಖ್ಯಾನವಾಕ್ಯಾನಿ ವಾದಿರಾಜೇ ಗುರೂತ್ತಮೇ ।
ಋಜೂತ್ತಮತ್ವಂ ದೇವೈಶ್ಚ ಪೂಜ್ಯತ್ವಂ ಸಾಧಯಂತಿ ಹಿ ॥ ೨೨ ॥

ಅರ್ಥ:– ೧) ಪುಣ್ಯವನ್ನು ಮಾಡಿದ ಯಾವ ಮನುಷ್ಯನು ನನ್ನನ್ನು ಋಜುದೇವತೆಯನ್ನಾಗಿ ತಿಳಿಯುತ್ತಾನೆಯೋ, ಅವನು ಯಾವ ಪುಣ್ಯನಿಲಯಗಳಿಗೆ ಹೋದರೆ ಪುನಃ ಹಿಂತಿರುಗುವುದಿಲ್ಲವೋ, ಅಂತಹ (ವೈಕುಂಠಾದಿ) ಪುಣ್ಯ ನಿಲಯಗಳಿಗೆ ಹೋಗುತ್ತಾನೆ.

೨) ಬ್ರಹ್ಮದೇವರ ಬಲಗಿವಿಯಲ್ಲಿಯೂ, ವಾಯುದೇವರ ಎಡಗಿವಿಯಲ್ಲಿಯೂ ವಿಷ್ಣು ತತ್ವವಿಚಾರ ವಿನಿಮಯವನ್ನು ಮಾಡುವೆನು.

೩) (ನನ್ನ ವಾಯುತ್ವದೆಶೆಯಲ್ಲಿ) ನಿಸ್ಸಂಶಯವಾಗಿಯೂ ನಿನ್ನ ಶ್ವಾಸ ನಿಯಾಮಕನಾಗುವೆನು.

೪) ನನ್ನ ಜೀವೋತ್ತಮತ್ವವನ್ನು ನನ್ನಿಂದ ಹೇಳಲ್ಪಟ್ಟ ಆಖ್ಯಾನದಿಂದ ಕೇಳಿ, ನನಗೆ ಪ್ರಿಯರಾದವರೆಲ್ಲರೂ ಗರ್ವವನ್ನು ತ್ಯಜಿಸಿ, ನನ್ನ ಅಂತರ್ಯಾಮಿ ಹರಿಗೆ ಕರವನ್ನು ಕೊಡಲಿ

೫) ಹಯಗ್ರೀವದೇವರ ಆಜ್ಞೆಯಂತೆ ವಾಯು ಮತ್ತು ಬ್ರಹ್ಮರು, ವಾಣಿ ಪತಿತ್ವವನ್ನು ಬಿಟ್ಟು ತಮ್ಮ ವೈಭವಗಳನ್ನೆಲ್ಲಾ ನನಗೆ ಕೊಟ್ಟಿದ್ದಾರೆ. (ನನ್ನ ಮಹಾತ್ಮೆಯನ್ನು) ಏನು ಹೇಳುವುದು?

೬) (ಜನರ) ಶೋಕ ಪರಿಹಾರಕವಾದ ಆಖ್ಯಾನವನ್ನು ಹೇಳಲು. ಕಾಗೆಯಂತೆ ಪರೋಪಕಾರ ಬುದ್ಧಿಯುಳ್ಳ ದ್ವಿಜೋತ್ತಮನಾದ ವಿಪ್ರನಲ್ಲಿ, ನಾನು ಒಂದು ರೂಪದಿಂದ ಪ್ರವಿಷ್ಟನಾಗಿರುತ್ತೇನೆ. ಹಾಗೆಯೇ ರೂಪಾಂತರದಿಂದ ನನ್ನ ಪುತ್ರನಾದ ವೇದನಿಧಿಯಲ್ಲಿ ಪ್ರವಿಶ್ಯನಾಗಿ ಅವರ ದರ್ಶನ ಮಾಡುವ ಜನರ ಶೋಕವನ್ನು ಪರಿಹರಿಸುತ್ತೇನೆ.

೭) ಭಗವದ್ರೂಪಗಳ ಸಮುದಾಯದಿಂದಲೂ, ಬ್ರಹ್ಮ, ವಾಯು, ರುದ್ರಾದಿದೇವತೆಗಳ ಸಮೂಹದಿಂದಲೂ ಸಹಿತನಾಗಿ ನಾನು ನನ್ನ ವೃಂದಾವನದಲ್ಲಿ ಪ್ರಧಾನರೂಪದಿಂದ ಸ್ಥಿತನಾಗಿದ್ದೇನೆ. ಸರ್ವದಾ ಮುಕ್ತಿಯೋಗ್ಯ ಸೇವಾಕರ್ತೃಗಳ ಸಮೂಹಗಳಿಗೆ ಅಭೀಷ್ಟವನ್ನು ಕೊಡುತ್ತೇನೆ.

ಇವೇ ಮೊದಲಾದ ವೃಂದಾವನಾಖ್ಯಾನದ ವಾಕ್ಯಗಳು ಉತ್ತಮ ಗುರುಗಳಾದ ವಾದಿರಾಜರ ಋಜುತ್ವ ವಿಷಯವನ್ನು ದೇವತೆಗಳಿಂದ ಪೂಜ್ಯತ್ವ ವಿಷಯವನ್ನು ಸಾಧಿಸುತ್ತದೆ.

ಶ್ಲೋಕ:– **ಬ್ರಹ್ಮವಾಯೂ ಇವಾಹಂ ಚ ಹರ್ಯನುಗ್ರಹಭಾಜನಮ್ ।**
ಇತಿ ಪ್ರಮೇಯಂ ಗುರುಣಾ ಹ್ಯಾಖ್ಯಾನೇ ಸೂಚಿತಂ ಸ್ವಯಮ್ ॥ ೨೩ ॥

ಅರ್ಥ:– ಬ್ರಹ್ಮ ವಾಯುಗಳಂತೆ ತಾವೂಸಹ ಹರಿಯ ಅನುಗ್ರಹಕ್ಕೆ ಪಾತ್ರರು ಎಂಬ ಪ್ರಮೇಯವನ್ನು ಗುರುಗಳು ಸ್ವಾಪ್ನವೃಂದಾವನಾಖ್ಯಾನದಲ್ಲಿ ತಾವೇ ಸ್ವತಃ ಸೂಚಿಸಿದ್ದಾರೆ.

ಶ್ಲೋಕ:– **ಅತೋ ಮಧ್ವಾರ್ಯಗುರುಣಾ ಯಥಾನುಷ್ಠಿತಮಂಜಸಾ ।**
ಹಂಸಾನಾಂ ಸಾರ್ವಭೌಮೇನ ಜ್ಞಾನಸಾಮ್ರಾಜ್ಯಪಾಲನೇ ॥ ೨೪ ॥
ತಥೈವ ವಾದಿರಾಜೇನ ಯುವರಾಜಾಯಿತೇನ ತತ್ ।
ಸಜ್ಜನೋದ್ಧಾರಕಂ ಕರ್ಮ ಕೃತಮಚ್ಯುತ ತುಷ್ಟಯೇ ॥ ೨೫ ॥

ಅರ್ಥ:– ಪರಮ ಹಂಸರುಗಳಿಗೆ ಸಾರ್ವಭೌಮರಾದ, ಗುರುಗಳಾದ ಮಧ್ವಾಚಾರ್ಯರು ವೇದಾಂತ ವಿದ್ಯಾ ಸಾಮ್ರಾಜ್ಯ ಪರಿಪಾಲನೆಯನ್ನು ಎಷ್ಟು ಚೆನ್ನಾಗಿ ನೆರವೇರಿಸಿದರೋ ಹಾಗೆಯೇ ಯುವರಾಜರಂತಿದ್ದ ವಾದಿರಾಜರಿಂದ ಆ ಸಜ್ಜನೋದ್ಧಾರ ಕಾರ್ಯವು ಶ್ರೀ ಹರಿಯ ಪ್ರೀತಿಗಾಗಿ ಮಾಡಲ್ಪಟ್ಟಿತು.

ಶ್ಲೋಕ:– **ಅವತಾರೇ ಭೂತಲೇಽಸ್ಮಿನ್ನತಿಮಾನುಷ ಕರ್ಮಭಿಃ ।**
ವಾದಿರಾಜಾರ್ಯವರ್ಯೇಣ ಕೃತಂ ಲೋಕಹಿತಂ ಯಥಾ ॥ ೨೬ ॥

ತತೋಪ್ಯಾಧಿಕೃತಃ ಪಂಚವೃಂದಾವನಗತೇನ ಹಿ ।
ತಥೈವೇಷ್ಟಾಪ್ತಯೇ ನೄಣಾಂ ಮಹಿಮಾऽತ್ರ ಪ್ರದರ್ಶತೇ ॥ ೨೭ ॥

ಅರ್ಥ:– ಈ ಭೂಮಿಯಲ್ಲಿ ತಮ್ಮ ಅವತಾರಕಾಲದಲ್ಲಿ ಶ್ರೇಷ್ಠರಾದ ವಾದಿರಾಜರಿಂದ ಲೋಕಹಿತ ಕಾರ್ಯಗಳು, ಅಮಾನುಷ ಕಾರ್ಯಗಳಿಂದ ಹೇಗೆ ಮಾಡಲ್ಪಟ್ಟಿತೋ ಅದಕ್ಕಿಂತಲೂ ಅಧಿಕವಾಗಿ ಪಂಚವೃಂದಾವನ ಪ್ರವೇಶಾನಂತರ, ಅದರಂತೆಯೇ ಮನುಷ್ಯರ ಅಭಿಷ್ಟ ಪ್ರಾಪ್ತಿಗಾಗಿ ವೃಂದಾವನದಲ್ಲಿ ಮಹಿಮೆಯನ್ನು ತೋರಿಸುತ್ತಾರೆ.

ಶ್ಲೋಕ:– ಸೇವ್ಯಮಾನೋ ವಾದಿರಾಜ ಋಜುರಾಜಃ ಪ್ರಸನ್ನಧೀಃ ।
ವೃಂದಾವನೇ ಸನ್ನಿಹಿತೋ ಭಕ್ತಾನುಗ್ರಹತತ್ಪರಃ ॥ ೨೮ ॥

ಅರ್ಥ:– ಋಜುಗಳರಾಜರಾದ, ಸಂತೋಷ ಚಿತ್ತರಾದ ವಾದಿರಾಜರು ವೃಂದಾವನದಲ್ಲಿ ಸನ್ನಿಹಿತರಾಗಿದ್ದು ಸೇವಿಸುವ ಭಕ್ತರಿಗೆ ಅನುಗ್ರಹಿಸುತ್ತಿರುವರು.

ಶ್ಲೋಕ:– ಸೋऽಯಂ ಚಿಂತಾಮಣಿರ್ವಾಥ ಕಾಮಧೇನುಃ ಸುರದ್ರುಮಃ ।
ಚಕಾಸ್ತೀತ್ಯತ್ರ ಭಕ್ತಾನಾಂ ವೃಂದಂ ಸಾಕ್ಷ್ಯಂ ವದತ್ಯಲಮ್ ॥ ೨೯ ॥

ಅರ್ಥ:– ಈ ವಾದಿರಾಜರು (ಸೇವಿಸುವ ಭಕ್ತರಿಗೆ) ಚಿಂತಾಮಣಿ ಅಥವಾ ಕಾಮಧೇನು ಅಥವಾ ಕಲ್ಪವೃಕ್ಷದಂತಿದ್ದು (ವೃಂದಾವನದಲ್ಲಿ) ಪ್ರಕಾಶಿಸುತ್ತಿರುವರು. ಭಕ್ತರ ಸಮೂಹವೇ ಸಾಕ್ಷಿಯಾಗಿ ಹೀಗೆ ಹೇಳುತ್ತದೆ.

ಶ್ಲೋಕ:– ಅತೋ ಭಕ್ತೈ ರೇಕದಾಪಿ ಶಾಲ್ಮಲೀ ಮಜ್ಜನಂ ತಥಾ ।
ತಪೋವನಾಭಿಗಮನಂ ಪಂಚವೃಂದಾವನಸ್ಯ ಹಿ ॥ ೩೦ ॥
ತ್ರಿವಿಕ್ರಮಸ್ಯ ವ್ಯಾಸಸ್ಯ ವೇಣುಕೃಷ್ಣಸ್ಯ ಮಾರುತೇಃ ।
ಶ್ರೀ ಮದ್ಧವಲಗಂಗಾದೇಃ ಸೇವನಂ ಸರ್ವಕಾಮದಮ್ ॥ ೩೧ ॥

ಅರ್ಥ :– ಆದ್ದರಿಂದ ಭಕ್ತರು ಒಮ್ಮೆಯಾದರೂ ತಪೋವನಕ್ಕೆ ಹೋಗುವದು. ಶಾಲ್ಮಲೀ ನದಿಯಲ್ಲಿ ಸ್ನಾನ ಮಾಡುವುದು ಹಾಗೆಯೇ ತ್ರಿವಿಕ್ರಮದೇವರ ವೇದವ್ಯಾಸರ ವೇಣುಗೋಪಾಲಕೃಷ್ಣನ, ಮುಖ್ಯಪ್ರಾಣನ ವಾದಿರಾಜರ ಪಂಚವೃಂದಾವನದ ಧವಳಗಂಗಾದಿಗಳ ಸೇವನೆ ಮಾಡುವುದು ಸರ್ವಕಾಮಪ್ರದವು (ಅಂದರೆ) ಇವುಗಳನ್ನು ಆಚರಿಸಿದವನು ಸರ್ವಾಭೀಷ್ಟಗಳನ್ನು ಪಡೆಯುವನು.

ಶ್ಲೋಕ:– ಸ್ವಾಪ್ನವೃಂದಾವನಾಖ್ಯಾನಪಠನಂ ಮದ್ವಸದ್ಗುರೋಃ ।
ಭಾಷ್ಯಾದಿ ಸರ್ವಮೂಲಾನಾಂ ಕೃತೀನಾಂ ಪಠನಂ ತಥಾ ॥ ೩೨ ॥
ರಘುನಾಥಾರ್ಯಭಕ್ತಾಗ್ರ್ಯ ರಚಿತಸ್ಯ ಶುಭಾಪ್ತಯೇ ।
ವಾದಿರಾಡ್ ವೃತ್ತರತ್ನಾನಾಂ ಸಂಗ್ರಹಸ್ಯ ಚ ಕೀರ್ತನಮ್ ॥ ೩೩ ॥
ಧರ್ಮಾರ್ಥಕಾಮಮೋಕ್ಷಾಖ್ಯಪುರುಷಾರ್ಥೈಕಸಾಧನಮ್ ।
ಇತ್ಯಾದಿನಿಯಮೋಪೇತಾಃ ಭಕ್ತಾಃ ಪ್ರಾಪ್ಸ್ಯಂತ್ಯಭೀಪ್ಸಿತಮ್ ॥ ೩೪ ॥

ಅರ್ಥ :– ಸ್ವಾಪ್ನವೃಂದಾವನಾಖ್ಯಾನವನ್ನು ಪಠಿಸುವದು, ಸದ್ಗುರುಗಳಾದ ಮಧ್ವಾಚಾರ್ಯರ ಭಾಷ್ಯಾದಿ ಸರ್ವಮೂಲಗ್ರಂಥಗಳನ್ನು ಪಠಿಸುವುದು, ಹಾಗೂ ಶುಭ ಪ್ರಾಪ್ತಿಗೆ ವಾದಿರಾಜರ ಶ್ರೇಷ್ಠಭಕ್ತರಾದ ರಘುನಾಥಾಚಾರ್ಯರಿಂದ ರಚಿತವಾದ "ವೃತ್ತ ರತ್ನ ಸಂಗ್ರಹ" ಕೃತಿಯನ್ನು ಕೀರ್ತನ ಮಾಡುವುದು, ಧರ್ಮ ಅರ್ಥ ಕಾಮ ಮೊಕ್ಷಗಳೆಂಬ ಪುರುಷಾರ್ಥಕ್ಕೆ ಸಾಧನ ಮಾಡುವುದು ಇವೇ ಮೊದಲಾದ ನಿಯಮದಿಂದ ಕೂಡಿದ ಭಕ್ತರು ತಮ್ಮ ಅಭಿಷ್ಟಗಳನ್ನು ಹೊಂದುವರು.

ಶ್ಲೋಕ:– ಋಜುಗಣವರತಾ ಶ್ರೀ ವಾದಿರಾಜಸ್ಯಮೋದಾತ್ ।
ಶ್ರುತಿಮುಖವಚನೌಘೈಃ ಸಾಧೀತಾऽಸ್ಮದ್ಗುರೂಕ್ತ್ಯಾ ॥ ೩೫ ॥
ಋಜುವರಪದಭಕ್ತೈಃ ಸ್ಮರ್ಯತಾಂ ಸರ್ವದೇಯಂ ।
ಹರಿಗುರುಕರುಣಾಯಾಃ ಪಾತ್ರಾತಾಂ ನೀಯತಾಂ ಸ್ವಮ್ ॥ ೩೬ ॥

ಅರ್ಥ :– ನನ್ನ ಗುರುಗಳು ಹೇಳಿದ ಶ್ರುತಿ ಮೊದಲಾದ ವಾಕ್ಯಗಳ ಸಮೂಹದಿಂದ ಶ್ರೀ ವಾದಿರಾಜರು ಋಜುಗಣಶ್ರೇಷ್ಠರೆನ್ನುವುದು ಸುಖವಾಗಿಯೇ ಸಾಧಿಸಲ್ಪಟ್ಟಿತು. ಋಜು ಶ್ರೇಷ್ಠರ ಪಾದ ಭಕ್ತರುಗಳಿಂದ ಇದು ಸರ್ವದಾ ಸ್ಮರಿಸಲ್ಪಡಬೇಕು ತಮ್ಮನ್ನು ಹರಿಗುರುಗಳ ಕರುಣೆಗೆ ಪಾತ್ರರನ್ನಾಗಿ ಮಾಡುತ್ತದೆ.

ಶ್ಲೋಕ:– ಇತಿ ಶ್ರೀ ವೇದನಿಧಿತೀರ್ಥಾಂತೇವಾಸಿ ಶ್ರೀರಾಮಚಂದ್ರಚಾರ್ಯವಿರಚಿತೇ
ಶ್ರೀ ವಾದಿರಾಜಗುರುವರ ಚರಿತಾಮೃತೇ ಅಷ್ಟಮಬಿಂದುಃ ಸಮಾಪ್ತ ಃ ।

ಇಲ್ಲಿಗೆ ಶ್ರೀ ವೇದನಿಧಿತೀರ್ಥರ ವಿದ್ಯಾಶಿಷ್ಯರಾದ ರಾಮಚಂದ್ರಾಚಾರ್ಯರಿಂದ ವಿರಚಿತವಾದ ಶ್ರೀ ವಾದಿರಾಜಗುರುವರ ಚರಿತಾಮೃತದಲ್ಲಿ ಎಂಟನೆಯ ಬಿಂದುವು ಮುಗಿಯಿತು.

॥ ನವಮ ಬಿಂದುಃ ॥

ಶ್ಲೋಕ:– **ದೇವಕ್ಯಾ ಬಾಲಲೀಲಾಯಾಃ ಸಂದರ್ಶನಸಮುತ್ಕಯಾ ।**
ಪ್ರಾರ್ಥಿತೋ ಬಾಲರೂಪಸ್ಸನ್ ಮಂಥಾನಂ ಮಾತೃಹಸ್ತಗಮ್ ॥ ೧ ॥
ಹರನ್ ರಹಸಿ ಭೈಷ್ಮ್ಯಾ ಪ್ರಾಗ್ದೃಷ್ಟಸ್ತುಷ್ಟ ಹೃದಾ ತದಾ ।
ಸಂಪ್ರಾರ್ಥಿತೋ ದೇವಶಿಲ್ಪಿಕರಾತ್ಸ್ವಪ್ರತಿಮಾಂ ಶುಭಾಮ್ ॥ ೨ ॥
ಸೂತ್ರಮಂಥಾನಹಸ್ತಾಂ ಶ್ರೀದಿವ್ಯಗೋಪಾರ್ಭಕಾಕೃತಿಮ್ ।
ಪ್ರಿಯಾಯೈ ಕಾರಯಿತ್ವಾ ಯಾಂ ದದೌ ಸಾ ಪೂಜಿತಾ ತಯಾ ॥ ೩ ॥

ಅರ್ಥ:– (ಶ್ರೀ ಕೃಷ್ಣನು ಗೋಕುಲದಲ್ಲಿ ಬೆಳೆದವನಾದ್ದರಿಂದ, ಅವನ ತಾಯಿ ದೇವಕಿಯು ಶ್ರೀಕೃಷ್ಣನು ಬಾಲ ಲೀಲೆಗಳನ್ನು ನೋಡಿರಲಿಲ್ಲ)

ಬಾಲಲೀಲೆಗಳನ್ನು ನೋಡಬೇಕೆಂಬ ಉತ್ಸಾಹದಿಂದ ದೇವಕಿಯು ಶ್ರೀ ಕೃಷ್ಣನನ್ನು ಪ್ರಾರ್ಥಿಸಲು ತಾಯಿಯ ಕೈಯ ಲ್ಲಿದ್ದ ಕಡಗೋಲನ್ನು ಅಪಹರಿಸಿ ಬಾಲ ರೂಪನಾಗಲು ರಹಸ್ಯದಲ್ಲಿ ರುಕ್ಮಿಣಿಯು ಹಿಂದೆ ಆ ರೂಪವನ್ನು ನೋಡಿದ್ದಳು. ಸಂತುಷ್ಟಳಾದ ಅವಳ ಆಗ ಆರೂಪದ ಪ್ರತಿಮೆ ಬೇಕೆಂದು ಪ್ರಾರ್ಥಿಸಲು (ಶ್ರೀ ಕೃಷ್ಣನು) ದೇವ ಶಿಲ್ಪಿಯಾದ ವಿಶ್ವಕರ್ಮನಿಗೆ ಹೇಳಿ ಕಡಗೋಲು ಮತ್ತು ಹಗ್ಗವನ್ನು ಕೈಯಲ್ಲಿ ಧರಿಸಿದ ದಿವ್ಯ ಬಾಲಗೋಪಾಲ ರೂಪದ ಶ್ರೇಷ್ಠವಾದ ಪ್ರತಿಮೆಯನ್ನು ತನ್ನ ಪ್ರಿಯೆಗಾಗಿ ಮಾಡಿಸಿ ಅವಳಿಗೆ ಕೊಟ್ಟನು. ಆ ಪ್ರತಿಮೆಯು ಅವಳಿಂದ ಪೂಜಿಸಲ್ಪಟ್ಟಿತು.

ಶ್ಲೋಕ:– **ನೌಕಾದ್ವಾರಾ ಸಮಾಯಾತಾ ಶ್ರೀ ಮಧ್ವಮುನಿನಾ ತತಃ ।**
ರೂಪ್ಯಪೀಠನಗರ್ಯಾಂ ಹಿ ಸ್ಥಾಪಿತಾ ಪೂಜಿತಾ ಯಥಾ ॥ ೪ ॥

ಅರ್ಥ:– (ಸಾವಿರಾರುವರ್ಷಗಳ) ಬಳಿಕ ನೌಕೆಯಲ್ಲಿ ಬಂದಂತಹ ಆಕೃಷ್ಣ ಪ್ರತಿಮೆಯನ್ನು ಶ್ರೀ ಮಧ್ವ ಮುನಿಗಳು ರೂಪ್ಯಪೀಠನಗರದಲ್ಲಿ (ಇಂದಿನ ಉಡುಪಿಕ್ಷೇತ್ರದಲ್ಲಿ) ಸ್ಥಾಪಿಸಿ ಪೂಜಿಸಿದರು.

ಶ್ಲೋಕ:– **ಶ್ರೀ ಕೃಷ್ಣ ಬಾಲಮೂರ್ತಿಸ್ಸಾ ಜಯತ್ಯಖಿಲಕಾಮದಾ ।**
ರೂಪ್ಯಪೀಠಪುರೀ ರಮ್ಯಾ ಕೃಷ್ಣೇನ ಪ್ರಥಿತಾ ಯಥಾ ॥ ೫ ॥
ತಥಾ ತ್ರಿವಿಕ್ರಮಶ್ಚಾಪಿ ಬ್ರಹ್ಮಣಾ ಪೂಜಿತಃ ಪುರಾ ।
ಸೋದಾರಾಜ ಪ್ರಾರ್ಥನಯಾ ಸೋದಾಂ ಸಂಪ್ರಾಪಿತಃ ಶುಭಃ ॥ ೬ ॥
ಜಯತ್ಯತಿತರಾಂ ದೇವಃ ಸರ್ವಾಭೀಷ್ಟಾರ್ಥದಾಯಕಃ ।
ತಥಾ ತ್ರಿವಿಕ್ರಮೇಣ ಶ್ರೀ ಸೋದಾಽಪಿ ಪ್ರಥಿತಾ ಭುವಿ ॥ ೭ ॥

ಅರ್ಥ :– ಸರ್ವಾಭೀಷ್ಟವನ್ನು ಕೊಡುವ ಶ್ರೀಕೃಷ್ಣನ ಆಬಾಲಮೂರ್ತಿಯು ಉತ್ಕೃಷ್ಟವಾಗಿದೆ. ಮನೋಹರನಾದ ಶ್ರೀಕೃಷ್ಣನಿಂದ ಹೇಗೆ ಉಡುಪಿಕ್ಷೇತ್ರವು ಪ್ರಸಿದ್ಧವಾಗಿದೆಯೋ ಹಾಗೆ ಸೋದಾಪುರಿ ರಾಜನ ಪ್ರಾರ್ಥನೆಯಿಂದ ಸೋದಾಪುರಿಗೆ ಬಂದ, ಹಿಂದೆ ಬ್ರಹ್ಮನಿಂದ ಪೂಜಿತವಾದ ಸರ್ವಾಭೀಷ್ಟದಾಯಕವಾದ, ತ್ರಿವಿಕ್ರಮ ದೇವರೂ ಕೂಡ ಬಹಳವಾಗಿ ಉತ್ಕೃಷ್ಟನಾಗಿದ್ದಾನೆ. ಹಾಗೆಯೇ ತ್ರಿವಿಕ್ರಮನಿಂದಾಗಿ ಸೋದಾಪುರಿಯೂ ಕೂಡ ಭೂಮಿಯಲ್ಲಿ ಪ್ರಸಿದ್ಧವಾಗಿದೆ.

ಶ್ಲೋಕ:– **ಹರೇರ್ಲೀಲಾತನುಃ ಕೋಲಃ ಶ್ರೀಮಧ್ವಕರ ಪೂಜಿತಃ ।**
ವಿಷ್ಣುತೀರ್ಥೇಷ್ಟದಃ ಪಾಯಾದಪಾಯಾದ್ಭಕ್ತವೃಂದಕಮ್ ॥ ೮ ॥

ಅರ್ಥ:– ಶ್ರೀ ವಿಷ್ಣುತೀರ್ಥರಿಗೆ ಇಷ್ಟದಾಯಕವಾದ ಶ್ರೀ ಮಧ್ವಕರಾರ್ಚಿತವಾದ ಶ್ರೀ ಹರಿಯ ಅವತಾರ ರೂಪವಾದ ಭೂ ವರಾಹನು ಭಕ್ತರ ಸಮೂಹವನ್ನು ಅಪಾಯದಿಂದ ಕಾಪಾಡಲಿ

ಶ್ಲೋಕ:– **ಶ್ರೀವಾದಿರಾಜಹಸ್ತಾಬ್ಜಪೂಜಿತೌ ಕಾಮಿತಾನಿ ನಃ ।**
ವ್ಯಾಸಾಶ್ವವದನೌ ದೇವೌ ಸಾಧಯೇತಾಂ ನಿರಂತರಮ್ ॥ ೯ ॥

ಅರ್ಥ:– ಶ್ರೀ ವಾದಿರಾಜ ಕರಕಮಲಗಳಿಂದ ಪೂಜಿತರಾದ ವೇದವ್ಯಾಸ ಹಯಗ್ರೀವ ದೇವರುಗಳು ನಿರಂತರವಾಗಿ ನಮ್ಮ ಅಭಿಷ್ಟಗಳನ್ನು ನೆರವೇರಿಸುವವರಾಗಲಿ

ಶ್ಲೋಕ:– **ಶ್ರೀ ರಾಮವಿಠ್ಠಲೌ ವಾಲಿಸುಗ್ರೀವಾಭ್ಯಾಂ ಪುರಾಽರ್ಚಿತೌ ।**
ಪಾಪಹಾನಿಂ ಜ್ಞಾನವೃದ್ಧಿಂ ಕ್ರಿಯಾಸ್ತಾಮಸ್ತದೋಷಕೌ ॥ ೧೦ ॥

ಅರ್ಥ:– ಹಿಂದೆ ವಾಲಿಸುಗ್ರೀವರಿಂದ ಪೂಜಿತರಾದ, ದೋಷರಹಿತರಾದ ಶ್ರೀರಾಮ ವಿಠಲರು (ನಮಗೆ) ಪಾಪಹಾನಿಯನ್ನೂ ಜ್ಞಾನ ವೃದ್ಧಿಯನ್ನೂ ಮಾಡಲಿ

ಶ್ಲೋಕ:– **ಮಧ್ವಾಖ್ಯಭಾಸ್ಕರೋ ನಿತ್ಯಂ ಮಮ ಹೃತ್ಕಮಲಸ್ಥಿತಃ ।**
ತಮಶ್ಚಯಂ ಪರಿಹರೇದ್ರಾಜಮಾನಗವಾಂ ಗಣೈಃ ॥ ೧೧ ॥

ಅರ್ಥ:– ಮಧ್ವರೆಂಬ ಸೂರ್ಯನು ನಿತ್ಯದಲ್ಲೂ ನನ್ನ ಹೃತ್ಕಮಲದಲ್ಲಿ ಸ್ಥಿತನಾಗಿದ್ದು ಅಜ್ಞಾನ ವೆಂಬ ಕತ್ತಲೆಯನ್ನು ಶ್ರೇಷ್ಠ ಪ್ರಮಾಣಗಳಾದ (ವೇದ) ವಾಕ್ಯಸಮೂಹಗಳಿಂದ ಪರಿಹರಿಸಲಿ.

ಶ್ಲೋಕ:– **ಶ್ರೀವಿಷ್ಣು ತೀರ್ಥೋ ಯತಿರಾಡ್ವಿರಕ್ತಾನಾಂ ಶಿರೋಮಣಿಃ ।**
ಲೋಕಾನುಗ್ರಹಕಾಮೋಽನ್ಯದುಷ್ಕರೇ ತಪಸಿ ಸ್ಥಿತಃ ॥ ೧೨ ॥
ಸಹ್ಯಾದ್ರಿಭಾಗವಿಲಸದ್ಧರಿಶ್ಚಂದ್ರಮಹೀಧರೇ ।
ದೀರ್ಘಜೀವೀ ಸ ಯೋಗೀಂದ್ರೋ ಭವತಾಚ್ಚಿತ್ತ ಶುದ್ಧಯೇ ॥ ೧೩ ॥

ಅರ್ಥ:– ವಿರಕ್ತರಲ್ಲಿ ಶಿರೋಮಣಿಯಂತಿರುವ, ಲೋಕಾನುಗ್ರಹ ಮಾಡಲಿಚ್ಛಿಸುವ ಯೋಗಿವರ್ಯರಾದ ಶ್ರೀ ವಿಷ್ಣುತೀರ್ಥರು ಅನ್ಯರಿಂದ ಅಸಾಧ್ಯವಾದ ತಪಸ್ಸಿನಲ್ಲಿ ಸ್ಥಿತರಾಗಿರುವರು ಸಹ್ಯಾದ್ರಿಪರ್ವತಗಳ ಸಾಲಿನಲ್ಲಿ ಹರಿಶ್ಚಂದ್ರ ಪರ್ವತದಲ್ಲಿ ತಪಸ್ಸುಮಾಡುತ್ತಿರುವ ದೀರ್ಘಾಯುಗಳಾದ ಯೋಗಿಶ್ರೇಷ್ಠರಾದ ಶ್ರೀ ವಿಷ್ಣುತೀರ್ಥರು ನಮ್ಮ ಮನಶುದ್ಧಿ ಮಾಡುವವರಾಗಲಿ.

ಶ್ಲೋಕ:– **ಶ್ರೀವಾಗೀಶಮುನೀಶೋಽಪಿ ಶ್ರೀಶಾನುಗ್ರಹಭಾಸುರಃ ।**
ದೋಷಶಾಂತ್ಯೈ ಪದಾಂಭೋಜ ಭಕ್ತಾನಾಂ ಭವತಾಚ್ಚಿರಮ್ ॥ ೧೪ ॥

ಅರ್ಥ:– ಶ್ರೀಶನ ಅನುಗ್ರಹದಿಂದ ಶೋಭಿಸುವ ಶ್ರೀವಾಗೀಶ ಮುನಿಗಳೂಕೂಡ ತಮ್ಮ ಪಾದ ಕಮಲ ಭಕ್ತರುಗಳ ದೋಷವನ್ನು ಸದಾ ಶಮನ ಗೊಳಿಸುವವರಾಗಲಿ.

ಶ್ಲೋಕ:– **ಕೋಲವ್ಯಾಸಹಯಗ್ರೀವಪದಾಬ್ಜಪರಿಸೇವಕಃ ।**
ಭಾವಿವಾಯುರ್ವಾದಿರಾಜಃ ಕಲ್ಪದ್ರುಃ ಕಾಮದೋಽಸ್ತು ನಃ ॥ ೧೫ ॥

ಅರ್ಥ :– ಭೂ ವರಾಹ ವೇದವ್ಯಾಸ ಹಯಗ್ರೀವದೇವರ ಪಾದಕಮಲ ಸೇವಕರಾದ ಭಾವೀ ವಾಯುಗಳಾದ ಕಲ್ಪದ್ರುಮದಂತಿರುವ ಶ್ರೀ ವಾದಿರಾಜರು ನಮಗೆ ಅಭೀಷ್ಟಗಳನ್ನು ಕೊಡುವವರಾಗಲಿ

ಶ್ಲೋಕ:– **ವೇದವೇದ್ಯಾನವದ್ಯಾತ್ಮಹಯಗ್ರೀವಾರ್ಚಕಃ ಸದಾ ।**
ವೇದವೇದ್ಯಾಖ್ಯಯೋಗೀಂದ್ರಃ ಪ್ರೀಯತಾಂ ಯತಿರಾಡೃಜುಃ ॥ ೧೬ ॥

ಅರ್ಥ:– ವೇದಗಳನ್ನುತಿಳಿದ ದೋಷರಾಹಿತಾತ್ಮಕನಾದ, ಯತಿವರ್ಯನಾದ ಋಜುವಾದ ವೇದವೇದ್ಯನೆಂಬ ಹೆಸರಿನ ಯೋಗಿಶ್ರೇಷ್ಠನು ಪ್ರೀತನಾಗಲಿ.

ಶ್ಲೋಕ:– **ಶ್ರೀಮದ್ವೇದಾಂತಸಿದ್ಧಾಂತಬೋಧನೋತ್ಕಃ ಸದಾ ಭುವಿ ।**
ಶ್ರೀಮದ್ವೇದನಿಧಿರ್ಜ್ಞಾನಂ ದದ್ಯಾದ್ವಿದ್ಯಾಗುರುರ್ಮಮ ॥ ೧೭ ॥

ಅರ್ಥ:– ಭೂಮಿಯಲ್ಲಿ ಸಂಪದ್ಭರಿತವಾದ ವೇದಾಂತ ಸಿದ್ಧಾಂತವನ್ನು ಬೋಧಿಸಲು ಸದಾ ಉತ್ಸುಕನಾದ, ನನ್ನ ವಿದ್ಯಾಗುರುವಾದ ಶ್ರೀ ವೇದನಿಧಿಗಳು ಜ್ಞಾನವನ್ನು ದಯಪಾಲಿಸಲಿ

ಶ್ಲೋಕ:– **ಇತಿ ಋಜುವರರಾಜದ್ವಾದಿರಾಜಸ್ಯ ಭವ್ಯಂ**
ಚರಿತಮಮೃತಮೇತತ್ಸೇವ್ಯತಾಂ ಮೋಕ್ಷದಾಯಿ ।

ಅರ್ಥ:– ಋಜುಶ್ರೇಷ್ಠರಾಗಿ ಪ್ರಕಾಶಿಸುವ ಶ್ರೀ ವಾದಿರಾಜರ, ಮೋಕ್ಷದಾಯಕವಾದ ಈ ಭವ್ಯ ಚರಿತಾಮೃತವು ಸೇವಿಸಲ್ಪಡಲಿ.

ಶ್ಲೋಕ:– **ಇಹ ಚ ದುರಿತಹಾರಿ ಸ್ವೇಷ್ಟಸರ್ವಾರ್ಥದಂ ದ್ರಾಗ್**
ಜಯತು ರಚಿತಮೇತದ್ರಾಮಚಂದ್ರೇಣ ಭೂಮೌ ॥ ೧೮ ॥

ಅರ್ಥ:– ಈ ಲೋಕದಲ್ಲಿ ದುರಿತಗಳನ್ನು ಪರಿಹರಿಸುವ, ತಮ್ಮ ಅಭೀಷ್ಟಗಳನ್ನು ಶೀಘ್ರವಾಗಿ ಕೊಡುವ ರಾಮಚಂದ್ರಾಚಾರ್ಯರಿಂದ ರಚಿತವಾದ ಈ ಗ್ರಂಥವು ಭೂಮಿಯಲ್ಲಿ ಉತ್ಕೃಷ್ಟವಾಗಿದೆ.

ಶ್ಲೋಕ:– **ಶ್ರೀ ವಾದಿರಾಜಃ ಶಿವಶಕ್ರಮುಖ್ಯ**
ದೇವಾಭಿವಂದ್ಯಾಂಘ್ರಿಸರೋಜ ಯುಗ್ಮಃ ।
ಧೀಂತಾಂ ಕೃಪಾವೃಷ್ಟ್ಯ ಭಿವರ್ಷಣೇನ
ಚಿಂತಾಂ ದುರಂತಾಂ ಮಮ ಮಾನಸೋತ್ಥಾಮ್ ॥ ೧೯ ॥

ಅರ್ಥ :– ರುದ್ರ ಇಂದ್ರರೇ ಮೊದಲಿನ ದೇವತೆಗಳಿಂದ ವಂದಿತವಾದ ಪಾದಕಮಲಗಳನ್ನುಳ್ಳ ಶ್ರೀವಾದಿರಾಜರು ಕೃಪಾದೃಷ್ಟಿಯನ್ನು ವರ್ಷಿಸುವ ಮೂಲಕ ನನ್ನ ಮನಸ್ಸಿನಲ್ಲಿ ಉಂಟಾದ ಚಿಂತೆಯನ್ನು ದುರಂತವನ್ನೂ ನಾಶಮಾಡಲಿ.

ಶ್ಲೋಕ:– **ಶ್ರೀಮಧ್ವವಾದಿರಾಡ್ಹಂಸೌ ಗುರೂತ್ತಂಸೌ ಗತಾಂಹಸೌ ।**
ಹೃದ್ಯಾನವದ್ಯವಿದ್ಯಾಂ ಮೇ ದದ್ಯಾಸ್ತಾಂ ಕರುಣಾನಿಧೀ ॥ ೨೦ ॥

ಅರ್ಥ:– ಕರುಣಾನಿಧಿಗಳಾದ, ದೋಷರಹಿತವಾದ, ಗುರುಶ್ರೇಷ್ಠರಾದ ಈ ಮಧ್ವ ಮತ್ತು ವಾದಿರಾಜರು ಸಂತೋಷ ದಿಂದ ನನಗೆ ದೋಷರಹಿತರಾದ ವಿದ್ಯೆಯನ್ನು ಕೊಡುವವರಾಗಲಿ

ಶ್ಲೋಕ:– **ಶ್ರೀ ವೇದನಿಧಿಹೃದ್ಗ ಶ್ರೀವಾದಿರಾಜಹೃದಬ್ಜ ಗಃ ।**
ಹಯಾಸ್ಯರೂಪೀ ಶ್ರೀಕೃಷ್ಣೋ ಗ್ರಂಥೇನಾನೇನ ತೃಪ್ಯತು ॥ ೨೧ ॥

ಅರ್ಥ:– ಶ್ರೀ ವೇದನಿಧಿ ಹೃದಯಾಂತರ್ಗತ, ಶ್ರೀ ವಾದಿರಾಜ ಹೃತ್ಕಮಲ ನಿವಾಸಿ ಹಯಗ್ರೀವ ರೂಪಿಯಾದ ಶ್ರೀಕೃಷ್ಣನು ಈ ಗ್ರಂಥದಿಂದ ತೃಪ್ತನಾಗಲಿ.

ಇತಿ ಶ್ರೀ ಪರಮಹಂಸಪರಿವ್ರಾಜಕಾಚಾರ್ಯಭಾವಿಸಮೀರ ಶ್ರೀವಾದಿರಾಜ ಪೂಜ್ಯ ಚರಣ
ಪ್ರಶಿಷ್ಯ ಶ್ರೀ ಶ್ರೀಮದ್ವೇದನಿಧಿತೀರ್ಥಾಂತೇವಾಸಿ ರಾಮಚಂದ್ರಾಚಾರ್ಯ ಪ್ರಣೀತೇ
ಶ್ರೀವಾದಿರಾಜಗುರುವರಚರಿತಾಮೃತೇ ನಮಮ ಬಿಂದುಃ ಸಮಾಪ್ತಃ ।
॥ ಸಂಪೂರ್ಣಮಿದಂ ಶ್ರೀವಾದಿರಾಜಗುರುವರಚರಿತಾಮೃತಮ್ ॥
॥ ಶ್ರೀಮಧ್ವೇಶಾರ್ಪಣಮಸ್ತು ॥

ಇಲ್ಲಿಗೆ ಶ್ರೀ ಪರಮಹಂಸ ಪರಿವ್ರಾಜಕಾಚಾರ್ಯ ಭಾವಿಸಮೀರ ಶ್ರೀವಾದಿರಾಜ ಪೂಜ್ಯ ಚರಣರ ಪ್ರಶಿಷ್ಯರಾದ ಶ್ರೀ ಶ್ರೀ ಮದ್ವೇದನಿಧಿ ತೀರ್ಥರ ವಿದ್ಯಾಶಿಷ್ಯರಾದ ರಾಮಚಂದ್ರಾಚಾರ್ಯರಿಂದ ರಚಿತವಾದ ಶ್ರೀ ವಾದಿರಾಜಗುರುವರ ಚರಿತಾಮೃತದಲ್ಲಿ ಒಂಬತ್ತನೆಯ ಬಿಂದು ಮುಗಿಯಿತು.

ಇಲ್ಲಿಗೆ ಶ್ರೀ ವಾದಿರಾಜಗುರುವರ ಚರಿತಾಮೃತಮುಗಿಯಿತು.
ಶ್ರೀ ಕೃಷ್ಣಾರ್ಪಣಮಸ್ತು.

೧. ಪರಿಶಿಷ್ಟ

ವಾದಿರಾಜರ ಮಹಿಮೆಗಳು

೧. ಹರಕೆ ಸೇವೆ ಮಾಡಿದ ದಂಪತಿಗಳಿಗೆ ವಾಗೀಶ ತೀರ್ಥರ ಫಲಮಂತ್ರಾಕ್ಷತೆಯಿಂದ ಹೊರಗೆ ಜನನವಾದರೆ ಮಠಕ್ಕೆ ಎಂಬ ಸಂಕೇತದಿಂದ ಅವತರಿಸಿದ ಮಹಿಮೆ. ೨. ಹುಟ್ಟುವಾಗಲೇ ಚಿನ್ನದ ಹರಿವಾಣದಲ್ಲಿ ಭೂ ಸ್ಪರ್ಶವಾಗದಂತೆ ಕೈಜೋಡಿಸಿಕೊಂಡು ಅವತರಿಸಿದ್ದು. ೩. ತಂದೆ ತಾಯಿಗಳು ಯಾರು ನಿನಗೆ ಇಷ್ಟ ಎಂದರೆ "ಭೂ ವರಾಹ ದೇವರು ಇಷ್ಟ" ಎಂದದ್ದು. ೪. ಮಿತ್ರ ಬಾಲಕರು ಮಠದ ಬಾಳೆಹಣ್ಣನ್ನು ಕದ್ದು ತಿನ್ನೋಣ ಎಂದರೆ "ಬೇಡ, ದೇವರು ನೋಡಿ ನರಕ ಕೊಡುತ್ತಾನೆ" ಎಂದು ಹೇಳಿ ಕಳ್ಳತನ ತಪ್ಪಿಸಿದ್ದು, ಆಟವು ವಿದ್ಯೆಗೆ ವಿಘ್ನ ಎಂದು ಬೋಧಿಸಿ ಸಂಗಡಿಗರನ್ನು ಆಟದಿಂದ ತಪ್ಪಿಸಿದ್ದು. ೫. ಲಕ್ಷ್ಮೀ ಶೋಭನೆ ಹಾಡಿನಿಂದ ಮದುವಣಿಗನನ್ನು ಬದುಕಿಸಿದ್ದು. ೬. ರಾಮೇಶ್ವರದಿಂದ ರಹಸ್ಯ ಕೇಳಿ ಹಿಂತಿರುಗಿದ್ದು. ೭. ಶೂದ್ರರಾಜನನ್ನು ಸ್ತಂಭಿಸಿ ಬ್ರಾಹ್ಮಣರನ್ನು ರಕ್ಷಿಸಿದ್ದು. ೮. ಜಹಗೀರದಾರನ ಪೈಶಾಚ ಸಂತಾನ ಜಾಡಿಸಿ ಉದ್ಧರಿಸಿದ್ದು. ೯. ಕಳ್ಳರು ಕದಿಯಲಿಕ್ಕೆ ಬಂದು ನೋಡಿ ಶರಣಾಗತರಾದದ್ದು. ೧೦. ಪೂನಾದಲ್ಲಿ ರುಕ್ಮಿಣೀಶ ವಿಜಯ ೧೯ ದಿನಗಳಲ್ಲಿ ನಿರ್ಮಾಣ ಮಾಡಿದ್ದು. ೧೧. ಮಂತ್ರಿಸಿದ ನೀರಿನಿಂದ ಅಚ್ಯುತರಾಯನ (೧೫೩೦-೧೫೪೨) ವ್ಯಾಧಿ ನೀಗಿಸಿದ್ದು. ೧೨. ಧರ್ಮಸ್ಥಳದಲ್ಲಿ ಮಂಜುನಾಥ ಪ್ರತಿಷ್ಠೆ ಮಾಡಿ ಭೂತ ಕ್ಷೇತ್ರವನ್ನು ಧರ್ಮಕ್ಷೇತ್ರವನ್ನಾಗಿ ಮಾಡಿದ್ದು. ೧೩. ಹಯಗ್ರೀವ ಸಾಲಿಗ್ರಾಮ ಧನಿಕ ಲೋಭಿಗೆ ಸ್ವಲ್ಪಕಾಲ ಪೂಜೆಗಾಗಿ ಕೊಟ್ಟು ಅವನನ್ನು ಉದ್ಧರಿಸಿ ವೈಕುಂಠದಾಸರನನ್ನಾಗಿ ಮಾಡಿದ್ದು. ೧೪. ಹಯಗ್ರೀವ ಸ್ವಾಮಿ ತನ್ನನ್ನು ಕದಿಯಲು ಬಂದಿದ್ದ ಕಳ್ಳರನ್ನು ಎರಡು ಸಲ ಓಡಿಸಿ, ವಾದಿರಾಜರ ಬಳಿಗೆ ಬಂದದ್ದು. ೧೫. ಹಯಗ್ರೀವ ಸಾಲಿಗ್ರಾಮ ಬೇಡಿದ ಬ್ರಾಹ್ಮಣನಿಗೆ ಕೊಡಲು ಆ ಸಾಲಿಗ್ರಾಮ ದೇವರು ಆ ಬ್ರಾಹ್ಮಣನನ್ನು ಭೀತಿಪಡಿಸಿ ಪುನಃ ವಾದಿರಾಜರ ಬಳಿಗೇ ಬಂದದ್ದು. ೧೬. ಅಯೋಧ್ಯೆಯ ಗುರುಡ ಮುಖ್ಯ-ಪ್ರಾಣರನ್ನು ಶ್ರೀಕೃಷ್ಣ ಮಠದಲ್ಲಿ ಪ್ರತಿಷ್ಠೆ ಮಾಡಿದ್ದು. ೧೭. ಒಂದು ಮಧ್ವ ಪ್ರತಿಮೆಯನ್ನು ಪಾಜಕ ಕ್ಷೇತ್ರದಲ್ಲೂ ಪ್ರತಿಷ್ಠೆ ಮಾಡಿದ್ದು. ೧೮. ದೆಹಲಿ ರಾಜನು ಕಳುಹಿಸಿದ ನಾಣ್ಯಗಳಿಂದ ಕೃಷ್ಣ ಮಠಕ್ಕೆ ಬಂಗಾರದ ತಗಡು ಮಾಡಿಸದೆ ಭೂಗತ ಮಾಡಿ ನಾಗ ಪ್ರತಿಷ್ಠೆ ಮಾಡಿ, ಉಳಿದ ನಾಣ್ಯಗಳನ್ನು ಸೋದೆ ಮಠದಲ್ಲಿ ಭೂಗತಮಾಡಿ ಭೂತರಾಜರ ಪ್ರತಿಷ್ಠೆ ಮಾಡಿದ್ದು. ೧೯. ಕೋಟೇಶ್ವರ ಗ್ರಾಮಸ್ಥರನ್ನು ಸೋದೆ ಮಠದ ಶಿಷ್ಯರನ್ನಾಗಿ ಮಾಡಿಕೊಂಡಿದ್ದು. ೨೦. ಸೊನ್ನಗಾರನಿಂದ ಹಯಗ್ರೀವ ಪ್ರತಿಮೆ ಸಂಪಾದಿಸಿ ಸೋನಾರರನ್ನು ಸೋದೆ ಮಠದ ಶಿಷ್ಯರನ್ನಾಗಿ ಮಾಡಿಕೊಂಡಿದ್ದು. ೨೧. ಏಕಾದಶೀ ದಿನ ಮಾನಸ ಪೂಜೆ ಮಾಡಿ ಅಲಂಕಾರ ಪೂಜೆಯಾದ ಮೇಲೆ ಫಲಸಮರ್ಪಣೆ ಮಾಡಿ ಸಾಧನ ದ್ವಾದಶಿ ಪೂಜೆ ಮಾಡಿದ್ದು. ೨೨. ನಾರಳ ಗ್ರಾಮದ ನಾರಾಯಣಾಚಾರ್ಯರಿಗೆ ಶಾಪಕೊಟ್ಟು ಅವರನ್ನು ಉದ್ಧರಿಸಿದ್ದು. ೨೩. ಮಠದ ಗುಮಾಸ್ತನನ್ನು ಮುಂದಿನ ಜನ್ಮದಲ್ಲಿ ಜಗನ್ನಾಥ ದಾಸರನ್ನಾಗಿ ಮಾಡಿದ್ದು (ಕೊಂಡಪ್ಪ). ೨೪. ಮೂಢ ಶಿಷ್ಯನಿಂದ ಪಂಡಿತನ ವಿಜಯ ಮಾಡಿಸಿದ್ದು. ೨೫. "ಬಾರೋ

ಬೇಗ ಬಾರೋ ವೇಲಾಪುರ ಚೆನ್ನ"- ಎಂದು ಹಾಡು ಹೇಳಿ ಬೇಲೂರಿಲ್ಲಿ ತೇರೆಳೆದು ದೇವರ ರಥ ಮುಂದೆ ಬರುವಂತೆ ಮಾಡಿದ್ದು. ೨೬. ಧನಿಕನಿಗೆ ಒಂದು ಕಣ್ಣಿಗೆ ಬೆಣ್ಣೆ ಹಚ್ಚಿಸಿ ಇನ್ನೊಂದು ಕಣ್ಣಿಂದ ಕುದುರೆ ರೂಪದ ದೇವರನ್ನು ತೋರಿಸಿ ಕಡಲೇ ಹೊಲವನ್ನು ಸೋದೆ ಮಠಕ್ಕೆ ಪಡೆದದ್ದು. ೨೭. ಹಾಗೇ ಬೇಲೂರು ಹತ್ತಿರ ಪಾಳ್ಯದ ಪಾಳೆಯಗಾರನಿಗೆ ಕುದುರೆ ದೇವರನ್ನು ತೋರಿಸಿದ್ದು. ೨೮. ಗಿರಿ ನಾಮಕನ ಕುಷ್ಠರೋಗ ಪರಿಹರಿಸಿ ಸಂತಾನ ಅನುಗ್ರಹಿಸಿದ್ದು. ೨೯. ಪಾದಮೃತ್ತಿಕಾ ಲೇಪದಿಂದ ಕುಷ್ಠಿಯ ರೋಗ ಪರಿಹರಿಸಿದ್ದು. ೩೦. ತುರುಕನ ತಲೆನೋವನ್ನು ಕಳೆದುದು. ೩೧. ಮೈ ತೊಳೆದ ನೀರಿನಿಂದ ಶೈವನ ರೋಗವನ್ನು ನೀಗಿಸಿದ್ದು. ೩೨. ಉಚ್ಛಿಷ್ಟ ಭೋಜನ ಮಾಡಿಸಿ ಉದರ ವ್ಯಾಧಿ ಪರಿಹರಿಸಿದ್ದು. ೩೩. ಅದ್ವೈತ ಮತದ "ಶ್ರೀದ"ನಿಗೆ ದ್ವೈತ ಹೇಳಿ ವೈಷ್ಣವ ಕನ್ಯೆ ಮದುವೆ ಮಾಡಿಸಿದ್ದು. ೩೪. ಮಲ್ಲಣನನ್ನು ಜಯಿಸಿ ಅವರ ವೈಷ್ಣವ ದ್ವೇಷ ಬಿಡಿಸಿದ್ದು. ೩೫. "ನೆನೆವೆನನು ದಿನ ನೀಲನೀರದ ವರ್ಣನಾ ಗುಣ ರನ್ನನಾ। ಮುನಿ ಜನಪ್ರಿಯ ಮುದ್ದು ಉಡುಪಿಯ ರಂಗನಾದಯಾಪಾಂಗನ" ಎಂಬ ಹಾಡಿನಿಂದ ದಶಮಸ್ಕಂಧ ಪಾರಾಯಣ ಫಲ ಅನುಗ್ರಹಿಸಿದ್ದು. ೩೬. ಕಡಿಯಲು ಸುತ್ತು ಹಾಕಿದ ಘಟ ಸರ್ಪದ ಗರ್ವ ಭಂಗ ಮಾಡಿದ್ದು. ೩೭. ಕುಮಾರ ಪರ್ವತದ ಬುಡದಲ್ಲಿ ಹುಲಿ ಹಸುಗಳಿಗೆ ಪರಸ್ಪರ ವೈರ ತಪ್ಪಿಸಿ ಬೆಟ್ಟದ ಮೇಲೆ ವಿಷ್ಣು ತೀರ್ಥರನ್ನು ಕಂಡು ಅವರಿಂದ ದೇವರನ್ನು ಪಡೆದು ಬಂದದ್ದು. ೩೮. ಪಂಢರಪುರದ ಬಳಿ ದರೋಡೆಗೆ ಬಂದ ಪಠಾಣರಿಂದಲೇ ಮಠದ ಸಾಮಾನುಗಳನ್ನು ಹೊರಿಸಿಕೊಂಡು ಪಂಢರಪುರಕ್ಕೆ ಬಂದದ್ದು. ೩೯. ಪಂಢರಪುರಕ್ಕೆ ಬಂದಿದ್ದಾಗ ವರಕೊಟ್ಟು ಸಂತಾನಕಾರಕರಾಗಿ ತುಕಾರಾಮನನ್ನು ಗೆದ್ದದ್ದು. ೪೦. ಕೃಷ್ಣ ಸ್ತುತಿ (ಯದಿದಿಶಸಿ ನಯನ ಪಟುತಾಂ) ಮತ್ತು ಲಕ್ಷ್ಮೀಸ್ತುತಿ ಮಾಡಿ ಅಂಧತ್ವವನ್ನು ಕಳೆದುಕೊಂಡ ಪರ್ಯಾಯ ಪೂಜೆ ಮಾಡಿದ್ದು. ೪೧. ಮುಂಭಾಗದಲ್ಲಿ ಭೂತರಾಜವಾಹಿತ ಪಲ್ಲಕ್ಕಿ ನೋಡಿ ಹೊಟ್ಟೆಕಿಚ್ಚಿನಿಂದ ಪಿಶಾಚ ವಶ ಮಾಡಿಕೊಂಡು ಎರಡೂ ಕಡೆ ಪೈಶಾಚ ವಾಹಿತ ವಾಹನನಾಗಿ ಬಂದ ಪರ ಮಠಾಧಿಪತಿಗೆ ಗರ್ವಭಂಗ ಮಾಡಿದ್ದು. ೪೨. ಉಡುಪಿಯಲ್ಲಿ ಪರ್ಯಾಯದ ಲಕ್ಷ ದೀಪೋತ್ಸವಕ್ಕೆ ಮಹಾವೃಷ್ಟಿಯಿಂದ ವಿಘ್ನ ಬರಲು "ಪಾಲ್ಗಡಲೊಡೆಯ ಬಾರೋ" ಎಂಬ ಕೀರ್ತನ ಹೇಳುತ್ತಾ ರಥವನ್ನೆಳೆದು ರಥದ ಮೇಲೆ ತೊಟ್ಟೂ ನೀರು ಸುರಿಯದೆ ಅನ್ಯತ್ರ ವೃಷ್ಟಿಯಾಗುವಂತೆ ಮಾಡಿದ್ದು. ೪೩. ಸಂಚಾರ ಕಾಲದಲ್ಲಿ ಒಂದು ರಾತ್ರಿ ಒಂದು ಅರಣ್ಯದಲ್ಲಿ ತನ್ನ ಸೇವಕರು ತನ್ನನ್ನಗಲಿ ಪರೆದಾಡುತ್ತಿರುವಾಗ "ಕಂಜಾಕ್ಷ ಕಾಯಯ್ಯಾ ಕರುಣಾ ನಿಧಿಯೇ ಬಲಭಂಜನುಜ ಬಾ ಚೆನ್ನ" ಎಂದು ಹಾಡಿ ಮಠೀಯರೆಲ್ಲರನ್ನೂ ತನ್ನ ಬಳಿಗೆ ಬರಮಾಡಿಕೊಂಡಿದ್ದು. ೪೪. ವೃತ್ತರತ್ನ ಸಂಗ್ರಹ ಬರೆದ ರಘನಾಥಾಚಾರ್ಯರ ಭಿಕ್ಷೆ ಸ್ವೀಕರಿಸಿ ಅವರ ಹಲ್ಲುನೋವು ವಾಸಿ ಮಾಡಿದ್ದು. ೪೫. ಸಮಗಾರನನ್ನು (ಚರ್ಮ ಹೊಲಿಯುವವನು) ಅವನ ವಿದ್ಯೆಯಲ್ಲಿ ಸೋಲಿಸಿದ್ದು. ೪೬. ಅಂಕೋಲೆಯ ಕೊಡೆಸಣಿ ಗ್ರಾಮದಲ್ಲಿ "ಕೌರೆಮುಳ್ಳು ಈ ಗ್ರಾಮದಲ್ಲೇ ಬೇಡ" ಎಂದು ನಿಯಮಿಸಿದ್ದು. ೪೭. ಕನಕದಾಸರಿಗೆ ದೇವರ ಪ್ರಸಾದ ಕೊಡಿಸುತ್ತಾ ಅವನ ಗಟ್ಟಿ (ಗಂಜಿ) ರೊಟ್ಟಿಯನ್ನು ಶ್ರೀಕೃಷ್ಣನಿಗೆ ಸಮರ್ಪಣೆ ಮಾಡುವ ಪದ್ಧತಿ ಮಾಡಿದ್ದು. ೪೮. ಪಾಂಡುರಂಗಿ ಆನಂದ ಭಟ್ಟರಿಂದ ಅದ್ವೈತ ಜಯ ಮಾಡಿಸಿ ಸುಪುತ್ರನನ್ನು ಅನುಗ್ರಹಿಸಿದ್ದು (ಆ ಪುತ್ರನೇ ವಿದ್ಯಾಧೀಶ ಸ್ವಾಮಿಗಳು, ಉತ್ತರಾದಿ ಮಠ) ೪೯. ಚಾತುರ್ಥಿಕ ಜ್ವರವನ್ನು ದಂಡದಲ್ಲಿ ಅವಾಹನೆ ಮಾಡಿ ದೇವರ ಪೂಜೆ ಮಾಡಿದ್ದು ೩ ವರ್ಷ. ೫೦. ಪಕ್ಷನಾಥ ಬಲ್ಲಾಳರಿಗೆ ಅನುಗ್ರಹಿಸಿ ಹನುಮ, ಭೀಮ, ಮಧ್ವ, ವಾದಿರಾಜಯುಕ್ತ

ಪ್ರಾಣ ಪ್ರತಿಮೆ ಪ್ರತಿಷ್ಠೆ ಮಾಡಿದ್ದು. ೫೧. ಬೆಳಿಗೆ ಎಂಬಲ್ಲಿ ತಮ್ಮ ಗ್ರಂಥಗಳನ್ನು ಸ್ಥಾಪಿಸಿದ್ದು (Siddapur Taluk). ೫೨. ಸೋದಾ ರಾಜನನ್ನು (ಅರಸಪ್ಪ ನಾಯಕನನ್ನು) ಕುದುರೆಗಳ ಸಹಾಯದಿಂದ ಉದ್ಧರಿಸಿ ಕಾಪಾಡಿದ್ದು, ಆನಂತರ ಅವನ ಲಿಂಗಾಯತ ಗುರುವನ್ನು ೧೪ ದಿನ ವಾದದಲ್ಲಿ ಗೆದ್ದು ಅವನ ೧೮ ಬಿರುದುಗಳನ್ನೂ ಬಸವನ ಘಂಟೆಯನ್ನೂ ಸಂಪಾದಿಸಿದ್ದು. ೫೩. ೧೫೦೪ ಶಾ.ಶ. ೧೫೮೨ ಕ್ರಿಸ್ತಾಬ್ಧ, ತ್ರಿವಿಕ್ರಮ ಸ್ವಾಮಿ ವೈಶಾಖ ಶುದ್ಧ ಪೂರ್ಣಿಮೆ ಪ್ರತಿಷ್ಠೆ ಮಾಡಿದ್ದು, ಸ್ವಪ್ನವಾಗಿ ಲಕ್ಷ್ಮೀ ದೇವಿಯನ್ನೂ ಪ್ರತಿಷ್ಠೆ ಮಾಡಿದ್ದು. ೧೭ ವರ್ಷ ಉತ್ಸವ ಮಾಡಿದ್ದು. ೫೪. ಧವಲಗಂಗಾ ನಿರ್ಮಿಸಿ, ಫಾಲ್ಗುಣ ಶುದ್ಧ ನವಮಿಯಿಂದ ಪೂರ್ಣಿಮಾ ಪರ್ಯಂತ ಉತ್ಸವ ಏರ್ಪಡಿಸಿದ್ದು. (೧೭ ವರ್ಷ ಸೋದೆಯಲ್ಲಿ ಆ ಉತ್ಸವ ಮಾಡಿದ್ದು) ೫೫. ನಾಲ್ಕು ಪರ್ಯಾಯ ಪೂಜೆ ಶ್ರೀಕೃಷ್ಣನಿಗೆ ತಾವೇ ಮಾಡಿ ಐದನೆಯ ಪರ್ಯಾಯಾದಿಗಳನ್ನು ವೇದವೇದ್ಯರಿಂದ ಮಾಡಿಸಿದ್ದು. "ಮನ್ನಿಸೆನ್ನ ಮಧುಸೂದನ" ಎಂದು ಹಾಡಿದ್ದು, ಸೋದೆಯಲ್ಲಿಯೇ ಪರ್ಯಾಯ ಪೂಜೆಯನ್ನು ನೆರವೇರಿಸಿದ್ದು. ೫೬. ಪಂಚಗಂಗಾ, ಅಷ್ಟ ವೃಕ್ಷಗಳು, ವೃಂದಾವನಾಷ್ಟಕ, ಪಂಚ ವೃಂದಾವನ ಸಹಾ ನಿರ್ಮಾಣ ಮಾಡಿದ್ದು. ೫೭. ಹುಣ್ಣಿಮೆ ಬಂದ ವಿಮಾನವನ್ನು ಅಶ್ವತ್ಥ ವೃಕ್ಷದಲ್ಲಿರುವಂತೆ ಆಜ್ಞಾಪಿಸಿ ಫಾಲ್ಗುಣ ಬಹುಳ ತೃತೀಯಾ ಸ್ವಾತೀ ನಕ್ಷತ್ರ ಶಾರ್ವರಿ (೧೬೦೦ A.D.) ೧೫೨೨ ಪ್ರಯಾಣ ಮಾಡಿ ಚಿಕ್ಕ ಘಂಟೆ ಧ್ವನಿ ಕೇಳುವಂತೆ ಮಾಡಿ, ಸ್ವರ್ಣಪಾದುಕೆ, ಕಾವಿಶಾಠಿಗಳನ್ನು ಕೆಳಕ್ಕೆ ಹಾಕಿ ಅಭಯ ಪ್ರದಾನ ಮಾಡಿದ್ದು. ೫೮. ವೇದವೇದ್ಯರಿಗೆ ವೃಂದಾವನದಲ್ಲಿ ದರ್ಶನಕೊಟ್ಟದ್ದು. ೧೬೧೪ A.D.ಯಲ್ಲಿ ವೇದವೇದ್ಯರ ಪರ್ಯಾಯ. ೧೯೫೮ರಲ್ಲೂ ಅವರೇ (ಕೃಷ್ಣ) ಪರ್ಯಾಯ ಪೂಜೆಮಾಡಿದರು. ಸೋದೆಯಲ್ಲಿ ವಾದಿರಾಜರು ಪೂಜಿಸಿದರು. ೫೯. ಸೋದೆಯಲ್ಲಿ ೧೬೪೦ರಲ್ಲಿ ವೇದನಿಧಿಗಳ ಕಾಲದಲ್ಲಿ ಧ್ವಜಸ್ತಂಭ ಹಂಸಾರೂಢ ವಾದಿರಾಜರ ಮೂರ್ತಿ ಕೆತ್ತಿಸಿದ ಮೇಲೆ ನಿಲ್ಲುವಂತೆ ಮಾಡಿದ್ದು. ೬೦. ಸ್ವಾಪ್ನ ವೃಂದಾವನಾಖ್ಯಾನ ರಚಿಸಿದ್ದು (೧೬೩೦). ೬೧. ವೃಂದಾವನಾಚಾರ್ಯರಿಗೆ ಅನುಗ್ರಹಿಸಿದ್ದು (ವೃಂದಾವನದಿಂದ ತಲೆಯ ಮೇಲೆ ಮಂತ್ರಾಕ್ಷತೆ ಹಾಕಿದ್ದು)

ಮೇಲ್ಕಂಡ ಪಟ್ಟಿಗೆ

ಶ್ರೀ ಕುಂಜತಾಯ ಕುಂಜ ವೆಂಕಟರಾಮಾಚಾರ್ಯರಲ್ಲಿದ್ದ ೧೯೨೪ನೇ ಇಸವಿಯ ಪಟ್ಟಿಕಾದಿಂದ ಸೇರಿಸಿದ್ದು :-

೬೨. ಕುಮಾರಧಾರೆಯಲ್ಲಿ ದಂಡತೀರ್ಥ ಉಂಟು ಮಾಡಿದ್ದು. (ಪುಂಡೀ ಬೈಲು) ೬೩. ಅಮವಾಸ್ಯಾ ದಿನ ಚಂದ್ರೋದಯ ಮಾಡಿಸಿದ್ದು. ೬೪. ಕೈತುಂಬಾ ಉಸುಕು ಎಷ್ಟೆಂತ ಪ್ರಶ್ನೆಮಾಡಿ ಜಯಸಿದ್ದು. ೬೫. ಬಹುಮಂದಿ ಸ್ಮಾರ್ತರು ಕೂಡಿ ಬಚ್ಚಿಟ್ಟ ಹುಡುಗನನ್ನು ಹಿಡಿದು ಕೊಟ್ಟಿದ್ದು. (ಕೊಲ್ಲೂರು ಮೂಕಾಂಬಿಕಾ) ೬೬. ಸುಬ್ರಹ್ಮಣ್ಯ ದೇವರಿಂದ ಪ್ರಾರ್ಥಿತರಾಗಿ ಅವರನ್ನು ಸ್ತುತಿಸಿದ್ದು. ೬೭. ಕಾಶಿಯಲ್ಲಿದ್ದ ಹೆಂಗಸಿಗೆ ರಾಮೇಶ್ವರದಲ್ಲಿದ್ದ ಸ್ವಜನರ ದರ್ಶನ ಮಾಡಿಸಿದ್ದು. ೬೮. ಭಾಗೀರಥಿಯಲ್ಲಿ ಅಸಂಖ್ಯ ದ್ರವ್ಯ ಸುರಿಸಿದ್ದು. ೬೯. ಲಕ್ಷಾಭರಣ ಮಾಡುವುದಕ್ಕೆ ವೇದವ್ಯಾಸ ದೇವರ ಆಜ್ಞೆ ಸ್ವೀಕರಿಸಿದ್ದು. ೭೦. ದೊಡ್ಡ ಬದರಿಗೆ ಹೋಗಿ ವ್ಯಾಸ ಮಧ್ವರನ್ನು ದರ್ಶನ ಮಾಡಿ ತ್ರಿವಿಕ್ರಮ ರಥ ಕಳಿಸುವ ಆಜ್ಞೆ ಪಡೆದು ಬಂದದ್ದು, ಯುಕ್ತಿಮಲ್ಲಿಕಾರಚನೆಗೆ ಅನುಜ್ಞೆ ಸ್ವೀಕರಿಸಿದ್ದು. ೭೧. ಮಾತೃಶ್ರೀಯವರ ಪ್ರಾರ್ಥನಾನುಸಾರ ಲಕ್ಷಾಭರಣ ಮಾಡಿದ್ದು. ೭೨. ಗೆರೆಹಾಕಿ ಸರ್ಪ ಮೊಸಳೆ ಮುಂತಾದವುಗಳನ್ನು ತಡೆದದ್ದು (ಕಾಶಿಯಲ್ಲಿ).

೭೩. ಸರ್ವರ ಕಣ್ಣಿಗೆ ಬಿದ್ದು ಕಳ್ಳರ ಕಣ್ಣಿಗೆ ಮಾತ್ರ ಬೀಳದೇ ಇದ್ದದ್ದು. ೭೪. ಕಳ್ಳರು ಬಂದು ಮಠದ ಸುತ್ತ ಸುರ್ಯೋದಯ ಪರ್ಯಂತ ಸುತ್ತಿ ಮಾರ್ಗಸಿಕ್ಕದೆ ಹೋದದ್ದು. ೭೫. ಕಳ್ಳರು ಬಂದರೆ ಅರ್ಧರಾತ್ರೆ ಪರ್ಯಂತ ಮಠದಲ್ಲಿದ್ದು ಮರುದಿನ ಸುರ್ಯೋದಯಕ್ಕೆ ನೂರು ಗಾವುದ ಮೇಲೆ ಕಂಡದ್ದು. ೭೬. ಅಶ್ವತ್ಥಾಮಾಚಾರ್ಯರಿಂದ ನಾರಾಯಣ ಭೂತರನ್ನು ಸಂಗ್ರಹ ಮಾಡಿದ್ದು. ೭೭. ಮುಂದಿನ ಪಾರ್ಶ್ವ ನಾರಾಯಣ ಭೂತರು ಪಲ್ಲಕ್ಕಿ ಹೊತ್ತದ್ದು. ೭೮. ಯಟಿ (ಕಾಟಿ) ಕಾಯಿಯನ್ನು ಪಾದಂಕಾ ಸ್ಪರ್ಶದಿಂದ ಚೂತಫಲ ಮಾಡಿದ್ದು. ೭೯. ಪಾದತಲ ಪ್ರಹಾರದಿಂದ ಪರ್ವತಾಗ್ರದಲ್ಲಿ ಉದಕ ನಿರ್ಮಾಣ ಮಾಡಿದ್ದು. ೮೦. ದಾರದ ಉಂಡಿ ಹಾಕಿ ಹೊರಟು ಹೋದದ್ದು. ೮೧. ಜೈನ ದೇವರನ್ನು ವಿಠಲ ಪ್ರತಿಮಾ ಮಾಡಿದ್ದು. ೮೨. ಆರು ತಿಂಗಳು ಶುದ್ಧ ಉಪವಾಸ ಮಾಡಿದ್ದು. ೮೩. ಹಯಗ್ರೀವ ಸಾಲಿಗ್ರಾಮ ಕಂಡು ತಂದು ಪೂಜಿಸಿದ್ದು. ೮೪. ವಡೆಯರ ಜ್ವರ ಪರಿಹಾರ ಮಾಡಿದ್ದು. ೮೫. ತಿರುಪತಿ ಬೆಟ್ಟವನ್ನು ಸುದರ್ಶನವಾಗಿ ಕಂಡದ್ದು. ಮಂಡಿಯಲ್ಲಿಯೇ ಹತ್ತಿದ್ದು. ೮೬. ವೆಂಕಟೇಶ ದೇವರಿಗೆ ಸಾಲಿಗ್ರಾಮ ಸರ ಮಾಡಿಸಿದ್ದು. ೮೭. ವಾಲಿಭಂಡಾರ ರಾಜರಿಗೆ ಕೊಟ್ಟು, ವಾಲಿ, ಸುಗ್ರೀವರ ವಿಠಲ, ರಾಮ ಪ್ರತಿಮೆಗಳ ಸಂಗ್ರಹ ಮಾಡಿ, ಕಾಲಾಂತರ ಪರ್ಯಾಯದಲ್ಲಿ ಅಚ್ಯುತರಾಯನಿಂದ ಕೃಷ್ಣದೇವಾಲಯ ಜೀರ್ಣೋದ್ಧಾರ ಮಾಡಿಸಿದ್ದು. ೮೮. ಪ್ರಸಂಗಾಭರಣರೆಂಬ ಬಿರುದು ಪಡೆದದ್ದು. ೮೯. ಬದರಿಕಾಶ್ರಮದಿಂದ ವಿಮಾನ ಸಹಿತ ತ್ರಿವಿಕ್ರಮ ದೇವರನ್ನು ಭೂತರಾಜರಿಂದ ತರಿಸಿದ್ದು. ೯೦. ತಂಗಿಗೆ ಭೇಟಿ ಕೊಟ್ಟಿದ್ದು (ವೃಂದಾವನದಲ್ಲಿ). ೯೧. ತಾಯಿ ತಮ್ಮಂದಿರಿಗೆ ತಮ್ಮ ಆಕೃತಿ ಮಾಡಿಸಿ ಕೊಟ್ಟಿದ್ದು. ೯೨. ವೃಷಭದಿಂದ ಪ್ರಾರ್ಥಿತರಾಗಿ ಸ್ತುತಿಸಿದ್ದು. ೯೩. ಅರಸನ ಭಿಕ್ಷಾ ಧಿಕ್ಕರಿಸಿ ಬಹು ಪ್ರಾರ್ಥನಾದಿಂದ ಸ್ವೀಕರಿಸಿದ್ದು. ೯೪. ಸಣ್ಣವರಿಗೆ ಸಣ್ಣಮಾರ್ಗ ದೊಡ್ಡವರಿಗೆ ದೊಡ್ಡಮಾರ್ಗವೆಂತ ಅಪ್ಪಣೆ ಕೊಟ್ಟಿದ್ದು. ೯೫. ವಾದಿರಾಜರೆಂಬ ಇಕ್ಕಲಾಯೆಂತ ಅಪ್ಪಣೆ ಕೊಟ್ಟಿದ್ದು. ೯೬. ಕಡಲೇ ಜೋಳು (ಹೊನ್ನು)? ಮಾಡಿದ್ದು. ೯೭. ಒಂದು ಪ್ರಹರ ಕೋಟಿ ಪುಂಜಕ್ಕೆ ಸರಿಯಾಗಿ ಇದ್ದದ್ದು. ೯೮. ಲಕ್ಷ್ಮೀಪದಕ ಮಾಡಿಸಿದ್ದು. ೯೯. ಅರಸಿಗೆ ದೇವರ ದರ್ಶನ ಮಾಡಿಸಿದ್ದು (ವಾದಿರಾಜಗುರುವರರ ಚರಿತ್ರೆ). ೧೦೦. ಉಡುಪಿಯಲ್ಲಿ ಪೂಜಾ ಆಗದೇ ಇದ್ದದ್ದು ತಿಳಿದು ಸೋದೆಯಲ್ಲಿ ಪೂಜಾ ಮಾಡಿದ್ದು.

೧೦೧. ಹಯಗ್ರೀವ ದೇವರಿಗೆ ದಿವ್ಯ ನೈವೇದ್ಯ ತಲೆಯ ಮೇಲಿಟ್ಟುಕೊಂಡು ಸಾಕ್ಷಾತ್ ತಿನ್ನಿಸಿದ್ದು. ೧೦೨. ಎಲ್ಲಾ ಮಠಕ್ಕೂ ಸರ್ವಜ್ಞರ ಹಾಗೇ ಪ್ರತಿಮೆ ಕೊಟ್ಟದ್ದು. ೧೦೩. ಬಾದರಾಯಣ ಮೂರ್ತಿಯನ್ನು ಪುನಃ ವ್ಯಾಸರಾಯರಿಂದ ತಂದದ್ದು. ೧೦೪. ತುರುಕರಾಜ ಸುತನನ್ನು ಬದುಕಿಸಿ ಕೊಟ್ಟಿದ್ದು. ೧೦೫. ಪತಿವ್ರತೆಗೆ ಗಂಡನ್ನ ಬದುಕಿಸಿ ಕೊಟ್ಟಿದ್ದು. ೧೦೬. ತಮ್ಮ ತಂಗಿಗೋಸ್ಕರ ಭಾಗವತಾದಿಗಳನ್ನು ಕನ್ನಡಿಸಿ ಕೊಟ್ಟಿದ್ದು. ೧೦೭. ಅನಂತ ಶಯನದಲ್ಲಿ ಲಿಂಗದ ಮೇಲೆ ಸಾಲಿಗ್ರಾಮ ಇಟ್ಟಿದ್ದು. ೧೦೮. ಸರ್ವಜ್ಞರು ಮಾಡಿದ ಯತಿಗಳ ಪರ್ಯಾಯ ೨ ವರ್ಷ ಮಾಡಿದ್ದು. ೧೦೯. ಇಲಿ, ಸರ್ಪ ಎರಡನ್ನೂ ಸಂರಕ್ಷಣೆ ಮಾಡಿದ್ದು. ೧೧೦. ಒಡೆಯಲಿಕ್ಕೆ ಬಾರದ ಕಲ್ಲು ಸ್ಥಂಭವನ್ನು ಪಾದದ ಸಂಬಂಧದಿಂದ ಒಡೆದದ್ದು. (P. 67 ವಾ.ಗು.ಚ.) ೧೧೧. ಬಲವತ್ತರ ಕಲ್ಲು ಮೇಲೆ ಬೀಳುವಂಥಾದ್ದು ಆಕಾಶ ಮಾರ್ಗದಲ್ಲಿ ನಿಂತದ್ದು. (P. ೬೭ ವಾ.ಗು.ಚ.) ೧೧೨. ಕಬೀರರನ್ನು ಉದ್ಧಾರ ಮಾಡಿದ್ದು. ೧೧೩. ಸುವರ್ಣ ವರ್ಷ ವರ್ಷಿಸಿದ್ದು (ಟ. ೪೭ ವಾ.ಗು.ಚ. "ಯಾ ಸಂಗಧಾಸ್ಯನಾಸಾದಿ"

ಮಂತ್ರದಿಂದ). ೧೧೪. ಮೃತ್ತಿಕಾ ಸೇವಾ ಮಾಡುವ ಹುಡುಗಗೆ ರಾಜಕನ್ಯಾ ವಿವಾಹ ಮಾಡಿಸಿದ್ದು. ೧೧೫. ವಾದಿರಾಜ ಗುಳ್ಳ ವಿಷ ಪರಿಹಾರಕ್ಕಾಗಿ ನಿರ್ಮಾಣ ಮಾಡಿದ್ದು (ಮಟ್ಟುಗ್ರಾಮ). ೧೧೬. ವಿಷಪ್ರಯೋಗ ಇನ್ನೊಮ್ಮೆ ಜೀರ್ಣಿಸಿ ಕೊಂಡಿದ್ದು. ೧೧೭. ವಿಜಯೀಂದ್ರರದ್ದು ಮೂಡದಿಂದ ಇಳಿಸಿದ್ದು. ೧೧೮. ತುರುಕಗೆ ಪಾದೋದಕ ಸೇವನದಿಂದ ಮೂರ್ಛೆ ಪರಿಹರಿಸಿದ್ದು. ೧೧೯. ರಾಜರ ಗಂಡೂಷ ಸೇವನದಿಂದ ಅಸಹ್ಯ ಶಿರೋ ವೇದನ ಪರಿಹಾರ ಮಾಡಿದ್ದು (P. ೪೭ ವಾದಿರಾಜ ಗುರುವರರ ಚರಿತ್ರೆ). ೧೨೦. ಮುಂದಾಗಿ ವೃಂದಾವನ ಮಾಡಿ ಪೂಜಾ ನಡಿಸಿದ್ದು. ೧೨೧. ತಾಮ್ರದ ದುಡ್ಡು ಬೆಳ್ಳಗೆ ಮಾಡಿ ಶಂಕಾ ಪರಿಹರಿಸಿದ್ದು. ೧೨೨. ವೃಂದಾವನ ಪ್ರವೇಶ ಮಾಡುವ ಸಮಯದಲ್ಲಿ ದೇವತೆಗಳು ಮಂತ್ರಾಕ್ಷತಾ ವರ್ಷಿಸಿದ್ದು.

ಬೇರೆ ಕಡೆಯಿಂದ ಸಂಗ್ರಹಿಸಿದ್ದು

೧೨೩. ಶೃಂಗೇರಿಯಲ್ಲಿ ಅದ್ವೈತ ವಾದಿಗಳನ್ನು ಗೆದ್ದು ಅಲ್ಲೆ ಮಠದ ಹತ್ತಿರ ಪ್ರಾಣದೇವರ ಪ್ರತಿಷ್ಠೆ ಮಾಡಿದ್ದು. ೧೨೪. ಪೈಠೀಣಿಸಿ ನಾರಾಯಣಾಚಾರ್ಯರ ಗ್ರಂಥಗಳು ನದೀಲಿ ಮುಳುಗಿ ಕವಚ ಪತ್ರಾಳಿ ತೇಲಲಾಗಿ "ಇದೊಂದಿರಲಿ" ಎಂದು ಅನುಗ್ರಹಿಸಿ ವರಕೊಟ್ಟಿದ್ದು, (ಅದಕ್ಕೆ ವೇದನಿಧಿಗಳು ಧ್ಯಾನ ಶ್ಲೋಕ ಸೇರಿಸಿ ಉಪದೇಶ ಮಾಡಿದ್ದು). ೧೨೫. ಬೇಲೂರು ವೈಕುಂಠದಾಸರ ಮನೆಗೆ ಹೋಗಿ ಮುದ್ದು ಕೃಷ್ಣನ್ನ ತೊಡೆಯ ಮೇಲೇರಿಸಿಕೊಂಡು ಪದ ಹೇಳಿದ್ದು. ೧೨೬. ಕಾಶೀಯಲ್ಲಿ ಅದ್ವೈತ ವಾದಿಯನ್ನು ಗೆದ್ದು ಕಾಣಿಕೆ ಕೊಡು ಎಂದು ಕೇಳಲು ತನ್ನ ತೆಲಗುದೇಶದ ಶಿಷ್ಯನನ್ನು ಅರ್ಪಿಸಿದಾಗ, ಆ ವೈಷ್ಣವನಿಗೆ ಶಾಂತಿ ಪಾಠ ವರ್ಷಕಾಲ ದ್ವೈತ ಹೇಳಿ ಹಯಗ್ರೀವ ಸಾಲಿಗ್ರಾಮ ಮತ್ತು ತಾಮ್ರದ ಪ್ರಾಣದೇವರನ್ನು ಅನುಗ್ರಹಿಸಿ ಕೊಟ್ಟದ್ದು (ಆ ಆಚಾರ್ಯರ ಕುಲದವರು ಗುಂಟೂರಿನಲ್ಲಿ ಈಗಲೂ ಇದ್ದಾರೆ). ಶ್ರೀಕೃಷ್ಣಾರ್ಪಣಮಸ್ತು.

ಪಂಚ–ವೃಂದಾವನ

ಶ್ರೀ ವಾದಿರಾಜರು ದೃಶ್ಯರೂಪದಿಂದ ಇರುವಾಗಲೇ ಪಂಚ ವೃಂದಾವನಗಳನ್ನು ನಿರ್ಮಿಸಿ, ಸ್ಥಾಪಿಸಿ ಪೂಜಿಸಿದ್ದಾರೆ. ವ್ಯಾಪ್ತೋಪಾಸಕರೂ, ಬ್ರಹ್ಮ ವಾಯುಗಳಂತೆ ಅಧಿಕಾರಿಗಳಲ್ಲಿ ಉತ್ತಮರೂ ಅಖಿಲ ಗುಣಜ್ಞರೂ ಆದ ಶ್ರೀವಾದಿರಾಜರು ಹಯಗ್ರೀವಾದಿ ಭಗವದ್ರೂಪಗಳನ್ನು ಆವಾಹಿಸಿ ನಿತ್ಯ ಜಾಗೃತ ಹಾಗೂ ಪ್ರಸಾದಕರಣ ಸಮ್ಮುಖ ಸನ್ನಿಧಿಯನ್ನು ನಿರ್ಮಿಸಿ ಅನುಗ್ರಹಿಸಿದ್ದಾರೆ. ಪಂಚವೃಂದಾವನಗಳಲ್ಲಿ ಬ್ರಹ್ಮದೇವರು, ಮುಖ್ಯಪ್ರಾಣದೇವರು, ಮಹಾವಿಷ್ಣು, ರುದ್ರದೇವರು, ಹಾಗೂ ಮಧ್ಯದಲ್ಲಿ ಶ್ರೀ ವಾದಿರಾಜರು ವಿರಾಜಮಾನರಾಗಿದ್ದಾರೆ. ಮಹಿಮಾನ್ವಿತ ಅನಿರುದ್ಧಾದಿ ಪಂಚರೂಪ ಸಂಬಂಧಿಯಾಗಿ ಹಾಗೆಯೇ ಪ್ರಾಣಾದಿ ಪಂಚರೂಪ ವೈಭವ ಸಂಪನ್ನ ವಾಯುದೇವರ ಹಾಗೂ ಶ್ರೀ ಹರಿಯ ವಿಶೇಷಾಜ್ಞಾನುಸಾರ ಶ್ರೀ ವಾಯುದೇವರಂತೆ ಪ್ರಾಣಾದಿ ಪಂಚರೂಪ ವೈಭವ ಭಾವ್ಯ ಶ್ರೀ ವಾದಿರಾಜರ ವಿಲಕ್ಷಣ ಮಹಿಮಾ ಬೋಧಕವಾಗಿವೆ. ಈ ಬ್ರಹ್ಮಾದಿಗಳಲ್ಲಿ ಶ್ರೀವಿಷ್ಣುವೇ ಮುಖ್ಯರೂಪದಿಂದಿದ್ದು. ಪ್ರತ್ಯೇಕ ಅನಿರುದ್ಧಾದಿ ರೂಪಗಳಿಂದಲೂ ಸನ್ನಹಿತನಾಗಿದ್ದಾನೆ. ಮಧ್ಯ ವೃಂದಾವನ ಮುಂಭಾಗದ ಮೇಲ್ಬದಿಯಲ್ಲಿ ಶ್ರೀ ಹಯಗ್ರೀವ ದೇವರ ಪ್ರತೀಕವಿದೆ. ಸುತ್ತಲೂ ಶ್ರೀರಾಮ, ಕೃಷ್ಣ, ವೇದವ್ಯಾಸರ ಸನ್ನಿಧಿಯಿದೆ. ಮಧ್ಯದ ಬಲಬದಿ (ದಕ್ಷಿಣ)ಯಲ್ಲಿ ವೀಣಾಪಾಣಿ ಭೀಮಸೇನ ದೇವರು, ಎಡಬದಿ (ಉತ್ತರ)ಯಲ್ಲಿ

ಜ್ಞಾನ ಮುದ್ರಾಭೂಷಿತ ಆಚಾರ್ಯ ಮಧ್ವರ ಪ್ರತೀಕಗಳಿದ್ದು ಮುಂಭಾಗ (ಪೂರ್ವ)ದಲ್ಲಿ ಶ್ರೀರಾಜರು ಹನುಮ-ಭೀಮ-ಮಧ್ವರಿಂದ ಸಮಸ್ಥಾನದಲ್ಲಿದ್ದು ತಮ್ಮ ವಾಯು ಸಮತ್ವೋಚಿತ ಋಜುತ್ವವನ್ನು ಸನ್ನಿಧಿಯಿಂದಲೇ ಭಕ್ತರಿಗೆ ಸ್ಫುಟಪಡಿಸಿದ್ದಾರೆ. ಇನ್ನೊಂದು ಕ್ರಮದಿಂದ ಉಪವೃಂದಾವನಗಳಲ್ಲಿ ಅಂದರೆ ದಕ್ಷಿಣ - ಪೂರ್ವದ (ಆಗ್ನೇಯ) ವೃಂದಾವನದಲ್ಲಿ ಮತ್ಸ್ಯ - ಕೂರ್ಮ - ವರಾಹರೂ, ದಕ್ಷಿಣ-ಪಶ್ಚಿಮದ (ನೈಋತ್ಯ) ವೃಂದಾವನದಲ್ಲಿ ಕೃಷ್ಣ-ಬುದ್ಧಕಲ್ಕಿದೇವರೂ ಸನ್ನಿಹಿತರಾಗಿದ್ದಾರೆ. ಪಂಚವೃಂದಾವನ ಸನ್ನಿಧಿಯ ಎದುರು ಶ್ರೀ ವೇದವ್ಯಾಸರು ಉಪದೇಶಕರಾಗಿ ವಿರಾಜಮಾನರಾಗಿದ್ದಾರೆ. ಆದ್ದರಿಂದಲೇ ಆ ಸನ್ನಿಧಾನವು ಊರ್ಧ್ವ ಬದರೀ ಸಮ ಮಹಿಮಾ ಮಹಿತವೆಂದು ಕೊಂಡಾಡಲ್ಪಟ್ಟಿದೆ.

ಶ್ರೀ ವಾದಿರಾಜರ ವೃಂದಾವನ ಮಹಿಮೆ ಅಪಾರ, ಅದನ್ನೆಲ್ಲಾ ಯಥಾವತ್ತಾಗಿ ಬೋಧಿಸುವ ಪ್ರಮಾಣಕೃತಿ ಶ್ರೀಸ್ವಾಪ್ನವೃಂದಾವನಾಖ್ಯಾನ, ವೃಂದಾವನ ಸನ್ನಿಧಿಯ ಅದ್ಭುತತ್ವ ತಿಳಿಯುವದೇ ಈ ಕೃತಿಯಿಂದ.

ಅನಂತಾನಂತ ರೂಪಗಳಿಂದಲೂ ಮೂಲರೂಪಿಯಾದ ನಾರಾಯಣನು ಈ ಪುಣ್ಯತರವಾದ ಶ್ರೀ ವಾದಿರಾಜರ ದಿವ್ಯಸದನದಲ್ಲಿ ಸದಾ ಸನ್ನಿಹಿತನಾಗಿ ಪರಮಾತ್ಮನಿಂದ ಸದಾ ಅವಿಯೋಗಿನಿಯಾದ ಶ್ರೀ ಲಕ್ಷ್ಮೀದೇವಿಯು ಶ್ರೀಹಯಗ್ರೀವ ಪರಮಾತ್ಮನ ಅಶ್ವಿನಿ ನಾಮಕ ತನ್ನ ರೂಪದಿಂದಲೂ ಶೀ ವೇದವ್ಯಾಸರ ಪತ್ನಿ ಅಂಭ್ರಣೀ ರೂಪದಿಂದಲೂ ಹಾಗೆಯೇ ಶ್ರೀ ಹರಿಯ ಅನಂತಾನಂತ ರೂಪಗಳಿಂದಲೂ ಶ್ರೀ ಹರಿಯ ಸೇವೆ ಮಾಡುತ್ತಾ ಇಲ್ಲಿ ನೆಲಸಿದ್ದಾಳೆ.

ಶ್ರೀ ಹಯವದನದೇವರ ಆಜ್ಞೆಯಿಂದ ಮಂದಾರ ಪರ್ವತಕ್ಕೆ ಸದೃಶವಾದ ಸುಂದರವಾದ ಈ ವೃಂದಾವನದಲ್ಲಿ ಮೂವತ್ತು ಮೂರು ಕೋಟಿ ದೇವತೆಗಳು ತಮ್ಮ ಒಂದೊಂದು ಅಂಶದಿಂದ ನೆಲೆಸಿದ್ದಾರೆ. ಶ್ರೀರಾಮರಲ್ಲಿಯೇ ರಮಿಸುವ ಮಹಾಮಹಿಮಾನ್ವಿತರಾದ ಶ್ರೀ ಹನುಮಂತದೇವರು ಈ ವೃಂದಾವನದಲ್ಲಿ ಸನ್ನಿಹಿತರಾಗಿದ್ದಾರೆ. ಇಂದ್ರ ರುದ್ರ, ಕುಬೇರ, ಯಮ, ವರುಣ, ಅಗ್ನಿ, ನಿಋತಿ, ವಾಯು, ಚಂದ್ರ ಸೂರ್ಯಾದಿ ದೇವತೆಗಳೂ, ಉಪದೇವತೆಗಳೂ, ಗ್ರಹಗಳೂ ಋಷಿಗಳೂ ತಮ್ಮ ಪರಿವಾರ ಸಮೇತರಾಗಿ ಸಂಗೀತ, ನೃತ್ಯ, ವಾದ್ಯ ಚತುಷ್ಟಯಗಳಿಂದ ಜಯಕಾರಮಾಡುತ್ತಾ ಅನೇಕ ವಿಧ ಫಲಪುಷ್ಪ ಮುಂತಾದ ಸಾಮಗ್ರಿಗಳೊಂದಿಗೆ, ವೇದ ಘೋಷಗಳಿಂದ ಸಹಿತವಾಗಿ, ಅನ್ಯ ಚಿಂತನೆ ಮಾಡದೆ ಭಕ್ತಿಯುಕ್ತರಾಗಿ ಶ್ರೀ ಹಯಗ್ರೀವದೇವರನ್ನು ಸದಾ ಉಪಾಸಿಸುತ್ತಾರೆ. ಪರ್ವಕಾಲದಲ್ಲಿ ವಿಶೇಷವಾಗಿ ಅರ್ಚಿಸುತ್ತಾರೆ. ಎಲ್ಲಾ ದೇವತೆಗಳು ತಮ್ಮ ತಮ್ಮ ಬಿಂಬರೂಪಿ ಪರಮಾತ್ಮನ ದರ್ಶನದಿಂದ ಸಂತುಷ್ಟರಾಗಿ ತಪಸ್ಸಿಗೋಸ್ಕರ ಏಕಾಂಶದಿಂದ ವೃಂದಾವನದಲ್ಲಿಯೇ ಸ್ಥಿತರಾಗಿದ್ದಾರೆ. ಈ ಪುಣ್ಯತಮವಾದ ವೃಂದಾವನದ ಸೇವೆಯನ್ನು ಮಾಡುವುದರಿಂದ ಪರಮಾತ್ಮನ ಸಕಲ ರೂಪಗಳ ಹಾಗೂ ಸಕಲ ದೇವತೆಗಳ ಸೇವೆ ಮಾಡಿದಂತಾಗುತ್ತದೆ.

ಪುಣ್ಯಪ್ರದವಾದ ವೃಂದಾವನ ನಾಮಕವನ, ಋಷಿಗಳ ಸತ್ರಯಾಗ ಪ್ರಸಿದ್ಧವಾದ ನೈಮಿಷ್ಕಾರಣ್ಯವನ ಗಂಧರ್ವರ ಚೈತ್ರರಥವೆಂಬವನ, ಸ್ವರ್ಗದಲ್ಲಿರುವ ದೇವೇಂದ್ರನ ನಂದನವನ, ಹಾಗೆಯೇ ಭೂಮಿಯಲ್ಲಿರುವ ಇವೇ ಮೊದಲಾದ ಪುಣ್ಯಕರವಾದ ವನಗಳ ಅಭಿಮಾನಿ ದೇವತೆಗಳು ಈ ಪಂಚವೃಂದಾವನದಲ್ಲಿ ಸದಾ ಇರುವುದರಿಂದ ಈ ವೃಂದಾವನವು ಎಲ್ಲಾ ವನಗಳಿಗಿಂತಲೂ ಉತ್ತಮವಾದ ವನವು.

ಮಂದರ, ಹಿಮಾಚಲ, ಮಹೇಂದ್ರ, ವಿಂದ್ಯಾಚಲ ವೈನಾಕ, ಇಂದ್ರ ಕೀಲಕ, ಸುನಾಭಿ, ಪಾರಿಯಾತ್ರ, ವಜ್ರನಾಭ ಶ್ರೀಪರ್ವತ, ಶೇಷಪರ್ವತ, ಹೇಮಗಿರಿ, ಗೋವರ್ಧನ, ಗೋವೃಷ ಗೋಮತಿ ಪರ್ವತಗಳೂ, ಹಾಗೆಯೇ ದೇವತೆಗಳಿಗೆ ನಿಧಿ ಸ್ಥಾನೀಯವಾದ ಮೇರು ಪರ್ವತ ಇವೇ ಮೊದಲಾದ ಸಕಲ ಪರ್ವತಗಳ ಅಭಿಮಾನಿ ದೇವತೆಗಳು. ಸದಾ ವೃಂದಾವನದಲ್ಲಿ ಸನ್ನಿಹಿತರಾಗಿರುವುದರಿಂದ ಈ ವೃಂದಾವನವು ಎಲ್ಲಾ ಕ್ಷೇತ್ರಗಳಿಗಿಂತಲೂ ಉತ್ತಮವಾದ ಕ್ಷೇತ್ರವಾಗಿದೆ.

ಗಂಗಾ, ಸರಸ್ವತೀ, ಕೃಷ್ಣವೇಣಿ, ಮಹಾನದಿ ಭೀಮರಥಿ, ಕಾವೇರಿ, ಕಪಿಲ, ಗೋಮತಿ, ಗೋದಾವರಿ ಅಸಕ್ನಿ, ಶತದ್ರು, ವರದಾ, ಸರಯೂ, ತುಂಗಭದ್ರಾ ಮೊದಲಾದ ಪುಣ್ಯದಾಯಕ ನದಿಗಳ ಅಭಿಮಾನಿದೇವತೆಗಳೂ, ಸ್ವಾಮಿಪುಷ್ಕರಣಿ ಮೊದಲಾದ ಸರ್ವಪುಷ್ಕರಣಿಗಳ ಅಭಿಮಾನಿ ದೇವತೆಗಳೂ, ಶ್ರೀ ಹಯಗ್ರೀವ ದೇವರ ಆಜ್ಞೆಯಿಂದ ಒಂದೊಂದು ಅಂಶದಿಂದ ಸನ್ನಿಹಿತರಾಗಿದ್ದಾರೆ. ಆದ್ದರಿಂದ ಈ ವೃಂದಾವನವು ತೀರ್ಥಗಳೆಲ್ಲಾ ಉತ್ತಮವಾದ ತೀರ್ಥವೂ ಆಗಿದೆ. ಆದಕಾರಣ

ತೀರ್ಥಾನಾಮುತ್ತಮಂ ತೀರ್ಥಂ ವನಾನಾಮುತ್ತಮಂ ವನಂ ।
ಕ್ಷೇತ್ರಾಣಾಮುತ್ತಮಂ ಕ್ಷೇತ್ರಂ ಮಮ ವೃಂದಾವನಂ ದ್ವಿಜ ॥

ಎಂದು ಉತ್ತಮವಾಗಿದೆ. ಅಷ್ಟುಮಾತ್ರವಲ್ಲ.

ತಸ್ಮಾದ್ವೃಂದಾವನಮಿದಂ ಧವಲಾಖ್ಯ ಸರೋವರಂ ।
ಸ್ನಾನೇನ ದರ್ಶನೇನಾಪಿ ಸರ್ವಾಘೌಘ ವಿನಾಶನಂ ॥

ಅಂದರೆ ಧವಳವೆಂಬ ಸರೋವರದ ಸ್ನಾನ ಮತ್ತು ವೃಂದಾವನದ ದರ್ಶನದಿಂದ ಸರ್ವಪಾಪಗಳೂ ನಾಶವಾಗುತ್ತವೆ ಎಂದೂ ವಿದಿತವಾಗಿದೆ.

ಪರಮ ಪವಿತ್ರವಾದ ಈ ಪಂಚವೃಂದಾವನದ ಮಹಾತ್ಮ್ಯ ಸಿದ್ಧಿಗಾಗಿ ಶ್ರೀ ವಾದಿರಾಜ ಗುರುವರೇಣ್ಯರು ದೇವತೆಗಳಿಗೆ ಸ್ವಾಮಿಯಾದ ಅನಂತ ಸದ್ಗುಣ ಪರಿಪೂರ್ಣನಾದ, ಕೋಟಿ ಸೂರ್ಯ ಪ್ರಕಾಶದಿಂದ ಶೋಭಿಸುವ ಶ್ರೀಹರಿಯಿಂದ ಆಜ್ಞಾಪ್ತರಾಗಿ ಶ್ರೀಹರಿಯ ಸಕಲರೂಪಗಳೊಡನೆ ಸಕಲ ದೇವತೆಗಳೊಂದಿಗೆ ಕೂಡಿಕೊಂಡು ಸದಾ ಇಲ್ಲಿ ವಾಸಿಸುವರು. ಆದ್ದರಿಂದ ಈ ಪಂಚವೃಂದಾವನವನ್ನು ಸೇವಿಸುವ ಸಜ್ಜನರಿಗೆ ಸಕಲಾಭೀಷ್ಟವನ್ನು ದಯಪಾಲಿಸುವದು ಮಂದರಾದ್ರಿಯು ದೇವತೆಗಳಿಗೆ ವಿಷ್ಣ್ವಾದಿಗಳ ದರ್ಶನದಿಂದ ಜನ್ಯವಾದ ಆನಂದವನ್ನೂ ಕೊಡುವಂತೆ ಈ ವೃಂದಾವನವು ಸಂದರ್ಶಿಸುವ ಶೋಭನವಾದ ಬುದ್ಧಿಯುಳ್ಳವರಿಗೆ ಆನಂದ ಸುಧೆಯನ್ನು ನೀಡುತ್ತದೆ.

ಸ್ವಾಪ್ನ ವೃಂದಾವನಾಖ್ಯಾನ ಸಾರಾಂಶ

ಈ ಗ್ರಂಥವು ಸಂಸ್ಕೃತ ಭಾಷೆಯಲ್ಲಿದೆ. ಇದರಲ್ಲಿರುವ ಎಲ್ಲಾ ಶ್ಲೋಕಗಳು ಮಂತ್ರತುಲ್ಯವಾದವುಗಳು ಒಂದೊಂದು ಶ್ಲೋಕವ ಶೋಕನಾಶಕಮಂತ್ರವಾಗಿದೆ. ಇವುಗಳು ಗೂಡಾರ್ಥಗಳಿಂದ ಕೂಡಿ ನೆಲೆಂಯೇ ಗೊತ್ತಾಗುವಂತಿರಲಿಲ್ಲ. ಯಾರಿಗೂ ಅರ್ಥವಾಗುವಂತಿರಲಿಲ್ಲ ಆದ್ದರಿಂದ ಬಹುಕಾಲ ಈ ಗ್ರಂಥವು ಅಜ್ಞಾತವಾಗಿಯೇ ಉಳಿಯಿತು. ಲಕ್ಷ್ಮೀಪತಿಯೆಂಬ ಏಡಮೂಕ ಬ್ರಾಹ್ಮಣನೇ ಈ ಗ್ರಂಥದ ನಿದರ್ಶನ ಪರ್ವದಲ್ಲಿ ಸೂಚಿತವಾಗಿರುವಂತೆ, ಶ್ರೀ ವಾದಿರಾಜರ ಸಂಸ್ಥಾನದಲ್ಲಿ ಸುಮಾರು ಕ್ರಿ.ಶ. ೧೭೮೮ರಲ್ಲಿ ಶ್ರೀ

ವಿಶ್ವಪ್ರಿಯ ತೀರ್ಥರೆಂಬ ಹೆಸರಿನಿಂದ ಯತಿಗಳಾದರು. ಅವರಿಗೆ ಪೂರ್ವ ಜನ್ಮ ಅಂದರೆ ಮೂಕ ಜನ್ಮದ ಜ್ಞಾನವೆಲ್ಲಾ ಬಂದು ಪ್ರಕಾಶಿತವಾಯಿತು. ಅವರ ಮೂಲಕವೇ ಈ ಗ್ರಂಥ ಪ್ರಕಾಶಕ್ಕೆ ಬಂದಿತು. ತಮ್ಮ ಶಿಷ್ಯರಿಂದ ವ್ಯಾಖ್ಯಾನ ಬರೆಸಿ ಪ್ರಕರಣಗಳನ್ನು ವಿಂಗಡಿಸಿ ಒಗಟು ಶ್ಲೋಕಗಳಿಗೆ ಅರ್ಥ ತಿಳಿಸಿದರು.

ಈ ಗ್ರಂಥದಲ್ಲಿ ೨೨ ಅಧ್ಯಾಯಗಳಿವೆ. ಎಲ್ಲಾ ಅಧ್ಯಾಯಗಳಿಗೆ ಪೀಠದಂತೆ ಅವತಾರಿಕಾ ರೂಪವಾಗಿದೆ. ಮೊದಲನೆಯ ನಾಲ್ಕು ಅಧ್ಯಾಯಗಳು ಭಜನ ಪರ್ವಗಳು ಒಂದು ಮತ್ತು ಐದರಿಂದ ಹನ್ನೊಂದು ಅಧ್ಯಾಯ ಪೂರ್ತಿಯಾಗಿ ವೈಭವಪರ್ವಗಳು, ಒಂದು ಮತ್ತು ಹನ್ನೆರಡರಿಂದ ಇಪ್ಪತ್ತೆರಡನೆ ಅಧ್ಯಾಯ ಪೂರ್ತಿಯಾಗಿ ನಿದರ್ಶನ ಪರ್ವಗಳು.

ಅಧಿಕಾರಿ ವರ್ಗದ ಜೀವರಿಂದ ಭಜಿಸಬೇಕಾದ ಭಗವದ್ರೂಪದ ವರ್ಣನೆಗಳು, ಸ್ತೋತ್ರಗಳು ಮೊದಲನೆಯ ಅಧ್ಯಾಯದಲ್ಲಿದೆ. ರುದ್ರಾದಿ ಸಕಲ ದೇವತೆಗಳಿಂದ ಉಪಾಸ್ಯನಾದ ಶ್ರೀಹರಿಯ ಪ್ರತೀಕ ತಾನು ಎನ್ನುವುದನ್ನು ಈ ಅಧ್ಯಾಯದಲ್ಲಿ ಪ್ರದರ್ಶಿಸುವ ಮೂಲಕ ತಾನು ಋಜುಗಣಸ್ಥದೇವತೆ ಎನ್ನುವುದನ್ನು ತಿಳಿಸಿದ್ದಾರೆ. ಪಂಚವೃಂದಾವನದಲ್ಲಿ ಹಾಗೂ ಧವಳಗಂಗಾ ಸರೋವರದಲ್ಲಿ ಸನ್ನಿಹಿತರಾಗಿರುವ ಎಲ್ಲಾ ತೀರ್ಥಾಭಿಮಾನಿ ದೇವತೆಗಳ ಕ್ಷೇತ್ರಾಭಿಮಾನಿ ದೇವತೆಗಳ, ಪರ್ವತಾಭಿಮಾನಿ ದೇವತೆಗಳ ವಿವರಗಳು ಇವೆ. ಅವರ ಸನ್ನಿಧಾನದಿಂದಾಗಿ ಧವಳಗಂಗಾ ಸ್ನಾನ, ವೃಂದಾವನದರ್ಶನವು ಸಕಲ ಪಾಪಗಳನ್ನು ಪರಿಹರಿಸುವುದು ಎಂದು ನಿರೂಪಿತವಾಗಿದೆ. ಈ ವೃಂದಾವನಾಖ್ಯಾನವು ಅದೃಶ್ಯಾರ್ಥ ಪ್ರತಿಪಾದಕ ಅಲೌಕಿಕ ವಾಕ್ಯಗಳಿಂದಲೂ ಕೀರ್ತಿಪ್ರತಿಪಾದಕ ಅಥವಾ ದೃಶ್ಯಾರ್ಥ ಪ್ರತಿಪಾದಕ ಲೌಕಿಕ ವಾಕ್ಯಗಳಿಂದಲೂ, ಅಲೌಕಿಕ ವೇದವಾಕ್ಯಗಳಲ್ಲಿರುವ ಪದಘಟಕ ಕೆಲವು ವಾಕ್ಯಗಳಿಂದಲೂ ಬಹು ಲೌಕಿಕ ವಾಕ್ಯಗಳಿಂದಲೂ ರಚಿತವಾಗಿದೆ. ಮತ್ತು ಲೌಕಿಕ ಅಲೌಕಿಕ ಫಲಗಳನ್ನು ನಿಶ್ಚಯವಾಗಿಯೂ ಹೊಂದುತ್ತಾರೆಂದೂ ಭಜನಪರ್ವದಲ್ಲಿ ಉಕ್ತವಾಗಿದೆ. ಈ ಭಜನ ಪರ್ವಗಳಲ್ಲಿ ಶ್ರೀವಾದಿರಾಜರು ಪರಮಾತ್ಮನ ಬೇರೆ ಬೇರೆ ರೂಪಗಳಿಂದ ಪಡೆದ ಕಮಂಡಲು, ಕೌಪೀನ ಮೊದಲಾದವುಗಳೂ ಇಂದ್ರಾದಿ ದೇವತೆಗಳಿಂದ ಪಡೆದ ಸುವರ್ಣ ಮತ್ತು ನಾನಾಮಣಿಗಳಿಂದ ಅಲಂಕೃತವಾದ ವಿಮಾನ, ಚತುರ್ದಂತಯುಕ್ತವಾದ ವಾಯುವೇಗ ಮನೋವೇಗವುಳ್ಳ ಎರಡುಗಜಗಳೂ, ಅಶ್ವಗಳೂ, ಪಾದಪೀಠ, ಕಟಿಸೂತ್ರ ರತ್ನಗಂಬಳಿ, ಕರ್ಣಕುಂಡಲಗಳೂ, ಛತ್ರಚಾಮರಗಳು, ಮುಕುಟ ನೂಪುರ, ಕೇಯೂರ, ಬಾಹು ಭೂಷಣ ಮೊದಲಾದ ಆಭರಣಗಳೂ, ವರ್ಣಿವಾಗಿದೆ ಈ ವಾಹನಗಳ ಮತ್ತು ಆಭರಣಗಳ ಧ್ಯಾನದಿಂದ ಸತತ ಜ್ಞಾನಸಾಧನೆ, ಸುಖಪ್ರಾಪ್ತಿ, ಆಭರಣಾದಿಗಳ ಪ್ರಾಪ್ತಿ ಮೊದಲಾದ ಫಲಗಳು ಉಕ್ತವಾಗಿವೆ. ಹರಿಗುರುಗಳ ಅನುಗ್ರಹದಿಂದ ರಚಿತವಾದ ಶುಭಪ್ರದವಾದ ಅಸದೃಶವಾದ ಈ ವೃಂದಾವನಾಖ್ಯಾನವು ಶ್ರವಣಮಾಡುವ ನರರಿಗೆ ಅನಂತಗುಣರೂಪಿಯಾದ ಶ್ರೀಹರಿಯಲ್ಲಿಯೂ ಹಾಗೆಯೇ ಹರಿಗತಲೋಕವಾದ ಶ್ರೀವಾದಿರಾಜರಲ್ಲೂ ಭಕ್ತಿಯನ್ನು ಹುಟ್ಟಿಸಿ ಸರ್ವ ಶುಭಾಪ್ತಿಯನ್ನು ಕೊಡುವದು ಎಂದು ತಿಳಿಸುವ ಮೂಲಕ ಸಜ್ಜನರಿಗೆ ವೃಂದಾವನಾಖ್ಯಾನದ ಶ್ರವಣದ ಫಲವನ್ನು ತಿಳಿಸಿದೆ. ಈ ಭಜನ ಪರ್ವಗಳಲ್ಲಿ ಭಕ್ತರ ಶತ್ರು ನಿಗ್ರಹಕ್ಕಾಗಿ ಶ್ರೀಕೃಷ್ಣ ಹಯಗ್ರೀವರೂಪಗಳ ಸ್ತೋತ್ರವೂ ರಾಜ್ಯಪ್ರಾಪ್ತಿಗಾಗಿ ಶ್ರೀರಾಮರೂಪದ ಸ್ತೋತ್ರವೂ, ಅಜ್ಞಾನನಿವೃತ್ತಿಗೆ ಜ್ಞಾನಪ್ರಾಪ್ತಿಗೆ ವೇದವ್ಯಾಸರೂಪ ಸ್ತೋತ್ರವೂ, ಹೀಗೆಯೇ ಬೇರೆ ಬೇರೆ ಕಾರ್ಯೋದ್ದೇಶಗಳಿಗಾಗಿ ಬೇರೆ ಬೇರೆ ಶ್ರೀಹರಿಯರೂಪಗಳ ಸ್ತೋತ್ರಗಳಿವೆ ಈ ಭಜನಪರ್ವಗಳ ಕೊನೆಯ ಅಧ್ಯಾಯದಲ್ಲಿ ಮೇರೌ ನಾರಾಯಣೋಯಸ್ಯ

ಕಾರುಣ್ಯಂ ಮೇ ಪರಾಯಣಂ ರಮಯಾಃ ಮಾಂಕರೇ ಪ್ರಾದಾತ್ ಕುಮಾರೋಽಯಮಿತಿ ಬ್ರುವನ್ ॥೪-೧೪॥ ಎಂದು ಹೇಳುವ ಮೂಲಕ ಲಕ್ಷ್ಮೀನಾರಾಯಣರು ಶ್ರೀವಾದಿರಾಜರ ಸಾಕ್ಷಾತ್ ತಾಯಿ ತಂದೆಗಳು (ಅರ್ಥಾತ್ ಶ್ರೀವಾದಿರಾಜರು ಋಜುಗಣಸ್ಥ ದೇವತೆ) ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಸರ್ವಸಿದ್ಧಿದಾಯಿ ಶ್ರೀವಾದಿರಾಜ ಗುರುಮಂತ್ರ ಜಪವು ಅದಕ್ಕೆ ಸಂಗತವಾದ ಲೌಕಿಕ ವಿಷಯಗಳು ಪ್ರತಿಪಾದಿತವಾಗಿದೆ.

ವೈಭವ ಪರ್ವಗಳಲ್ಲಿ ಶ್ರೀ ವಾದಿರಾಜರ ಭೌಮ (ಭೂಲೋಕದ) ವೈಭವಗಳು, ದಿವ್ಯ (ದೇವಲೋಕದ) ವೈಭವಗಳು ಹಾಗೆಯೇ ಭಾಗವತ (ಭಗವತ್ಸಂಬಂಧಿ) ವೈಭವಗಳು ಮತ್ತು ಭಕ್ತ (ಭಕ್ತಾನುಗ್ರಹತ್ವ) ವೈಭವಗಳು ಆ ವೈಭವಗಳನ್ನು ಶ್ರವಣ ಮಾಡುವವರಿಗೆ ಪ್ರಾಪ್ತವಾಗುವ ಫಲಗಳೂ ಉಕ್ತವಾಗಿವೆ. ಭಜನ, ವೈಭವ, ನಿದರ್ಶನವೆಂದು ಮೂರು ವಿಭಾಗಗಳಿದ್ದರೂ ವೈಭವಾದಿಗಳು ಮೂರು ವಿಭಾಗದಲ್ಲಿಯೂ ಹೇಳಲ್ಪಟ್ಟಿವೆ. ಯೋಗಿಗಳಿಗೂ ದುರ್ಲಭವಾದ ವೈಕುಂಠಲೋಕಕ್ಕೆ ಅನಾಯಾಸವಾಗಿ ಹೋಗಿ, ಅಲ್ಲಿ ಶ್ರೀಹರಿಯೊಡನೆ ಅವನ ಕೈಯನ್ನು ಹಿಡಿದುಕೊಂಡು ಸಂಚರಿಸುವುದು; ಶ್ರೀರಾಮದೇವರೊಂದಿಗೆ ವಿಹರಿಸುವುದು; ಮತ್ಸರೂಪಿಯಿಂದ ಸಚ್ಛಾಸ್ತ್ರ ಶ್ರವಣ; ಕೂರ್ಮರೂಪಿಯೊಂದಿಗೆ ಸ್ವೇಚ್ಛೆಯಾಗಿ ಸಂಚಾರ; ವರಾಹ, ನರಸಿಂಹ ವಾಮನ, ಪರಶುರಾಮ ಬುದ್ಧರೂಪೀ, ಕಲ್ಕಿರೂಪಿ ಪರಮಾತ್ಮನ ಅನುಗ್ರಹವನ್ನು ಪಡೆಯುವುದು ಶಿಂಶುಮಾರರೂಪಿಪರಮಾತ್ಮನಿಂದ ಸ್ವಚ್ಛತತ್ವಗಳನ್ನು ಶ್ರವಣ ಮಾಡುವುದು; ಶ್ರೀ ಲಕ್ಷ್ಮೀ ಪತಿಯು ಇವರನ್ನು ಪ್ಲಕ್ಷದ್ವೀಪಕ್ಕೆ ಕರೆತಂದು ಸಮುದ್ರತೀರದಲ್ಲಿ ಇಳಿಸಿ ಗರುಡನ ಮೂಲಕ ಇಂದ್ರನ ಬಳಿಯಿರುವ ಅಮೃತವನ್ನು ತರಿಸಿ ಪ್ರಾಶನ ಮಾಡಿಸಿದ್ದು; ಈ ಅಮೃತಪ್ರಾಶನ ವೈಭವವನ್ನು ಕೇಳುವವರಿಗೆ ಮೋಕ್ಷವೇ ಫಲವಾಗಿರುವದು; ಶ್ವೇತದ್ವೀಪದಲ್ಲಿ ಶ್ರೀಹರಿಯು ಇವರ ಶಿರಸ್ಸಿನ ಮೇಲೆ ತನ್ನ ಹಸ್ತವನ್ನಿಟ್ಟಾಗ ರೋಮಾಂಚನವಾದುದು; ಬದರೀಕ್ಷೇತ್ರದಲ್ಲಿ ಶ್ರೀ ವೇದವ್ಯಾಸರ ಉಪಾಸನೆ; ಶಿಶುಪಾಲನ ಶಾಪವೆಂಬ ರೋಗಕ್ಕೆ ಧನ್ವಂತರೀರೂಪೀ ಶ್ರೀ ಹರಿಯಿಂದ ಚಿಕಿತ್ಸೆ; ಬ್ರಹ್ಮದೇವರ ಮತ್ತು ವಾಯುದೇವರ ಮಧ್ಯೆ ಇದ್ದು ಬ್ರಹ್ಮದೇವರ ಬಲ ಹೆಗಲನ್ನೂ ವಾಯು ದೇವರ ಎಡ ಹೆಗಲನ್ನು ತನ್ನ ಕೈಗಳಿಂದ ಪಿಡಿದುಕೊಂಡು ಸಂಚರಿಸುತ್ತಾ ವಿಷ್ಣುತತ್ವನಿರ್ಣಯವನ್ನು ಮಾಡುವದು; ಸ್ವರ್ಗಲೋಕದಲ್ಲಿ ಶಚಿದೇವಿ ಇಂದ್ರರೊಡನೆ ಗಂಗಾತೀರದಲ್ಲಿ ಸಂಚರಿಸುವುದು; ಬ್ರಹ್ಮದೇವರು ಮತ್ತು ಇತರ ದೇವತೆಗಳೊಂದಿಗೆ ಬಹುರೂಪಗಳನ್ನುಧರಿಸಿ ಭೂಲೋಕದಲ್ಲಿ ವೈಭವಗಳನ್ನು ಅನುಭವಿಸಿ, ದೇವಲೋಕದಲ್ಲಿ ವೈಭವಗಳನ್ನು ಅನುಭವಿಸಿ ಸಹಭೋಗ (ಸತ್ಯ ಲೋಕಾಧಿಪತ್ಯ) ಮಾಡಿಮುಕ್ತನಾಗುವುದು; ಸೂರ್ಯಮಂಡಲ, ಗ್ರಹಮಂಡಲ, ನಕ್ಷತ್ರವಲಯಗಳಿಗೆ ಅವರ ಆಹ್ವಾನದ ಮೇರೆಗೆ ಹೋಗಿ ಒಂದೊಂದು ರೂಪದಿಂದ ಅದರಿಂದ ಸತ್ಕರಿಸಲ್ಪಟ್ಟಿದ್ದು; ಅವರಿಂದ ವೃಂದಾವನ ಗ್ರಂಥಕ್ಕೆ ನಿತ್ಯದಲ್ಲೂ ಪೂಜೆ; ಇಂದ್ರನು ತಾನೇ ಶ್ವೇತಛತ್ರವನ್ನು ತನ್ನ ತಂದೆಯ ಆಜ್ಞೆಯಂತೆ ಇವರ ಶಿರಸ್ಸಿನ ಮೇಲೆ ಹಿಡಿದುದು; ಹಯಗ್ರೀವದೇವರಿಂದ ಶ್ರುತ್ಯರ್ಥಬೋಧಿಸಿ, ಆ ಶ್ರುತ್ಯರ್ಥವೇ ಸಹಸ್ರಪದ್ಯರೂಪವಾಗಿ ವೃಂದಾವನಾಖ್ಯಾನದಲ್ಲಿ ಸಂಗ್ರಹಿಸಲ್ಪಟ್ಟು, ಈ ಸಹಸ್ರಪದ್ಯ ದಳ ಪದ್ಮವನ್ನು ಶ್ರೀ ಹಯಗ್ರೀವದೇವರು ಆಘ್ರಾಣಿಸಿ ಶಿರಸ್ಸಿನಲ್ಲಿ ಧರಿಸುವ ಮೂಲಕ ಮಾನ್ಯ ಮಾಡಿದುದು; ಇವೇ ಮೊದಲಾದ ಅನೇಕ ವೈಭವಗಳು ಈ ವೈಭವಪರ್ವಗಳಲ್ಲಿ ವರ್ಣಿತವಾಗಿವೆ. ತಮ್ಮ ವೈಭವಗಳನ್ನು ಹೇಳಲು ಒಂದು ನೂರು ವರ್ಷವಾದರೂ ಸಾಲದು, ಲೇಶ ಮಾತ್ರ ಹೇಳಲ್ಪಟ್ಟಿದೆ ಎಂದು ಶ್ರೀವಾದಿರಾಜರೇ ಹೇಳಿದ್ದಾರೆ. ಹಾಗೂ ಎಂಟನೆಯ ಅಧ್ಯಾಯದಲ್ಲಿ "ಮಮಾಪಿ

ಜೀವೋತ್ತಮತ್ವಂ ಶ್ರುತ್ವಾ ಸರ್ವೇಮಮ ಪ್ರಿಯಾಃ ॥ ಎಂದು ಹೇಳುವ ಮೂಲಕ ತಾವು ಜೀವೋತ್ತಮರು ಎನ್ನುವುದನ್ನು ಅತ್ಯಂತ ಸ್ಪಷ್ಟವಾಗಿಯೇ ತಿಳಿಸಿದ್ದಾರೆ. ಈ ವೃಂದಾವನಾಖ್ಯಾನ ಸೇವೆಯಿಂದ ಬರುವ ಸಾಕ್ಷಾತ್ ಫಲವು "ಅವಷ್ಣಂ ತ್ವಗ್ನಿ ಸನ್ನಿಭಂ" ಸಾಂಸಾರಿಕ ಉಪದ್ರವಗಳಿಂದ ಸಾಧನೆಗೆ ಬರುವ ವಿಘ್ನಗಳನ್ನು ಸುಟ್ಟು ತೇಜೋವೃದ್ಧಿಮಾಡಿ, ಸಾಧನ ಸೌಕರ್ಯ ಮಾಡಿಕೊಡುತ್ತದೆ. ಎನ್ನುವ ವಿಷಯವು ವೈಭವಪರ್ವದಲ್ಲಿದೆ. ಪೈಲ ಮುನಿಗಳು ವೃಂದಾವನದ ಬಳಿ ದೀಪಾಲಂಕಾರ ಮಾಡುವುದರ ಮೂಲಕ ತನ್ನ ಪಾಪಗಳನ್ನು ನಾಶಮಾಡಿಕೊಂಡ, ಹಾಗೂ ಎಲ್ಲ ಋಷಿಗಳೂ ಪ್ರತಿ ವರ್ಷವೂ ವೃಂದಾವನದ ಬಳಿ ಬಂದು ತನ್ನ ಪ್ರಾರಬ್ಧ ಪಾಪಗಳ ಪರಿಮಿತಿಗಳನ್ನು ಕಡಿಮೆ ಮಾಡಿಕೊಳ್ಳುವುದನ್ನು ತಿಳಿಸುವ ಮೂಲಕ ತಮ್ಮ ವೃಂದಾವನದ ವೈಭವವನ್ನು ತಿಳಿಸಿದ್ದಾರೆ.

ವೈಭವ ಪರ್ವಗಳಲ್ಲಿ ಹೇಳಿದ ವಿಷಯಗಳಲ್ಲಿ ನಿಶ್ಚಯವನ್ನುಂಟು ಮಾಡಲು ಅನೇಕ ನಿದರ್ಶನಗಳು, ನಿದರ್ಶನ ಪರ್ವಗಳಲ್ಲಿ ಹೇಳಲ್ಪಟ್ಟಿವೆ ಏಡಮೂಕ ವಿಪ್ರನು ವೃಂದಾವನಾಚಾರ್ಯರಾಗಿ ಜನ್ಮತಾಳಿದಾಗ, ಅವರ ಕಾಲದಲ್ಲಿ ಅನೇಕ ನಿದರ್ಶನಗಳು ಪ್ರತ್ಯಕ್ಷ ಅನುಭವಕ್ಕೆ ಬಂದಿವೆ. ಈ ಗ್ರಂಥದ ಪ್ರಾಮಾಣ್ಯಕ್ಕೂ ವೃಂದಾವನಾಚಾರ್ಯರ ಜನ್ಮ ಚರಿತ್ರೆಯು ಒಂದು ಸಾಕ್ಷಿಯಾಗಿದೆ.

ಈ ಗ್ರಂಥದ ಪರಿಶೀಲನೆ ಮಾಡುವಾಗ ಸ್ವಪ್ನದಲ್ಲಿ ಅನೇಕರಿಗೆ ಬೋಧಿಸಿರುವದು ಕಂಡು ಬರುತ್ತದೆ. ವಿಪ್ರನಿಗೆ ಸ್ವಪ್ನದಲ್ಲಿ ಬೋಧಿಸುವಕಾಲದಲ್ಲಿ ಇತರರು ಕಾಣಿಸಿಕೊಂಡರೆ ಅವರಿಗೂ ಬೋಧಿಸಿದರು. ಅನೇಕ ಜನ ಕಾಣಿಸಿಕೊಂಡರೆ ಅವರಿಗೆಲ್ಲಾ ಬೋಧಿಸಿದರು. ಹೀಗಾಗಿ ಈ ಗ್ರಂಥದಲ್ಲಿ ಅನೇಕ ಜನರ ಹೆಸರುಗಳು ಕಾಣಲು ಕಾರಣವಾಗಿದೆ. ಅವರವರ ಪ್ರಕರಣಗಳು ಬೇರೆ ಬೇರೆಯಾಗಿಯೇ ಇವೆ. ವಿಪ್ರನು ಸತತವಾಗಿ ಶ್ರೋತೃವು. ವಿಪ್ರನು ವೃಂದಾವನಾಚಾರ್ಯ ಜನ್ಮ ಪಡೆದಾಗ ಇತರರೂ ಜನ್ಮ ಪಡೆದರು. ಅಖ್ಯಾನದಲ್ಲಿ ಉಕ್ತವಾದ ಘಟನೆಗಳು ಸೂಚಿತವಾದ ರೀತಿಯಲ್ಲಿ ನಡೆದವು. ಭಜನ, ವೈಭವ, ನಿದರ್ಶನ ಪರ್ವಗಳಿಗೆ ಒಂದು ರೀತಿಯಲ್ಲಿ ಸಂಬಂಧವೂ ಇದೆ. ಒಂದೊಂದು ದೇವರಸ್ತುತಿ ವಿಶೇಷಣಗಳಿಗೂ ಒಂದೊಂದು ಚಾರಿತ್ರಿಕ ಘಟನೆ ಮೂಲವಾಗಿದ್ದು, ಆ ಘಟನೆಗಳು ಭವಿಷ್ಯತ್ ಸೂಚಕರೀತಿಯಲ್ಲಿ ನಿದರ್ಶನ ಪರ್ವದಲ್ಲಿ ಉಕ್ತವಾಗಿರುತ್ತದೆ. ಆ ಘಟನೆಗಳಿಗೆ ಸಂಬಂಧಿಸಿದ ಶ್ರೀವಾದಿರಾಜರ ಮಹಾತ್ಮ್ಯೆಯು ವೈಭವ ಪರ್ವದಲ್ಲಿ ನಿರೂಪಿತವಾಗಿರುತ್ತದೆ. ಈ ರೀತಿಯಾಗಿ ಭಜನೆ ಪರ್ವದಲ್ಲಿರುವ ದೇವರಸ್ತುತಿಗಳಿಗೂ, ವೈಭವಪರ್ವದಲ್ಲಿರುವ ಚಾರಿತ್ರಿಕ ಘಟನೆಗಳಿಗೂ ಸಂಬಂಧವಿರುತ್ತದೆ.

ಸಜ್ಜನರ ಉದ್ಧಾರಕ್ಕಾಗಿ ತಮ್ಮ ಸ್ವರೂಪ ಪ್ರಕಟಣೆಯಾಗಬೇಕಾಯಿತೆಂದು ಹಿಂದೆಯೇ ಹೇಳಲಾಯಿತಷ್ಟೇ ! ಕೆಲವು ದೃಷ್ಟಾಂತರಗಳಲ್ಲಿ ಶ್ರೀ ವಾದಿರಾಜರು ತಮ್ಮ ಸ್ವರೂಪವನ್ನು ಮೂರಕವಾಗಿಯೂ ಕೆಲವಡೆಗಳಲ್ಲಿ ನೇರವಾಗಿಯೂ ತಿಳಿಸಿದ್ದಾರೆ. ಇದರಲ್ಲಿ ಒಂದೆರಡನ್ನು ಹಿಂದೆಯೇ ತಿಳಿಸಲಾಗಿದೆ. ವಿವರವಾಗಿ ಗ್ರಂಥವನ್ನು ಪರಿಶೀಲಿಸುವಾಗ ಇಂತಹ ಪ್ರಸಂಗಗಳು ಅನೇಕವಿರುವವು ಇಷ್ಟು ಮಾತ್ರವಲ್ಲದೆ ಶ್ರೀಹಯಗ್ರೀವದೇವರ ಆಜ್ಞೆಯಿಂದಲೇ ತಮ್ಮ ಅವತಾರ ಕಾರ್ಯ ಸಾಧನೆಗಳಿಗಾಗಿ ಅವರಿಗೆ ಶ್ರೀ ಬ್ರಹ್ಮದೇವರ ಆಜ್ಞೆಯಿಂದಲೇ ತಮ್ಮ ಅವತಾರಕಾರ್ಯ ಸಾಧನೆಗಳಿಗಾಗಿ, ಅವರಿಗೆ ಶ್ರೀಬ್ರಹ್ಮದೇವರ ಮತ್ತು ಶ್ರೀಮುಖ್ಯಪ್ರಾಣದೇವರ ಲೋಕ ಸಂರಕ್ಷಣಾಧಿಕಾರದಲ್ಲಿ ಗಮನಾರ್ಹ ಭಾಗವು ಲಭಿಸಿರುವದು. ಇದು ೨೧ನೇ ಅಧ್ಯಾಯ

೧೧ನೇ ಶ್ಲೋಕದಲ್ಲಿ ಹೇಳಿರುವ "ವಿನಾ ವಾಣೀಪತಿತ್ವಂ ಮೇ ದತ್ತವಂತೌ ಚಕಿಂವದೇ" ಎನ್ನುವ ವಾಕ್ಯದಿಂದ ತಿಳಿಯುತ್ತದೆ. ಋಜು ದೇವತೆಗಳಿಗೆ ಯೋಗ್ಯ ಅಪರೋಕ್ಷ ಪೂರ್ವದಲ್ಲಿ ೧೦೦ ಬ್ರಹ್ಮಕಲ್ಪಸಾಧನೆ, ನಂತರ ಪದವಿಗಳಲ್ಲಿ ೧೦೦ ಬ್ರಹ್ಮಕಲ್ಪಸಾಧನೆ ಇಷ್ಟುಕಾಲ ಜನಿಸಿ ಹಯಗ್ರೀವದೇವರಲ್ಲಿ ಭಕ್ತಿಮಾಡಿ ಅವರ ಪ್ರಸಾದದಿಂದ ಮೋಕ್ಷವನ್ನು ಪಡೆಯುತ್ತಾರೆ. ತಾವೂ ಹಾಗೆಯೇ ಮೋಕ್ಷವನ್ನು ಪಡೆಯುವದೆಂದು ೬೯ನೆಯ "ಏವಂ ಜನಿ ಶತಾವೃತ್ಯಾ ತದ್ಭಕ್ತ್ಯಾತ್ಪ್ರಸಾದತಃ । ಲಕ್ಷ್ಮೀ ಕಟಾಕ್ಷತಶ್ಚಾಹಂ ಮುಚ್ಯೆ ತತ್ಕುಕ್ಷಿಗಃ ಕ್ಷಣಾತ್।" ಎನ್ನುವ ಶ್ಲೋಕದಲ್ಲಿ ತಿಳಿಸಿದ್ದಾರೆ. ಈ ರೀತಿಯಲ್ಲಿ ತಮ್ಮ ಸ್ವರೂಪದ ಸ್ಪಷ್ಟ ಪ್ರಕಟಣೆ ಮಾಡಿದ್ದಾರೆ.

ಶ್ರೀ ವೇದವ್ಯಾಸರ ಆಜ್ಞೆಯಿಂದ ಈ ವೃಂದಾವನಾಖ್ಯಾನವನ್ನು ಪಠಿಸುವ ಜ್ಞಾನಿಗಳು ಮುಕುಂದನಿಂದ ರಕ್ಷಿತರಾಗುತ್ತಾರೆ. ಎಂದು ।-೧೧೧ರಲ್ಲಿ ಹೇಳಿದ್ದಾರೆ. ಹಾಗೆಯೇ ।-೧೧೩ರಲ್ಲಿ ಈ ವೃಂದಾವನಾಖ್ಯಾನವು ಶ್ರವಣಮಾಡುವವರಿಗೆ ಅನಂತ ಗುಣರೂಪಿಯಾಗಿ ಶ್ರೀಹರಿಯಲ್ಲಿಯೂ ಹರಿಲೋಕಗತರಾದ ಶ್ರೀವಾದಿರಾಜರಲ್ಲಿಯೂ ಭಕ್ತಿಯನ್ನು ಹುಟ್ಟಿಸಿ ಸರ್ವ ಶುಭಾಪ್ತಿಯನ್ನೂ ಸನ್ಮತಿಯನ್ನು ನಿರಂತರವಾಗಿ ಕೊಡುತ್ತದೆ ಎಂದು ಈ ವೃಂದಾವನಾಖ್ಯಾನವನ್ನು ಸೇವಿಸುವವರಿಗೆ ಫಲವನ್ನು ಹೇಳಿದ್ದಾರೆ. ಆದ್ದರಿಂದ ಈ ಗ್ರಂಥವನ್ನು ಪಠಿಸುವವರೂ ಶ್ರವಣ ಮಾಡುವವರೂ, ಪೂಜಿಸುವವರೂ ಭಾವೀಸಮೀರ ಶ್ರೀವಾದಿರಾಜಗುರುಗಳ ಅನುಗ್ರಹಕ್ಕೆ ಪಾತ್ರರಾಗುವವರೆನ್ನುವುದು ನಿಸ್ಸಂಶಯ.

ಸ್ವಾಪ್ನ ವೃಂದಾವನಾಖ್ಯಾನದಲ್ಲಿ ಉಕ್ತವಾದದ್ದು ಸತ್ಯವಾಗಿ ನಡೆದ ಕೆಲವು ಘಟನೆಗಳು ಹಾಗೂ ಇತರ ಮಹಾತ್ಮೆಗಳು

೧ : ಶ್ರೀ ವಾದಿರಾಜಗುರುಗಳು ಏಡಮೂಕ ವಿಪ್ರನಲ್ಲಿ ಆವಿಷ್ಟರಾಗಿ ಸ್ವಾಪ್ನವೃಂದಾವನಾಖ್ಯಾನ ಉಪದೇಶಿಸುವ ಸಂದರ್ಭದಲ್ಲಿ ಬ್ರಾಹ್ಮಣನಿಗೆ ಆಯುಷ್ಯ ಮುಗಿಯುತ್ತಾ ಬಂತು ಆಗ ಶ್ರೀವಾದಿರಾಜರು ಮುಖ್ಯಪ್ರಾಣರಿಗೆ ಪ್ರಾರ್ಥಿಸಿ ವೃಂದಾವನಾಖ್ಯಾನ ಮುಗಿಯುವವರೆಗೆ ಆಯುಷ್ಯ ನೀಡುವಂತೆ ಪ್ರಾರ್ಥಿಸುತ್ತಾರೆ. ಮುಖ್ಯಪ್ರಾಣರು ವಿಪ್ರನಿಗೆ ಆಯುಷ್ಯ ನೀಡುತ್ತಾರೆ.

೨ : ಭಾವೀಸಮೀರ ವಾದಿರಾಜಗುರುಗಳ ಅವತಾರ ಉದ್ದೇಶದಲ್ಲಿ ಕೆಲವು ದೇವತೆಗಳಿಗೆ ಸಾಧನ ಮಾಡಿಸಿವುದು ಪ್ರಮುಖವಾಗಿದೆ.

೧. ಗವ್ಯ ಪದಸ್ಥರಾದ ಶ್ರೀ ವೇದವೇದ್ಯರು ಭಾವೀಲಾತವ್ಯರು
೨. ವೇದನಿಧಿಗಳು ಭಾವೀ ಗರುಡರು
೩. ಭೂತರಾಜರಾದ ನಾರಾಯಣಾಚಾರ್ಯರು ಭಾವೀ ರುದ್ರರು.
೪. ವೃಂದಾವನಾಚಾರ್ಯರು (ಏಡಮೂಕ ಬ್ರಾಹ್ಮಣನು) ಭಾವೀಇಂದ್ರರು.
೫. ಹಯಗ್ರೀವ ಮುನಿಗಳು ಭಾವೀ ಕಾಮ ಪದಸ್ಥರು.
೬. ಶೇಷ ಎಂಬುವವರು ಭಾವೀ ಅಹಂಕಾರಿಕೆ ಪ್ರಾಣರು.
೭. ಸೀತಾಪತಿಗಳು ಭಾವೀ ಅಗ್ನಿ

ಹಾಗೆಯೇ ವ್ಯಾಸರು ಇತ್ಯಾದಿ ಅನೇಕರು ಭಾವೀ ಪದಸ್ಥರು. ಇವರೆಲ್ಲಾ ವಾದಿರಾಜರ ಕಾಲದಲ್ಲಿ ಅವರ ಸೇವಾ ನಿರತರಾಗಿದ್ದರು. ಅವರಿಂದ ಅನುಗ್ರಹಿತರಾಗಲು ತಮ್ಮ ತಮ್ಮ

ಸಾಧನವನ್ನು ಮಾಡಿಕೊಳ್ಳಲು ಅನೇಕ ಜನ್ಮಗಳನ್ನು ಎತ್ತಿ ಬಂದು, ಸ್ವಾಪ್ನವೃಂದಾವನದಲ್ಲಿ ಶ್ರೀವಾದಿರಾಜರು ಸೂಚಿಸಿದ ಆದೇಶ ಪಾಲಿಸಿ ಸಾಧನ ಮಾಡಿಕೊಂಡು ಸತ್ಫಲ ಹೊಂದಿರುತ್ತಾರೆ.

ಏಡಮೂಕ ಬ್ರಾಹ್ಮಣನಿಗೆ ಶ್ರೀವಾದಿರಾಜರು ತುಂಬಾ ಅನುಗ್ರಹ ಮಾಡಿ ಅವರಿಗೆ ಇಂದ್ರ ಪದವಿ ದೊರೆಯಲು ಸಾಧನ ಮಾಡಿಸಿದ್ದಾರೆ.

೩ : ಏಡಮೂಕ ಬ್ರಾಹ್ಮಣನಿಗೆ ಸುಮಾರು ೧೫೦ ವರ್ಷಗಳ ನಂತರ ತೌಳವ ಮಂಡಲದಲ್ಲಿ ಜನಿಸಿ 'ವಿಶ್ವಪ್ರಿಯತೀರ್ಥ' ಎಂಬ ಹೆಸರಿನಿಂದ ಸೋದಾ ಮಠದ ೩೨ನೇ ಪೀಠಾಧೀಶರಾದರು. ಇವರು ಆಶ್ರಮ ಸ್ವೀಕಾರ ಮಾಡಿದ ಕೆಲವೇ ಸಮಯದಲ್ಲಿ ಗುರುಗಳಾದ ಶ್ರೀವಿಶ್ವೇಶತೀರ್ಥರು ಹಾಗೂ ಪರಮಗುರುಗಳಾದ ಶ್ರೀವಿಶ್ವಾಧೀಶ್ವರತೀರ್ಥರು ವೃಂದಾವನಸ್ಥರಾದರು. ಆಗ ಶ್ರೀವಿಶ್ವಪ್ರಿಯತೀರ್ಥರು ಸೋದೆಗೆ ಹೋಗಿ ಅನಶನ ಮುಂತಾದ ವ್ರತಗಳಿಂದ ಶ್ರೀವಾದಿರಾಜರ ಸೇವೆಯನ್ನು ದೀರ್ಘಕಾಲ ಮಾಡಿದರು. ಗುರುರಾಜರು ಸ್ವಪ್ನ ಸೂಚನೆಯಂತೆ ವೃಂದಾವನದ ಎದುರಿಗೆ ಸರ್ವಮೂಲ ಮುಂತಾದ ಸ್ವಚ್ಛಾಸ್ತ್ರ ಗ್ರಂಥಗಳ ಪಾರಾಯಣ ಮಾಡಿದರು. ಆಗ ಸಕಲ ಗ್ರಂಥಗಳ ಜ್ಞಾನ ಪಡೆದರು. ಅವು ಕಂಠಸ್ಥವಾದವು. ಪುಸ್ತಕಗಳ ನೆರವಿಲ್ಲದೆ ಪಾಠ ಹೇಳುತ್ತಿದ್ದರು. ಇವರು ವೃಂದಾವನವನ್ನೇ ಗುರುವಾಗಿ ಮಾಡಿಕೊಂಡು ಅಪಾರ ಜ್ಞಾನ ಸಂಪತ್ತನ್ನು ಪಡೆದ ಕಾರಣ 'ವೃಂದಾವನಾಚಾರ್ಯ'ರೆಂದು ಪ್ರಖ್ಯಾತರಾದರು. ಶ್ರೀವಾದಿರಾಜರ ಅನುಗ್ರಹ ಮತ್ತು ಆವೇಶವು ಇವರಲ್ಲಿತ್ತೆಂದು ಪ್ರತ್ಯಕ್ಷ ಸಿದ್ಧವಾದ ಘಟನೆಗಳು. ಸ್ವಾಪ್ನವೃಂದಾವನಾಖ್ಯಾನದಲ್ಲಿ ವರ್ಣಿತವಾಗಿದೆ. ಇವರು ೨೦೦ ವರ್ಷಗಳಾದ ನಂತರ ಸೋದೆಯಲ್ಲಿ ವಿಜೃಂಭಣೆಯಿಂದ ಆಚರಿಸಿದ ತ್ರಿವಿಕ್ರಮ ರಥೋತ್ಸವದ ವರ್ಣನೆಯನ್ನು ವಾದಿರಾಜರು ಸ್ವಾಪ್ನವೃಂದಾವನಾಖ್ಯಾನದಲ್ಲಿ ೨೦೦ ವರ್ಷಗಳ ಹಿಂದೆಯೇ ವರ್ಣಿಸಿದ್ದಾರೆ. ಇದರಿಂದ ಸರ್ವಜ್ಞರಾದ ಗುರುರಾಜರಿಗೆ ಅವರ ಸಮಾನರಿಗೆ ಕಾಲವೆಂಬ ಪರದೆಯು ದೂರ ಸೆಳೆಯಲ್ಪಟ್ಟು ಭೂತ, ಭವಿಷ್ಯ ಕಾಲದ ವ್ಯಾಪಾರಗಳೆಲ್ಲವೂ ಸ್ಪಷ್ಟ ಪ್ರತ್ಯಕ್ಷಕ್ಕೆ ವಿಷಯವಾಗುತ್ತದೆ ಎಂಬುದು ತಿಳಿಯುತ್ತದೆ.

೪ : ಮಧ್ಯತಾಳಮಠದಲ್ಲಿದ್ದ ವ್ಯಾಸ-ಪ್ರತೀಕವನ್ನು ಹಯವದನ, ಭೂವರಾಹ ಸನ್ನಿಧಿಯಲ್ಲಿಟ್ಟು ಪೂಜಿಸಬೇಕೆಂಬ ಸ್ವಾಪ್ನ ವೃಂದಾವನಾಖ್ಯಾನದಲ್ಲಿಯ ವಾದಿರಾಜರ ಆದೇಶದಂತೆ ಶ್ರೀ ವಿಶ್ವಪ್ರಿಯರು ಕಾರ್ಯಪ್ರವೃತ್ತರಾಗಲು ಉಳಿದ ಪೀಠಾಧಿಪತಿಗಳು ವಿರೋಧ ಮಾಡಿದರು. ಆಗ ಭೂತರಾಜರು ಹಾಗೂ ಸ್ವಾಪ್ನವೃಂದಾವನಾಖ್ಯಾನದಲ್ಲಿ ಉಲ್ಲೇಖಿತರಾದ ವಾದಿರಾಜರ ಭಕ್ತರು ಶ್ರೀವಿಶ್ವಪ್ರಿಯರಿಗೆ ಬೆಂಗಲಿಗರಾಗಿ ನಿಂತು ವಿರೋಧ ಎದುರಿಸಿದರು. ಈ ಕಾರ್ಯದ ಫಲದಿಂದ ಶ್ರೀವಿಶ್ವಪ್ರಿಯತೀರ್ಥರು ಇಂದ್ರಪದವಿ ಪಡೆಯಲು ಸಾಧನೆಯಾಯಿತು. ಇವರಿಗೆ ಸಹಾಯ ಮಾಡಿದ ದೇವತೆಗಳೂ ಕೂಡ ಸತ್ಫಲ ಪಡೆದರು.

೫ : ಏಡಮೂಕ ಬ್ರಾಹ್ಮಣನು ಕನಸಿನಲ್ಲಿ ಶ್ರೀವಾದಿರಾಜ ಗುರುಗಳು ವೃಂದಾವನಾಖ್ಯಾನ ಬೋಧಿಸುತ್ತಿರುವಾಗ ಹೋಮ ವಾಜುಹ್ವ 'ಜುಹ್ವ' ಬದಲಿಗೆ 'ದಹ' ಎಂದು ಉಚ್ಚರಿಸಲ್ಪಟ್ಟ ಕಾರಣ ಅದು ವ್ಯರ್ಥವಾಗದೆ ಮುಂದೆ ವೃಂದಾವನಾಚಾರ್ಯರ ಕಾಲದಲ್ಲಿ ಸತ್ಯವಾಗಿ ಪರಿಣಮಿಸಿತು. ಸೋದೆಯಲ್ಲಿ ವೃಂದಾವನಾಚಾರ್ಯರು ಸ್ಥಿತರಾಗಿ ತಮ್ಮ ಕಡೆ ಅಂದರೆ ಮಠದ ಕಡೆ ವ್ಯಾಪಿಸುತ್ತಿದ್ದ ಅಗ್ನಿ ಜ್ವಾಲೆಯನ್ನು ನೋಡಿ, ಕಳಕಳಿಯಿಂದ ಭಯಭೀತರಾಗಿ

ಗುರುರಾಜರನ್ನು ಪ್ರಾರ್ಥಿಸಲು ಅದು ಶತ್ರುಗಳ ಮನೆಯ ಕಡೆಗೆ ವ್ಯಾಪಿಸಿ ಅವರ ಮನೆಗಳನ್ನು ಸುಡುವಂತೆ ಮಾಡಿ, ಭಕ್ತರಾದ ಶ್ರೀ ವಿಶ್ವಪ್ರಿಯರ ಮಠಕ್ಕೆ ಅಗ್ನಿಭೀತಿಯಾಗದಂತೆ ರಕ್ಷಿಸುವ ಮೂಲಕ ತಮ್ಮ ಮಹಿಮೆ ಅಸದೃಶವೆಂಬುದನ್ನು ತೋರಿಸಿರುವರು.

೬ : ಒಬ್ಬ ಬ್ರಾಹ್ಮಣನು ಶ್ರೀ ಗುರುಸಾರ್ವಭೌಮರ ವೃಂದಾವನದ ದರ್ಶನಕ್ಕಾಗಿ ಬರುತ್ತಿರುವಾಗ ವಿಧವೆಯೊರ್ವಳ ದರ್ಶನದಿಂದಲೂ ಹಾಗೆಯೇ ಒಬ್ಬ ಒಂಟಿ ಬ್ರಾಹ್ಮಣನ ದರ್ಶನದಿಂದಲೂ ಅಪಶಕುನವಾಯಿತೆಂದು ಭಯಭೀತರಾಗಿ ಧವಳಗಂಗಾ ಸ್ನಾನ ಮತ್ತು ವೃಂದಾವನದ ದರ್ಶನಮಾಡಲಿಲ್ಲ. ದ್ರವ್ಯದ ಆಶೆಗಾಗಿ ಪಾಂಡಿತ್ಯ ಪ್ರದರ್ಶನ ಮಾಡಿದನು. ಅದರಿಂದ ಗೌರವವನ್ನು ಪಡೆಯದೆ ಕುಜನರಿಂದ ಅಪಹಾಸ್ಯಕ್ಕೆ ಗುರಿಯಾದನು. ಬಳಿಕ ಆತನು ಭಕ್ತಿಯುತನಾಗಿ ಶ್ರೀವಾದಿರಾಜರ ಪಂಚವೃಂದಾವನಕ್ಕೆ ಮೂರುಲಕ್ಷ ಪ್ರದಕ್ಷಿಣೆಯನ್ನು ಮಾಡಿ ತನ್ನ ಪಾಪರಾಶಿಯನ್ನು ಕಳೆದುಕೊಂಡನು. ಆಗ ವಾದಿರಾಜರು ಅವನಿಗೆ ತಮ್ಮ ಶಿಷ್ಯರಾದ ಶೇಷನ ಸರಿಸಮಾನ ಪಾಂಡಿತ್ಯವನ್ನಿತ್ತು ಅನುಗ್ರಹಿಸಿದರು.

೭ : ಉತ್ತರಾದಿಮಠದ ಪೀಠಸ್ಥರಾದ ಶ್ರೀಸತ್ಯಧರ್ಮರ (೧೭೯೭-೧೮೩೦) ಪೂರ್ವಾಶ್ರಮದ ಹೆಸರು ಅಣ್ಣಯ್ಯಾಚಾರ್ಯರೆಂದು. ಅವರು ಮುದ್ಗಲಾಚಾರ್ಯರ ಮಕ್ಕಳು. ಕುಲದೇವತೆಯಾದ ಶ್ರೀಲಕ್ಷ್ಮೀನರಸಿಂಹನ ಅನುಗ್ರಹದಿಂದ ಹುಟ್ಟಿದವರು. ಶ್ರೀ ಸತ್ಯವರ ಗುರುಗಳು ಗುತ್ತಿಯಲ್ಲಿ ಚತುರ್ಥಾಶ್ರಮ ಕೊಟ್ಟು ಸತ್ಯಧರ್ಮರೆಂದು ಆಶ್ರಮನಾಮವಿತ್ತರು ಹದಿನಾರು ಸಲ ಸುಧಾಮಂಗಲ ಮಾಡಿದ ಇವರು ಹೊಳೆಹೊನ್ನೂರಿನಲ್ಲಿ ವೃಂದಾವನಸ್ಥರಾದರು. ಇವರು ಪೂವಾಶ್ರಮದಲ್ಲಿ ಶ್ರೀವಾದಿರಾಜರ ಭಕ್ತರು. ಪ್ರತಿವರ್ಷ ಗುರುರಾಜರ ಆರಾಧನೆಗೆ ಸೋದೆಗೆ ಹೋಗುತ್ತಿದ್ದರು. ಶ್ರೀವಾದಿರಾಜ ಋಜುತ್ವದಲ್ಲಿ ವಿಶ್ವಾಸ ಹೊಂದಿದವರು. ಗುರುರಾಜರ ಮೇಲೆ ಸ್ತೋತ್ರರಚಿಸಿದ್ದಾರೆ. ಆ ಸ್ತೋತ್ರದಲ್ಲಿ ಶ್ರೀವಾದಿರಾಜರನ್ನು ಭಾವೀಸಮೀರರೆಂದು ಸ್ತುತಿಸಿದ್ದಾರೆ. ಇವರು ರುದ್ರಾಂಶರೆಂದು ಪ್ರಸಿದ್ಧರಾಗಿದ್ದರು. ಒಮ್ಮೆ ಇವರು ಹಾಗೂ ಇವರ ಪತ್ನಿ ಪುತ್ರರು ಸವಣೂರು ನವಾಬರಿಂದ ಬಂಧನಕ್ಕೊಳಗಾಗುವ ಪ್ರಸಂಗ ಬಂದಿತು. ಆಗ ಶ್ರೀವಾದಿರಾಜರಿಗೆ ಶರಣಾಗತವಾಗಿ ಭಕ್ತಿಯಿಂದ ಸ್ತುತಿಸಿ ಕಷ್ಟ-ಪರಿಹರಿಸಿಕೊಂಡರು. ಇವರ ವೃಂದಾವನದ ಎದುರು ಗಂಗೆ ತೊಟ್ಟಿಕ್ಕುತ್ತಿದ್ದಳು. ವೃಂದಾವನದ ಎದುರಿಗೆ ಎರಡು ಲಿಂಗಗಳು ಪ್ರಾದುರ್ಭವಿಸಿರುತ್ತವೆ. ಈಗ ಎಂಬತ್ತು ವರ್ಷಗಳಿಂದ ಗಂಗೆ ತೊಟ್ಟಿಕ್ಕುತ್ತಿರುವದು ನಿಂತು ಹೋಗಿದೆ. ಇವರ ವೃಂದಾವನದ ಕೆಲವು ಭಾಗಗಳಲ್ಲಿ ಶ್ರೀಜಯತೀರ್ಥರು, ಶ್ರೀರಘೋತ್ತಮತೀರ್ಥರು, ಶ್ರೀಸತ್ಯಬೋಧರು ಸನ್ನಿಹಿತರಾಗಿರುತ್ತಾರೆ. ಅವರಿಗೆ ಪ್ರತಿದಿನ ಪೂಜಾ, ನೈವೇದ್ಯ ಸಮರ್ಪಿಸುತ್ತಾರೆ. ಅರ್ಚಕರ ಕನಸಿನಲ್ಲಿ ಸತ್ಯಧರ್ಮರು ಕಾಣಿಸಿಕೊಂಡು ತಮ್ಮ ವೃಂದಾವನದ ಒಂದು ಭಾಗದಲ್ಲಿ ಶ್ರೀ ವಾದಿರಾಜ ಗುರುಗಳು ಸನ್ನಿಹಿತರಾಗಿರುವರು ಅವರಿಗೂ ಹಸ್ತೋದಕ ನೀಡುವಂತೆ ಸೂಚಿಸಿದ ಕಾರಣ ಅವರಿಗೂ ಪ್ರತಿದಿನ ಹಸ್ತೋದಕ ನೀಡಲಾಗುತ್ತಿದೆ. ಇವರ ಕಾಲದಲ್ಲಿ ಸೋದೆಪೀಠಸ್ಥರಾಗಿದ್ದ ಶ್ರೀವಿಶ್ವಪ್ರಿಯತೀರ್ಥರನ್ನು ಕರೆಸಿ ಅವರಿಗೆ ಭಿಕ್ಷೆ ಮಾಡಿಸಿದ ವಿಷಯ ಉಲ್ಲೇಖವಿದೆ. ಇವರ ಸ್ವಪ್ನದಲ್ಲಿ ವಾದಿರಾಜರು ಕಾಣಿಸಿಕೊಂಡು ಸ್ವಾಪ್ನವೃಂದಾವನಾಖ್ಯಾನ ಪಾರಾಯಣ ಮಾಡುವಂತೆ ಸೂಚಿಸಿದ ಕಾರಣ ಸ್ವಾಪ್ನವೃಂದಾವನಾಖ್ಯಾನ ಪಾರಾಯಣ ಮಾಡುತ್ತಿದ್ದರು. ಉತ್ತರಾದಿಮಠದ ಪರಂಪರೆಯಲ್ಲಿ ಇರ್ವರು ಸ್ವಾಮಿಗಳು ಶ್ರೀವಾದಿರಾಜರ ಋಜುತ್ವವನ್ನು ಒಪ್ಪಿರುತ್ತಾರೆ. ಒಬ್ಬರು ಶ್ರೀಸತ್ಯಧರ್ಮತೀರ್ಥರು ಇನ್ನೊಬ್ಬರು ಶ್ರೀಸತ್ಯಪರಾಕ್ರಮತೀರ್ಥರು.

ಇಲ್ಲಿ ಒಂದು ವಿಷಯ ಹೇಳಬಯಸುತ್ತೇನೆ. ಕ್ರಿ.ಶ. ೧೯೯೨ರಲ್ಲಿ ಹೊಳೆಹೊನ್ನೂರಿನಲ್ಲಿ ಶ್ರೀಯುತ ಎಸ್.ಆರ್. ಪ್ರಹ್ಲಾದಾಚಾರ್ಯರು ಶ್ರೀವಿಶ್ವೋತ್ತಮತೀರ್ಥರು ಷಷ್ಠ್ಯಬ್ಧಿ ಹಾಗೂ ಪೀಠಾರೋಹಣದ ೫೦ನೇ ವರ್ಷದ ಅಂಗವಾಗಿ ಸುವರ್ಣ ಮಹೋತ್ಸವ ಕಾರ್ಯಕ್ರಮ ವಿಜೃಂಭಣೆಯಿಂದ ಆಚರಿಸಿದ ಸಂದರ್ಭದಲ್ಲಿ, ಆ ಕಾರ್ಯಕ್ರಮಕ್ಕೆ ಆಗಮಿಸಿದ ಶ್ರೀ ವಿಶ್ವೋತ್ತಮರು ಸ್ನಾನ ಮಾಡಿ ಗಂಗಾಸ್ತುತಿ ಹೇಳಲು ಪ್ರಾರಂಭಿಸಿದಾಗ ಹಲವು ದಶಕಗಳ ಹಿಂದೆ ನಿಂತು ಹೋದ ಗಂಗಾವತರಣ ಪುನಃ ಪ್ರಾರಂಭವಾಗಿ ಶ್ರೀಸತ್ಯಧರ್ಮರ ವೃಂದಾವನದ ಮೇಲೆ ಗಂಗೆ ತೊಟ್ಟಿಕ್ಕತೊಡಗಿದಳು. ಶ್ರೀವಿಶ್ವೋತ್ತಮತೀರ್ಥರು ಅಲ್ಲಿರುವವರೆಗೆ ಗಂಗೆ ಕಾಣಿಸಿಕೊಂಡಳು ನಂತರ ಅದೃಶ್ಯಳಾದಳು. ಈ ಘಟನೆ ಶ್ರೀವಿಶ್ವೋತ್ತಮತೀರ್ಥರು ದೇವತಾಪುರುಷರೆಂದು ಸೂಚಿಸುತ್ತದೆ.

೮ : ಪರ್ಯಾಯೋತ್ಸವಕಾಲದಲ್ಲಿ ನನ್ನ ಭಕ್ತನೊಬ್ಬನ ಮನಸ್ಸಿನಲ್ಲಿದ್ದು ಅವನಿಗೆ ಪ್ರೇರಣೆ ಮಾಡಿ ಅನ್ನದಾನಕ್ಕೆ ಧನಪ್ರಾಪ್ತಿಯಾಗುವಂತೆ ಮಾಡುತ್ತೇನೆ. "ನೀನು ನನ್ನ ಅಂತರ್ಯಾಮಿ ಪರಮಾತ್ಮನನ್ನು ಭಕ್ತಿಯಿಂದ ಸ್ಮರಿಸು" ಎಂಬುದಾಗಿ ಸ್ವಾಪ್ನ ವೃಂದಾವನಾಖ್ಯಾನದಲ್ಲಿ ವಾದಿರಾಜರು ಏಡಮೂಕ ಬ್ರಾಹ್ಮಣನಿಗೆ ಹೇಳಿರುವರು. ಆ ಬ್ರಾಹ್ಮಣನು ಶ್ರೀವಿಶ್ವಪ್ರಿಯತೀರ್ಥರಾಗಿ ಅವತಾರ ಮಾಡಿದಾಗ ಪರ್ಯಾಯೋತ್ಸವದಲ್ಲಿ ಮೈಸೂರಿನ ಮುಮ್ಮಡಿಕೃಷ್ಣರಾಜ ಒಡೆಯರಿಂದ ಬಹುವಾಗಿ ಅನ್ನದಾನಕ್ಕೆ ಧನ ಸಹಾಯ ಮಾಡಿಸಿರುತ್ತಾರೆ.

೯ : ವೃಂದಾವನಾಚಾರ್ಯರು ಸೋದೆಯಲ್ಲಿರುವಾಗ ಕೊಚ್ಚಿದೇಶದ ರಾಜನು ಶ್ರೀಗಳವರ ದರ್ಶನಾರ್ಥವಾಗಿ ಬಂದನು. ಈತನು ವಿದ್ವಾಂಸನು ಮಧ್ವಶಾಸ್ತ್ರ ಸಂಪನ್ನನಾಗಿಯೂ ಭಗವತ್ಪ್ರೀತಿಜನಕ ಗ್ರಂಥ ಕತೃವೂ ಆಗಿದ್ದನು. ಈತನಿಗೆ ಸ್ವರೂಪ ಸುಖದ ಅನುಭವವು ಯಾವ ರೀತಿ ಇರುತ್ತದೆ ಎಂಬುವ ವಿಚಾರದಲ್ಲಿ ಸಂದಿಗ್ಧ ಮನಸ್ಕನಾಗಿ ಅಲ್ಲಿಯೇ ಶ್ರೀ ಗುರುರಾಜಾಂತರ್ಗತ ಶ್ರೀ ವೇದವ್ಯಾಸರಲ್ಲಿ ಪ್ರಾರ್ಥಿಸಿ ಮಲಗಿದನು. ಆತನಿಗೆ ಸ್ವಪ್ನದಲ್ಲಿ ಶ್ರೀ ಹರಿಯು ಕಾಣಿಸಿಕೊಂಡು "ಹೇ ರಾಜನೇ ನನ್ನ ಗುಣಕೀರ್ತನೆಗಳಿಂದ ನರ್ತನ ಮಾಡು" ಎಂದು ಹೇಳಿ ಅದೃಶ್ಯನಾದನು. ಅದರಂತೆಯೇ ಈತನು ಶ್ರೀಹರಿಯ ಮಹಿಮಾತಿಯಗಳನ್ನು ಕೊಂಡಾಡುತ್ತ ಮೈಮೇಲೆ ಸ್ಮೃತಿ ತಪ್ಪಿ ನರ್ತನ ಮಾಡುತ್ತಿರಲು, ಒಂದು ವಿಚಿತ್ರವಾದ ಆನಂದಾನುಭವವನ್ನು ಹೊಂದಿ ಸ್ವರೂಪಾನಂದ ವಿಚಾರದಲ್ಲಿ ತನ್ನ ಸಂದೇಹವನ್ನು ಕಳೆದುಕೊಂಡನು.

೧೦ : ಶ್ರೀ ವಾದಿರಾಜರ ಕಾಲದಲ್ಲಿ "ಕೊಂಡಪ್ಪ" ಎಂಬ ಬ್ರಾಹ್ಮಣನು ರಾಜರ ಸೇವಕನಾಗಿದ್ದನು. ಮುಂದೆ ಈತನು ಜಗನ್ನಾಥದಾಸರಾಗಿ ಅವತಾರ ಮಾಡಿದಾಗ ಶ್ರೀವಾದಿರಾಜರು ಕನಸಿನಲ್ಲ ಕಾಣಿಸಿಕೊಂಡು ಸಕಲಶಾಸ್ತ್ರಾರ್ಥಗಳನ್ನೊಳಗೊಂಡ ಒಂದು ಗ್ರಂಥರಚನೆ ಮಾಡು ಎಂದು ಆಜ್ಞಾಪಿಸಿದ ಕಾರಣ ದಾಸಸಾಹಿತ್ಯದ "ಶ್ರೀಸುಧಾ" ಎಂದು ಪ್ರಖ್ಯಾತವಾದ ಶ್ರೀಹರಿಕಥಾಮೃತಸಾರವೆಂಬ ಗ್ರಂಥರತ್ನವನ್ನು ರಚಿಸಿರುತ್ತಾರೆ.

ಜಮಖಂಡಿ ವಾದಿರಾಜಾಚಾರ್ಯರು :

ಹತ್ತೊಂಬತ್ತನೆಯ ಶತಮಾನದಲ್ಲಿ ಈಗಿನ ಹಾವೇರಿ ಜಿಲ್ಲೆಯ ಹಾನಗಲ್‌ನಲ್ಲಿ, ಜ್ಞಾನಿಗಳೂ, ಪರಮ ಸಾತ್ವಿಕರೂ, ವೈಷ್ಣವಧರ್ಮ ನಿಷ್ಣಾತರಾದ ಶ್ರೀನಿವಾಸಾಚಾರ್ಯರೆಂದು ಭಗವದ್ಭಕ್ತರು

ಪಾಠಪ್ರವಚನದಲ್ಲಿ ನಿರತರಾಗಿದ್ದರು. ಇವರು ಉತ್ತರಾದಿಮಠದವರಾಗಿದ್ದರೂ. ಆಗಿನ ಸೋದಾಮಠಾಧೀಶರಾದ, ಭಾವೀ ಇಂದ್ರ ಪದಾರ್ಹರಾದ ಶ್ರೀವೃಂದಾವನಾಚಾರ್ಯರ ಶಿಷ್ಯರಾಗಿದ್ದರು. ಇವರು ಶ್ರೀಗುರುರಾಜರ ಋಜುತ್ವ ಮಹಿಮಾ ವಿಷಯದಲ್ಲಿ ಶ್ರದ್ಧಾಯುಕ್ತರಾಗಿದ್ದರು. ಇವರ ಪತ್ನಿಯು ಸದ್ಗುಣಶೀಲಳೂ ಪತಿಪರಾಯಣಳಾಗಿದ್ದಳು. ಬಹಳ ವರ್ಷಗಳಾದರೂ ಸಂತಾನವಾಗದಿರಲು ಚಿಂತಾಕ್ರಾಂತರಾದ ದಂಪತಿಗಳಿಗೆ ಶ್ರೀವಿಶ್ವಪ್ರಿಯತೀರ್ಥರು ಫಲಮಂತ್ರಾಕ್ಷತೆ ನೀಡಿ ಶ್ರೀವಾದಿರಾಜರ ಪಂಚವೃಂದಾವನ ಸೇವೆ ಮಾಡಲು ಸೂಚಿಸಿದರು. ಶ್ರೀಗಳ ಅಪ್ಪಣೆ ಪಡೆದು ಸೋದಾಕ್ಷೇತ್ರಕ್ಕೆ ಬಂದು ಧವಳಗಂಗಾದಲ್ಲಿ ಸ್ನಾನ ಶ್ರೀರಾಜರ ಮೃತ್ತಿಕಾಲೇಪನ, ಮೃತ್ತಿಕಾತೀರ್ಥದ ಸೇವನೆ ಪಂಚವೃಂದಾವನ ಪ್ರದಕ್ಷಿಣೆ ನಮಸ್ಕಾರ ಆಚರಣೆ ಮೂಲಕ ಕಠಿಣ ಸೇವಾಚರಣೆ ಮಾಡಿ ವೃಂದಾವನ ಸ್ಥಿತ ಶ್ರೀವಾದಿರಾಜರ ಅಂತರ್ಯಾಮಿ ಹಯವದನನ್ನು ಅನನ್ಯ ಭಕ್ತಿಯಿಂದ ಸೇವಿಸಿದರು. ಈ ದಂಪತಿಗಳ ಸೇವೆಯಿಂದ ಸಂತುಷ್ಟನಾದ ಪರಮಾತ್ಮನು ಅನುಗ್ರಹಿಸಿದನು. ಇವರಿಗೆ ಪುತ್ರ ಸಂತಾನವಾಯಿತು. ವಾದಿರಾಜರ ವರಪ್ರಸಾದದಿಂದ ಜನಿಸಿದ ಮಗುವಿಗೆ 'ವಾದಿರಾಜ' ಎಂಬುದಾಗಿ ನಾಮಕರಣ ಮಾಡಿದರು.

ಇವರು ಉತ್ತರಾದಿ ಮಠದ ಶ್ರೀಸತ್ಯಪರಾಕ್ರಮ ತೀರ್ಥರಲ್ಲೂ ಹಾಗೂ ಕೃಷ್ಣಾಪುರ ಮಠಾಧೀಶರಾದ ಶ್ರೀ ವಿದ್ಯಾಧೀಶತೀರ್ಥರಲ್ಲೂ ಅಧ್ಯಯನ ಮಾಡಿ ಅತ್ಯದ್ಭುತ ಶಾಸ್ತ್ರ ಪಾಂಡಿತ್ಯ ಪಡೆದರು. ಇವರು ಜಮಖಂಡಿ ವಾದಿರಾಜಾಚಾರ್ಯರೆಂದು ಪ್ರಖ್ಯಾತರಾದರು. ಶ್ರೀವಾದಿರಾಜರ 'ಋಜುತ್ವ' ವಾದಿಗಳಾಗಿ ಅನ್ಯಜುತ್ವಗಳ ವಿರುದ್ಧ ಹೋರಾಡಿ ಅನೇಕ ಗ್ರಂಥ ರಚಿಸಿದರು. ಶ್ರೀಜಗನ್ನಾಥದಾಸರ ಮೇರು ಕೃತಿ ಹರಿಕಥಾಮೃತಸಾರಕ್ಕೆ ಸಂಸ್ಕೃತದಲ್ಲೂ ಹಾಗೂ ಕನ್ನಡದಲ್ಲೂ ಟೀಕೆ ಬರೆದಿರುವರು. ಇವರು ಕಾಶ್ಮೀರರಾಜನಿಂದ ಬಹುಮಾನವಾಗಿ ಪಡೆದ ಅಪೂರ್ವಕೆತ್ತನೆಯ ಪಲ್ಲಕಿಯನ್ನು ತಮ್ಮ ವಿದ್ಯಾಗುರುಗಳಾದ ಶ್ರೀ ವಿದ್ಯಾಧೀಶರಿಗೆ ಅರ್ಪಿಸಿದರು. ಶ್ರೀವಾದಿರಾಜರ ಋಜುತ್ವ ಸಮರ್ಥನೆಯಲ್ಲಿ ಇವರೊಬ್ಬ ಸಾಮ್ರಾಟ್ ಸೇನಾನಿ ಇವರು ಅವಧೂತಚರ್ಯೆಯಲ್ಲಿದ್ದು ಅನೇಕ ಮಹಿಮೆ ತೋರಿಸಿದ್ದಾರೆ.

೧೧ : ವಿಶ್ವಪ್ರಿಯತೀರ್ಥರು ಶಿಥಿಲವಾಗತೊಡಗಿದ್ದ ಮಠದ ದೇಶಿ ಹಂಚಿನ ಕಟ್ಟಡವನ್ನು ಕಟ್ಟಿಸಿದರು. ಹಾಗೂ ಶ್ರೀವಾದಿರಾಜರೇ ಕಟ್ಟಿಸಿದ ಮಠದ ಕಟ್ಟಡ ಜೀರ್ಣವಾಗಿದ್ದರಿಂದ ವೃಂದಾವನಾಚಾರ್ಯರು ಹೊಸದಾಗಿ ಮಠ ಕಟ್ಟಿಸಿದರು. ದೀರ್ಘಕಾಲ ಕೆಲಸಗಾರರು ಆ ಮಲೆಯ ಮಧ್ಯದಲ್ಲಿದ್ದು ಕಟ್ಟಡ ಕೆಲಸ ಮುಗಿಸಿದರು. ಆದರೆ ವೃಂದಾವನಾಚಾರ್ಯರು ಈ ಕಾರ್ಯಕ್ಕಾಗಿ ಸಂಗ್ರಹಿಸಿದ ದ್ರವ್ಯವೆಲ್ಲ ಮುಗಿದು ಹೋಗಿದ್ದುದರಿಂದ ಅವರು ಚಿಂತಾಕ್ರಾಂತರಾಗಿದ್ದರು. ಒಂದು ರಾತ್ರಿ ಅವರಿಗೆ ಶ್ರೀವಾದಿರಾಜರು ಕನಸಿನಲ್ಲಿ ಕಾಣಿಸಿಕೊಂಡು ವೃಂದಾವನದ ಸಮೀಪವಿದ್ದ ಅಶ್ವತ್ಥ ವೃಕ್ಷದ ಬುಡದಲ್ಲಿ ಒಂದು ನಿಧಿ ಇದೆ. ರಾತ್ರಿ ಎಲ್ಲರೂ ಮಲಗಿದ ಮೇಲೆ ಅಲ್ಲಿಹೋಗು. ಭೂಗತವಾದ ನಿಧಿಯ ಕೊಪ್ಪರಿಗೆ ಮೇಲೇರಿ ಬರುತ್ತದೆ. ಅದರಿಂದ ಮೂರು ಬೊಗಸೆ ನಾಣ್ಯಗಳನ್ನು ತೆಗೆದುಕೋ, ಚಿಂತಿಸಬೇಡ ಎಂದರು. ಮರುದಿನ ರಾತ್ರಿ ಆಗಿನ ಪಾರುಪತ್ಯದಾರರೊಬ್ಬರನ್ನೇ ಒಡಗೊಂಡು ಕೈದೀವಿಗೆಯೊಡನೆ ಅಶ್ವತ್ಥದ ಬುಡಕ್ಕೆ ಸ್ವಾಮಿಗಳವರು ಹೋದರು. ನೋಡನೋಡುತ್ತಿದ್ದಂತೆ ಬಂಗಾರದ ಮೊಹರುಗಳುಳ್ಳ ಕೊಪ್ಪರಿಗೆ ಮೇಲೆರಿ ಬಂತು. ದೀವಿಗೆಯ ಕುರುಡು ಬೆಳಕಿನಲ್ಲಿ ಥಳಥಳಿಸುತ್ತಿದ್ದ ನಿಧಿಯಿಂದ ಒಂದೊಂದೇ ಬೊಗಸೆ ನಾಣ್ಯವೆತ್ತಿ ಪಾರುಪತ್ಯದಾರರ ಮಡಿಲಲ್ಲಿ ಹಾಕಿದರು. ಮೂರನೆಯದನ್ನೆತ್ತಿದ ತಕ್ಷಣ

ನಿಧಿ ಭೂಗರ್ಭದಲ್ಲಿ ಇಳಿದು ಹೋಯಿತು. ಅದರಿಂದ ಲೆಕ್ಕ ತೀರಿಸಿದರು. ಒಂದು ಕವಡೆಯೂ ಕಮ್ಮಿ ಬೀಳಲಿಲ್ಲ. ಅಥವಾ ಮಿಕ್ಕಲಿಲ್ಲ.

ಇವೆಲ್ಲವೂ ಶ್ರೀವೃಂದಾವನಾಚಾರ್ಯರೆಂದು ಖ್ಯಾತರಾದ 'ಶ್ರೀವಿಶ್ವಪ್ರಿಯತೀರ್ಥ'ರ ಕಾಲದಲ್ಲಿ ನಡೆದ ಘಟನೆಗಳು.

೧೨ : ಶ್ರೀಮತಿ ರತ್ನಮ್ಮನವರಿಗೆ ವಯಸ್ಸು ಮೀರಿದ್ದರೂ ಮಕ್ಕಳಾಗಿರಲಿಲ್ಲ. ವೈದ್ಯಕೀಯ ಪರೀಕ್ಷೆ, ಔಷಧಿ, ಯಾತ್ರೆ, ಹರಕೆ ಯಾವುದರಿಂದಲೂ ಪ್ರಯೋಜನವಾಗದೆ, ಕೊನೆಗೆ ಆವಾಗಿನ ಸೋದಾ ಮಠಾಧೀಶರಾದ ಪರಮ ಪೂಜ್ಯ ಶ್ರೀ ವಿಶ್ವೇಂದ್ರತೀರ್ಥ ಶ್ರೀಪಾದಂಗಳವರಲ್ಲಿ ಫಲಮಂತ್ರಾಕ್ಷತೆ ಪಡೆದರು. "ಒಂದು ವರ್ಷದಲ್ಲಿ ಗಂಡು ಸಂತತಿಯಾಗುತ್ತದೆ" ಎಂದು ಮನಸ್ಸಿನಲ್ಲಿ ಅಂದು ಕೊಳ್ಳುತ್ತಿದ್ದರು. ಆದರೆ ಆಕೆ ಒಂದು ವರ್ಷದಲ್ಲಿ ಹೆಣ್ಣು ಮಗುವನ್ನು ಹಡೆದರು. ಪುನಃ ಶ್ರೀಗಳವರಲ್ಲಿ ಪ್ರಾರ್ಥಿಸಿದಾಗ "ನೀನು ಮನಸ್ಸಿನಲ್ಲಿ ಯಾಕೆ ಸಂಶಯಪಟ್ಟೆ ಇನ್ನು ಹಾಗೆ ಮಾಡದಿರು, ಬರುವ ವರ್ಷ ಗಂಡು ಸಂತತಿಯಾಗುತ್ತದೆ. ಎಂಬ ದೃಢಭಾವನೆಯಿಂದ ಇರು" ಎಂದು ಅಪ್ಪಣೆ ಕೊಟ್ಟು ಪುನಃ ಫಲಮಂತ್ರಾಕ್ಷತೆ ನೀಡಿದರು. ಹಾಗೂ ಸಂಶಯಪಟ್ಟ ಅಪರಾಧಕ್ಕೆ ಸೋದೆಯಾತ್ರೆ ಮಾಡಿ ಶ್ರೀವೃಂದಾವನಕ್ಕೆ ನೂರು ರೂಪಾಯಿ ತಪ್ಪು ಕಾಣಿಕೆ ಹಾಕು ಎಂದು ಅಪ್ಪಣೆ ಕೊಡಿಸಿದರು. ಮರು ವರ್ಷ ಗಂಡು ಸಂತತಿಯಾಯಿತು. ಹುಡುಗನಿಗೆ ಇಪ್ಪತ್ತೇಳು ತುಂಬಿ ಒಂದು ಮಗುವಿನ ತಂದೆಯಾದರೂ ಹರಕೆ ಒಪ್ಪಿಸದೆ ಇದ್ದರು. ಒಮ್ಮೆ ರತ್ನಮ್ಮನ ಮಗನ ಕಾಲು ಉಳುಕಿದಂತಾಗಿ ಎಲುಬು ಮುರಿಯಿತು. ಡಾಕ್ಟರು ಮಗನ ಕಾಲನ್ನು ತುಂಡರಿಸಬೇಕೆಂದಾಗ, ಇದ್ದ ಒಬ್ಬ ಮಗನು ಕುಂಟನಾಗುತ್ತನಲ್ಲ ಎಂಬ ಕಾರಣದಿಂದ ನಾಲ್ಕು ತಿಂಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದರೂ ಫಲಕಾರಿಯಾಗಲಿಲ್ಲ. ತುಂಬಾ ಹಣ ಖರ್ಚಾಯಿತು. ಆಗ ಸೋದೆಗೆ ಹೋಗಿ ಹರಕೆ ತೀರಿಸಬೇಕೆಂದು ಜ್ಞಾಪಕವಾಯಿತು. ಸೋದೆಗೆ ಖಂಡಿತವಾಗಿ ಹೋಗುವುದಾಗಿ ಸಂಕಲ್ಪಿಸಲು ಕಾಲು ಗುಣವಾಗಿ ಹುಡುಗ ಮುಂಚಿನಂತಾದನು. ತಾಯಿ ಪುನಃ ಸೋದೆಗೆ ಹೋಗುವದನ್ನು ಮರೆತುಬಿಟ್ಟಳು. ಮಗನಿಗೆ ಪುನಃ ಮುಂಚಿನಗಿಂತಲೂ ಹೆಚ್ಚಾಗಿ ನೋವು ಪೀಡಿಸಲಾರಂಭಿಸಿತು. ಆಗ ಶ್ರೀಗುರುಸಾರ್ವಭೌಮರಿಗೆ ತಪ್ಪುಕಾಣಿಕೆ ತೆಗೆದಿರಿಸಿದರು. ಆಗ ನೋವು ನಿಂತು ಗುಣವಾಯಿತು. ರತ್ನಮ್ಮನ ಗಂಡ ತೀರ ವೃದ್ಧರಾದ ಕಾರಣದಿಂದಲೂ, ಸೊಸೆ ಬಾಣಂತಿಯಾಗಿದ್ದರುದರಿಂದಲೂ ಹೋಗಲಾಗಲಿಲ್ಲ. ತಾಯಿ ಮಗ ಇಬ್ಬರು ಸೋದೆ ಯಾತ್ರೆ ಕೈಗೊಂಡರು. ಸೋದೆಗೆ ಹತ್ತು ಮೈಲು ದೂರವಿರುವಾಗ ಬಂದ ವಾಹನ ಕೆಟ್ಟುಹೋಯಿತು. ಕತ್ತಲೆ ಆವರಿಸಹತ್ತಿತು. ಕಾಡಿನಲ್ಲಿ ಇರಲಾಗದೇ ತಾಯಿ ಮಗ ನಡೆಯುತ್ತಾ ಸೋದೆಗೆ ಹೋಗಲಾರಂಭಿಸಿದರು. ತಾಯಿಯು ವೃದ್ಧೆ, ಮಗ ಕ್ಷೀಣವಾಗಿದ್ದ. ಇಷ್ಟಲ್ಲದೆ ಬಹುಭಾರದ ಪೆಟ್ಟಿಗೆ ಹೊತ್ತು ನಡೆಯಲಾರಂಬಿಸಿದರು. ಪೆಟ್ಟಿಗೆಯನ್ನು ಕೈ ಬದಲಿಸುತ್ತಾ ಸ್ವಲ್ಪ ದೂರದ ಹೋಗುತ್ತಿದ್ದಾಗ ಕಾಡಿನ ಮಧ್ಯದಿಂದ ಒಬ್ಬ ಸೇವಕನಂತೆ ಕಾಣಿಸುವ ಆಳು "ಪೆಟ್ಟಿಗೆ ಹೊರಬೇಕೆ?" ಎಂದು ಹೇಳುತ್ತಾ ಇತರ ಕಷ್ಟ ನೋಡಿ ಸಹಾಯ ಮಾಡಲು ಬಂದನು. ತಾನು ಸೋದೆ ವಾದಿರಾಜಮಠದ ಸಿಬ್ಬಂದಿ ಎಂದು ಹೇಳಿದನು. ಪೆಟ್ಟಿಗೆಯನ್ನು ಮಠದವರೆಗೆ ತಂದುಕೊಟ್ಟಾದ ಮೇಲೆ ಅವನಿಗೆ ಹಣಕೊಡಬೇಕಂತ ದುಡ್ಡು ತೆಗೆಯುವಷ್ಟರಲ್ಲಿ ಕಾಣದಾದ. ಆತನು ಯಾರ ಕಣ್ಣಿಗೂ ಕಾಣಿಸಲೇಇಲ್ಲ. ಮಠದವರನ್ನು ವಿಚಾರಿಸಲು ಆತನು ಮಠದವನು ಅಲ್ಲ ಅಂತ

ಗೊತ್ತಾಯಿತು. ಈ ತಾಯಿ, ಮಗ ಕಟ್ಟಂಗೇರಿ ಹೆಬ್ಬಾರರ ಮನೆತನದವರು. ಈ ಘಟನೆ ನಡೆದದ್ದು ಸುಮಾರು ಐವತ್ತು ವರ್ಷಗಳ ಹಿಂದೆ.

೧೩ : ಕೋಟೇಶ್ವರ ಮಾಗಣೆಯವರಾದ ಕೀರ್ತನ ಪಂಚಾನನ ಎಂಬ ಬಿರುದು ಪಡೆದ ದಿ॥ ಫಣಿಬಟ್ಟರು ತಾವು ಸೋದೆಯಲ್ಲಿ ನೋಡಿದ ಘಟನೆಯನ್ನು ನಮಗೆಲ್ಲಾ ಹೇಳುತ್ತಿದ್ದರು. ಇದು ಸುಮಾರು ೫೦–೬೦ ವರ್ಷಗಳ ಹಿಂದೆ ನಡೆದದ್ದು.

ಒಬ್ಬ ಭಕ್ತರು ಸೋದೆ ಮಠಕ್ಕೆ ದಾನಕೊಡಲು ಹಸು ಒಂದನ್ನು ತಂದರು. ಆ ಹಸುವಿನ ಕೆಚ್ಚಲನ್ನು ಹಿಂಡಲು ಹಾಲಿನ ಬದಲು ರಕ್ತ ಬರುತ್ತಿತ್ತಂತೆ. ಅದೇ ಹಸುವು ಸೋದೆ ಕ್ಷೇತ್ರದ ಸೀಮೆದಾಟಿ ಹಯಗ್ರೀವ ಸಮುದ್ರದ ಹತ್ತಿರ ಹಿಂಡಿದರೆ ಹಾಲು ಕರೆಯುತ್ತಿತ್ತಂತೆ. ಮಠದವರು ಆ ಹಸುವನ್ನು ದಾನವಾಗಿ ಸ್ವೀಕರಿಸಲು ಒಪ್ಪಲಿಲ್ಲವಂತೆ.

೧೪ : ತುಮಕೂರಿನ ಪ್ರಸಿದ್ಧ ಕಂಟ್ರ್ಯಾಕ್ಟರ್ ಶ್ರೀ ಬಿ.ಪಿ. ನಾರಾಯಣ ಮೂರ್ತಿಯವರು ಶ್ರೀವಾದಿರಾಜರ ಅಂತರಂಗದ ಭಕ್ತರು. ಶ್ರೀವಿಶ್ವೋತ್ತಮ ತೀರ್ಥರು ಸೋದೆಯಲ್ಲಿ ಇವರ ಮೂಲಕ ಅನೇಕ ಕಟ್ಟಡಗಳ ಕಾಮಗಾರಿ ಮಾಡಿಸಿರುವರು. ಸುಮಾರು ೪೦–೪೫ ವರ್ಷಗಳ ಹಿಂದೆ ಸೋದೆಯಲ್ಲಿ ಮಠದ ಎದುರಿಗಿರುವ ದೊಡ್ಡ ತಗಡಿನ ಚಪ್ಪರವನ್ನು ಇವರೇ ನಿರ್ಮಾಣಮಾಡಿದ್ದು. ಆ ಸಂದರ್ಭದಲ್ಲಿ ಒಮ್ಮೆ ಸೋದೆಗೆ ಹೋದಾಗ ರಾತ್ರಿ ಇವರ ಕಾರು ಚಾಲಕ ಹನುಮಂತ ತ್ರಿವಿಕ್ರಮ ದೇವಸ್ಥಾನದ ಗರುಡಗಂಭದ ಬಳಿ ಕಾರನ್ನು ನಿಲ್ಲಿಸಿ ತಾನು ಕಾರಿನಲ್ಲಿ ಮಲಗಿದ್ದನು. ಬೆಳಿಗ್ಗೆ ನೋಡಿದಾಗ ಕಾರು ತ್ರಿವಿಕ್ರಮ ದೇವಸ್ಥಾನದ ಹಿಂಭಾಗದಲ್ಲಿ ನಿಂತಿತ್ತು. ಕಾರು ಸ್ಥಳಾಂತರಕ್ಕೆ ಕಾರಣವೇನು ಎಂದು ಶ್ರೀ ನಾರಾಯಣಮೂರ್ತಿಗಳು ಹನುಮಂತನನ್ನು ಕೇಳಲು ಅವನು ಹೀಗೆ ಹೇಳಿದನು. "ಸ್ವಾಮಿ! ರಾತ್ರೆ ಕೆಳಗಿನ ಮಠದಿಂದ ಒಬ್ಬ ತೇಜಸ್ವಿಯಾದ ವೃದ್ಧ ಸ್ವಾಮಿಗಳು ನಿಧಾನವಾಗಿ ನಡೆಯುತ್ತಾ ಇಲ್ಲಿಗೆ ಬಂದರು. ಆಗ ಈ ಗರುಡಗಂಭವು ನಿಂತಿರಲಿಲ್ಲ. ಸ್ವಾಮಿಗಳು ಇದನ್ನು ಕೆತ್ತುತ್ತ ಕುಳಿತ ಕಲ್ಲುಕುಟಕನೊಂದಿಗೆ ಏನೋ ಮಾತನಾಡಿದರು. ಆಗ ಈ ಸ್ತಂಭವು ಒಮ್ಮೆಲೆ ಯಾರ ಸಹಾಯವಿಲ್ಲದೆ ತಾನಾಗಿ ಎದ್ದು ನಿಂತಿತು. ಸ್ವಾಮಿಗಳು ಮಠಕ್ಕೆ ಮರಳಿಹೋದರು. ಸ್ತಂಭನಿಂತ ರೀತಿ ನೋಡಿದ ನನಗೆ ಹೆದರಿಕೆಯಾಯಿತು. ಅದು ಬೀಳಬಹುದೆಂಬ ಶಂಕೆಯಿಂದ ಕಾರನ್ನು ಈ ಸ್ಥಳಕ್ಕೆ ತಂದು ನಿಲ್ಲಿಸಿದೆನು."

ಕಾರು ಚಾಲಕ ಹನುಮಂತ ನೋಡಿದ ದೃಶ್ಯ ಸುಮಾರು ೩೦೦ವರ್ಷಗಳ ಹಿಂದೆ ನಡೆದ ಸತ್ಯಸಂಗತಿಯಾಗಿತ್ತು. ಆ ವೃದ್ಧ ಸನ್ಯಾಸಿಗಳು ಶ್ರೀವಾದಿರಾಜಗುರುಗಳ ಪ್ರಶಿಷ್ಯರಾದ ಶ್ರೀವೇದನಿಧಿಗಳು. ಅವರು ತ್ರಿವಿಕ್ರಮ ದೇವಸ್ಥಾನದ ಎದುರು ಗರುಡಗಂಭವನ್ನು ನಿಲ್ಲಿಸಲು ಹಲವಾರು ಬಾರಿ ಪ್ರಯತ್ನಿಸಿದರೂ ನಿಲ್ಲಿಸಲಾಗಲಿಲ್ಲ. ಆಗ ಅವರು ಚಿಂತಾಕ್ರಾಂತರಾಗಿ ಶ್ರೀವಾದಿರಾಜರಿಗೆ ಮೊರೆಹೋದರು. ಶ್ರೀವಾದಿರಾಜರು ಸ್ವಪ್ನದಲ್ಲಿ ಕಾಣಿಸಿಕೊಂಡು ತಮ್ಮ ಹಂಸಾರೂಢ ಪ್ರತೀಕವನ್ನು ಸ್ತಂಭದಲ್ಲಿ ಕೆತ್ತಿಸಬೇಕೆಂದು ಸೂಚಿಸಿದರು. ಗುರುಗಳು ಸೂಚಿಸಿದಂತೆ ಶ್ರೀವೇದನಿಧಿಗಳು ಆ ಗರುಡಗಂಭದಲ್ಲಿ ಶ್ರೀವಾದಿರಾಜ ಹಂಸಾರೂಢ ಪ್ರತಿಮೆ ಕೆತ್ತಿಸಿದರು. ಆಗ ಆ ಸ್ತಂಭವು ಸರಾಗವಾಗಿ ನಿಂತಿತು. ಈ ಘಟನೆಯನ್ನು ಕಾರ ಚಾಲಕ ಹನುಮಂತ ಹಿಂದಿನ ದಿನ ರಾತ್ರೆ ನೋಡಿದ್ದು. ಅವನಿಗೆ ಸೋದಾಕ್ಷೇತ್ರದ ಬಗ್ಗೆಯಾಗಲಿ, ಶ್ರೀವಾದಿರಾಜರ ಬಗ್ಗೆಯಾಗಲಿ ೩೦೦ ವರ್ಷಗಳ ಹಿಂದಿನ ಈ ಘಟನೆ ಬಗ್ಗೆಯಾಗಲಿ ಯಾವುದು ಗೊತ್ತಿಲ್ಲ.

ಅವನು ಈ ಘಟನೆ ನೋಡಿದ್ದು ಅವನ ಪೂರ್ವಸುಕೃತದಿಂದ. ಹಿಂದಿನ ಯಾವುದೋ ಜನ್ಮದಲ್ಲಿ ಆ ಕಂಭಕೆತ್ತಿರುವ ಕಲ್ಲುಕುಟಿಕನಾಗಿದ್ದನೇನೋ ? ಬಲ್ಲವರಾರು ?

೧೫ : ನಾಲ್ಕು ವರ್ಷಗಳ ಹಿಂದೆ ೧೨ನೇ ಜುಲೈ ೨೦೦೫ರಂದು ಶ್ರೀ ಶ್ರೀ ವಿಶ್ವೋತ್ತಮತೀರ್ಥರಿಗೆ ನಮ್ಮ ಮನೆಯಲ್ಲಿ ಭಿಕ್ಷೆ ಮಾಡಿಸಿದೆವು. ಆ ಸಮಯದಲ್ಲಿ ನಮ್ಮ ಮೂವರು ಗಂಡು ಮಕ್ಕಳು ಹಾಗೂ ಮಗಳು ಅಳಿಯ ಪ್ರತ್ಯೇಕ ಪ್ರತ್ಯೇಕವಾಗಿ ಶ್ರೀಗಳವರಿಗೆ ಪಾದ ಪೂಜೆ ಮಾಡಿ ಫಲಮಂತ್ರಾಕ್ಷತೆ ಪಡೆದರು. ನಮ್ಮ ಹಿರಿಯಮಗ ರಾಮಕೃಷ್ಣ ಸೊಸೆ ರೇಖಾ ಶ್ರೀಗಳವರ ಕರಕಮಲದಿಂದ ಪಡೆದ ಫಲವನ್ನು ಒಂದು ಪ್ಲಾಸ್ಟಿಕ್ ಕವರಲ್ಲಿ ಹಾಕಿ ಟ್ರಿಜರಿಯ ಲಾಕರ್‌ನಲ್ಲಿ ಇಟ್ಟರು. ೭–೮ ತಿಂಗಳ ಬಳಿಕ ನೋಡಿದಾಗ ಪ್ಲಾಸ್ಟಿಕ್ ಕವರಿನಲ್ಲಿದ್ದ ತೆಂಗಿನಕಾಯಿ ಮೊಳೆತು ಪ್ಲಾಸ್ಟಿಕ್ ಚೀಲವನ್ನು ಬೇಧಿಸಿ ಹೊರಗೆ ಬಂದಿತ್ತು. ಗಾಳಿ, ಬೆಳಕು ನೀರು ಇಲ್ಲದ ಕಾರಣ ಸ್ವಲ್ಪ ಬಿಳಿಚಿಕೊಂಡಿತ್ತು. ಅದನ್ನು ಸಿಮೆಂಟ್ ಪಾಟನಲ್ಲಿಟ್ಟು ಬೆಳೆಸಿದೆವು.

ನನ್ನ ಮಗಳು ಚಂದ್ರಿಕಳಿಗೆ ಮದುವೆಯಾಗಿ ಹನ್ನೆರಡು ವರ್ಷಗಳಾದರೂ ಸಂತಾನ ಪ್ರಾಪ್ತಿಯಾಗಿಲ್ಲದ್ದು ಎಲ್ಲರಿಗೂ ಚಿಂತೆಯಾಗಿತ್ತು. ಯಾತ್ರೆ ವ್ರತ ಉಪವಾಸ ಹೋಮ ಹಾಗೂ ಔಷಧೋಪಚಾರ ಮಾಡಿದರೂ ಏನು ಪ್ರಯೋಜನವಾಗಲಿಲ್ಲ. ಕ್ರಿ.ಶ. ೨೦೦೬ರಲ್ಲಿ ಸೋದೆಗೆ ಹೋಗಿ ನಿಯಮಬದ್ಧರಾಗಿ ಸೇವೆಮಾಡಿದರು. ಶ್ರೀ ವಿಶ್ವೋತ್ತಮತೀರ್ಥರು ಫಲಮಂತ್ರಾಕ್ಷತೆ ನೀಡಿ ಒಂದು ಪುಸ್ತಕದಲ್ಲಿ ಓಂಕಾರ ಹಾಕಿ ಸ್ವಾಪ್ನ ವೃಂದಾವನಾಖ್ಯಾನವನ್ನು ಆ ಪುಸ್ತಕದಲ್ಲಿ ಪ್ರತಿದಿನ ಬರೆಯುವಂತೆ ಸೂಚಿಸಿದರು. ಬೆಂಗಳೂರಿಗೆ ಬಂದ ನಂತರ ನನ್ನ ಮಗಳು ಅಳಿಯ ಇಬ್ಬರೂ ಪ್ರತಿನಿತ್ಯ ಸ್ವಾಪ್ನವೃಂದಾವನಾಖ್ಯಾವನ್ನು ಬರೆದು ಪಾರಾಯಣ ಮಾಡಲು ಪ್ರಾರಂಭಿಸಿದರು ಆರು ತಿಂಗಳಲ್ಲಿ ನನ್ನ ಮಗಳು ಗರ್ಭಿಣಿಯಾಗಿ ಹೆಣ್ಣು ಶಿಶುವಿಗೆ ಜನ್ಮ ನೀಡಿದಳು.

೨೫–೪–೨೦೦೭ರಂದು ನನ್ನ ಮಗಳ ಮನೆಯವರು ರಾಜಾಜಿನಗರದ ತಮ್ಮ ಸ್ವಗೃಹದಲ್ಲಿ ಶ್ರೀ ಶ್ರೀ ವಿಶ್ವೋತ್ತಮತೀರ್ಥರಿಗೆ ಪಾದಪೂಜೆ ಮಾಡಿದರು. ಆ ಸಂದರ್ಭದಲ್ಲಿ ನನ್ನ ಮಗಳು ಗರ್ಭಿಣಿಯಾಗಿರುವ ವಿಷಯ ತಿಳಿದು ಶ್ರೀ ಶ್ರೀ ವಿಶ್ವೋತ್ತಮತೀರ್ಥರು ಸಂತೋಷಪಟ್ಟರು. ಆ ಸಂದರ್ಭದಲ್ಲಿ ನಾನು ಶ್ರೀಗಳವರಿಗೆ ಎರಡು ವರ್ಷಗಳ ಹಿಂದೆ ನನ್ನ ಮಗ–ಸೊಸೆಗೆ ಪ್ರಸಾದ ರೂಪವಾಗಿ ಕೊಟ್ಟ ಕಾಯಿ ಮೊಳಕೆ ಒಡೆದು ಸಸಿಯಾದ ವಿಷಯ ತಿಳಿಸಲು ಶ್ರೀಗಳವರು ನಿಮ್ಮ ಮಗಳು ಗರ್ಭಿಣಿಯಾಗುವ ಮುನ್ಸೂಚನೆ ಅದಾಗಿತ್ತು ಎಂಬುದಾಗಿ ಹೇಳಿ ಫಲಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು.

ನಮ್ಮ ಮನೆಯಲ್ಲಿ ಬೆಳೆದ ಆ ತೆಂಗಿನ ಸಸಿ ಎಲ್ಲಿ ನೆಡಬೇಕು ಎಂಬುದಾಗಿ ವಿಚಾರ ನಮಗೆ ಚಿಂತೆಗೀಡುಮಾಡಿತು. ಕೊನೆಗೆ ಸೋದೆಯೇ ಸೂಕ್ತಸ್ಥಳ ಅಂತ ತೀರ್ಮಾನಿಸಿ ಶ್ರೀ ಬಿ.ಎಸ್. ಸುಬ್ರಮಣ್ಯರ ಮೂಲಕ ಸೋದೆಗೆ ಕಳುಹಿಸಿದೆವು. ಮಠದವರ ಒಪ್ಪಿಗೆ ಪಡೆದು ಅಶ್ವತ್ಥವೃಕ್ಷ ವಾದಿರಾಜರ ವೃಂದಾವನ ಮಧ್ಯದ ಸ್ಥಳದಲ್ಲಿ ನೆಡಲಾಯಿತು. ಈಗ ಅದು ಅಲ್ಲಿ ಚೆನ್ನಾಗಿ ಬೆಳೆಯುತ್ತಿದೆ.

ಶ್ರೀ ವಾದಿರಾಜರ ಗುರುಸಾರ್ವಭೌಮರ ಮೃತ್ತಿಕಾ ವೃಂದಾವನಗಳು

೧. ಶಿರಗುಪ್ಪಾ ೨. ಬಳ್ಳಾರಿ ೩. ಶಹಾಪೂರ ೪. ಬೆಳಗಾವಿ ೫. ಹಾವನೂರು ೬. ಸವಣೂರು ೭. ಬದ್ರಾವತಿ ೮. ತಮಿಳುನಾಡಿನ ಚಿದಂಬರದ ಹನುಮಂತಪುರದ ಹತ್ತಿರ

ಕನ್ನಪ್ಪನನಾಡಿ ಮಠದಲ್ಲಿ ಶ್ರೀ ವಿಶ್ವಪ್ರಿಯತೀರ್ಥರಿಂದಲೇ ಸ್ಥಾಪಿತವಾದ ಶ್ರೀವಾದಿರಾಜ ಗುರುಸಾರ್ವಭೌಮರ ವೃಂದಾವನವಿದೆ. ೯. ಶ್ರೀಮುಷ್ಣನಲ್ಲಿ ಶ್ರೀವರಾಹಸ್ವಾಮಿ ದೇವಸ್ಥಾನದ ಹಿಂಭಾಗದಲ್ಲಿದೆ. ಹಾಗೂ ಸೋದೆಮಠದ ಉದ್ಯಾದರ ಮಠದಲ್ಲಿ ಕೊಚ್ಚಿರಾಜ ಕೊಟ್ಟ ಸುವರ್ಣ ಪಂಚವೃಂದಾವನವಿದೆ.

ಪಾಕಿಸ್ತಾನ ವಿಜ್ಞಾನಿ ಅಬ್ದುಸ್‌ಸಲಾಮ್ ಎಂಬಾತನ ವಿಚಾರ :

"ಗೋಕುಲಷ್ಟಮಿಗೂ ಇಮಾಮ ಸಾಬಿಗೂ ಏನು ಸಂಬಂಧ?" ಎಂಬುದಾಗಿ ಕನ್ನಡದಲ್ಲಿ ಗಾದೆ ಮಾತಿದೆ. ಇದೆ, ಸಂಬಂಧಯಿದೆ. ಇದನ್ನು ಓದಿದರೆ ತಿಳುಯುತ್ತದೆ. ಪಾಕಿಸ್ತಾನದ ಭೌತಶಾಸ್ತ್ರ ವಿಜ್ಞಾನಿ ಅಬ್ದುಸ್ ಸಲಾಮ ಎಂಬುವವರಿಗೆ ಭೌತಶಾಸ್ತ್ರದಲ್ಲಿ ೧೯೭೦ಳಲ್ಲಿ ನೋಬಲ್ ಬಹುಮಾನ ಬಂದಿತು. ಅವರು ಬೊಂಬಾಯಿಗೆ ಆಗಮಿಸಿದಾಗ ಟಿ.ಆಯ್.ಎಫ್.ಆರ್. ಎಂಬ ವಿಜ್ಞಾನ ಸಂಸ್ಥೆಯಲ್ಲಿ ಭಾಷಣ ಮಾಡುವಾಗ ಅವರು ಹೇಳಿದ ವಿಷಯ ತಾವು ಶ್ರೀವಾದಿರಾಜರ ಕೆಲವು ಕೃತಿಗಳನ್ನು ಅಭ್ಯಾಸ ಮಾಡಿದ್ದಾಗಿಯೂ, ವಿಶೇಷತಃ ತಮಗೆ ರುಕ್ಮಿಣೀಶ ವಿಜಯವೂ, ಬ್ರಹ್ಮಸೂತ್ರದ ಮೇಲೆ ಶ್ರೀ ಮಧ್ವಾಚಾರ್ಯರ ಭಾಷ್ಯಕ್ಕೆ ಶ್ರೀವಾದಿರಾಜರು ಬರೆದ ಟಿಪ್ಪಣಿಯೂ ತಮ್ಮ ಸಂಶೋಧನೆಗೆ ಸ್ಫೂರ್ತಿ ಎಂದು ಹೇಳಿದರು. (ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಉಡುಪಿಯವರೊಬ್ಬರು ಶ್ರೀಬನ್ನಂಜೆ ಗೋವಿಂದಾಚಾರ್ಯರಿಗೆ ತಿಳಿಸಿದರು.) ಶ್ರೀ ಬನ್ನಂಜೆಯವರು ಮೇಲಿನ ವಿಷಯವನ್ನು ಅನೇಕ ಬಾರಿ ಉಪನ್ಯಾಸದಲ್ಲಿ ಹೇಳಿದ್ದನ್ನು ನಾನು ಕೇಳಿರುತ್ತೇನೆ. ಪಾಕಿಸ್ತಾನದ ಮುಸ್ಲಿಮ್ ವಿಜ್ಞಾನಿಯೊಬ್ಬ ಸಂಸ್ಕೃತ ಕಲಿತು ವಾದಿರಾಜರ ಕೃತಿ ಅಧ್ಯಯನ ಮಾಡಿದ್ದು ಆಶ್ಚರ್ಯಕರವಲ್ಲವೇ ? ಅದರಿಂದ ಸ್ಫೂರ್ತಿಪಡೆದದ್ದು ಇನ್ನೂ ಆಶ್ಚರ್ಯವಲ್ಲವೇ ?

ಅಕಾಡೆಮಿಕ್ ಕ್ಷೇತ್ರಗಳಲ್ಲಿ : ಅಕಾಡೆಮಿಕ್ ಎಂದರೆ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಶ್ರೀವಾದಿರಾಜರ ಕೃತಿಗಳನ್ನು ಕುರಿತು ಆಳವಾಗಿ ಅಭ್ಯಾಸ ಮಾಡಿದವರು. ಶ್ರೀಗುರುರಾಜ, ಕೃ.ನಿಪ್ಪಾಣಿಯವರು 'ಯುಕ್ತಿಮಲ್ಲಿಕಾ' ಕುರಿತು ಪ್ರಬಂಧ ಬರೆದು ಡಾಕ್ಟರೇಟ್ ಪಡೆದಿರುವರು. ಡಾ॥ ಎಚ್.ಜಿ. ಲೋಕೂರರರಂತೂ ಶ್ರೀವಾದಿರಾಜರ ಸಮಗ್ರ ಕೃತಿಗಳ ಅಧ್ಯಯನ ಮಾಡಿ ಡಾಕ್ಟರೇಟ್ ಪಡೆದಿರುವರು. ಡಾ॥ ತಡಕೋಡ ಎನ್ನುವವರು 'ರುಕ್ಮಿಣೀಶ ವಿಜಯ' ಕುರಿತು ಪ್ರಬಂಧವನ್ನು ಮಂಡಿಸಿ ಡಾಕ್ಟರೇಟ್ ಪಡೆದಿರುವರು.

ಶ್ರೀ ವಾದಿರಾಜ ಭಕ್ತರ ಕರ್ತವ್ಯಗಳು :

೧. ವಾದಿರಾಜರು ಮುಂದಿನಕಲ್ಪದಲ್ಲಿ ವಾಯು ಪಟ್ಟಕ್ಕೆ ಬರುವ ಲಾತವ್ಯ ನಾಮಕ ಋಜುಗಳೆಂಬ ಧೃಡ ನಂಬಿಕೆ ಹೊಂದಿರಬೇಕು.

೨. ಸ್ವಾಪ್ನ ವೃಂದಾವನಾಖ್ಯಾನ ವಾದಿರಾಜರೇ ಏಡಮೂಕ ಬ್ರಾಹ್ಮಣನ ಕನಸಿನಲ್ಲಿ ತಮ್ಮ ಸ್ವರೂಪ ಕಥನ ಮಾಡಿದ್ದಾರೆ ಎಂಬ ವಿಶ್ವಾಸ ಇರಬೇಕು. ಪ್ರತಿದಿನ ಒಂದು ಅಧ್ಯಾಯ ಪಾರಾಯಣ ಮಾಡಬೇಕು. ಅದು ಸಾಧ್ಯವಾಗದೇ ಇದ್ದರೆ ಅಣುವೃಂದಾವನಾಖ್ಯಾನವನ್ನಾದರು ಹೇಳಬೇಕು. ಸ್ವಾಪ್ನ ವೃಂದಾವನಾಖ್ಯಾನವನ್ನು ಜ್ಞಾನಿಗಳಿಂದ ಉಪದೇಶ ಪಡೆಯಬೇಕು.

ಹಾಗೂ ಸ್ವಾಪ್ನ ವೃಂದಾವನಾಖ್ಯಾನ ಅಧ್ಯಯನ ಮಾಡಬೇಕು. ಜೀವನದಲ್ಲಿ ಒಮ್ಮೆಯಾದರೂ ಸ್ವಾಪ್ನ ವೃಂದಾವನಾಖ್ಯಾನ ಹೋಮ ಮಾಡಿಸಬೇಕು.

೩. ವಾದಿರಾಜರ ಮೃತ್ತಿಕಾ ಪ್ರತಿದಿನ ಧಾರಣೆ ಮಾಡಬೇಕು ಹಾಗೂ ಮೃತ್ತಿಕಾತೀರ್ಥ ಸೇವಿಸಬೇಕು.

೪. ಪ್ರತಿದಿನ ಮಠದ ಸಂಪ್ರದಾಯದಂತೆ ಮುಖ್ಯಪ್ರಾಣರೊಂದಿಗೆ ವಾದಿರಾಜರ ಪ್ರತಿಮೆಯನ್ನು ಒಟ್ಟಿಗೆ ಇಟ್ಟು ಅಭಿಷೇಕ ನೈವೇದ್ಯ ಆರತಿ ಮಾಡುವ ಮೂಲಕ ಸಮಪೂಜೆ ಮಾಡಬೇಕು.

೫. ವಾದಿರಾಜರಿಂದ ರಚಿತವಾದ ಕೃತಿಗಳನ್ನು ಅಭ್ಯಸಿಸಬೇಕು. ದಿನಾಲು ಮನೆಯಲ್ಲಿ ಲಕ್ಷ್ಮೀಶೋಭನ ಹೇಳಬೇಕು. ಗಂಡಸರು ಹಾಗೂ ಹೆಂಗಸರು ಹಾಗೂ ಮಕ್ಕಳು ಸಹ.

೬. ತ್ರಿವಿಕ್ರಮ ರಥೋತ್ಸವ, ವಾದಿರಾಜರ ಆರಾಧನೆ, ವಿಶ್ವೋತ್ತಮತೀರ್ಥರ ಆರಾಧನೆ ಅಥವಾ ವಿಶೇಷ ಸಂದರ್ಭದಲ್ಲಿ ಸೋದೆಗೆ ಹೋಗಿ ವಾದಿರಾಜರ ಸೇವೆಯಲ್ಲಿ ಪಾಲ್ಗೊಳ್ಳುವುದು ಇಲ್ಲವೆ ವರ್ಷಕ್ಕೊಮ್ಮೆಯಾದರೂ ಸೋದೆ ಯಾತ್ರೆ ಮಾಡುವುದು.

೭. ಸೋದೆಮಠದ ಪೀಠಸ್ಥರನ್ನು ಕರೆಸಿ ಭಿಕ್ಷೆ ಮಾಡುವುದು ಹಾಗೂ ಮಠದಿಂದ ಪ್ರಕಾಶಿತವಾದ ಕೃತಿಗಳನ್ನು ಕೊಂಡು ಓದುವುದು. ಮಠದ ಯೋಜನೆಗಳನ್ನು ಪ್ರೋತ್ಸಾಹ ಮಾಡಬೇಕು.

ಮೃತ್ತಿಕಾ ಮಹಿಮೆ ಹಾಗೂ ಧಾರಣೆ :

ಸೋದೆಯಿಂದ ತಪೋವನಕ್ಕೆ ಹೋಗುವ ಮಾರ್ಗದಲ್ಲಿ ಸುಮಾರು ½ ಕಿ.ಮೀ. ದೂರದಲ್ಲಿ ಮೃತ್ತಿಕಾ ಸನ್ನಿಧಾನವಿದೆ. ಇದು ರಾಜರ ನಿತ್ಯವೂ ಸಂಚರಿಸಿದ ಒಂದು ಪವಿತ್ರ ಸ್ಥಳ. ಅವರ ಸನ್ನಿಧಾನದಿಂದ ಕೂಡಿದ ಇಲ್ಲಿಯ ಮೃತ್ತಿಕೆಯನ್ನು ಸಂಗ್ರಹಿಸಿ ಅನಂತರ ಅದನ್ನು ಶುದ್ಧಿಗೊಳಿಸಿ, ನಂತರ ವಾದಿರಾಜರ ಕವಚದಿಂದ ಅಭಿಮಂತ್ರಿತ ತೀರ್ಥ ಜಲವನ್ನು ಮಿಶ್ರಣ ಮಾಡಿ ಧಾರಣಕ್ಕೆ ಉಪಯುಕ್ತವಾದ ಮೃತ್ತಿಕೆಯನ್ನು ತಯಾರಿಸಲಾಗುತ್ತಿದೆ. ಊರ್ಧ್ವ ಪುಂಡ್ರದ ಮೇಲೆ ಶ್ರೀವಾದಿರಾಜರ ಮೃತ್ತಿಕೆಯನ್ನು ಧರಿಸಬೇಕು. ಮೃತ್ತಿಕಾ ಧಾರಣವು ಒಂದು ತಾತ್ವಿಕ ಚಿಂತನೆಯ ಪ್ರತೀಕವಾಗಿದೆ. ಮೃತ್ತಿಕೆಗೂ ಮಂತ್ರಶಕ್ತಿ ಮೊದಲು ನೀಡಿದವರು ಶ್ರೀ ಭಾವೀ ಸಮೀರರಾದ ವಾದಿರಾಜ ಯತಿಗಳು. ನಂತರ ಮಂತ್ರಾಲಯ ಪ್ರಭುಗಳು. ಮೃತ್ತಿಗೆ ಧರಿಸುವುದಲ್ಲದೆ ಅದನ್ನು ನೀರಿನೊಂದಿಗೆ ಸೇರಿಸಿ ತೀರ್ಥ ರೂಪದಿಂದ ಸೇವಿಸಬೇಕು. ಮೃತ್ತಿಕಾ ಧಾರಣೆ ಹಾಗೂ ಸೇವಿಸುವ ಸಂದರ್ಭದಲ್ಲಿ ಅಂತರ್ಯಾಮಿ–ಭಗವದ್ರೂಪ ಚಿಂತನೆ ಮಾಡಬೇಕು. ಮೃತ್ತಿಕಾಧಾರಣೆ ಸಮಯದಲ್ಲಿ ಈ ಮಂತ್ರ ಹೇಳಬೇಕು.

ಕುಷ್ಠಾಪಸ್ಮಾರಲೂತಾಂತಾನ್ ಬಾಲಸ್ಫೋಟಾದಿಕಾನ್ ಬಹೂನ್।
ಮೃತ್ತಿಕಾ ನಾಶಯತ್ಯೇವ ವೃಂದಾವನಗತಾ ಮುನೇ ॥

ಬ್ರಹ್ಮಹತ್ಯಾದಿ ಪಾಪಘ್ನೀ ಮೃತ್ತಿಕಾ ಮರ್ತ್ಯ ಮುಕ್ತಿದಾ ।
ವಾದಿರಾಜಗುರೋರ್ವೃಂದಾವಸ್ಥಾ ಸೇವ್ಯತಾಂ ಬುಧೈಃ ॥

ಸೇವಾಕ್ರಮ :

ಅಭೀಷ್ಟ ಪ್ರಾಪ್ತಿಗಾಗಿ ಸೋದೆಯಲ್ಲಿ ಸೇವೆ ಮಾಡಲಿಚ್ಛಿಸುವ ಭಕ್ತರು ಮೊದಲು ತ್ರಿವಿಕ್ರಮ ದೇವಸ್ಥಾನದ ಎದುರಿಗಿರುವ ಧ್ವಜಸ್ತಂಭವನ್ನು ದರ್ಶನ ಮಾಡಿ, ಕ್ಷೇತ್ರಪಾಲಕರಾದ ಶ್ರೀಭೂತರಾಜರಿಗೆ ಪ್ರಾರ್ಥನೆಮಾಡಿ ಒಂದು ತೆಂಗಿನಕಾಯಿ ಫಲವನ್ನು ಸಮರ್ಪಿಸಬೇಕು. ನಂತರ ಪವಿತ್ರ ಧವಳತೀರ್ಥದಲ್ಲಿ ಸಂಕಲ್ಪಪೂರ್ವಕ ಸ್ನಾನ ಮಾಡಬೇಕು. ಊರ್ಧ್ವ ಪುಂಡ್ರ, ಚಕ್ರಶಂಖಾದಿ ಮುದ್ರಾದಿಗಳನ್ನು ಧರಿಸಿ ಶ್ರೀರಾಜರ ಮೃತ್ತಿಕಾಧಾರಣವನ್ನು ಮಾಡಬೇಕು. ಸಂಧ್ಯಾವಂದನೆ ಜಪಾದಿಗಳನ್ನು ಪೂರೈಸಿ (ಸ್ತ್ರೀಯರು ತಮಗೆ ವಿಹಿತ ಕ್ರಮದಂತೆ ಸ್ನಾನಾದಿಗಳನ್ನು ಮಾಡಬೇಕು)

ಧವಳಗಂಗೆ ಪ್ರಾರ್ಥನೆ :

ರಮಾರಮಣ ಪಾದಾಬ್ಜದ್ಯುಮದ್ರೇಣುಭಿರಂಕಿತೆ ।
ನಮೋ ಧವಲಗಂಗೇ ತೇ ಶ್ರಮಂ ಮೇ ಹರ ನಿರ್ಮಲೇ ॥

ಅರ್ಘ್ಯ ಮಂತ್ರ :

ಮುನಿಮಂತ್ರಸಮಾಹೂತೇ ಸೋದಾಸರಸಿ ಸುಸ್ಥಿರೇ ।
ನಮೋ ಧವಲಗಂಗೆ ತೇ ಗೃಹಣಾರ್ಘ್ಯಂ ಸುಪುಣ್ಯದೇ ॥

ಸೇವಾ ಪ್ರಾರಂಭಕ್ಕೆ ಅಲ್ಲಿಯ ವೃಂದಾವನ ಅರ್ಚಕರಿಂದ ಸಂಕಲ್ಪವನ್ನು ಕೈಕೊಳ್ಳಬೇಕು. ನಂತರ ಆಚಾರ್ಯರಿಂದ ಮಂತ್ರಿಸಿಕೊಟ್ಟ ಕಾಯಿಯನ್ನು ವಸ್ತ್ರದಿಂದ ಸೊಂಟಕ್ಕೆ ಕಟ್ಟಿಕೊಳ್ಳಬೇಕು. ಸ್ನಾನಮಾಡಿ ಮೈ ಒರಸಿಕೊಳ್ಳಬೇಕು. ಗೋಪಿ ಇಲ್ಲದೆ ನೀರಿನಿಂದ ನಾಮ ಧಾರಣೆ ಮಾಡಿ ಒದ್ದೆ ಬಟ್ಟೆಯಲ್ಲಿಯೇ ತುಳಸೀ ವೃಂದಾವನದಿಂದಾರಂಭಿಸಿ, ಮುಖ್ಯಪ್ರಾಣ, ವೇಣುಗೋಪಾಲ, ಸಂತಾನ ಗೋಪಾಲಕೃಷ್ಣ, ಅಶ್ವತ್ಥನಾರಾಯಣರಿಗೆ ಪ್ರದಕ್ಷಿಣೆ ಬಂದು ನಮಸ್ಕರಿಸಿ ಶ್ರೀವಾದಿರಾಜ ವೃಂದಾವನದ ಉತ್ತರದ್ವಾರದ ಹತ್ತಿರ ಬಂದು ನಮಸ್ಕರಿಸಿ ಅಲ್ಲಿಂದ ಸ್ವಾಪ್ನವೃಂದಾವನ ಮಂದಿರಕ್ಕೆ, ವೃಂದಾವನಸ್ಥ ಯತಿಗಳಿಗೆ ನಾಗಬನಕ್ಕೆ, ನರಕೋತ್ತಾರಣ ತೀರ್ಥಕ್ಕೆ ಪುನಃ ವಾದಿರಾಜರಿಗೆ, ವೇದವೇದ್ಯರಿಗೆ ಹಾಗೂ ಭೂತರಾಜರಿಗೆ ಗಂಗಾಧರನಿಗೆ ವೀಣಾಪಾಣಿ ಮುಖ್ಯಪ್ರಾಣದೇವರಿಗೆ ನಮಸ್ಕರಿಸಿದರೆ ಒಂದು ಪ್ರದಕ್ಷಿಣೆ ಮಾಡಿದಂತಾಗುತ್ತದೆ. ಇದರಂತೆ ಧವಳಗಂಗೆಯಲ್ಲಿ ಸ್ನಾನ ಮಾಡುತ್ತ ಗೋಪಿ ಧಾರಣೆ ಮಾಡುತ್ತಾ ಏಳು ಪ್ರದಕ್ಷಿಣೆ ನಮಸ್ಕಾರ ಮಾಡಬೇಕು. ಸೇವಾ ಸಮಯದಲ್ಲಿ ಸ್ತೋತ್ರ (ವಿಶೇಷವಾಗಿ ವಾದಿರಾಜ ಕವಚ), ಸುಳಾದಿ ಮೊದಲಾದವುಗಳನ್ನು ಪಠಿಸುತ್ತಾ ಸೇವಾಸಕ್ತರಾಗಬೇಕು. ಸ್ವಾಪ್ನವೃಂದಾವನಾಖ್ಯ ಉಪದೇಶ ಹೊಂದಿದ ಸದ್ಭಕ್ತರು ಶ್ರದ್ಧೆಯಿಂದ ಅದನ್ನು ಪಠಿಸುತ್ತಾ ಗುರುಕಾರುಣ್ಯ ಪಡೆದು ಗುರ್ವಂತರ್ಯಾಮಿಯ ಅನುಗ್ರಹಕ್ಕೆ ಪಾತ್ರರಾಗಬೇಕು. ನಂತರ ಒಣ ಬಟ್ಟೆ ಧರಿಸಿ ವೃಂದಾವನಕ್ಕೆ ಪ್ರದಕ್ಷಿಣೆ ನಮಸ್ಕಾರವನ್ನು ೧೦೮ ಸಲ ಮಾಡಬೇಕು. ಸೇವೆ ಮಾಡುವವರು ಏಕ ಭುಕ್ತರಾಗಿರಬೇಕು.

ಸಂತಾನ ಪ್ರಾಪ್ತಿಗಾಗಿ, ರೋಗ ನಿವೃತ್ತಿಗಾಗಿ, ಧನ ಪ್ರಾಪ್ತಿಗಾಗಿ, ವಿವಾಹ ಉದ್ದೇಶದಿಂದ, ಪಿಶಾಚಿ ನಿವೃತ್ತಿಗಾಗಿ ಮುಂತಾದ ಲೌಕಿಕ ಕಷ್ಟ ಪರಿಹಾರವಾಗಿ ಇಷ್ಟ ಪ್ರಾಪ್ತಿಗಾಗಿ ಅನೇಕ ನೂರಾರು, ಸಾವಿರಾರು ಜನರು ಶ್ರೀ ವಾದಿರಾಜರ ಸೇವೆ ಮಾಡಿ ಸತ್ಫಲ ಹೊಂದುತ್ತಿದ್ದಾರೆ.

೨. ಪರಿಶಿಷ್ಟ

ಈ ಸಂಸ್ಥಾನದಲ್ಲಿ ಪರಂಪರೆಯಿಂದ ಪೂಜಿಸಲ್ಪಡುವ ದೇವತಾವಿಗ್ರಹಗಳು

೧. ಶ್ರೀಮದಾನಂದತೀರ್ಥಭಗವತ್ಪಾದರು ತಮ್ಮ ಪೂರ್ವಾಶ್ರಮ ಪ್ರಿಯಸಹೋದರರಾದ ಹಾಗೂ ಈ ಪರಂಪರೆಯ ಮೂಲಪುರುಷರಾದ ಶ್ರೀವಿಷ್ಣುತೀರ್ಥಾಚಾರ್ಯರಿಗೆ ಅನುಗ್ರಹಿಸಿಕೊಟ್ಟಿರುವ ಸಂಸ್ಥಾನದ ಮೂಲಪ್ರತೀಕವಾದ ಶ್ರೀಭೂವರಾಹದೇವರು.

೨. ಶ್ರೀಮನ್ಮಧ್ವಾಚಾರ್ಯರು ಬದರಿಕಾಶ್ರಮದಿಂದ ತಂದು ಮಧ್ಯತಾಲಮಠದಲ್ಲಿಟ್ಟು ಮಧ್ಯಾಹ್ನ ಪೂಜಿಸುತ್ತಿದ್ದ ಸ್ವಯಂವ್ಯಕ್ತ ವ್ಯಾಸಮುಷ್ಠಿಯು. (ಇದು ಶ್ರೀವೇದವ್ಯಾಸದೇವರು ಶ್ರೀಮದಾಚಾರ್ಯರಿಗೆ ಅನುಗ್ರಹಿಸಿದ್ದು) ಮಧ್ಯವಾಟದಲ್ಲಿ ಪೂಜಿಸಲ್ಪಡುತ್ತಿದ್ದ ಇದನ್ನು ಶ್ರೀಮಧ್ವರ ಸಂಕಲ್ಪ ಹಾಗೂ ಆಣತಿಯಂತೆ ಶ್ರೀರಾಜರು ಶ್ರೀಸ್ವಾಪ್ನವೃಂದಾವನಾಖ್ಯಾನೋಪದೇಶದ ಮೂಲಕ ಶ್ರೀವೃಂದಾವನಾಚಾರ್ಯರಿಗೆ ಶ್ರೀಕೃಷ್ಣಸನ್ನಿಧಿಯಲ್ಲಿ ಹಾಗು ಸಂಸ್ಥಾನದಲ್ಲಿ ಪೂಜಿಸಲು ಅಪ್ಪಣೆಯಿತ್ತರು. ಆ ಕಾಲದಿಂದ ಮೂಲಸನ್ನಿಧಿತ್ವೇನ ಪೂಜಿಸಲ್ಪಡುತ್ತಿದೆ.

೩. ಸ್ವರ್ಣಕಾರನ ಮನೆಯಲ್ಲಿ ತಾನಾಗಿಯೇ ದಿವ್ಯ ಅಶ್ವಗ್ರೀವ ಆಕಾರವನ್ನು ತಾಳಿದ ಹಾಗು ಸಂಪೂರ್ಣ ಸನ್ನಿಧಾನವುಳ್ಳ ಪ್ರತಿಮೆಯನ್ನು ಶ್ರೀವಾದಿರಾಜರು ಸ್ವಪ್ನಸೂಚನೆಯಂತೆ ತಂದು ಪೂಜಿಸಿದ ಸ್ವಯಂವ್ಯಕ್ತ ಶ್ರೀಹಯಗ್ರೀವ ಮೂರುತಿಯು.

೪. ಶ್ರೀವಾದಿರಾಜಗುರುಸಾರ್ವಭೌಮರು ದ್ವಾರಾವತಿಯಗುಹೆಯಿಂದ ತಂದು ಪೂಜಿಸಿದ ಶ್ರೀಹಯಗ್ರೀವ ಸಾಲಿಗ್ರಾಮ.

೫. ಶ್ರೀಭೀಮಸೇನದೇವರಿಂದ ಪೂಜಿತವಾಗಿ ದ್ವಾಪರಾಂತ್ಯದಲ್ಲಿ ಭೀಮಕುಂಡದಲ್ಲಿಡಲ್ಪಟ್ಟಿದ್ದು, ಶ್ರೀವೇದವ್ಯಾಸರ ಆಜ್ಞೆಯಂತೆ ಶ್ರೀವಾದಿರಾಜರು ಬದರೀಯಾತ್ರೆಯ ಸಮಯದಲ್ಲಿ ಆ ಕುಂಡದಿಂದೆತ್ತಿ ತಂದ ಶ್ರೀ ಲಕ್ಷ್ಮೀನರಸಿಂಹಮೂರ್ತಿ.

೬. ಗಂಡಕಿನದಿಯಿಂದ ಸಾಲಿಗ್ರಾಮಗಳನ್ನು ಸಂಗ್ರಹಿಸಿ ಯಾತ್ರಾಕ್ರಮವಾಗಿ ಶ್ರೀರಾಜರು ತಿರುಪತಿಗೆ ಬಂದಾಗ, ಶ್ರೀನಿವಾಸದೇವರು ಸ್ವಪ್ನದಲ್ಲಿ ಆಜ್ಞೆಯಿತ್ತಂತೆ ಸಾಲಿಗ್ರಾಮ ಸರಮಾಡಿಸಿ, ಶ್ರೀನಿವಾಸದೇವರಿಗೆ ಸಮರ್ಪಿಸಿದಾಗ, ಪ್ರಸನ್ನರಾದ ದೇವರು ಅನುಗ್ರಹಿಸಿದ ಸುವರ್ಣಮಯ ಶ್ರೀಭೂಸಹಿತ ಶ್ರೀನಿವಾಸಮೂರ್ತಿ.

೭. ಹಂಪೆಯ ವಿಜಯನಗರದ ಅರಸರಿಗೆ ಬಂದ ಆರ್ಥಿಕ ಸಂಕಟವನ್ನು ವಾಲಿ–ಸುಗ್ರೀವ ಭಾಂಡಾರಗಳಿಂದ ಸಂಪತ್ತಿನಿಂದ ಪರಿಹರಿಸಿದ ಶ್ರೀರಾಜರು, ಅಲ್ಲಿಂದ ತಂದು ಪೂಜಿಸಿದ ಶ್ರೀರಾಮ ಮತ್ತು ಶ್ರೀವಿಠಲಮೂರ್ತಿಗಳು.

೮. ಮೂಡಬಿದ್ರೆಯಲ್ಲಿ, ಅಲ್ಲಿಯ ರಾಜರ ಆದರದ ಆಮಂತ್ರಣಮೇರೆಗೆ ಜೈನ ದೇವಾಲಯವನ್ನು ಪ್ರವೇಶಿಸುತ್ತಿರುವಾಗ ವಿಠಲರೂಪವನ್ನು ಧ್ಯಾನಿಸಲು ಅಲ್ಲಿಯ

ಬುದ್ಧವಿಗ್ರಹವು ವಿಠಲರೂಪತಾಳಿ ಶ್ರೀವಾದಿರಾಜರನ್ನು ಸೇರಿದ ಪಚ್ಚೆವಿಠಲಮೂರ್ತಿ.

೯. ಶ್ರೀವಾದಿರಾಜರು ಗೌತಮಗುಹೆಯಿಂದ ತಂದು ಪೂಜಿಸಿದ ಶ್ರೀವಿಠಲಮೂರ್ತಿ ಮತ್ತು ವಿಶ್ವಂಭರ ಸಾಲಗ್ರಾಮ.

೧೦. ಶ್ರೀಮುಷ್ಣಯಾತ್ರೆಯನ್ನು ಮಾಡಿದ ಶ್ರೀಗುರುರಾಜರಿಗೆ ಪ್ರಸನ್ನನಾದ ಶ್ರೀಮುಷ್ಣವರಾಹನು, ತಾನಾಗಿ ತನ್ನ ಮಹಾಸನ್ನಿಧಾನವುಳ್ಳ ವಿಗ್ರಹವನ್ನಿತ್ತಿರುವನು. ಇಂತಹ ಚಿಕ್ಕ ಶ್ರೀಮುಷ್ಣವರಾಹಮೂರ್ತಿಯು.

೧೧. ಶ್ರೀವಾದಿರಾಜರು ಕುಮಾರಪರ್ವತವನ್ನೇರಿ ಶ್ರೀವಿಷ್ಣುತೀರ್ಥಾಚಾರ್ಯರ ದರ್ಶನಮಾಡಿದ ಸಮಯದಲ್ಲಿ ಶ್ರೀವಿಷ್ಣುತೀರ್ಥಾಚಾರ್ಯರು ಶ್ರೀರಾಜರಿಗೆ ಕೊಟ್ಟಿರುವ ಶ್ರೀಹಯಗ್ರೀವಮೂರ್ತಿ.

೧೨. ಶ್ರೀಮಧ್ವಾಚಾರ್ಯಕರಾರ್ಚಿತ ಶ್ರೀಕಡಗೋಲುಕೃಷ್ಣದೇವರಮೂರ್ತಿ.

೧೩. ಅಪೂರ್ವವಾದ ಧಧಿವಾಮನ ಸಾಲಗ್ರಾಮ.

೧೪. ಶ್ರೀವಾದಿರಾಜರು ದ್ವಾರಕೆಯಲ್ಲಿ ಸಮುದ್ರದಲ್ಲಿ ಮುಳುಗಿತಂದಿರುವ ಬಲಮುರಿಶಂಖ.

೧೫. ಶ್ರೀಮಧ್ವಾಚಾರ್ಯರು ಶ್ರೀವಿಷ್ಣುತೀರ್ಥಾಚಾರ್ಯರಿಗೆ ಕೊಟ್ಟಿದ್ದ ಬಲಮುರಿಶಂಖ.

೧೬. ಶ್ರೀರಾಜರು ಗಂಡಕಿನದಿಯಲ್ಲಿ ಸ್ನಾನಮಾಡುತ್ತಿರುವಾಗ ಅವರ ಭಕ್ತಿಗೆ ಮೆಚ್ಚಿ, ಒಲಿದು ದೇಹಕ್ಕೆಲ್ಲ ಸಾಲಗ್ರಾಮಗಳು ಅಂಟಿಕೊಂಡವು ಅವುಗಳಲ್ಲಿಯ ೧೨ ಕ್ಷೇತ್ರ ಗುಲಗಂಜಿ ಆಕಾರದ ಶ್ರೀಲಕ್ಷ್ಮೀನಾರಾಯಣ ಸಾಲಗ್ರಾಮಗಳು (ಸಂಪುಟ).

೧೭. ಶ್ರೀಮಧ್ವಾಚಾರ್ಯರು ತನ್ನ ಸಹೋದರರೆಂದೂ, ಶಿಷ್ಯರೆಂದೂ, ಭಕ್ತಶ್ರೇಷ್ಠರೆಂದೂ, ಶ್ರೀವಿಷ್ಣುತೀರ್ಥಾಚಾರ್ಯರಿಗೆ ಒಲಿದಿತ್ತ 'ಶ್ರೀಕೃಷ್ಣಶ್ರೀ' ಎಂಬ ಅಂಕಿತವುಳ್ಳ ಮುದ್ರೆಯುಂಗುರ ಮತ್ತು ಅಕ್ಷಯಪಾತ್ರ.

೧೮. ಶ್ರೀಮಧ್ವಕರಾರ್ಚಿತ ಗರುಡವಾಹನಲಕ್ಷ್ಮೀನಾರಾಯಣಮೂರ್ತಿ

೧೯. ಶ್ರೀರಾಜರು ಐದನೇ ಪರ್ಯಾಯ (ಸೋದೆ)ದಲ್ಲಿ ಪೂಜಿಸಿ ಅನುಗ್ರಹಿಸಿದ ಶ್ರೀಕೃಷ್ಣಪ್ರತಿಮಾ.

೨೦. ಶ್ರೀಲಕ್ಷ್ಮೀ ಪ್ರತಿಮಾ

೨೧. ಶ್ರೀಮುಖ್ಯಪ್ರಾಣ ಪ್ರತಿಮೆ

೨೨. ಶ್ರೀರಾಜರ ಪ್ರತಿಮೆ

೨೩. ಶ್ರೀರಾಜರ ಸುವರ್ಣ ಪಾದುಕೆಗಳು

೨೪. ಶ್ರೀಭೂತರಾಜರ ಸನ್ನಿಧಾನದ ಪದ್ಮಪೀಠ (ಇವುಗಳಲ್ಲದೆ ಇನ್ನೂ ಅನೇಕ ಪ್ರತಿಮೆಗಳು)

ಈ ತರದಿಂದ ಮಹಾತ್ಮರ ಕರಾರ್ಚಿತವಿಗ್ರಹಗಳೂ, ಬಲಮುರಿಶಂಖ ಮೊದಲಾದ ಉತ್ತಮ ವಸ್ತುಗಳೂ ಶ್ರೀಮದ್ವಾದಿರಾಜಗುರುಸಾರ್ವಭೌಮರ ಸಂಸ್ಥಾನದಲ್ಲಿ ಪರಂಪರೆಯಿಂದಪೂಜಿಸಲ್ಪಟ್ಟು ಮಹಾಸನ್ನಿಧಾನವುಳ್ಳವುಗಳಾಗಿರುವವು; ಶ್ರೀಕೃಷ್ಣ ದೇವರ ಸನ್ನಿಧಾನದಲ್ಲಿ ಶ್ರೀಮನ್ಮಧ್ವಾಚಾರ್ಯರು ಸ್ಥಾಪಿಸಿರುವ ಭದ್ರದೀಪಗಳಂತಿರುವ ಎರಡು ದೀಪಗಳೂ ಈ ಸಂಸ್ಥಾನದಲ್ಲಿ ಶ್ರೀದೇವರ ಸನ್ನಿಧಾನದಲ್ಲಿ ಪ್ರಜ್ವಲಿಸುತ್ತಿರುವುವು.

೩. ಪರಿಶಿಷ್ಟ

ಶ್ರೀಸೋದಾವಾದಿರಾಜಮಠದ ಗುರುಪರಂಪರಾ

ಶ್ರೀಮದಾನಂದತೀರ್ಥಭಗವತ್ಪಾದರು

(ಶ್ರೀಮನ್ಮಧ್ವಾಚಾರ್ಯರು)

೧. ಶ್ರೀವಿಷ್ಣುತೀರ್ಥರು
೨. ಶ್ರೀವ್ಯಾಸತೀರ್ಥರು
೩. ಶ್ರೀವೇದ್ಯತೀರ್ಥರು
೪. ಶ್ರೀವೇದಗರ್ಭತೀರ್ಥರು
೫. ಶ್ರೀವರೇಶತೀರ್ಥರು
೬. ಶ್ರೀವಾಮನತೀರ್ಥರು
೭. ಶ್ರೀವಾಸುದೇವತೀರ್ಥರು
೮. ಶ್ರೀವೇದವ್ಯಾಸತೀರ್ಥರು
೯. ಶ್ರೀವರಾಹತೀರ್ಥರು
೧೦. ಶ್ರೀವೇದಾತ್ಮತೀರ್ಥರು
೧೧. ಶ್ರೀವಿಶ್ವವಂದ್ಯತೀರ್ಥರು–೧
೧೨. ಶ್ರೀರತ್ನಗರ್ಭತೀರ್ಥರು
೧೩. ಶ್ರೀವೇದಾಂಗತೀರ್ಥರು
೧೪. ಶ್ರೀವಿದ್ಯಾಪತಿತೀರ್ಥರು
೧೫. ಶ್ರೀವಿಶ್ವವಂದ್ಯತೀರ್ಥರು–೨
೧೬. ಶ್ರೀವಿಶ್ವತೀರ್ಥರು
೧೭. ಶ್ರೀವಿಠಲತೀರ್ಥರು
೧೮. ಶ್ರೀವರದರಾಜತೀರ್ಥರು–೧
೧೯. ಶ್ರೀವಾಗೀಶತೀರ್ಥರು
೨೦. ಶ್ರೀಮದ್ವಾದಿರಾಜತೀರ್ಥರು
೨೧. ಶ್ರೀವೇದವೇದ್ಯತೀರ್ಥರು
೨೨. ಶ್ರೀವಿದ್ಯಾನಿಧಿತೀರ್ಥರು
೨೩. ಶ್ರೀವೇದನಿಧಿತೀರ್ಥರು
೨೪. ಶ್ರೀವರದರಾಜತೀರ್ಥರು–೨
೨೫. ಶ್ರೀವಿಶ್ವಾಧಿರಾಜೇಂದ್ರತೀರ್ಥರು

೨೬. ಶ್ರೀವಾದಿವಂದ್ಯತೀರ್ಥರು
೨೭. ಶ್ರೀವಿಶ್ವವಂದ್ಯತೀರ್ಥರು
೨೮. ಶ್ರೀವಿಬುಧವರ್ಯತೀರ್ಥರು
೨೯. ಶ್ರೀವಿಶ್ವನಿಧಿತೀರ್ಥರು
೩೦. ಶ್ರೀವಿಶ್ವಾಧೀಶ್ವರತೀರ್ಥರು
೩೧. ಶ್ರೀವಿಶ್ವೇಶತೀರ್ಥರು
೩೨. ಶ್ರೀವಿಶ್ವಪ್ರಿಯತೀರ್ಥರು
(ಶ್ರೀವೃಂದಾವನಾಚಾರ್ಯರು)
೩೩. ಶ್ರೀವಿಶ್ವಾಧೀಶತೀರ್ಥರು
೩೪. ಶ್ರೀವಿಶ್ವೇಂದ್ರತೀರ್ಥರು
೩೫. ಶ್ರೀವಿಶ್ವೋತ್ತಮತೀರ್ಥರು
೩೬. ಶ್ರೀವಿಶ್ವವಲ್ಲಭತೀರ್ಥರು
(ಈಗಿನ ಪೀಠಾಧಿಪತಿಗಳು)

೪. ಪರಿಶಿಷ್ಟ

ವಾದಿರಾಜರು ಋಜುಗಣಸ್ಥರು ಎಂಬ ಜಯಘೋಷ

ಉದ್ದಂಡೋದ್ದಂಡ, ಪರವಾದಿ ಪ್ರಚಂಡ, ಗಂಡಭೇರುಂಡ, ಮಾಯಾಮತ ವಿಧ್ವಂಸಕ, ಮಧ್ವಮತೋದ್ಧಾರಕ, ಸುಧಾರಸಾಸ್ವಾದ, ದಿಗ್ವಿಜಯೀಕೃತಾಸೇತು ಮರ್ಯಾದ, ಭಾವಿ ಹನುಮಚ್ಚಕ್ರವರ್ತಿ, ಗುರುಸಾರ್ವಭೌಮ, ಪರಮ ಹಂಸಾರೂಢ, ವಾದಿರಾಜ ಗುರು ಭೋ ಪರಾಕ್.

"ಪಾರಮೇಷ್ಠಿ ಪದಾಧಿಕಾರಿ ಋಜುಪದಸ್ಥ ಗುರುರಾಜ ಪಟ್ಟಭದ್ರ ವ್ಯಾಖ್ಯಾನ ಸಿಂಹಾಸನಾಧೀಶ್ವರ, ಅಜ್ಞಾನತಿಮಿರಮಾರ್ತಾಂಡ, ಸುಜ್ಞಾನ ತೇಜೋಮಯ".

– **ಸೋದೆ ವಾದಿರಾಜ ಮಠದಲ್ಲಿ ಹಾಗೂ ಅರಸಪ್ಪನಾಯಕನ ರಾಜಸಭೆಯಲ್ಲಿಯ ಜಯಘೋಷ**

"ಋಜುಗಣ ಪಂಕ್ತಿಯಲಿ ಕುಳಿತಿರ್ದ ನಿಜನಿರ್ಮಲ ಸುಜ್ಞಾನಾನಂದದಿಂದ ಭುಜಗಶಯನನಲ್ಲಿ ಎಡಬಿಡದೆ ಸ್ನೇಹ ಋಜುಗಳಲ್ಲಿ ಪಕ್ವವಾದ ಮನವುಳ್ಳ ಸುಜನ ಶಿರೋಮಣಿ ವಾದಿರಾಜರೆನುತ ನಿಜವಾಗಿ ಬ್ರಹ್ಮಾಂಡ ಪುರಾಣ ಸಾಧಕದಿಂದ ಅಜಪದ ಸಲ್ಲುವುದಕ್ಕೆ ಲೇಶಸಂಶಯ ಬೇಡ, ನಿಜನಿಜವೆಂದು ನಿತ್ಯ ಕೊಂಡಾಡಿರೋ" **–ವಿಜಯದಾಸರು**

"ಮೂತಾತ್ಮ ಜಗನ್ನಾಥವಿಠಲನ ಖ್ಯಾತಿಯ ಸ್ತುತಿಸುವ ಶ್ವಾಸನಿಯಾಮಕ"

– **ಜಗನ್ನಾಥದಾಸರು**

"ಘನ್ನ ಋಜುಗಣದೊಳಗೆ ಮಾನ್ಯನಾಗಿಹ ಸುಪ್ರಸನ್ನ ದ್ವಿಜಕುಲರನ್ನ ನಂಬಿದೆನೋ ನಿನ್ನ"

– **ವೇಣುಗೋಪಾಲದಾಸರು**

"ಕವಿಕುಲತಿಲಕ ನೀ ಕರುಣದಿಂದಲಿ ನಿಮ್ಮ ಸ್ಮರಣೆಯ ಮಾಡುವ ಸುಜನರಿಗೆಲ್ಲಾ ಪರಿಪರಿ ಜ್ಞಾನಭಕುತಿಗಳನೆ ಕೊಟ್ಟು ಭರದಿ ಪೊರೆಯೋ ಭಾವಿ ಭಾರತಿವರನೆ –ವೆಂಕಟದಾಸರು

"ವಾದಿರಾಜ ಲಾತವ್ಯ ವಾಯು ಮಹರಾಜ"

– **ಗುರುತಂದೆ ವರದ ಗೋಪಾಲ ವಿಠಲದಾಸರು**

"ವಿಜಯಪ್ರದ ವಾದಿರಾಜ ! ಋಜುಗಣ ಸ್ವಜನ ಮುದಿತ ಸಮಾಜ "

– **ರಾಮವಿಠಲದಾಸರು**

"ಹೊಡಿ ನಗಾರಿ ಮೇಲೆ ಕೈಯ । ಗಡ, ಗಡ, ಹೊಡೀ ॥ ಕಡು ವಾದಿರಾಜರು ದೃಢ ಋಜುಗಣರೆಂದ್ಹೊಡೀ ನಗಾರಿ ಮೇಲೆ"

– **ಪ್ರಾಣಪತಿ ವಿಠಲದಾಸರು**

"ಋಜುಗಣಮಿಳಿತನೀರೇಜನೆ ನಿನ್ನಯ ಪಾದ ಭಜನೆ ಮಾಡುವೆ ಎನ್ನ ಋಜುಮಾರ್ಗವ ಪಿಡಿಸೋ"

– **ಅಭಿನವ ಜನಾರ್ದನ ವಿಠಲದಾಸರು**

"ಇಂದುಮುಖಿಯೇ ಈತ ಗಂಧವಾಹನನಾಗಿ ಮಂದಜಾಸನ ಪದಪೊಂದುವ ನಮ್ಮ"
– ಗುರುಜಗನ್ನಾಥ ವಿಠಲದಾಸರು

"ಸುರರ ವಿಮಾನವ ತಡೆದು ನಿಲ್ಲಿಸಿದ ಮರುತನ ಪದವ ಮುಂದೇರುವ ಭಾಗ್ಯವು ರಾಜರ ಭಾಗ್ಯವಿದು" **– ಭಾವೀ ಸಮೀರ**

"ಶ್ರೀ ಗುರುವಾದಿರಾಜ ನಿನ್ನ ಸೇವಿಪ ಜನರಿಗಭೀಷ್ಟವನೀವ"
– ಶ್ರೀವಿಶ್ವೇಂದ್ರತೀರ್ಥ ಶ್ರೀಪಾದರು

"ಯೋಮಾಂ ದೇವಂ ವಿಜಾನಾತಿ ಋಜುಸ್ಥಂ ಪುಣ್ಯಕೃನ್ನರಃ ।
ಸಯಾತಿನಿಲಯಂ ಪುಣ್ಯಂ ಯದ್ಗತ್ವಾನ ವಿನರ್ತತೇ" ॥
– ಶ್ರೀ ವೇದನಿಧಿತೀರ್ಥ ಶ್ರೀಪಾದರು

"ಹರಿಯು ಅಹಿಶಯನಾಜ್ಞೆ ಪೊಂದುತ ಧರಣಿಯಲ್ಲವತರಿಸಿ ಬಂದಿಹ ಗುರುವೆ ಲಾತವ್ಯಾರ್ಯ ಭಾವಿ ಸಮೀರಗೊಂದಿಸುವೆ". **– ಗುರುಗೋವಿಂದ ವಿಠಲದಾಸರು**

"ಕೋವಿದೋತ್ತಮ ಹಯಗ್ರೀವಪದಸಂಸಕ್ತಭಾವ ಭವಿಷ್ಯದ್ವಾಯು ಶ್ರೀವಾದಿರಾಜಯತಿ"
– ತಂದೆ ವೆಂಕಟೇಶ ವಿಠಲದಾಸರು

"ಪ್ರಥಮೋ ಹನುಮನ್ನಾಮ, ದ್ವಿತೀಯೋಭೀಮ ಏವ ಚ, ಪೂರ್ಣಪ್ರಜ್ಞಃ ತೃತೀಯಸ್ತು ಚತುರ್ಥೋ ವಾದಿರಾಜಕಃ" **– ಶ್ರೀಕೃಷ್ಣಾಚಾರ್ಯ ಸರಪಳಿ**

ವಿಮಲಸಕಲಗಾತ್ರಂ ಶುದ್ಧಕೈವಲ್ಯಪಾತ್ರಂ
ಶುಭಗುಣಗಣಸಾಂದ್ರಂ ಭೂಮಿಭೂಷಾಮಣೀಂದ್ರಮ್ ।
ವಿದಿತಸಕಲಶಾಸ್ತ್ರಂ ಸಾಧುಚಿತ್ತಂ ಯತೀಂದ್ರಂ
ತುರಗವದನಭಾಜಂ ನೌಮಿ ಸದ್ವಾದಿರಾಜಮ್ ॥
– ಗಂಗಾತೀರನಿವಾಸೀ ನಾರಾಯಣಾಚಾರ್ಯರು (ವಾದಿರಾಜಕವಚ)

ಹರಿಭಕ್ತಿದಯಾಂಬೋಧಿತರಲಕ್ರೀಡನೋತ್ಸುಕಾಃ ।
ಗುರುವೋ ವಾದಿರಾಜಾರ್ಯಾಃ ಕರುಣಾಂ ವಿತರಂತು ಮೇ ॥
– ವೇದನಿಧಿತೀರ್ಥರು (ವಾದಿರಾಜಸ್ತೋತ್ರ)

ವಾದಿರಾಜೋಕ್ತಿಚಾತುರ್ಯಮಶಕ್ಯಂ ಜ್ಞಾತುಮಂಜಸಾ ।
ತಥಾಪಿ ವಕ್ಷ್ಯೇ ತಟ್ಟಿಕ್ಷಾಮನುಸೃತ್ಯಾಪಿ ಲೇಶತಃ ॥
– ನಾರಾಯಣಭಟ್ಟರು (ರುಕ್ಮಿಣೀಶವಿಜಯವ್ಯಾಖ್ಯಾನ)

ಶ್ರೀಮಧ್ವಸಿದ್ಧಾಂತಸುದುರ್ಗವಾಸೀ
ವಿನಾಶಯನ್ ಸ್ವಪ್ರತಿಪಕ್ಷಸಂಘಾನ್ ।
ಸಂವರ್ಧಯನ್ ಶ್ರೀಹರಿಭಕ್ತಿಕೋಶಮ್
ಶ್ರೀವಾದಿರಾಜೋ ಯತಿರಾಜ್ಯ ಆಸ್ತೇ ॥
– ರಘುನಾಥಾಚಾರ್ಯರು (ವೃತ್ತರತ್ನಸಂಗ್ರಹ)

ನಮೋಽಸ್ತು ವಾದಿರಾಜಾಯ ಗುರವೇ ಪರವೇದಿನೇ ।
ಯೋ ವಾಜಿವಕ್ತ್ರದಯಯಾ ಶ್ರಾವ್ಯಂ ಕಾವ್ಯಮಚೀಕ್ಲೃಪತ್ ॥

– ಸುರೋತ್ತಮತೀರ್ಥರು (ಯುಕ್ತಿಮಲ್ಲಿಕಾವ್ಯಾಖ್ಯಾನ)

ಅಶೇಷವಿದ್ಯಾಂಬುಧಿವಾಜಿರಾಜ–
ಗ್ರೀವಾಜಿರಾಜಸ್ರನಿಷೇವಯಾ ಯಃ ।
ಸಮುಲ್ಲಸದ್ವಾಗ್ವಿಭವಾಜಿರಾಜಃ
ಸ ನಃ ಪ್ರಸನ್ನೋ ಯತಿವಾದಿರಾಜಃ ॥

– ವೈಶ್ವನಾಥೀ ನಾರಾಯಣಾಚಾರ್ಯರು (ಅದ್ವೈತಕಾಲಾನಲ)

ವಾಗೀಶತೀರ್ಥಸದ್ಧಸ್ತಪಂಕಜೋದ್ಭವಮಂಜಸಾ ।
ಪ್ರಸನ್ನವದನಂ ಶ್ರೀಮದ್ವಾದಿರಾಜಮಹಂ ಭಜೇ ॥

– ವಾದಿವಂದ್ಯಯತಿಗಳು (ಶ್ರೀವಾದಿರಾಜಾಷ್ಟಕ)

ಚಂದ್ರಾರ್ಕಕೋಟಿಲಾವಣ್ಯಲಕ್ಷ್ಮೀಶಕರುಣಾಲಯಮ್ ।
ವಂದಿತಾಂಘ್ರಿಯುಗಂ ಸದ್ಭಿರ್ವಾದಿರಾಜಂ ನತೋಽಸ್ಮ್ಯಹಮ್ ॥

– ವೇದವೇದ್ಯಯತಿಗಳು (ಶ್ರೀವಾದಿರಾಜಸ್ತುತಿ)

ಕೋಲವ್ಯಾಸಹಯಗ್ರೀವಪದಾಬ್ಜಪರಿಸೇವಕಃ ।
ಭಾವಿವಾಯುರ್ವಾದಿರಾಜಃ ಕಲ್ಪದ್ರುಃ ಕಾಮಮೋಽಸ್ತು ನಃ ॥

– ರಾಮಚಂದ್ರಾಚಾರ್ಯರು (ಶ್ರೀವಾದಿರಾಜಗುರುಚರಿತಾಮೃತ)

೫. ಪರಿಶಿಷ್ಟ

ವಾದಿರಾಜರಿಂದ ವಿರಚಿತವಾದ ಸಂಸ್ಕೃತ ಕನ್ನಡ ಕೃತಿಗಳು

ಶ್ರೀಮದ್ವಾದಿರಾಜ ಗುರುಸಾರ್ವಭೌಮವಿರಚಿತ ಗ್ರಂಥಗಳು.

೧. ವೇದಾಂತಶಾಸ್ತ್ರ ಸರ್ವಸ್ವವನ್ನು ಸರಿಯಾಗಿ ವಿಚಾರಮಾಡಿ ಸಿದ್ಧಾಂತಪಡಿಸಿರುವ 'ಯುಕ್ತಿಮಲ್ಲಿಕಾ' ಎಂಬ ದಿವ್ಯ ಸ್ವತಂತ್ರ ಗ್ರಂಥವು.

೨. ವೇದಾಂತ ವಿಚಾರಪರವಾದ, 'ನ್ಯಾಯರತ್ನಾವಲಿ'.

೩. ಇತರ ಮತ ಖಂಡನಾತ್ಮಕವಾದ, 'ವಿವರಣವ್ರಣ'.

೪. ವೇದವಿಚಾರರೂಪವಾದ ವಿಷ್ಣುವಿನ ಸರ್ವೋತ್ತಮತೆಯನ್ನು ಸರಿಯಾಗಿ ತೋರಿಸುವ, 'ಶ್ರುತಿತತ್ವಪ್ರಕಾಶಿಕಾ'.

೫. ಇತರ ಮತಖಂಡನ ರೂಪವಾದ 'ಕಲ್ಪಲತಾ'.

೬. ಹರಿಸರ್ವೋತ್ತಮತೆಯನ್ನು ಸಾಧಿಸುವ 'ಹರಿಭಕ್ತಿಲತಾ'.

೭. ಶ್ರೀಕೃಷ್ಣ ಸ್ತುತಿರೂಪಗಳಾದ ಎರಡು, ಪ್ರಮಾಣ ಪದ್ಧತಿಗೆ ಏಳು, ಮಾಯಾವಾದಖಂಡನಕ್ಕೆ ಒಂದು, ಹೀಗೆ ಹತ್ತು ಉಪನ್ಯಾಸಗಳುಳ್ಳ 'ಉಪನ್ಯಾಸ ರತ್ನಮಾಲಾ'

೮. ಶ್ರೀಮನ್ಯಾಯಸುಧಾಗ್ರಂಥಕ್ಕೆ ಟಿಪ್ಪಣಿ ರೂಪವಾದ 'ಗುರ್ವರ್ಥ ದೀಪಿಕಾ'

೯. ತತ್ವಪ್ರಕಾಶಿಕಾ ಗ್ರಂಥಕ್ಕೆ ಟಿಪ್ಪಣಿ ರೂಪವಾದ, 'ಗುರುಭಾವ ಪ್ರಕಾಶಿಕಾ'

೧೦. ಭಗವದ್ಗೀತಾ ಟಿಪ್ಪಣಿಯು

೧೧. ಶ್ರೀಮನ್ಮಹಾಭಾರತ ತಾತ್ಪರ್ಯನಿರ್ಣಯಕ್ಕೆ ಟಿಪ್ಪಣಿ ಗ್ರಂಥವು.

೧೨. ಶ್ರೀಮತ್ತಂತ್ರಸಾರ ಟೀಕಾ

೧೩. ಶ್ರೀಮನ್ಮಹಾಭಾರತ ಟೀಕಾರೂಪವಾದ, ಭಾರತದ ಲಕ್ಷಕಠಿಣ ಶಬ್ದಗಳ ಅರ್ಥವನ್ನು ವಿವರಿಸುವ 'ಲಕ್ಷಾಲಂಕಾರ'

೧೪. ಭಾಗವತದಲ್ಲಿ ಹೇಳಿರುವ ಪ್ರದ್ಯುಮ್ನೋತ್ಪತ್ತಿನವರೆಗಿನ, ಶ್ರೀಕೃಷ್ಣ ಕಥಾ ರೂಪವಾದ 'ರುಕ್ಮಿಣೀಶವಿಜಯ' ಮಹಾಕಾವ್ಯವು.

೧೫. ಉಪನಿಷದರ್ಥಸಾರರೂಪವಾದ, ಶ್ರೀವಿಷ್ಣುಸ್ತೋತ್ರಾತ್ಮಕವಾದ 'ಸರಸಭಾರತೀ ವಿಲಾಸ'

೧೬. ಶ್ರೀಗುರುರಾಜರು ತೀರ್ಥಯಾತ್ರೆಗೆ ಹೋದಾಗ ಅಲ್ಲಿ ಕಂಡಿರುವ ತೀರ್ಥಕ್ಷೇತ್ರಗಳ ಮಹಿಮೆಯನ್ನು ವರ್ಣಿಸಿರುವ 'ತೀರ್ಥಪ್ರಬಂಧ'

೧೭. ಶ್ರೀವಾದಿರಾಜಗುರುಸಾರ್ವಭೌಮರು ಬ್ರಾಹ್ಮಣನಿಗೆ ಸ್ವಪ್ನದಲ್ಲಿ ಹೇಳಿರುವ ಅವರ ದಿವ್ಯಾದ್ಭುತ ಮಹಿಮೆಗಳನ್ನು ತೋರಿಸುವ 'ಶ್ರೀಸ್ವಾಪ್ನ ವೃಂದಾವನಾಖ್ಯಾನ'ವು.

೧೮. ತಪ್ತಮುದ್ರಾಧಾರಣಪ್ರಮಾಣವಿಚಾರಾತ್ಮಕವಾದ 'ತಪ್ತಚಕ್ರ ಭೂಷಣ'
೧೯. ವಿಶೇಷವಾಗಿ ಜೈನಮತಖಂಡನರೂಪವಾದ 'ಪಾಷಂಡಮತಖಂಡನ'
೨೦. ಉಪವಾಸಾದಿ ಕಾಲವಿಚಾರಪರವಾದ, ಏಕಾದಶೀ ನಿರ್ಣಯವು.
೨೧. ಪ್ರಮೆಯ ಸಂಗ್ರಹರೂಪವಾದ 'ಪ್ರಮೇಯದೀಪಿಕಾ'
೨೨. ಭೂಗೋಲ, ಖಗೋಲ ವಿವರಣವು.
೨೩. ವಾಯುಸ್ತುತಿ ಪುನಶ್ಚರಣ ವಿಧಿಯು.
೨೪. ಸಂಕೀರ್ತನೆಗೆ ಅನುಕೂಲವಾಗುವ, ವೃತ್ತದಿಂದ ರಚಿತವಾದ, ಅಷ್ಟಕರೂಪವಾದ ರೌಪ್ಯಪೀಠ ಕೃಷ್ಣಸ್ತುತಿಯು.
೨೫. ಪೂಜಾವಸಾನಕಾಲದಲ್ಲಿ ಪಾರಾಯಣಮಾಡಲು ಅನುಕೂಲವಾದ ದಶಾವತಾರ ವರ್ಣನಾತ್ಮಕವಾದ 'ಅಶ್ವಧಾಟಿ'ಯು.
೨೬. ವಾದದಲ್ಲಿ ಜಯರೂಪ ಫಲಕಾರಣವಾದ, 'ವಿಷ್ಣುಸ್ತುತಿ'ಯು.
೨೭. ಶ್ರೀಹಯಗ್ರೀವಸ್ತುತಿಯು.
೨೮. ವಿವಾಹಾದಿ ಮಂಗಲಕಾಲದಲ್ಲಿ ಹೇಳಲು ಯೋಗ್ಯವಾದ, ಶ್ರೀವೆಂಕಟೇಶ ಮಂಗಲಾಷ್ಟಕವು.
೨೯. ಸಂಪತ್ತಿಗೆ ಕಾರಣವಾದ 'ಶ್ರೀಶ್ರೀಶಗುಣದರ್ಪಣ'ವು.
೩೦. ದುರ್ಗುಣ ನಿವಾರಣೆಯನ್ನು ಪ್ರಾರ್ಥಿಸುವ 'ಪ್ರಾರ್ಥನಾ ದಶಕ' ಸ್ತುತಿಯು.
೩೧. ಆಯುಧ ವಿಶೇಷಗಳ ವಿನ್ಯಾಸದಿಂದ ಮೂರ್ತಿಭೇದವನ್ನು ತೋರಿಸುವ ಕೇಶವಾದಿ ಚತುರ್ವಿಂಶತಿ ಮೂರ್ತಿಸ್ತುತಿಯು.
೩೨. ನರಕಾದಿಕಷ್ಟಪರಿಹಾರಕ್ಕಾಗಿ, ವಿಷ್ಣುಪ್ರಾರ್ಥನಾರೂಪವಾದ, ದಶಶ್ಲೋಕೀಸ್ತುತಿಯು.
೩೩. ವ್ಯಾಸಸ್ತುತಿಯು.
೩೪. ಅಭಯಸ್ತೋತ್ರ.
೩೫. ಶ್ರೀಪರಮಾತ್ಮನ ಸುಂದರ ಮೂರ್ತಿ ಸ್ತುತಿ ರೂಪವಾದ ಮೂರು ಶ್ಲೋಕಗಳುಳ್ಳ, ರಮೇಶ ಸ್ತುತಿಯು.
೩೬. ನಿತ್ಯವೂ ಸಂಕಲ್ಪಿಸುವ ಕ್ರಮವನ್ನು ವಿವರಿಸುವ ಸಂಕಲ್ಪ ಪದ್ಧತಿಯು.
೩೭. ಅಂಧತನ ಪರಿಹಾರಕವಾದ ಶ್ರೀಕೃಷ್ಣಸ್ತುತಿಯು.
೩೮. ಶ್ರೀಕೃಷ್ಣನಿಗೆ ಸ್ವಾತಂತ್ರ್ಯಸಾಧಕವಾದ ಶ್ರೀಕೃಷ್ಣಸ್ತುತಿಯು.
೩೯. ದಶಮಸ್ಕಂಧ ಪಾರಾಯಣ ನಿಯಮದ ಬ್ರಾಹ್ಮಣನಿಗೋಸ್ಕರ ದಶಮಸ್ಕಂಧಸಾರ ರೂಪವಾಗಿಯೂ ರಾಮಾಯಣ ಸಂಗ್ರಹರೂಪವಾಗಿಯೂ ರಚಿತವಾದ, 'ಕವಿಕದಂಬಕಂಠಭೂಷಾ' ಎಂಬ ಸ್ತುತಿಯು.
೪೦. ಅಷ್ಟಮಹಿಷೀನಾಮಗಳಿಂದ ಕೂಡಿದ, ಅಷ್ಟಕರೂಪವಾದ, ಅಷ್ಟ ಮಹಿಷೀಯುಕ್ತ ಶ್ರೀಕೃಷ್ಣಸ್ತುತಿಯು.

೪೧. ಅಷ್ಟಕರೂಪವಾದ ಆಪಾದಸ್ತೋತ್ರವು.

೪೨. ಸೋದಾತ್ರಿವಿಕ್ರಮಸ್ತೋತ್ರ.

೪೩. ದಶಾವತಾರ ಸ್ತುತಿ.

೪೪. ವರಾಹ ಹಯಗ್ರೀವ ಸ್ತೋತ್ರ.

೪೫. ಹಯಗ್ರೀವಾಷ್ಟಕ.

೪೬. ಹಯಗ್ರೀವಸ್ತುತಿಯು.

೪೭. ಶ್ರೀಹಯಗ್ರೀವ ವರಾಹ ಸ್ತುತಿಯು.

೪೮. ಹಯಗ್ರೀವ ಪಂಚಕವು.

೪೯. ಹಯಗ್ರೀವಸಂಪದಾ ಸ್ತೋತ್ರವು.

೫೦. ಶ್ರೀನೃಸಿಂಹ ವರಾಹಪಂಚಕವು.

೫೧. ದಶಾವತಾರಸ್ತೋತ್ರವು.

೫೨. ಪ್ರಾರ್ಥನಾರೂಪ ಹರ್ಯಷ್ಟಕವು.

೫೩. ನೃಹರ್ಯಷ್ಟಕವು.

೫೪. ಶ್ರೀರಾಮಸ್ತೋತ್ರವು.

೫೫. ಪಾಷಂಡ ಮತಖಂಡನಪರ ವ್ಯಾಸಸ್ತೋತ್ರವು.

೫೬. ಅಧಿಕರಣ ನಾಮಾವಲಿಯು.

೫೭. ಪೂಜಾವಸಾನದಲ್ಲಿ ಪಠನೀಯವಾದ ಶ್ಲೋಕತ್ರಯವು.

೫೮. ವಿಘ್ನಪರಿಹಾರ ಸ್ತೋತ್ರವು.

೫೯. ಭಯಪರಿಹರ ಸ್ತೋತ್ರವು.

೬೦. ಋಣಮೋಚಕ ಸ್ತೋತ್ರವು.

೬೧. ಲಕ್ಷ್ಮೀಸ್ತುತಿರೂಪ ಆರ್ಯವೃತ್ತವು.

೬೨. ಚಕ್ರಪ್ರಾರ್ಥನಾರೂಪ ಸಹಸ್ರಾರಸ್ತುತಿಯು.

೬೩. ಚಕ್ರಧಾರಣವು ಅಗತ್ಯವೆಂದು ತೋರಿಸುವ ಪ್ರಮಾಣಸಮರ್ಥನ ರೂಪಚಕ್ರ ಸ್ತುತಿಯು.

೬೪. ಪ್ರಶ್ನೋತ್ತರ ರೂಪವಾಗಿ ಹನುಮದ್ಭೀಮ ಮಧ್ವಾವತಾರ ವರ್ಣನವು.

೬೫. ದ್ವಾರಕಿಯಲ್ಲಿ ಕೃಷ್ಣಯತಿಗಳ ಜ್ವರಪರಿಹಾರಕ್ಕಾಗಿ ರಚಿಸಿರುವ ಅವತಾರ ತ್ರಯ ವರ್ಣಾತ್ಮಕವಾದ ಮಧ್ವಾಷ್ಟಕವು.

೬೬. ಮಧ್ವಮುನಿಪ್ರತಾಪಾಷ್ಟಕವು.

೬೭. ನವಗ್ರಹಸ್ತೋತ್ರವು.

೬೮. ಸದಾಚಾರಸ್ಮೃತಿ ಸಂಗ್ರಹರೂಪವಾದ ಸದಾಚಾರಸ್ಮೃತಿಯು.

೭೯. ನಿತ್ಯಕರ್ಮೋಪದೇಶರೂಪವಾದ ಹಿತೋಪದೇಶವು.

೭೦. ಕುರುಕುರು ಎಂಬ ಕ್ರಿಯಾಪದದಿಂದ ಸದಾಚಾರೋಪದೇಶವಾದ ಕುರು ಸ್ತೋತ್ರವು.

೭೧. ಹಯಗ್ರೀವ ಸ್ತೋತ್ರ, ಪದ್ಯಪಂಚಕಸ್ತುತಿ, ಇದರಲ್ಲಿ ವೈರಿಗಳು ತನ್ನ ನಾಶಕ್ಕೆ ಬಿಟ್ಟಿರುವ ಘಟಸರ್ಪವು ಹಯಗ್ರೀವಾನುಗ್ರಹದಿಂದ ಏನೂ ಮಾಡಲಾಗದೆ ಹೋಯಿತೆಂದು ಸೂಚಿಸಿರುವರು.

ಕನ್ನಡ ಕೀರ್ತನೆಗಳು

೧. ವೈಕುಂಠವರ್ಣನೆ ೨. ಗುಂಡಕ್ರಿಯೆಗಳು ೩. ಸುಳಾದಿಗಳು ೪. ಸಾವಿರಾರು ಕೀರ್ತನೆಗಳು ೫. ಶ್ರೀಲಕ್ಷ್ಮೀಶೋಭನವು ೬. ಸ್ವಪ್ನಗದ್ಯವು ೭. ಭ್ರಮರಗೀತೆ ೮. ಭಾಗವತಸಾರ ಕೀರ್ತನೆಯು; ಹೀಗೆ ಈ ಮಹಾತ್ಮರು ಅನೇಕ ಗ್ರಂಥಗಳನ್ನು ಮಾಡಿದುದಲ್ಲದೆ ತುಳುಭಾಷೆಯಲ್ಲೂ ದಶಾವತಾರ ಕಥೆಯಿಂದ ಕೂಡಿದ ಪಾಡ್ದನವೆಂಬ ಹಾಡನ್ನು ರಚಿಸಿರುವರು. ಇವರು ಕನ್ನಡದಲ್ಲಿ ಲಕ್ಷಗ್ರಂಥಗಳಿಂದಲೂ ಹೆಚ್ಚಾಗಿ ರಚಿಸಿರುವ ತಮ್ಮ ರಚನೆಯಿಂದ ಕನ್ನಡಸಾಹಿತ್ಯೋದ್ಧಾರದಲ್ಲೂ ಅಗ್ರಗಣ್ಯರಾಗಿದ್ದರು. ಇವರು ಕೃತಿಗಳು ಇನ್ನೂ ಹೆಚ್ಚಾಗಿರಬಹುದು ಎಂದು ಅವುಗಳ ಶೋಧನೆಯನ್ನು ಈಗಲೂ ಪಂಡಿತರು ಮಾಡುತ್ತಾ ಈ ಊರಲ್ಲಿ ಮತ್ತು ಬೇರೆ ದೇಶಗಳಲ್ಲಿರುವ ಅಪೂರ್ವಗ್ರಂಥಗಳನ್ನು ನೋಡುತ್ತಲೇ ಇರುವರು. ಈ ಗ್ರಂಥಗಳು ಕೆಲವು ಮುದ್ರಾಶಾಲೆಗಳಲ್ಲಿ ಮುದ್ರಿತಗಳಾಗಿ ಪ್ರಕಾಶಕ್ಕೆ ಬಂದಿವೆ. ಹೆಚ್ಚಿನಂಶಗಳು ಇನ್ನು ಮುಂದೆ ಪ್ರಕಾಶಕ್ಕೆ ಬರತಕ್ಕವುಗಳಿವೆ.

೬. ಪರಿಶಿಷ್ಟ

ಶ್ರೀವಾದಿರಾಜರಿಂದ ರಚಿಸಲ್ಪಟ್ಟ ಸಂಸ್ಕೃತ ಸ್ತುತಿಗಳು

ರೌಪ್ಯಪೀಠಕೃಷ್ಣಸ್ತುತಿಃ

ಪಾಲಯಾಚ್ಯುತ ಪಾಲಯಾಜಿತ ಪಾಲಯಾಕಮಲಾಲಯ ।
ಲೀಲಯಾ ಧೃತಭೂಧರಾಂಬುರುಹೋದರ ಸ್ವಜನೋದರ ॥ಧ್ರು.॥

ಮಧ್ವಮಾನಸಪದ್ಮಭಾನುಸಮಂ ಸ್ಮರ ಪ್ರತಿ ಮಂಸ್ಮರ
ಸ್ನಿಗ್ಧನಿರ್ಮಲಶೀತಕಾಂತಿಲಸನ್ಮುಖಂ ಕರುಣೋನ್ಮುಖಮ್ ।
ಹೃದ್ಯಕಂಬುಸಮಾನಕಂಧರಮಕ್ಷಯಂ ದುರಿತಕ್ಷಯಂ
ಸ್ನಿಗ್ಧಸಂಸ್ತುತರೌಪ್ಯಪೀಠಕೃತಾಲಯಂ ಹರಿಮಾಲಯಮ್ ॥ಪಾಲಯಾ.॥೧॥

ಅಂಗದಾದಿಸುಶೋಭಿಪಾಣಿಯುಗೇನ ಸಂಕ್ಷುಭಿತೈನಸಂ
ತುಂಗಮಾಲ್ಯಮಣೀಂದ್ರ ಹಾರಸರೋರಸಂ ಖಲನೀರಸಮ್ ।
ಮಂಗಲಪ್ರದಮಂಥದಾಮವಿರಾಜಿತಂ ಭಜತಾಜಿತಂ
ತಂಗೃಣೇ ವರರೌಪ್ಯಪೀಠಕೃತಾಲಯಂ ಹರಿಮಾಲಯಮ್ ॥ಪಾಲಯಾ.॥೨॥

ಪೀನರಮ್ಯತನೂದರಂ ಭಜ ಹೇ ಮನಃ ಶುಭ ಹೇ ಮನಃ
ಸ್ವಾನುಭಾವನಿದರ್ಶನಾಯ ದಿಶಂತಮರ್ಥಿಸುಶಂತಮಮ್ ।
ಆನತೋಽಸ್ಮಿ ನಿಜಾರ್ಜುನಪ್ರಿಯಸಾಧಕಂ ಖಲಬಾಧಕಂ
ಹೀನತೋಜ್ಝಿತರೌಪ್ಯಪೀಠಕೃತಾಲಯಂ ಹರಿಮಾಲಯಮ್ ॥ಪಾಲಯಾ.॥೩॥

ಹೈಮಕಿಂಕಿಣಿಮಾಲಿಕಾರಶನಾಂಚಿತಂ ತಮವಂಚಿತಂ
ರಕ್ತಕಾಂಚನಚಿತ್ರವಸ್ತ್ರಕಟಿಂ ಘನಪ್ರಭಯಾ ಘನಮ್ ।
ಕಮ್ರನಾಗಕರೋಪಮೋರುಮನಾಮಯಂ ಶುಭಧೀಮಯಂ
ನೌಮ್ಯಹಂ ವರರೌಪ್ಯಪೀಠಕೃತಾಲಯಂ ಹರಿಮಾಲಯಮ್ ॥ಪಾಲಯಾ.॥೪॥

ವೃತ್ತಜಾನುಮನೋಜ್ಞಜಂಘಮಮೋಹದಂ ಪರಮೋಹದಂ
ರತ್ನಕಲ್ಪನಖತ್ವಿಷಾ ಹೃತಹೃತ್ತಮಸ್ತತಿಮುತ್ತಮಮ್ ।
ಪ್ರತ್ಯಹಂ ರಚಿತಾರ್ಚನಂ ರಮಯಾ ಸ್ವಯಾಽಽಗತಯಾಸ್ವಯಂ
ಚಿತ್ತ ಚಿಂತಯ ರೌಪ್ಯಪೀಠಕೃತಾಲಯಂ ಹರಿಮಾಲಯಮ್ ॥ಪಾಲಯಾ.॥೫॥

ಚಾರುಪಾದಸರೋಜಯುಗ್ಮರುಚಾಽಮರೋಚ್ಚಯಚಾಮರೋ–
ದಾರಮೂರ್ಧಜಭಾರಮಂಡಲರಂಜಕಂ ಕಲಿಭಂಜಕಮ್ ।

ವೀರತೋಚಿತಭೂಷಣಂ ವರನೂಪುರಂ ಸ್ವತನೂಪುರಂ
ಧಾರಯಾऽऽತ್ಮನಿ ರೌಪ್ಯಪೀಠಕೃತಾಲಯಂ ಹರಿಮಾಲಯಮ್ ॥ಪಾಲಯಾ.॥೬॥

ಶುಷ್ಕವಾದಿಮನೋऽತಿದೂರತರಾಗಮೋತ್ಸವದಾಗಮಂ
ಸತ್ಕವೀಂದ್ರವಚೋವಿಲಾಸಮಹೋದಯಂ ಮಹಿತೋದಯಮ್ ।
ಲಕ್ಷಯಾಮಿ ಯತೀಶ್ವರೈಃ ಕೃತಪೂಜನಂ ಗುಣಭಾಜನಂ
ಧಿಕ್ಕೃತೋಪಮರೌಪ್ಯಪೀಠಕೃತಾಲಯಂ ಹರಿಮಾಲಯಮ್ ॥ಪಾಲಯಾ.॥೭॥

ನಾರದಪ್ರಿಯಮಾವಿಶಾಂಬುರುಹೇಕ್ಷಣಂ ನಿಜಲಕ್ಷಣಂ
ತಾರಕೋಪಮಚಾರುದೀಪಚಯಾಂತರೇ ಗತಚಿಂತ ರೇ ।
ಧೀರ ಮಾನಸ ಪೂರ್ಣಚಂದ್ರ ಸಮಾನಮಚ್ಯುತಮಾನಮ
ದ್ವಾರಕೋಪಮರೌಪ್ಯಪೀಠಕೃತಾಲಯಂ ಹರಿಮಾಲಯಮ್ ॥ಪಾಲಯಾ.॥೮॥

ರೌಪ್ಯಪೀಠಕೃತಾಲಯಸ್ಯ ಹರೇಃ ಪ್ರಿಯಂ ದುರಿತಾಪ್ರಿಯಂ
ತತ್ಪದಾರ್ಚಕವಾದಿರಾಜಯತೀರಿತಂ ಗುಣಪೂರಿತಮ್ ।
ಗೋಪ್ಯಮಷ್ಟಕಮೇತದುಚ್ಚಮುದೇ ಮಮಾಸ್ತ್ವಿಹ ನಿರ್ಮಮ
ಪ್ರಾಪ್ಯಸೌಖ್ಯಫಲಾಯ ತತ್ರ ಸುಕೋಮಲಂ ಹೃತಧೀಮಲಮ್ ॥

ಪಾಲಯಾಚ್ಯುತ ಪಾಲಯಾಜಿತ ಪಾಲಯಾಕಮಲಾಲಯ ।
ಲೀಲಯಾ ಧೃತಭೂಧರಾಂಬುರುಹೋದರ ಸ್ವಜನೋದರ ॥೯॥

॥ ಇತಿ ಶ್ರೀಮದ್ವಾದಿರಾಜಪೂಜ್ಯಚರಣವಿರಚಿತಂ ಶ್ರೀರೌಪ್ಯಪೀಠಕೃಷ್ಣಸ್ತುತಿಸ್ಸಮಾಪ್ತಾ ॥

ಶ್ರೀ ಶ್ರೀಶಗುಣದರ್ಪಣಮ್

ಯಾ ಸುಗಂಧಾಸ್ಯನಾಸಾದಿನವದ್ವಾರಾऽಖಿಲೇನ ಯಾ ।
ದುರಾಧರ್ಷಾ ಸರ್ವಸಸ್ಯೋದಯಾರ್ಥಂ ಯಾ ಕರೀಷಿಣೀ ॥೧॥

ಯಾ ನಿತ್ಯಪುಷ್ಟಾಸರ್ವಾಂಗ್ಯೈಃಸೌಂದರ್ಯಾದಿಗುಣೈರಪಿ ।
ಈಶ್ವರೀಂ ಸರ್ವಭೂತಾನಾಂ ತಾಮಿಹೋಪಹ್ವಯೇ ಶ್ರೀಯಮ್॥೨॥

ಮಾತರ್ಲಕ್ಷ್ಮಿ ನಮಸ್ತುಭ್ಯಂ ಮಾಧವಪ್ರಿಯಮಾನಿನಿ ।
ಯುವಾಂ ವಿಶ್ವಸ್ಯ ಪಿತರಾವಿತರೇತರಯೋಗಿನೌ ॥೩॥

ಸಮನಾ ಕಿಲ ಮಾತಸ್ತ್ವಮಮುನಾ ತತಯೋಗಿನೀ ।
ಮಮ ನಾಥೇನ ದೇವಶ್ಚ ವಿಮನಾಶ್ಚ ನ ಸ ತ್ವಯಿ ॥೪॥

ತ್ವಂ ವೇದಮಾನಿನೀ ವೇದವೇದ್ಯಃ ಕಿಲ ಸ ತೇ ಪ್ರಿಯಃ ।
ತ್ವಂ ಮೂಲಪ್ರಕೃತಿರ್ದೇವೀ ಸ ಚಾದಿಪುರುಷಃ ಕಿಲ ॥೫॥

ಯಸ್ತ್ವಾಮುರಸಿ ಧತ್ತೇऽಂಬ ಕೌಸ್ತುಭದ್ಯುತಿಭಾಸಿತೇ ।
ಸ ತ್ವಾಂ ನೈವಾಚ್ಯುತಃ ಸರ್ವಸ್ಯಾತ್ಯಯೇ ಸತ್ಯಪಿ ತ್ಯಜೇತ್ ॥೬॥

ದೇವಿ ತ್ವಂ ಲಲನಾರತ್ನಂ ದೇವೋಽಸೌ ಪುರುಷೋತ್ತಮಃ ।
ಯುವಾಂ ಯುವಾನೌ ಸತತಂ ಯುವಯೋರ್ನ ವಯೋಽಧಿಕಃ ॥೭॥

ತ್ವಂ ಪದ್ಮಿನೀ ಪದ್ಮವಕ್ತ್ರಾ ಪದ್ಮಾಕ್ಷೀ ಪದ್ಮವಿಷ್ಟರಾ ।
ಪದ್ಮದ್ವಯಧರಾ ಪದ್ಮಕೋಶೋದ್ಯಸ್ತನಶೋಭನಾ ॥೮॥

ಪದ್ಮಹಸ್ತಾ ಪದ್ಮಪಾದಾ ಪದ್ಮನಾಭಮನಃಪ್ರಿಯಾ ।
ಪದ್ಮೋದ್ಭವಸ್ಯ ಜನನೀ ಪದ್ಮಾ ಚ ವರವರ್ಣಿನೀ ॥೯॥

ಅಂಬಾಂ ಪೀತಾಂಬರಶ್ರೋಣೀಂ ಲಂಬಾಲಕಲಸನ್ಮುಖೀಮ್ ।
ಬಿಂಬಾಧರೋಷ್ಠೀಂ ಕಸ್ತೂರಿಜಂಬಾಲತಿಲಕಾಂ ಭಜೇ ॥೧೦॥

ರತ್ನೋದ್ದೀಪ್ತಸುಮಾಂಗಲ್ಯ ಸೂತ್ರಾವೃತಶಿರೋಧರಾಮ್ ।
ಕುಂಡಲಪ್ರಭಯೋದ್ದಂಡಗಂಡಮಂಡಲಮಂಡಿತಾಮ್ ॥೧೧॥

ಕುಚಕುಂಚುಕಸಂಚಾರಿಹಾರನಿಷ್ಕಮನೋಹರಾಮ್ ।
ಕಾಂಚೀಕಿಂಕಿಣಿಮಂಜೀರಕಂಕಣಾದ್ಯೈರಲಂಕೃತಾಮ್ ॥೧೨॥

ಸುವರ್ಣಮಂಡಪೇ ರತ್ನಚಿತ್ರಸಿಂಹಾಸನೋತ್ತಮೇ ।
ನಮಾಮಿ ಹರಿಣಾ ಸಾಕಮಿಂದಿರಾಂ ಕೃತಮಂದಿರಾಮ್ ॥೧೩॥

ಬ್ರಹ್ಮಾದ್ಯಾವಿಬುಧಶ್ರೇಷ್ಠಾಬ್ರಹ್ಮಾಣ್ಯಾದ್ಯಾಃಸುರಾಂಗನಾಃ ।
ಯಾಂ ಪೂಜಯಂತೇ ಸೇವಂತೇ ಸಾ ಮಾಂ ಪಾತು ರಮಾ ಸದಾ ॥೧೪॥

ಸರ್ವಾಲಂಕಾರಭರಿತೌ ಸರ್ವಜ್ಞೌ ಸರ್ವಸದ್ಗುಣೌ (ಚಿತ್ತನೂ) ।
ಶರ್ವಾದಿಸರ್ವಭಕ್ತೌಘಸರ್ವಸರ್ವಸ್ವದಾಯಕೌ ॥೧೫॥

ಸುಮುಖೌ ಸುಂದರತರೌ ಸುನಾಸೌ ಸುಖಚಿತ್ತನೂ ।
ಸುರಾರಾಧಿತಪಾದಾಬ್ಜೌ ರಮಾನಾರಾಯಣೌಸ್ತುಮಃ ॥೧೬॥

ಚತುಷ್ಕಪರ್ದಾ ಯಾ ದೇವೀ ಚತುರಾಸ್ಯಾದಿಭಿಃ ಸ್ತುತಾ ।
ಚತುರ್ವೇದೋದಿತಗುಣಾ ಚತುರ್ಮೂರ್ತೇರ್ಹರೇಃ ಪ್ರಿಯಾ ॥೧೭॥

ಘೃತಪ್ರತೀಕಾಂ ತಾಂ ನಿತ್ಯಂ ಘೃತಪೂರ್ಣಾನ್ನದಾಯಿನೀಮ್ ।
ಯಥೇಷ್ಟವಿತ್ತದಾತ್ರೀಂ ಚ ನತೋಽಸ್ಮ್ಯಭಯದಾಂ ಶ್ರಿಯಮ್ ॥೧೮॥

ವಾದಿರಾಜೇನ ರಚಿತಂ ಶ್ರೀ ಶ್ರೀಶಗುಣದರ್ಪಣಮ್ ।
ಇಮಂ ಸ್ತವಂ ಪಠನ್ ಮರ್ತ್ಯಃ ಶ್ರೀಮಾನ್ ಸ್ಯಾನ್ನಾತ್ರ ಸಂಶಯಃ ॥೧೯॥

॥ ಇತಿ ಶ್ರೀವಾದಿರಾಜಪೂಜ್ಯಚರಣವಿರಚಿತಂ ಶ್ರೀ ಶ್ರೀಶಗುಣದರ್ಪಣಸ್ತೋತ್ರಮ್ ॥

ಋಣಮೋಚನ ಸ್ತೋತ್ರಮ್

ದೇವತಾಕಾರ್ಯ ಸಿದ್ಧ್ಯರ್ಥಂ ಸಭಾಸ್ತಂಭ ಸಮುದ್ಭವಮ್ ।
ಶ್ರೀನೃಸಿಂಹಂ ಮಹಾವೀರಂ ನಮಾಮಿ ಋಣಮುಕ್ತಯೇ ॥೧॥

ಲಕ್ಷ್ಮ್ಯಾಲಿಂಗಿತವಾಮಾಂಗಂ ಭಕ್ತಾನಾಂ ವರದಾಯಕಮ್ ।
ಶ್ರೀನೃಸಿಂಹಂ ಮಹಾವೀರಂ ನಮಾಮಿ ಋಣ ಮುಕ್ತಯೇ ॥೨॥

ಆಂತ್ರಮಾಲಾಧರಂ ಶಂಖಚಕ್ರಾಬ್ಜಾಯುಧಧಾರಣಮ್ ।
ಶ್ರೀನೃಸಿಂಹಂ ಮಹಾವೀರಂ ನಮಾಮಿ ಋಣಮುಕ್ತಯೇ ॥೩॥

ಸ್ಮರಣಾತ್ಸರ್ವಪಾಪಘ್ನಂ ಕದ್ರೂಜವಿಷನಾಶನಮ್ ।
ಶ್ರೀನೃಸಿಂಹಂ ಮಹಾವೀರಂ ನಮಾಮಿ ಋಣಮುಕ್ತಯೇ ॥೪॥

ಸಿಂಹನಾದೇನ ಮಹತಾ ದಿಗ್ದಂತಿಭಯನಾಶನಮ್ ।
ಶ್ರೀನೃಸಿಂಹಂ ಮಹಾವೀರಂ ನಮಾಮಿ ಋಣಮುಕ್ತಯೇ ॥೫॥

ಪ್ರಹ್ಲಾದವರದಂ ಶ್ರೀಶಂ ದೈತ್ಯೇಶ್ವರವಿದಾರಣಮ್ ।
ಶ್ರೀನೃಸಿಂಹಂ ಮಹಾವೀರಂ ನಮಾಮಿ ಋಣಮುಕ್ತಯೇ ॥೬॥

ಕ್ರೂರಗ್ರಹೈಃಪೀಡಿತಾನಾಂ ಭಕ್ತಾನಾಮಭಯಪ್ರದಮ್ ।
ಶ್ರೀನೃಸಿಂಹಂ ಮಹಾವೀರಂ ನಮಾಮಿ ಋಣಮುಕ್ತಯೇ ॥೭॥

ವೇದವೇದಾಂತಯಜ್ಞೇಶಂ ಬ್ರಹ್ಮರುದ್ರಾದಿ ವಂದಿತಮ್ ।
ಶ್ರೀನೃಸಿಂಹಂ ಮಹಾವೀರಂ ನಮಾಮಿ ಋಣಮುಕ್ತಯೇ ॥೮॥

ಯ ಇದಂ ಪಠತೇ ನಿತ್ಯಂಋಣಮೋಚನಸಂಜ್ಞಿತಮ್ ।
ಅನೃಣೋ ಜಾಯತೇ ಸಹ್ಯೋ ಧನಂ ಶ್ರೀಘ್ರಮವಾಪ್ನುಯಾತ್ ॥೯॥

ಇತಿ ಶ್ರೀವಾದಿರಾಜದೃಷ್ಟನೃಸಿಂಹ ಪುರಾಣೋಕ್ತ
ಋಣಮೋಚನ ಸ್ತೋತ್ರಂ ಸಂಪೂರ್ಣಮ್

ಶ್ರೀಕೃಷ್ಣಾರ್ಪಣಮಸ್ತು

ಪ್ರಾರ್ಥನಾದಶಕಸ್ತೋತ್ರಮ್

ರಮಾರಮಣ ಮಧ್ವಾದೀದೇಶಿಕ ಶ್ರೀಹೃದಬ್ಜಗ ।
ಹಯಗ್ರೀವ ಕೃಪಾಲೋ ಮೇ ಪ್ರಾರ್ಥನಾಂ ಶೃಣು ಸಾದರಮ್ ॥೧॥

ಅಯೋಗ್ಯ ವಿಷಯೇ ಸ್ವಾಮಿನ್ ಸರ್ವಥಾ ನ ಮನೋಭವೇತ್ ।
ಚಾಂಚಲ್ಯಂ ಮೂಲತಶ್ಛಿಂದಿ ದುರಾಶಾಂ ಹರ ದೂರತಃ ॥೨॥

ದುರ್ಬುದ್ಧಿಂಚನ ಮೇ ದೇಹಿ ದುಃಖಾಸ್ತ್ರಾವರ್ತನೇ ರತಿಮ್ ।
ಹಾಪಯಸ್ವಚ ದುರ್ಮಾನಂ ದುರ್ಗುಣಂ ಮೋಚಯ ಪ್ರಭೋ ॥೩॥

ದುಸ್ಸಂಗಂ ದುಷ್ಕ್ರಿಯಾಂ ಛಿಂಧಿ ಹರ ಲೋಕಾಟನಾತ್ಪದೌ ।
ನ ನಿಯೋಜಯ ಚಕ್ಷೂಂಷಿ ಪರದಾರಾದಿದರ್ಶನೇ ॥೪॥

ದುಷ್ಪ್ರತಿಗ್ರಹ ದುಸ್ಪರ್ಶೇ ಕರೌ ಮಾ ಚೋದಯ ಧ್ರುವಮ್ ।
ಅಗಮ್ಯಾಗಮನೇ ಗುಹ್ಯಂ ಘ್ರಾಣಮಾಘ್ರಾಣನೇಽಸತಃ ॥೫॥

ಅಪಕರ್ಷತು ಜಿಹ್ವಾಂ ಮೇ ಲೋಕವಾರ್ತಾದುರನ್ನತಃ ।
ದುರ್ವಾರ್ತಾ ದುಷ್ಟಶಬ್ದೇಭ್ಯೋ ನಿವರ್ತಯ ಹರೇ ಶ್ರುತೀ ॥೬॥

ಭವದಿಚ್ಛಾನುಗಂ ಚೇತೋ ಯೋಗ್ಯ ಸದ್ವಿಷಯಂ ಭವೇತ್ ।
ಯದೃಚ್ಛಾಲಾಭಸಂತೃಪ್ತಂ ನಿಶ್ಚಾಂಚಲ್ಯಂ ಭವೇತ್ವಯಿ ॥೭॥

ಸಜ್ಞಾನಂ ಸರ್ವದಾದೇಹಿ ಸಚ್ಛಾಸ್ತ್ರಾವರ್ತನೇ ರತಿಮ್ ।
ಸತ್ಸಂಗಂ ಸತ್ಕ್ರಿಯಾಂ ಚೈವ ಪಾದೌ ತ್ವತ್ಕ್ಷೇತ್ರಸರ್ಪಣೇ ॥೮॥

ಶ್ರೀಮಧ್ವಶಾಸ್ತ್ರಶ್ರವಣೇ ನಿಯುಂತ್ಷ್ವ ಶ್ರವಣೇ ಸದಾ ।
ಹಯಾಸ್ಯ ಚಕ್ಷೂಂಕ್ಷಿ ಚ ಮೇ ದರ್ಶನೇ ಸನ್ನಿಯೋಜಯ ॥೯॥

ಕರೌತ್ವದರ್ಚನೇ ನಿತ್ಯಂ ಸುಖತೀರ್ಥಸ್ಯಲೇಖನೇ ।
ತ್ವದಾಲಾಪೇ ತ್ವದುಚ್ಛಿಷ್ಟಭೋಜನೇ ಕುರು ಜಿಹ್ವಿಕಾಮ್ ॥೧೦॥

ಘ್ರಾಣಂ ಭವತು ನಿರ್ಮಾಲ್ಯಾಘ್ರಾಣಣೇ ನಮನೇ ಶಿರಃ ।
ದೇಹಿ ಮೇ ತು ಜ್ಞಾನ ಭಕ್ತಿ ಪಶುಪುತ್ರಧನಾದಿಕಮ್ ॥೧೧॥

ಪ್ರಾರ್ಥನಾದಶಕಂ ಚೈತತ್ ತ್ರಿಕಾಲೇ ಯಃ ಪಠೇನ್ನರಃ ।
ತಸ್ಯಾಭೀಷ್ಟಂ ಹಯಾಸ್ಯೋಽಸೌ ದತ್ವಾ ರಕ್ಷತಿ ಸರ್ವದಾ ॥೧೨॥

ಇತಿ ಶ್ರೀ ವಾದಿರಾಜಯತಿ ಕೃತ ಪ್ರಾರ್ಥನಾದಶಕಸ್ತೋತ್ರಂ ಸಂಪೂರ್ಣಮ್

ಶ್ರೀಕೃಷ್ಣಾರ್ಪಣಮಸ್ತು

ಲಕ್ಷ್ಮ್ಯಾರ್ಯಾವೃತ್ತಮ್

ಆರ್ಯಾವೃತ್ತವಿಚಿತ್ರಾ ನಾರ್ಯಾಸ್ಸಾ ಜಗತಿ ಸೌಭಗತ್ವಕರೀ ।
ವಾರ್ಯ್ವಾ (ರ್ಯಾ)ಕಾಶಾದ್ಯಖಿಲಾ ಭೂರ್ಯಾವದ್ಧಾರ್ಯತೇ ತಯಾ ದೇವ್ಯಾ ॥೧॥

ಉನ್ಮೀಲಯ ಮನ್ನಯನೇ ತ್ವಂ ಮ (ಮಾ) ನ್ಯೇ ಲಕ್ಷ್ಮಿ ಲೋಕಮಾತಾಽಸಿ ।
ಚಿನ್ಮಯಸುಭಗಾವಯವೇ ಕರ್ಮಕರಃ ಸ್ಯಾಮಹಂ ಚ ತವ ಕಮಿತುಃ ॥೨॥

ಮನ್ಮಥಜನನಿ ಮನೋಜ್ಞೇಽಹಂಮಮತಾರಹಿತಯೋಗಿಕುಲಮಹಿತೇ ।
ದೃಂಗ್ಮಲಮುನ್ಮೂಲಯ ಮೇ ಸಮ್ಯಕ್ ಶ್ರೀಕೃಷ್ಣಮೂರ್ತಿಮೀಕ್ಷೇಽಹಮ್ ॥೩॥

ಕಲ್ಮಷಖಂಡನಶೀಲೇ ರಮ್ಯಕಪೋಲೇ ಸರೋಜಮುಖಿ ಸುತನೋ ।
ಅಮ್ಲಾನಪದ್ಮಹಸ್ತೇ ನಿರ್ಮಲಮಚ್ಚಕ್ಷುರೀಕ್ಷತಾಂ ಕೃಷ್ಣಮ್ ॥೪॥

ಪೂರ್ವಂ ತ್ರಿಗುಣಮಯೀ ಯಾ ಸರ್ವಂ ಕಾರ್ಯಂ ಕರೋತಿ ಯಾ ಪಶ್ಚಾತ್ ।
ಚಾರ್ವಂಬುಜಾಕ್ಷವೀಕ್ಷಾದಕ್ಷಂ ಮೇಽಕ್ಷೀಹ ಸಾ ರಮಾ ಕುರ್ಯಾತ್ ॥೫॥

ವಶ್ಯಂ ಯಸ್ಯಾಃ ಸಕಲಂ ದೃಶ್ಯಂ ಯಸ್ಯಾಃ ಸಮಸ್ತಮಪಿ ವಿಶ್ವಮ್ ।
ನಶ್ಯತ್ಸು ಯಾ ನ ನಶ್ಯೇತ್ಕ್ಲಿಶ್ಯತ್ಸು ಚ ಯಾ ಕದಾಽಪಿ ನ ಕ್ಲಿಶ್ಯೇತ್ ॥೬॥

ಜ್ಞಪ್ತೇಃ ಕರಣಾನಿ ಷಟ್ ಪಂಚ ಕೃತೇರ್ಹೇತುಭೂತಕರಣಾನಿ ।
ಬುಧ್ಯೇಯುರ್ಯತ್ಕೃಪಯಾ ಸಿಧ್ಯೇದ್ವೈ ತತ್ಫಲಂ ಚ ಯತ್ಕೃಪಯಾ ॥೭॥

ಸಾ ಶ್ರೀರಾಶ್ರಿತರಕ್ಷಾದೀಕ್ಷಾ ದುಷ್ಕರ್ಮಶಿಕ್ಷಣೇ ಚ ಪಟುಃ ।
ಅಶ್ವಾಸ್ಯಂ ಹಿ ದಿವ್ಯಕ್ಷೋರ್ಮೇಽಕ್ಷ್ಣೋಸ್ತದ್ವೀಕ್ಷಣೋತ್ಸವಂ ದದ್ಯಾತ್ ॥೮॥

ಸಂಗೀತಸಾಂಗವೇದಾ ಮಂಗಲದೇವೀ ಮನೋಜ್ಞಸರ್ವಾಂಗೀ ।
ಭಂಗಾದಿದೋಷರಹಿತಾ ತಂ ಗುಣರಾಶಿಂ ಮಮೇಕ್ಷಯೇತ್ಸ್ವಪತಿಮ್ ॥೯॥

ಶಕ್ತಿಃ ಸಂವಿತ್ಸ್ಫೂರ್ತಿರ್ಮತಿಃ ಪ್ರವೃತ್ತಿಶ್ಚ ಯದ್ವಶೇ ನಿತ್ಯಮ್ ।
ಶಕ್ತಾ ತ್ವಮೇವ ಸುಜನೋದ್ಧರ್ತ್ರೀ ತನ್ಮೇ ಪ್ರದರ್ಶಯ ಸ್ವಪತಿಮ್ ॥೧೦॥

ಕುಂಡಲರತ್ನತಿಲಕಸನ್ನಾಸಾಮಣಿಕಂಠಸೂತ್ರಹಾರಧರಾ ।
ಅಂಗದಕಂಕಣಕಾಂಚೀಕಂಚುಕಪೀತವಸನರಶನಾಭಾ ॥೧೧॥

ಸದ್ರತ್ನಖಚಿತಕಿಂಕಿಣೀಮುದ್ರಾಗ್ರೈವೇಯನೂಪುರಾದಿರುಚಾ ।
ಭದ್ರೋದ್ಯದಿಂದುವದನಾ ಪದ್ಮಾ ಮೇ ಮಧ್ವವರದಮೀಕ್ಷಯತು ॥೧೨॥

ಯಾ ದೇವೀ ನಿಜರಮಣಸ್ಯಾಂಕಗತಾ ಪಶ್ಯತಿ ಸ್ಮ ತಂ ಸತತಮ್ ।
ತಸ್ಯಾಃ ಸ್ತುತಿಮಿತಿ ಕೃತವಾನ್ಕೃಷ್ಣದೃಗರ್ಥೀ ಸ ವಾದಿರಾಜಯತಿಃ ॥೧೩॥

॥ ಇತಿ ಶ್ರೀಮದ್ವಾದಿರಾಜಪೂಜ್ಯಚರಣವಿರಚಿತಂ ಲಕ್ಷ್ಮ್ಯಾರ್ಯಾವೃತ್ತಂ ಸಂಪೂರ್ಣಮ್ ॥

ದುರ್ಗಾಸ್ತವಃ

ಸನ್ನದ್ಧಸಿಂಹಸ್ಕಂಧಸ್ಥಾಂ ಸ್ವರ್ಣವರ್ಣಾಂ ಮನೋರಮಾಮ್ ।
ಪೂರ್ಣೇಂದುವದನಾಂ ದುರ್ಗಾಂ ವರ್ಣಯಾಮಿ ಗುಣಾರ್ಣವಾಮ್ ॥೧॥

ಕಿರೀಟಹಾರಗ್ರೈವೇಯನೂಪುರಾಂಗದಕಂಕಣೈಃ ।
ರತ್ನಕಾಂಚ್ಯಾ ರತ್ನಚಿತ್ರಕುಚಕಂಚುಕತೇಜಸಾ ॥೨॥

ವಿರಾಜಮಾನಾ ರುಚಿರಾಂಬರಾ ಕಿಂಕಿಣಿಮಂಡಿತಾ ।
ರತ್ನಮೇಖಲಯಾ ರತ್ನವಾಸೋಪರಿ ವಿಭೂಷಿತಾ ॥೩॥

ವೀರಶೃಂಖಲಯಾ ಶೋಭಿಚಾರುಪಾದಸರೋರುಹಾ ।
ರತ್ನಚಿತ್ರಾಂಗುಲೀಮುದ್ರಾರತ್ನಕುಂಡಲಮಂಡಿತಾ ॥೪॥

ವಿಚಿತ್ರಚೂಡಾಮಣಿನಾ ರತ್ನೋದ್ಯತ್ತಿಲಕೇನ ಚ ।
ಅನರ್ಘ್ಯನಾಸಾಮಣಿನಾ ಶೋಭಿತಾಽಽಸ್ಯಸರೋರುಹಾ ॥೫॥

ಭುಜಕೀರ್ತ್ಯಾ ರತ್ನಚಿತ್ರಕಂಠಸೂತ್ರೇಣ ಚಾಂಕಿತಾ ।
ಪದ್ಮಾಕ್ಷಿಣೀ ಸುಬಿಂಬೋಷ್ಠೀ ಪದ್ಮಗರ್ಭಾದಿಭಿಃ ಸ್ತುತಾ ॥೬॥

ಕಬರೀಭಾರವಿನ್ಯಸ್ತಪುಷ್ಪಸ್ತಬಕವಿಸ್ತರಾ ।
ಕರ್ಣನೀಲೋತ್ಪಲರುಚಾ ಲಸದ್ಭ್ರೂಮಂಡಲತ್ವಿಷಾ ॥೭॥

ಕುಂತಲಾನಾಂ ಚ ಸಂತತ್ಯಾ ಶೋಭಮಾನಾ ಶುಭಪ್ರದಾ ।
ತನುಮಧ್ಯಾ ವಿಶಾಲೋರಃಸ್ಥಲಾ ಪೃಥುನಿತಂಬಿನೀ ॥೮॥

ಚಾರುದೀರ್ಘಭುಜಾ ಕಂಬುಗ್ರೀವಾ ಜಂಘಾಯುಗಪ್ರಭಾ ।
ಅಸಿಚರ್ಮಗದಾಶೂಲಧನುರ್ಬಾಣಾಂಕುಶಾದಿನಾ ॥೯॥

ವರಾಭಯಾಭ್ಯಾಂ ಚಕ್ರೇಣ ಶಂಖೇನ ಚ ಲಸತ್ಕರಾ ।
ದಂಷ್ಟ್ರಾಗ್ರಭೀಷಣಾಸ್ಯೋತ್ಥಹುಂಕಾರಾರ್ದಿತದಾನವಾ ॥೧೦॥

ಭಯಂಕರೀ ಸುರಾರೀಣಾಂ ಸುರಾಣಾಮಭಯಂಕರೀ ।
ಮುಕುಂದಕಿಂಕರೀ ವಿಷ್ಣುಭಕ್ತಾನಾಂ ಮೌಕ್ತಶಂಕರೀ ॥೧೧॥

ಸುರಸ್ತ್ರೀಕಿಂಕರೀಭಿಶ್ಚ ವೃತಾ ಕ್ಷೇಮಂಕರೀ ಚ ನಃ ।
ಆದೌ ಮುಖೋದ್ಗೀರ್ಣನಾನಾಽಽಮ್ನಾಯಾ ಸರ್ಗಕರೀ ಪುನಃ ॥೧೨॥

ನಿಸರ್ಗಮುಕ್ತಾ ಭಕ್ತಾನಾಂ ತ್ರಿವರ್ಗಫಲದಾಯಿನೀ ।
ನಿಸು(ಶು)ಂಭಸು(ಶು)ಂಭಸಂಹರ್ತ್ರೀ ಮಹಿಷಾಸುರಮರ್ದಿನೀ ॥೧೩॥

ತಾಮಸಾನಾಂ ತಮಃಪ್ರಾಪ್ತ್ಯೈ ಮಿಥ್ಯಾಜ್ಞಾನಪ್ರವರ್ತಿಕಾ ।
ತಮೋಭಿಮಾನಿನೀ ಪಾಯಾದ್ದುರ್ಗಾ ಸ್ವರ್ಗಾಪವರ್ಗದಾ ॥೧೪॥

ಇಮಂ ದುರ್ಗಾಸ್ತವಂ ಪುಣ್ಯಂ ವಾದಿರಾಜಯತೀರಿತಮ್ ।
ಪಠನ್ವಿಜಯತೇ ಶತ್ರೂನ್ಮೃತ್ಯುಂ ದುರ್ಗಾಣಿ ಚೋತ್ತರೇತ್ ॥೧೫॥

॥ ಇತಿ ಶ್ರೀಮದ್ವಾದಿರಾಜಪೂಜ್ಯಚರಣವಿರಚಿತಃ ದುಗಾಸ್ತವಃ ಸಂಪೂರ್ಣಃ ॥

೭. ಪರಿಶಿಷ್ಟ

ಶ್ರೀ ವಾದಿರಾಜರ ಮೇಲೆ ರಚಿಸಲ್ಪಟ್ಟ ಸ್ತುತಿಗಳು

ಶ್ರೀ ವಾದಿರಾಜಗುರುಭ್ಯೋ ನಮಃ

೧. ಅಣುವೃಂದಾವನಾಖ್ಯಾನಮ್

ಹಯಗ್ರೀವಂ ಚಿದಾನಂದವಿಗ್ರಹಂ ಸದನುಗ್ರಹಮ್ ।
ದಶಗ್ರೀವಚ್ಛಿದಂ ಶಾಪಾನ್ಮಣಿಗ್ರೀವವಿಮೋಚನಮ್ ॥ ೧ ॥

ಸ್ವನಾಮಗ್ರಹಣಾದೇವ ನಿರಸ್ತಗ್ರಹವಿಗ್ರಹಮ್ ।
ವೃಂದಾವನಗತಂ ವಂದೇ ಬ್ರಹ್ಮರುದ್ರೇಂದ್ರವಂದಿತಮ್ ॥ ೨ ॥

ಯೋ ಮಾಂ ದೇವಂ ವಿಜಾನಾತಿ ಋಜುಸ್ಥಂ ಪುಣ್ಯಕೃನ್ನರಃ ।
ಸ ಯಾತಿ ನಿಲಯಂ ಪುಣ್ಯಂ ಯದ್ಗತ್ವಾನ ನಿವರ್ತತೇ ॥ ೩ ॥

ವಿಮಾನಂ ದಿವ್ಯಮಾನಂ ಚ ದೀಪ್ಯಮಾನಂ ಸದಾಯನಮ್ ।
ವೃಂದಾವನೋಪರಿಗತಂ ಪೂಜಯಂತು ಸದಾ ಮಮ ॥ ೪ ॥

ಪಂಚವೃಂದಾವನೇ ಪುಣ್ಯೇ ಪಂಚರೂಪಾತ್ಮಕೋ ಹರಿಃ ।
ಪಂಚೀಕೃತ್ಯ ಸ್ವರೂಪಾಣಿ ನಿತ್ಯಂ ಸನ್ನಿಹಿತಃ ಸ್ವಯಮ್ ॥ ೫ ॥

ಅಹಂ ಬ್ರಹ್ಮಾಚ ವಾಯುಶ್ಚ ವಿಷ್ಣೂ ರುದ್ರಶ್ಚ ಪಂಚಮಃ ।
ರಮಾಮ ನಿತ್ಯಮೇವಾತ್ರ ಶ್ವೇತದ್ವೀಪೇ ಯಥಾ ವಯಮ್ ॥ ೬ ॥

ಅಹಂ ಸದಾ ದೇವಸಭಾಸಭಾಜಿತಃ ಸುಭಾಸ್ವರೈರ್ದಿವ್ಯವಿಭೂಷಣೈರ್ಯುತಃ
ಅಹಂಸಮಾನ್ಯೈಃ ಸುರಮಾನಮಾನಿತಃ ಸುಮಾನಯುಕ್ತೈಃ
ಸುಮನೋಭಿರಂಜಸಾ ॥ ೭ ॥

ಗುರುಮಖಿಲಗುಣಜ್ಞಂ ಸದ್ಗುಣೈಕಾಧಿವಾಸಂ ಶಮದಮಪರಿನಿಷ್ಠಂ
ಸತ್ತ್ವನಿಷ್ಠಂ ವರಿಷ್ಠಮ್ ।

ಸಕಲಸುಜನಶಿಷ್ಟಂ ನಿತ್ಯನಿರ್ಧೂತಕಷ್ಟಂ ಹಯಮುಖಪದನಿಷ್ಠಂ
ಮಾಂ ಭಜಂತು ಪ್ರಪನ್ನಾಃ ॥ ೮ ॥

ತೀರ್ಥಾನಾಮುತ್ತಮಂ ತೀರ್ಥಂ ವನಾನಾಮುತ್ತಮಂ ವನಮ್ ।
ಕ್ಷೇತ್ರಾಣಾಮುತ್ತಮಂ ಕ್ಷೇತ್ರಂ ಮಮ ವೃಂದಾವನಂ ದ್ವಿಜ ॥ ೯ ॥

ತಸ್ಮಾದ್ವೃಂದಾವನಮಿದಂ ಸರ್ವಾಭೀಷ್ಟಪ್ರದಂ ಸತಾಮ್ ।
ಪಂಚವೃಂದಾವನೇ ಪುಣ್ಯೇ ಸುಪರ್ವಾಣಶ್ಚ ಸರ್ವದಾ ॥ ೧೦ ॥

ವಸಂತಿ ಪುಣ್ಯಕರ್ಮಾಣೋ ವಿಶೇಷಾತ್ತೇ ಚ ಪರ್ವಸು ।
ಪಂಚಮ್ಯಾಂ ಚ ತಿಥೌ ನಿತ್ಯಂ ಪಂಚಪರ್ವಸು ಪೂಜಯೇತ್ ॥ ೧೧ ॥

ದೂಪೈರ್ದೀಪೈಸ್ತಥಾಮಾಲ್ಯೈರ್ಗಂಧೈರ್ದೂರ್ಕ್ಷತಾದಿಭಿಃ ।
ಪಂಚಭಕ್ಷ ಸಮಾಯುಕ್ತಂ ಪಂಚಾಮೃತಸಮನ್ವಿತಮ್ ॥ ೧೨ ॥

ಪಂಚಖರ್ಜೂರರಸಯುಕ್ತಂ ನೈವೇದ್ಯಂ ವಿನಿವೇದಯೇತ್ ।
ಏವಂ ಸಂಪೂಜ್ಯಮಾನೋಽಹಂ ದದ್ಯಾಂ ವರಮನುತ್ತಮಮ್ ॥ ೧೩ ॥

ತಸ್ಮಾದ್ವೃಂದಾವನೇ ಪುಣ್ಯೇ ಪಂಚಪರ್ವಸುಪೂಜನಮ್ ।
ದರ್ಶನಂ ಸುಜನಾನಾಂ ತು ಸರ್ವಾಘೌಘವಿನಾಶನಮ್ ॥ ೧೪ ॥

ವಾದಿರಾಜಾಖ್ಯಯತಿನಾ ಬ್ರಾಹ್ಮಣಸ್ವಾಪ್ನಮೂರ್ತಿನಾ ।
ಕೃತಂ ವೃಂದಾವನಾಖ್ಯಾನಂ ಪಠತಾಂ ಸಂಪದಾಂಪದಮ್ ॥ ೧೫ ॥

ವೇದನಿಧ್ಯಾಖ್ಯಯತಿನಾ ವಾದಿರಾಜೇನ ಚೋದಿತಮ್ ।
ಸ್ವಾಪ್ನಂ ವೃಂದಾವನಾಖ್ಯಾನಂ ಲಿಖಿತಂ ಪ್ರೀತಯೇ ಗುರೋಃ ॥ ೧೬ ॥

ಮಾತಾ ರಾಜಾ ಮತ್ಪಿತಾ ವಾದಿರಾಜೋ ಭ್ರಾತಾ ರಾಜಾ ಮತ್ಸಖಾ ವಾದಿರಾಜಃ ।
ಸರ್ವಸ್ವಂ ಮೇ ವಾದಿರಾಜೋ ದಯಾಲುರ್ನಾನ್ಯದ್ದೈವಂ ನೈವ ಜಾನೇ ನ ಜಾನೇ ॥
॥ ೧೭ ॥

ಹರಿಭಕ್ತಿದಯಾಂಭೋಧಿ ತರಲಕ್ರೀಡನೋತ್ಸುಕಾಃ ।
ಗುರುವೋ ವಾದಿರಾಜಾರ್ಯಾಃ ಕರುಣಾಂ ವಿತರಂತು ಮೇ ॥ ೧೮ ॥

ಇತ್ಯಣುವೃಂದಾವನಾಖ್ಯಾನಂ ಸಂಪೂರ್ಣಮ್

೨. ಶ್ರೀ ವೇದವೇದ್ಯತೀರ್ಥಕೃತ ಶ್ರೀ ವಾದಿರಾಜ ಸ್ತುತಿಃ

ಚಂದ್ರಾರ್ಕ ಕೋಟಿ ಲಾವಣ್ಯ ಲಕ್ಷ್ಮೀಶ ಕರುಣಾಲಯಂ ।
ವಂದಿತಾಂಘ್ರಿಯುಗಂ ಸದ್ಭಿರ್ವಾದಿರಾಜಂ ನತೋಽಸ್ಮ್ಯಹಂ ॥ ೧

ಇಂದ್ರಾದಿದೇವತಾರಾಧ್ಯ ಮಧ್ವವಂಶಜಮಾದರಾತ್ ।
ವಂದಿತಾಂಘ್ರಿಯುಗಂ ಸದ್ಭಿರ್ವಾದಿರಾಜಂ ನತೋಽಸ್ಮ್ಯಹಂ ॥ ೨

ಶ್ರೀಹಯಾಸ್ಯಾರ್ಚನರತಂ ಸಾಧುವೇದಾರ್ಥಬೋಧಕಂ ।
ವಂದಿತಾಂಘ್ರಿಯುಗಂ ಸದ್ಭಿರ್ವಾದಿರಾಜಂ ನತೋಽಸ್ಮ್ಯಹಂ ॥ ೩

ದುರ್ವಾದಿಮತ್ತ ವಿಧ್ವಂಸಕಂಠೀರವಮಹರ್ನಿಶಂ ।
ವಂದಿತಾಂಘ್ರಿಯುಗಂ ಸದ್ಭಿರ್ವಾದಿರಾಜಂ ನತೋಽಸ್ಮ್ಯಹಂ ॥ ೪

ಸರ್ವಕಾಮಪ್ರದಂ ಶ್ರೀಮದ್ದ್ವಿಜೇಂದ್ರಕುಲಶೇಖರಂ ।
ವಂದಿತಾಂಘ್ರಿಯುಗಂ ಸದ್ಭಿರ್ವಾದಿರಾಜಂ ನತೋಽಸ್ಮ್ಯಹಂ ॥ ೫

ಮಂತ್ರಕ್ರಮ ವಿಚಾರಜ್ಞಂ ತಂತ್ರಶಾಸ್ತ್ರ ಪ್ರವರ್ತಕಂ ।
ವಂದಿತಾಂಘ್ರಿಯುಗಂ ಸದ್ಭಿರ್ವಾದಿರಾಜಂ ನತೋಽಸ್ಮ್ಯಹಂ ॥ ೬

ಜ್ಞಾನಾದಿಗುಣಸಂಪನ್ನಮಶೇಷಾಘಹರಂ ವಿಭುಂ ।
ವಂದಿತಾಂಘ್ರಿಯುಗಂ ಸದ್ಭಿರ್ವಾದಿರಾಜಂ ನತೋಽಸ್ಮ್ಯಹಂ ॥ ೭

ಪ್ರದಕ್ಷಿಣೀಕೃತಭುವಂ ಸ್ವಕ್ಷಮಾಲಾಧರಂ ವಿಭುಂ ।
ವಂದಿತಾಂಘ್ರಿಯುಗಂ ಸದ್ಭಿರ್ವಾದಿರಾಜಂ ನತೋಽಸ್ಮ್ಯಹಂ ॥ ೮

ವಿಚಿತ್ರಮುಕುಟೋಪೇತಮಚಿಂತ್ಯಾದ್ಭುತದರ್ಶನಂ ।
ವಂದಿತಾಂಘ್ರಿಯುಗಂ ಸದ್ಭಿರ್ವಾದಿರಾಜಂ ನತೋಽಸ್ಮ್ಯಹಂ ॥ ೯

ಪುರತೋ ವಾಸುದೇವಸ್ಯ ನಿವಸಂತಂ ಮಹಾದ್ಯುತಿಂ ।
ವಂದಿತಾಂಘ್ರೀಯುಗಂ ಸದ್ಭಿರ್ವಾದಿರಾಜಂ ನತೋಽಸ್ಮ್ಯಹಂ ॥ ೧೦

ಇತಿ ಶ್ರೀ ವೇದವೇದ್ಯತೀರ್ಥಕೃತ ಶ್ರೀ ವಾದಿರಾಜ ಸ್ತುತಿಃ

೩. ಶ್ರೀ ವಾದಿರಾಜಾಷ್ಟಕಂ

ವಂದೇ ಶ್ರೀವಾದಿರಾಜಾರ್ಯಂ ಕುಂದೇಂದುಸ್ಮಿತ ಸನ್ಮುಖಮ್ ।
ಸಂದೇಹಧ್ವಾಂತತರಣಿಂ ತಂ ದೇವೇಷ್ಟಶಿಖಾಮಣಿಮ್ ॥ ೧

ವಾದಿರಾಜಗುರುಂ ಮಾಯಾವಾದಿ ಮತ್ತೇಭಭಿದ್ಧರಿಮ್ ।
ಸ್ವಾದಿಕ್ಷೇತ್ರನಿವಾಸಂ ಸತ್ವಾದಿಮಿಷ್ಟಪ್ರದಂ ಭಜೇ ॥ ೨

ಭಜಕಾಭೀಷ್ಟದಾತಾರಂ ದ್ವಿಜವ್ರಜ ನಿಷೇವಿತಮ್ ।
ಸುಜನೇಡ್ಯಂ ವಾದಿರಾಜಮೃಜು ಯೋಗಿನಮಾಶ್ರಯೇ ॥ ೩

ಸಂಸಾರಾಂಭೋಧಿತರಣಿಂ ಕಂಸಾರೀಷ್ಟಶಿಖಾಮಣಿಮ್ ।
ಹಂಸಾವಲಿಮಣಿಂ ವಾದಿರಾಜಚಿಂತಾಮಣಿಂ ಭಜೇ ॥ ೪

ಸಚ್ಛಾಖಂ ಸುಮನೋಲ್ಲಾಸಂ ಸುಚ್ಛಾಯಂ ಸದ್ವಿಜಾಶ್ರಿತಮ್ ।
ಸ್ವಚ್ಛಾಂತರಂ ವಾದಿರಾಜಂ ಸ್ವಿಚ್ಛಾಕಲ್ಪತರುಂ ಭಜೇ ॥ ೫

ಪದ್ಮಾನನಂ ಶುಭಮಹಾಪದ್ಮಾಯತ ಸುಲೋಚನಂ ।
ಮುಕುಂದಮಾನಸಂ ವಾದಿರಾಜಾಖ್ಯನಿಧಿಮಾಶ್ರಯೇ ॥ ೬

ಶಂಖಗ್ರೀವಂ ಕುಂದರದಂ ಕರುಣಾಮಕರಾಲಯಮ್ ।
ಸತ್ಕಚ್ಛಪಂ ವಾದಿರಾಜವರಂ ನವನಿಧಿಂ ಭಜೇ ॥ ೭

ನೀಲಕೇಶೋಲ್ಲಸತ್ಫಾಲಂ ಶ್ರೀಲರೂಪಶ್ರಿತೇಷ್ಟದಮ್ ।
ಶ್ರೀಲಸದ್ವಾದಿರಾಜೋರು ಶೀಲಮಿಷ್ಟಗುರುಂ ಭಜೇ ॥ ೮

ಶ್ರೀಮದ್ವಿಷ್ಣುಪದಾದ್ರೌ ಸನ್ಮಹಾರಣ್ಯಾಶ್ರಿತೇಃ ಸದಾ ।
ಖೇಲಂತಂ ಮಾಯಿಕರಿಭಿರ್ವಾದಿರಾಜ ಹರಿಂ ಭಜೇ ॥ ೯

ಶ್ರೀಮಜ್ಜೀವನಗೀವಂಶಜೇನ ಸದ್ಭಕ್ತಿಪೂರ್ವಕಮ್ ।
ಮನ್ನಾರಿ ಕೃಷ್ಣ ಸುಧಿಯಾ ವಾದಿರಾಜಸ್ತವಾಷ್ಟಕಮ್ ॥ ೧೦

ತ್ರಿಸಂಧ್ಯಂ ಯಃ ಪಠೇನ್ಮರ್ತ್ಯಃ ಸ ಸರ್ವಾಭೀಷ್ಟಮಾಪ್ನುಯಾತ್ ।
ಆಧಿವ್ಯಾಧಿವಿನಿರ್ಮುಕ್ತಃ ಸರ್ವದಾ ಚ ಸುಖೀ ಭವೇತ್ ॥ ೧೧

ಇತಿ ಶ್ರೀವಾದಿರಾಜಾಷ್ಟಕಂ ಸಂಪೂರ್ಣಂ

೪. ಶ್ರೀ ವಾದಿರಾಜ ಕವಚಂ

ಭ್ರಾಜಲ್ಲಲಾಟೇ ಲಸದೂರ್ಧ್ವಪುಂಡ್ರಂ ಸ್ವಂಗಾರರೇಖಾಂಕಿತಮಧ್ಯದೇಶಮ್ ।
ಆಕಂಠಮಾನಾಭಿಸುಲಂಬಮಾನಾಂ ಮಾಲಾಂ ತುಲಸ್ಯಕ್ಷಮಯೀಂ ದಧಾನಂ॥ ೧

ಶ್ರೀಮುದ್ರಯಾ ಚಿಹ್ನಿತಸರ್ವಗಾತ್ರಂ ಕರೋಲ್ಲಸಚ್ಛ್ರೀಜಪ ಮಾಲಿಕಂ ಪರಂ ।
ಹೃತ್ಪುಂಡರೀಕಸ್ಥ ಶುಭಾಂಬರಸ್ಥ ಶ್ರೀವಾಜಿವಕ್ತ್ರಂ ಸತತಂ ಸ್ಮರಂತಂ ॥ ೨

ಜಿತಾರಿಷಡ್ವರ್ಗ ಹೃತಾಘರಾಶಿಂ ಕೂರ್ಮಾಸನಸ್ಥಂ ಸುತಪಃ ಪ್ರಭಾವಂ ।
ಶ್ರೀಮದ್ಧಯಗ್ರೀವದಯೈಕ ಪಾತ್ರಂ ಶಮಾದಿಸಂಪತ್ತಿಯುತಂ ವಿರಾಗಿಣಂ ॥ ೩

ಸಚ್ಛಾಸ್ತ್ರನಿಷ್ಠಂ ಭುವಿ ರಾಜಮಾನಂ
ವಾದೀಭಸಿಂಹಂ ಸುಮತಪ್ರತಿಷ್ಠಂ ।
ಏವಂ ಮುನೀಂದ್ರಂ ಕವಿ ವಾದಿರಾಜಂ
ಧ್ಯಾತ್ವಾ ತದೀಯಂ ಕವಚಂ ಪಠೇತ್ ಸುಧೀಃ ೪

ಗುರುಮುಖಿಲಗುಣಜ್ಞಂ ಸದ್ಗುಣೈಕಾಧಿವಾಸಂ।
ಶಮದಮ ಪರಿನಿಷ್ಠಂ ಸತ್ವನಿಷ್ಠಂ ವರಿಷ್ಠಂ ।
ಸಕಲಸುಜಶಿಷ್ಟಂ ನಿತ್ಯನಿರ್ಧೂತಕಷ್ಟಂ
ಹಯಮುಖಪದನಿಷ್ಠಂ ಮಾಂ ಭಜಂತು ಪ್ರಪನ್ನಾಃ ॥ ೫

ವಾದಿರಾಜಃ ಶಿರಃ ಪಾತು ಭಕ್ತತ್ರಾಣಕೃತೋದ್ಭವಃ ।
ವಾದಿರಾಜಃ ಪಾತು ಫಾಲಂ ಜಗದ್ವಂದ್ಯಪದಾಂಬುಜಃ ॥ ೬

ವಾದಿರಾಜಃ ಪಾತು ನೇತ್ರೇ ದೃಷ್ಟಭೂತೀರ್ಥಸಾಗರಃ ।
ವಾದಿರಾಜಃ ಶ್ರುತೀ ಪಾತು ಶ್ರುತ್ಯರ್ಥಕೃತಚಾರುಧೀಃ ॥ ೭

ವಾದಿರಾಜಃ ಪಾತು ನಾಸಾಂ ಪ್ರಾಣಾಯಾಮ ಪರಾಯಣಃ ।
ವಾದಿರಾಜಃ ಪಾತು ವಕ್ತ್ರಂ ಹಯಗ್ರೀವಸ್ತುತಿಪ್ರಿಯಃ ॥ ೮

ವಾದಿರಾಜಃ ಪಾತ್ವಧರಮಧರೀಕೃತ ದುರ್ಮುಖಃ ।
ವಾದಿರಾಜಃ ಪಾತು ಕಂಠಂ ಚಿತ್ರ ಸಂಗೀತ ಸುಸ್ವನಃ ॥ ೯

ವಾದಿರಾಜಃ ಪಾತು ಭುಜೌ ತಪ್ತಾಯುಧಲಸದ್ಭುಜಃ ।
ವಾದಿರಾಜಃ ಪಾತು ಕರೌ ವಾಜಿವಕ್ತ್ರಾಂಘ್ರೀಪೂಜಕಃ ॥ ೧೦

ವಾದಿರಾಜಃ ಪಾತು ಚಿತ್ತಂ ಪೂರ್ಣವಿದ್ಯಾಹೃದಂಬುಜಃ ।
ವಾದಿರಾಜಃ ಪಾತು ನಾಭಿಂ ಪದ್ಮನಾಭಸ್ತುತಿಪ್ರಿಯಃ ॥ ೧೧

ವಾದಿರಾಜಃ ಪಾತು ಕಟಿಂ ದಿವ್ಯಸೂತ್ರಲಸತ್ಕಟಿಃ ।
ವಾದಿರಾಜಃ ಪಾತು ಚೋರೂ ಮೋಚಾಯುಗಸಮೋರುಭಾಃ॥ ೧೨

ವಾದಿರಾಜಃ ಪಾತು ಜಂಘೇ ಹಯಾನನನತಿಪ್ರಿಯಃ ।
ವಾದಿರಾಜಃ ಪಾತು ಪಾದೌ ಕೃತಭೂಸತ್ಪ್ರದಕ್ಷಿಣಃ ॥ ೧೩

ತಮೋಮಯ ತನುಃ ಶ್ರೀಮಾನ್ ಪಾತು ಮೇ ಸರ್ವತಸ್ತನುಮ್ ।
ವಾದೀಂದ್ರಃ ಪೂರ್ವತಃ ಪಾತು ದಿವ್ಯದಂಡಸ್ತು ದಕ್ಷಿಣೇ ॥ ೧೪

ಯೋಗೀಂದ್ರಃ ಪಶ್ಚಿಮೇ ಪಾತು ವಾಮೇ ಕವಿಕುಲಾಗ್ರಣೀಃ ।
ಆಗ್ನೇಯ್ಯಾಂ ಭೂಸುರಃ ಪಾತು ನೈಋತ್ಯಾಂ ಮಂಗಲಪ್ರದಃ ॥ ೧೫

ಹನೂಮತ್ಕಿಂಕರಃ ಪಾತು ವಾಯುವ್ಯಾಂ ಭಕ್ತವತ್ಸಲಃ ।
ಈಶಾನ್ಯಾಂ ಪಾತು ಶುಭದಃ ಸರ್ವಾಶುಭ ನಿವರ್ತಕಃ ॥ ೧೬

ವಾದಿರಾಜಃ ಪಾತು ಚೋರ್ಧ್ವಮೂರ್ಧ್ವರೇತೋಗ್ರಣೀಃ ಸದಾ ।
ವಾದಿರಾಜುಸ್ತ್ವಧಃ ಪಾತು ತಮೋದ್ವಾರನಿವರ್ತಕಃ ॥ ೧೭

ಓಂ (ಶ್ರೀ) ನಮೋ ವಾದಿರಾಜಾಯ ಧೀರ್ಘದಾರಿದ್ರ್ಯಘಾತಿನೇ ।
ರಾಜಭೋಗ ಪ್ರದಾತ್ರೇ ಚ ನಮೋಸ್ತು ಜಯದಾಯಿನೇ ॥ ೧೮

ಮೂಕಮಾವಿಶ್ಯ ಮಾಂ ಸಾಕ್ಷಾದ್ವಾದಿರಾಜ ಗುರೂದಿತಮ್ ।
ಯ ಏತತ್ಪಠತೇ ಭಕ್ತ್ಯಾ ಬಂಧ ಪಾಶಾದ್ವಿಮುಚ್ಯತೇ ॥ ೧೯

ಶ್ರೀವಾದಿರಾಜಕವಚಾದಸುತಾ ಸಸುತಾ ಭವೇತ್ ।
ನಾರೀ ನರೋಽಥ ಶೂದ್ರೋ ವಾ ಸರ್ವದೈವಂ ಪಠೇದ್ಯದಿ ॥ ೨೦

ಧರ್ಮಾರ್ಥಕಾಮ ಮೋಕ್ಷಾದೀನ್ ಲಭತೇ ನಾತ್ರ ಸಂಶಯಃ
ಶ್ರೀವಾದಿರಾಜಕವಚಂ ಭಕ್ತಿಯುಕ್ತಃ ಪಠನ್ ಧ್ರುವಂ ॥ ೨೧

ಮನಸಾ ಚಿಂತಿತಂ ಹ್ಯರ್ಥಂ ಪ್ರಾಪ್ನೋತಿ ಸುಖಸಂತತಿಂ ।
ಭವೇತ್ ಸರ್ವತ್ರ ವಿಜಯೀ ವಿದ್ವಾನ್ ದುರ್ವಾದಿದರ್ಪಹಾ ॥ ೨೨

ಸರ್ಪವೃಶ್ಚಿಕ ಸಂಭೂತ ವಿಷವಿದ್ರಾವ ಕಾರಣಂ ।
ಮೂಕೋ ಹ್ಯಮೂಕತಾಂ ಯಾತಿ ಮೂರ್ಖೋವಿದ್ವತ್ತ್ವಮಾಪ್ನುಯಾತ್ ॥ ೨೩

ಕುಷ್ಠೀ ಶಿಷ್ಟತ್ವಮಾಪ್ನೋತಿ ರೋಗೀ ರೋಗ ವಿಯೋಗಮಾನ್ ।
ಕವಚಸ್ಯಾಸ್ಯ ಪಠನಾದ್ಭಕ್ತಿಯುಕ್ತೇನ ಚೇತಸಾ ॥ ೨೪

ಯ ಏತತ್ ಕವಚಂ ವಿದ್ವಾನ್ ಲಿಖಿತ್ವಾ ಪೂಜಯೇದ್ಯದಿ ।
ಭೂರ್ಜೇವಾ ತಾಲಪತ್ರೇ ವಾ ಸರ್ವಸಿದ್ಧಿಮವಾಪ್ನುಯಾತ್ ॥ ೨೫

ಗಂಗಾತೀರನಿವಾಸಿನಾ ಕೃತಮಿದಂ ನಾರಾಯಣಾಖ್ಯಾಯುಜಾ
ದಿವ್ಯಂ ಸದ್ವರವಾದಿರಾಜಕವಚಂ ತತ್ ಸರ್ವದಾಯಃ ಪಠೇತ್ ।
ಸದ್ಭಕ್ತ್ಯಾ ಸತತಂ ಸುಶಾಸ್ತ್ರಸುರತಿಂ ಭಕ್ತಿಂ ರಮೇಶೇಽನಿಶಂ
ಭುಕ್ತಿಂ ಚಾಪಿ ಪರತ್ರ ಮುಕ್ತಿಮಿಹ ಸದ್ವಿದ್ಯಾಂ ಯಶಃ ಪ್ರಾಪ್ನುಯಾತ್ ॥ ೨೬

ವಿಮಲಸಕಲಗಾತ್ರಂ ಶುದ್ಧಕೈವಲ್ಯಪಾತ್ರಂ
ಶುಭಗುಣಗಣಸಾಂದ್ರಂ ಭೂಮಿಭೂಷಾಮಣೀಂದ್ರಂ ।
ವಿದಿತಸಕಲಶಾಸ್ತ್ರಂ ಸಾಧು ಚಿತ್ತಂ ಯತೀಂದ್ರಂ
ತುರಗವದನಭಾಜಂ ನೌಮಿ ಸದ್ವಾದಿರಾಜಂ ॥ ೨೭

ಮಾಯೀಭ ವೈರಿಣೇ ಮಾಧ್ವರಾದ್ಧಾಂತವನಚಾರಿಣೇ ।
ವಚೋ ನಖರಿಣೇ ವಾದಿರಾಜ ಕೇಸರಿಣೇ ನಮಃ ॥ ೨೮

ಕಾಮಧೇನು ರ್ಯಥಾಪೂರ್ವಂ ಸರ್ವಾಭೀಷ್ಟಫಲಪ್ರದಾ ।
ತಥಾ ಕಲೌ ವಾದಿರಾಜಃ ಶ್ರೀಪಾದೋಽಭೀಷ್ಟದಃ ಸತಾಂ ॥ ೨೯

ತಪೋ ವಿದ್ಯಾ ವಿರಕ್ತ್ಯಾದಿ ಸದ್ಗುಣೌಘಾಕರಾನಹಂ ।
ವಾದಿರಾಜ ಗುರೂನ್ ವಂದೇ ಹಯಗ್ರೀವ ದಯಾಶ್ರಯಾನ್॥ ೩೦

ಹಯಗ್ರೀವ ಪದಾಂಭೋಜ ಲೋಲ ಭೃಂಗಂ ಸತಾಂ ಗುರುಂ ।
ನಮಾಮಿ ಶ್ರೀ ವಾದಿರಾಜಂ ಜ್ಞಾನವೈರಾಗ್ಯ ಸಂಪದಂ ॥ ೩೧

ಕುಷ್ಠಾಪಸ್ಮಾರಲೂತಾದಿ ಬಾಲಸ್ಫೋಟಾದಿಕಾನ್ ಬಹೂನ್ ।
ಮೃತ್ತಿಕಾ ನಾಶಯತ್ಯೇವ ವೃಂದಾವನಗತಾ ಮುನೇಃ ॥ ೩೨

ವಾದಿರಾಜಗುರೋಃ ಪಾದಸಲಿಲಸ್ಯ ಚ ಪಾನತಃ ।
ಅಪಮೃತ್ಯಂ ಜಯತ್ಯಾಶು ತಥಾ ಸೌಖ್ಯಮವಾಪ್ನುಯಾತ್ ॥ ೩೩

॥ ಇತಿ ಶ್ರೀವಾದಿರಾಜಕವಚಂ ಸಂಪೂರ್ಣಂ ॥

೫. ಶ್ರೀ ವಾದಿರಾಜಸ್ತೋತ್ರಮ್

ಉತ್ತರಾದಿಮಠಾಧೀಶರಾದ ಶ್ರೀಸತ್ಯಧರ್ಮತೀರ್ಥರು ರಚಿಸಿದ ಸ್ತೋತ್ರವಿದು. ಸೋದಾಕ್ಷೇತ್ರದ ರಮ್ಯತಾಣವನ್ನು, ಅಲ್ಲಿ ತನಗಾಗುವ ದಿವ್ಯ ಅನುಭವವನ್ನು ಸ್ತುತಿಕಾರರು ವರ್ಣಿಸುತ್ತಾರೆ. ಶ್ರೀವಾದಿರಾಜರ ಅಗಾಧಮಹಿಮೆ, ದ್ವೈತವಾಙ್ಮಯ ಕೊಡುಗೆ ಮೊದಲಾದ ಸಾಧನೆಗಳ ಸಂಕ್ಷಿಪ್ತಪರಿಚಯವಲ್ಲದೇ, ಸ್ತುತಿಕಾರರ ರಚನಾಕೌಶಲ್ಯ ಈ ಸ್ತೋತ್ರದಲ್ಲಿ ಕಾಣುವ ಗಮನಾರ್ಹ ಸಂಗತಿ. ಇಂತಹ ಸ್ತೋತ್ರಪಠಣದಿಂದ ಶ್ರೀವಾದಿರಾಜರ ಅನುಗ್ರಹವಾಗುವುದೆಂದು ಹೇಳಿದ್ದಾರೆ.

ಕದಾ ಪುಣ್ಯಾರಣ್ಯೇ ಶುಭಧವಲಗಂಗಾಪರಿಸರೇ
ಚರನ್ ಸೂರೇಃ ಸೇವಾಜನಿತಪರಮಾನಂದಭರಿತಃ ।
ಅಯಿ ಸಂವಿತ್ಸ್ವಾಮಿನ್ ಹಯವದನ ವಾದೀಶವರದ
ಪ್ರಸೀದೇತಿ ಕ್ರೋಶನ್ನಿಮಿಷಮಿವ ನೇಷ್ಯಾಮಿ ದಿವಸಾನ್ ॥ ೧ ॥

ಶ್ರೀಮದ್ವಾಗೀಶಯೋಗೀ ಶುಭವಿಶದಮನೀಷೀಯಭಾಷ್ಯಾದಿಜಾತಂ
ಜಾತಂ ಜಾತೇತರಂ ಚಾಗಮಮಗಮದ್ಧೃತೌ ವಿಸ್ಮಿತಃ ಪ್ರೇಕ್ಷಯಸ್ಮಿನ್ ।
ಸರ್ವಂ ಸರ್ವಂ ಸಹಾಯಾಮಸಮಸಮ ಇತಿ ಶ್ರೀಮತಾಂ ಸಾರ್ವಭೌಮೇ
ಭೌಮೇಹಾಹಾನಿದಾರ್ಚಾರ್ಚನಕರಮಕರೋತ್ಸಂಪ್ರಸೀದೇತ್ಸವಾದೀಟ್
॥ ೨ ॥

ನಾನಾನೋನೋಹನಾನೋತ್ಪರಿಚಿತವಚಸಾಽಪಾತ್ತಮೂಲೇನ ಮೂಲಾಂ
ನಾನಾನಾನನ್ಯಭಾವಂ ಗದತಿ ಜಗತಿ ನೋ ಚೇದ್ಭವಾನ್ನಪ್ರಭಾವಾತ್ ।
ಸತ್ಯಂ ಸತ್ಯಂ ಭಿದಾದಿಶ್ರುತಿರತುಲಮತೇರ್ಯುಕ್ತಿಯುಕ್ತಾವಕಾಶಂ
ಶಂಕಾಯಾಽನಾದ್ಯದದ್ಯಾದಿತಿ ಶಶಪಥಾ ವಾದಿರಾಡ್ಬೋಧಯೇನ್ಮಾಂ
॥ ೩ ॥

ಪೂರ್ವಂ ಪೂರ್ವಂ ಚಕಾನಾಂ ಭವ ಶಿವ ಹರ ಹೇರುದ್ರ ಹೇರಂಬ
ಪಾಹೀತ್ಯಾಹೂತಪ್ರೇತನಾಥ ಪ್ರಮುಖಮುಖಭುಜಾಭೂಭುಜಾಂ ಯಾ ಭುಜಾಽನ್ಯಾ ।
ಸಾ ಸೋದಾಗಾಧಬೋಧಾನುಚರವರ ತವಾವಾಸತೋ ವಾಸುದೇವ
ವ್ಯಾಸಾಖ್ಯಾಸ್ಯೇತಿ ಗರ್ಜದ್ವಿಜಜನಮಹಿತಾ ತಚ್ಚರಿತ್ರಂ ವಿಚಿತ್ರಮ್ ॥ ೪ ॥

ಮಸ್ತೇ ನ್ಯಸ್ತೇಂದುರೀಶಸ್ಸುರಸರಿತಿ ರತೀಶಾನುಗಾತ್ಸಾನುರಾಗಾ
ದಾಗಾದಾಗಾರತೋಽಗಾದ್ಧರಿಚರಣದೃಗಿಚ್ಛಾಫಲಾದ್ಯಾ ಪ್ರಯಾತಾ ।
ಚಕ್ರೀ ಸ ತ್ರಿಕ್ರಮೋತೋನುಮತಮನುಮತಾಪೂಜನೇನ ಸ್ವಜಾಯಾ
ಸಂಬದ್ಧಾಯಸ್ಯ ಬದ್ಧೋವಸದವತು ಸದಾ ದಾಸದಾಸಂ ಸ ವಾದೀಟ್
॥ ೫ ॥

ವ್ಯಾಸೋ ಯಸ್ಯಾಸಮಶ್ರೀರ್ಧುರಿ ಹರಿವದನಶ್ಚೋಪರಿಷ್ಟಾದ್ ಗರಿಷ್ಠಃ ।
ಪಿಂಗಾಕ್ಷಾಣಾಂ ಸದ್ಭಕ್ಷೇ ಕಿಲ ಜನಿ ವಿಜಯಾಪಶ್ಚಿಮಃ ಪಶ್ಚಿಮೇಭೂತ್ ॥
ವ್ಯಾಸಪ್ರೋಷ್ಮೋಪಸೇವ್ಯೇ ಸಕಲಸಕಲಯಾ ಭಾಸಮಾನೋಽಸಮಾನೋ ।
ಮೇದಿನ್ಯಾಂ ವಾದಿರಾಜೋ ಮಯಿ ದಯತು ದಯಾಯಾದಸಾಂ ನಾಯಕೋಽಲಮ್
॥ ೬ ॥

ನವರತ್ನಾನ್ವಯೋತ್ಥೇನ ಪುಮುತ್ತಂಸೇನ ನಿರ್ಮಿತಾ ।
ಭಕ್ತ್ಯೈವ ಗುರುರಾಟ್ ಪ್ರೀತ್ಯೈ ಪಂಚಶ್ಲೋಕೀ ಭವತ್ವಿಯಮ್ ॥

॥ ಇತಿ ಶ್ರೀಸತ್ಯಧರ್ಮಸ್ವಾಮಿಭಿಃಕೃತಾ ಶ್ರೀವಾದಿರಾಜಸ್ತುತಿಃ ॥

೬. ಶ್ರೀವಾದೀಭಸಿಂಹಸ್ತೋತ್ರಮ್

ಶ್ರೀವಾದಿರಾಜರ ಅಗಾಧ ಮಹಿಮೆ ಇಲ್ಲಿ ವರ್ಣಿತವಾಗಿದೆ. ಇಲ್ಲಿರುವ ಒಂದೊಂದು ವಿಶೇಷಣದಿಂದ ಶ್ರೀವಾದಿರಾಜರ ಗುಣವಿಶೇಷಗಳನ್ನು ಇಲ್ಲಿ ಸ್ತುತಿಕಾರರು ಒಂದೆಡೆ ಕ್ರೋಢೀಕರಿಸಿದ್ದಾರೆ. ಪ್ರತಿ ಪಾದದ ಕೊನೆಯಲ್ಲಿ ಸಿಂಹಶಬ್ದವಿರುವುದು ಈ ಸ್ತೋತ್ರದ ಒಂದು ವೈಶಿಷ್ಟ್ಯ.

ಈ ಸ್ತೋತ್ರದ ರಚನಾಕಾರರು ಯಾರೆಂಬುದು ಇಲ್ಲಿ ಸ್ಪಷ್ಟವಾಗಿಲ್ಲ. ಸಿಂಹದ ರೂಪಕದೊಂದಿಗೆ ಶ್ರೀವಾದಿರಾಜರನ್ನು ಬಹಳ ಮನೋಜ್ಞವಾಗಿ ಇಲ್ಲಿ ವರ್ಣಿಸಿದ್ದಾರೆ. ಮೊದಲು ಬ್ರಹ್ಮಸುರಾಸುರಾರ್ಚಿತವಾದ ವಿಷ್ಣುವನ್ನು ಸ್ತುತಿಸಿ, ಶ್ರೀವಾದಿರಾಜರನ್ನು ಸ್ತುತಿಸಲಾಗಿದೆ.

ಬ್ರಹ್ಮಸುರಾಸುರ ಪೂಜಿತ ವಿಷ್ಣುಂ
ದುರ್ಮುಖ ದೈತ್ಯ ವಿದಾರಣ ಕೃಷ್ಣಮ್ ।
ವಾದಿಮೃಗೇಂದ್ರ ಕರಾರ್ಚಿತ ಜಿಷ್ಣುಂ
ತ್ವಾಂ ಪ್ರಣಮಾಮಿ ಸದಾ ಜಹಿ ತೃಷ್ಣಾಮ್ ॥ ೧ ॥

ಶ್ರೀಪರಿ ಪ್ರೇರಿತ ಪಾಲಿತಸಿಂಹಂ
ಬ್ರಹ್ಮ ಸುರಾದಿ ಸುಮಾನಿತಸಿಂಹಮ್ ।
ಮಧ್ವಮುನೀ ಮತ ರಕ್ಷಿತಸಿಂಹಂ
ತ್ವಾಂ ಪ್ರಣಮಾಮಿ ಸದಾ ಗುರುಸಿಂಹಮ್ ॥ ೨ ॥

ರಾಮ ಸುಮಂಗಲಿ ಹರ್ಷಿತಸಿಂಹಂ
ವಾಕ್ಪತಿ ತೀರ್ಥ ಕರಾಂಬುಜಸಿಂಹಮ್ ।
ದಂಡಕಮಂಡಲು ಮಂಡಿತಸಿಂಹಂ
ತ್ವಾಂ ಪ್ರಣಮಾಮಿ ಸದಾ ಯತಿಸಿಂಹಮ್ ॥ ೩ ॥

ದುಷ್ಟ ಮಹೀಪತಿ ಶಿಕ್ಷಕಸಿಂಹಂ
ಭ್ರಷ್ಟ ನೃಪಗುರು ಶೋಷಿತಸಿಂಹಮ್ ।
ರಿಷ್ಟ ಮತಾಂಜನ ಭಾಸ್ಕರಸಿಂಹಂ
ತ್ವಾಂ ಪ್ರಣಮಾಮಿ ಸದಾ ಗುರುಸಿಂಹಮ್ ॥ ೪ ॥

ಭಕ್ತಜನಾರ್ತಿ ವಿಮೋಚಕಸಿಂಹಂ
ಶಿಷ್ಟಜನಾರ್ಚಿತ ಶೋಭಿತಸಿಂಹಮ್ ।
ಅಷ್ಟದರಿದ್ರ ವಿನಾಶಕಸಿಂಹಂ
ತ್ವಾಂ ಪ್ರಣಮಾಮಿ ಸದಾ ಯತಿಸಿಂಹಮ್ ॥ ೫ ॥

ಭಕ್ತಜನೇಪ್ಸಿತದಾಯಕಸಿಂಹಂ
ದೀನಜನ ಕರುಣಾಕರಸಿಂಹಮ್ ।
ದುರ್ಜನ ದರ್ಪ ವಿದಾರಣಸಿಂಹಂ
ತ್ವಾಂ ಪ್ರಣಮಾಮಿ ಸದಾ ಗುರುಸಿಂಹಮ್ ॥ ೬ ॥

ಯುಕ್ತಮಲ್ಲಿಕಾ ಸುಭಾಷಿತಸಿಂಹಂ
ರುಕ್ಮಿಣೀಶ ವಿಜಯೋತ್ಸವಸಿಂಹಮ್ ।
ಸ್ವಾಪ್ನಪಾದಂಕಿತ ಸತ್ಕೃತಿಸಿಂಹಂ
ತ್ವಾಂ ಪ್ರಣಮಾಮಿ ಸದಾ ಯತಿಸಿಂಹಮ್ ॥ ೭ ॥

ರಕ್ಷಿತ ಮೂಷಕ ಶೋಭಿತಪೀಠಂ
ವೇಷ್ಟಿತ ಸರ್ಪ ವಿಭಾಸಿತದಂಡಮ್ ।
ಸಿದ್ಧ ಸುರಾಸುರ ವಂದಿತಸಿಂಹಂ
ತ್ವಾಂ ಪ್ರಣಮಾಮಿ ಸದಾ ಗುರುಸಿಂಹಮ್ ॥ ೮ ॥

ವೇದ ಸುವೇದ್ಯ ಸುಭಾವಿತಸಿಂಹಂ
ಭೂತ ಸುತೋಷಿತ ಪೂಜಿತಸಿಂಹಮ್ ।
ಸಜ್ಜನ ಗಾಯನ ಸೇವಿತಸಿಂಹಮ್ ।
ತ್ವಾಂ ಪ್ರಣಮಾಮಿ ಸದಾ ಯತಿಸಿಂಹಮ್ ॥ ೯ ॥

ಯದ್ಗುರು ಮದ್ಗುರು ಸದ್ಗುರುಸಿಂಹಮ್
ಪಂಚವೃಂದಾವನ ಪಂಜರಸಿಂಹಮ್ ।
ಲಕ್ಷ್ಮೀ ಹಯಾಸ್ಯ ಕೃಪಾಶ್ರಿತಸಿಂಹಂ
ತ್ವಾಂ ಪ್ರಣಮಾಮಿ ಸದಾ ಗುರುಸಿಂಹಮ್ ॥ ೧೦ ॥

॥ ಇತಿ ಶ್ರೀವಾಧೀಭಸಿಂಹಸ್ತೋತ್ರಂ ಸಂಪೂರ್ಣಮ್ ॥

೭. ಶ್ರೀ ವಾದಿರಾಜಸ್ತೋತ್ರಮ್

ಶ್ರೀವಾದಿರಾಜಸ್ತೋತ್ರವು ಎಪ್ಪತ್ತೊಂಭತ್ತು ಶ್ಲೋಕಗಳ ಒಂದು ದೀರ್ಘಸ್ತೋತ್ರವಾಗಿದ್ದು, ಇದರಲ್ಲಿ ವಾದಿರಾಜರಿಗೆ ಸಂಬಂಧಿಸಿದ ಅನೇಕ ವಿಚಾರಗಳು ಅಡಕವಾಗಿವೆ. ಆರಂಭದಲ್ಲಿ ಭಕ್ತಾಭೀಷ್ಟಪ್ರದನಾದ, ಸರ್ವಗುಣಪೂರ್ಣನಾದ, ವೃಂದಾವನ ಸನ್ನಿಹಿತನಾದ ಶ್ರೀಹಯವದನನನ್ನು ವಂದಿಸಲಾಗಿದೆ. ಅನಂತರ ಹಯವದನನನ್ನು ಉಪಾಸಿಸುವ, ಭಕ್ತರಿಗೆ ಅಭಯಪ್ರದರಾದ ಭಕ್ತಿ–ಮುಕ್ತಿದಾತರೂ ಆದ, ಋಜುಗಳಾದ ಶ್ರೀವಾದಿರಾಜರನ್ನು ನಮಸ್ಕರಿಸಲಾಗಿದೆ. ಅನಂತರ ಶ್ರೀವಾದಿರಾಜರ ಪಂಚವೃಂದಾವನ, ಅವುಗಳ ಸುತ್ತಲೂ ಇರುವ ಸ್ಥಳವಿಶೇಷಗಳು,

ಪಂಚವೃಂದಾವನಗಳ ಮಹಿಮೆ, ಪಂಚವೃಂದಾವನಗಳಲ್ಲಿ ಭಗವತ್ ಸಾನ್ನಿಧ್ಯ, ಅವುಗಳ ಸೇವೆಯಿಂದ ಭಕ್ತನಿಗೆ ದೊರೆಯುವ ಮಹತ್ತರವಾದ ಲಾಭ ಈ ಎಲ್ಲ ವಿಚಾರಗಳು ವಿವರವಾಗಿ ಇಲ್ಲಿ ಕಥಿತವಾಗಿವೆ. ಇಂತಹ ಪರಮಪಾವನವಾದ ಪಂಚವೃಂದಾವನ ಸೇವೆಯಿಂದ ದೊರೆಯುವ ಅಖಂಡ ಫಲವನ್ನು ವರ್ಣಿಸಿ, ಶ್ರೀವಾದಿರಾಜರ ಮಹಿಮಾವಿಶೇಷವನ್ನು ವರ್ಣಿಸುವ ಈ ಸ್ತೋತ್ರದ ಫಲವನ್ನು ಅಂತ್ಯದಲ್ಲಿ ಹೇಳಿದೆ. ತ್ರಿಕಾಲಗಳಲ್ಲಿಯೂ ಭಕ್ತಿಯಿಂದ ಈ ಸ್ತೋತ್ರವನ್ನು ಪಠಿಸುವವನು ಬಂಧವಿಮುಕ್ತನಾಗಿ ಸಕಲ ಸುಖವನ್ನು ಪಡೆಯುತ್ತಾನೆ. ಸೂರ್ಯಶಿಷ್ಯ ಕೃಷ್ಣ ಎಂಬುವವರು ಶ್ರೀವಾದಿರಾಜರ ಅನುಗ್ರಹಕ್ಕಾಗಿ ಶ್ರೀವಾದಿರಾಜರ ಆಜ್ಞೆಯಂತೆ ಈ ಸ್ತೋತ್ರವನ್ನು ರಚಿಸಿದ್ದಾರೆ.

ಭಕ್ತಾಭೀಷ್ಟಪ್ರದಂ ವಂದ್ಯ ವಂದೇ ವೃಂದಾವನ ಸ್ಥಿತಮ್ ।
ವಾಜಿವಕ್ತ್ರಂ ಗುಣೋದಾರಂ ವಾದಿರಾಜ ಸುಪೂಜಿತಮ್ ॥ ೧ ॥

ಭಕ್ತಾಭಯಕರಂ ವಂದೇ ಭಕ್ತಿ ಮುಕ್ತಿ ಪ್ರದಾಯಕಮ್
ಋಜುಸ್ಥಂ ವಾದಿರಾಜಾಖ್ಯಂ ವಾಜಿವಕ್ತ್ರಾಂಘ್ರಿಸೇವಕಮ್ ॥ ೨ ॥

ವಿಷ್ಣುತೀರ್ಥಾರ್ಚನೆ ಸಕ್ತಂ ವಿಷ್ಣುತತ್ವ ಪ್ರಕಾಶನಮ್ ।
ಋಜುಸ್ಥಂ ವಾದಿರಾಜಾಖ್ಯಂ ವಾಜಿವಕ್ತ್ರಾಂಘ್ರಿ ಸೇವಕಮ್ ॥ ೩ ॥

ವೇದವ್ಯಾಸೋಪದೇಶ್ಯಂ ತ್ವಾಂ ವೇದವೇದ್ಯಾದಿಸೇವಿತಮ್ ।
ಋಜುಸ್ಥಂ ವಾದಿರಾಜಾಖ್ಯಂ ವಾಜಿವಕ್ತ್ರಾಂಘ್ರಿ ಸೇವಕಮ್ ॥ ೪ ॥

ರೌಪ್ಯಪೀಠ ಪುರಾಧೀಶಪೂಜಾಭಿವ್ಯಂಜಕಂ ಗುರುಮ್ ।
ಋಜುಸ್ಥಂ ವಾದಿರಾಜಾಖ್ಯಂ ವಾಜಿವಕ್ತ್ರಾಂಘ್ರಿ ಸೇವಕಮ್ ॥ ೫ ॥

ವಂದೇವಾಗೀಶ ಕರಜಂ ವಿಮಾನೇ ಸಂಸ್ಥಿತಂ ಗುರುಮ್ ।
ಹಂಸಾರೂಢಂ ಹಯಗ್ರೀವಪೂಜಕಂ ವಾದಿರಾಜಕಮ್ ॥ ೬ ॥

ವಂದೇ ಸರ್ವಾಂಗ ಸಾಯುಜ್ಯಭಾಗಿನಂ ಗುಣಶಾಲಿನಮ್ ।
ಭಕ್ತಾನಾಂ ವಾದಿರಾಜಾಖ್ಯಯೋಗಿನಂ ಮುಕ್ತಿದಾಯಿನಮ್ ॥ ೭ ॥

ಪಶ್ಚಿಮೇ ವಾದಿರಾಜಖ್ಯಗುರೋರ್ವೃಂದಾವನಸ್ಯ ಚ ।
ಯಾ ಗಂಗಾ ಭಾತಿ ಸಾ ಸಮ್ಯಗ್ಧವಾಲಾಖ್ಯಾ ಹಿ ಪಾತು ನಃ ॥ ೮ ॥

ದಕ್ಷಿಣೇ ಸರ್ವಸಂಯುಕ್ತಾ ಪಶ್ಚಿಮೇ ಪ್ರಾಣಸಂಯುತಾ ।
ಅಷ್ಟಮೇನೋತ್ತರೇ ಭಾಗೇ ಪರರೂಪೇಣ ಭಾಸಿತಾ ॥ ೯ ॥

ಉತ್ತರೇ ವಾದಿರಾಜಾಖ್ಯಗುರೋರ್ವೃಂದಾವನಸ್ಯ ಚ ।
ಅಶ್ವತ್ಥಾಖ್ಯತರುರ್ಭಾತಿ ಕಲ್ಪವೃಕ್ಷವದೇವ ಹಿ ॥ ೧೦ ॥

ಬ್ರಹ್ಮಾದಿದೇವತಾವೃಂದ್ಯೈಃ ಶ್ಲಾಘಿತಂ ತೈಃ ಸುಬೃಂಹಿ ತಮ್ ।
ಪಂಚವೃಂದಾವನಂ ವಂದೇ ಪರಾನಂದಫಲಪ್ರದಮ್ ॥ ೧೧ ॥

ಮತ್ಸ್ಯಾದಿ ಭಗವದ್ರೂಪೈಃ ಪೂಜಿತಂ ಸುರಪೂಜಿತಮ್ ।
ಪಂಚವೃಂದಾವನಂ ವಂದೇ ಪರಾನಂದಫಲಪ್ರದಮ್ ॥ ೧೨ ॥

ಶ್ರೀಮಂತಂ ಶ್ರೀಕರಂ ಭದ್ರ ಸೇವಿತಂ ಸಜ್ಜನೈಃ ಪರಮ್ ।
ಪಂಚವೃಂದಾವನಂ ವಂದೇ ಪರಾನಂದಫಲಪ್ರದಮ್ ॥ ೧೩ ॥

ಗಂಗಾದಿತೀರ್ಥಸಂಯುಕ್ತಂ ಗಂಧರ್ವಾದಿಗಣಾನ್ವಿತಮ್ ।
ಪಂಚವೃಂದಾವನಂ ವಂದೇ ಪರಾನಂದಫಲಪ್ರದಮ್ ॥ ೧೪ ॥

ಮಂದಾರಪ್ರಮುಖೈಃ ಶೈಲೈರರ್ಚಿತಂ ಚ ಮನೋಹರಮ್ ।
ಪಂಚವೃಂದಾವನಂ ವಂದೇ ಪರಾನಂದಫಲಪ್ರದಮ್ ॥ ೧೫ ॥

ಸ್ವಾಮಿಪುಷ್ಕರಣೀ ಮುಖ್ಯಸರೋವರಸಮನ್ವಿತಮ್ ।
ಪಂಚವೃಂದಾವನಂ ವಂದೇ ಪರಾನಂದಫಲಪ್ರದಮ್ ॥ ೧೬ ॥

ಮೇರ್ವಾದಿ ಸದ್ದರೂಪೇತಂ ಮಾಧವಪ್ರಿಯಮಂದಿರಮ್ ।
ಪಂಚವೃಂದಾವನಂ ವಂದೇ ಪರಾನಂದಫಲಪ್ರದಮ್ ॥ ೧೭ ॥

ವನ್ಯೈರ್ವೃಂದಾವನಮುಖ್ಯೈರರ್ಚಿತಂ ಚ ವರೋತ್ತಮಮ್ ।
ಪಂಚವೃಂದಾವನಂ ವಂದೇ ಪರಾನಂದಫಲಪ್ರದಮ್ ॥ ೧೮ ॥

ಯುಕ್ತಂ ಕಾಶ್ಯಾದಿಸುಕ್ಷೇತ್ರೈಃ ಸುರೋತ್ತಮಸುವಂದಿತಮ್ ।
ಪಂಚವೃಂದಾವನಂ ವಂದೇ ಪರಾನಂದಫಲಪ್ರದಮ್ ॥ ೧೯ ॥

ಭವಾಬ್ಧಿತಾರಕಂ ದಿವ್ಯಂ ತಾಪತ್ರಯನಿವಾರಕಮ್ ।
ಪಂಚವೃಂದಾವನಂ ವಂದೇ ಪರಾನಂದಫಲಪ್ರದಮ್ ॥ ೨೦ ॥

ದಕ್ಷಿಣೇ ಪ್ರಾಣದೇವಸ್ತು ರಾಮಚಂದ್ರೋಽಪಿ ತತ್ರ ಚ ।
ಪಂಚವೃಂದಾವನಂ ವಂದೇ ಪರಾನಂದಫಲಪ್ರದಮ್ ॥ ೨೧ ॥

ಯಸ್ಯ ವೃಂದಾವನೇ ಸಮ್ಯಕ್ತಂ ವಂದೇ ಸತತಂ ಗುರುಮ್ ।
ಪಂಚವೃಂದಾವನಂ ವಂದೇ ಪರಾನಂದಫಲಪ್ರದಮ್ ॥ ೨೨ ॥

ಪಶ್ಚಿಮೇ ಭೀಮಸೇನಸ್ತು ಕೃಷ್ಣದೇವೋಽಪಿ ತತ್ರ ಚ ।
ಪಂಚವೃಂದಾವನಂ ವಂದೇ ಪರಾನಂದಫಲಪ್ರದಮ್ ॥ ೨೩ ॥

ಉತ್ತರೇ ಮಧ್ವರಾಜಸ್ತು ವೇದವ್ಯಾಸೋಽಪಿ ತತ್ರ ಚ ।
ಪಂಚವೃಂದಾವನಂ ವಂದೇ ಪರಾನಂದಫಲಪ್ರದಮ್ ॥ ೨೪ ॥

ಪೂರ್ವಭಾಗೇ ವಾದಿರಾಜೋ ವಾಜಿವಕ್ತ್ರೇಣ ಸಂಯುತಃ ।
ಪಂಚವೃಂದಾವನಂ ವಂದೇ ಪರಾನಂದಫಲಪ್ರದಮ್ ॥ ೨೫ ॥

ಪುರತೋ ವ್ಯಾಸರೂಪಂ ಚ ಜ್ಞಾನ ಮುದ್ರಾದಿಸಂಯುತಮ್ ।
ಪಂಚವೃಂದಾವನಂ ವಂದೇ ಪರಾನಂದಫಲಪ್ರದಮ್ ॥ ೨೬ ॥

ಮತ್ಸ್ಯಾದಿಕಲ್ಕಿ ಪರ್ಯಂತಂ ಪರರೂಪಂ ಚತುಷ್ಟಯೇ ।
ಉಪವೃಂದಾವನೇ ಯಸ್ಯ ತಂ ವಂದೇ ಸತತಂ ಗುರುಮ್ ॥ ೨೭ ॥

ಮತ್ಸ್ಯಃ ಕೂರ್ಮೋ ವರಾಹಸ್ತು ಪುರತೋ ದಕ್ಷಿಣೇ ಸ್ಥಿತೇ ।
ಉಪವೃಂದಾವನೇ ಯಸ್ಯ ತಂ ವಂದೇ ಸತತಂ ಗುರುಮ್ ॥ ೨೮ ॥

ನಾರಸಿಂಹೋ ವಾಮನಶ್ಚ ಪೃಷ್ಠತೋ ದಕ್ಷಿಣೇ ಸ್ಥಿತೇ ।
ಉಪವೃಂದಾವನೇ ಯಸ್ಯ ತಂ ವಂದೇ ಸತತಂ ಗುರುಮ್ ॥ ೨೯ ॥

ಭಾರ್ಗವೋ ರಾಮಚಂದ್ರಸ್ಯ ಉತ್ತರೇ ಪೃಷ್ಠತಃ ಸ್ಥಿತೇ ।
ಉಪವೃಂದಾವನೇ ಯಸ್ಯ ತಂ ವಂದೇ ಸತತಂ ಗುರುಮ್ ॥ ೩೦ ॥

ಕೃಷ್ಣಬುಧೌ ಸುಕಲ್ಕೀಯ ಉತ್ತರೇ ಪುರತಃ ಸ್ಥಿತೇ ।
ಉಪವೃಂದಾವನೇ ಯಸ್ಯ ತಂ ವಂದೇ ಸತತಂ ಗುರುಮ್ ॥ ೩೧ ॥

ಉತ್ತರೇ ಮತ್ಸರೂಪಂ ತು ಪುರತೋ ದಕ್ಷಿಣೇ ಸ್ಥಿತೇ ।
ಉಪವೃಂದಾವನೇ ಯಸ್ಯ ತಂ ವಂದೇ ಸತತಂ ಗುರುಮ್ ॥ ೩೨ ॥

ಪೂರ್ವಭಾಗೇ ಕೂರ್ಮರೂಪಂ ಪುರತೋ ದಕ್ಷಿಣೇ ಸ್ಥಿತೇ ।
ಉಪವೃಂದಾವನೇ ಯಸ್ಯ ತಂ ವಂದೇ ಸತತಂ ಗುರುಮ್ ॥ ೩೩ ॥

ದಕ್ಷಿಣೇ ತು ವರಾಹಸ್ತು ಪುರತೋ ದಕ್ಷಿಣೇ ಸ್ಥಿತೇ ।
ಉಪವೃಂದಾವನೇ ಯಸ್ಯ ತಂ ವಂದೇ ಸತತಂ ಗುರುಮ್ ॥ ೩೪ ॥

ದಕ್ಷಿಣೇ ತು ನೃಸಿಂಹಶ್ಚ ಪೃಷ್ಠತೋ ದಕ್ಷಿಣೇ ಸ್ಥಿತೇ ।
ಉಪವೃಂದಾವನೇ ಯಸ್ಯ ತಂ ವಂದೇ ಸತತಂ ಗುರುಮ್ ॥ ೩೫ ॥

ಪಶ್ಚಿಮೇ ವಟುರೂಪಂ ತು ಪೃಷ್ಠತೋ ದಕ್ಷಿಣೇ ಸ್ಥಿತೇ ।
ಉಪವೃಂದಾವನೇ ಯಸ್ಯ ತಂ ವಂದೇ ಸತತಂ ಗುರುಮ್ ॥ ೩೬ ॥

ಪಶ್ಚಿಮೇ ಭಾರ್ಗವಃ ಪೂರ್ಣ ಉತ್ತರೇ ಪೃಷ್ಠತಃ ಸ್ಥಿತೇ ।
ಉಪವೃಂದಾವನೇ ಯಸ್ಯ ತಂ ವಂದೇ ಸತತಂ ಗುರುಮ್ ॥ ೩೭ ॥

ಉತ್ತರೇ ರಾಮಚಂದ್ರಶ್ಚ ಉತ್ತರೇ ಪೃಷ್ಠತಃ ಸ್ಥಿತೇ ।
ಉಪವೃಂದಾವನೇ ಯಸ್ಯ ತಂ ವಂದೇ ಸತತಂ ಗುರುಮ್ ॥ ೩೮ ॥

ಉತ್ತರೇ ಕೃಷ್ಣರೂಪಂ ತು ಉತ್ತರೇ ಪೃಷ್ಠತಃ ಸ್ಥಿತೇ ।
ಉಪವೃಂದಾವನೇ ಯಸ್ಯ ತಂ ವಂದೇ ಸತತಂ ಗುರುಮ್ ॥ ೩೯ ॥

ಪೂರ್ವಭಾಗೇ ಬುದ್ಧರೂಪಮುತ್ತರೇ ಪುರತಃ ಸ್ಥಿತೇ ।
ಉಪವೃಂದಾವನೇ ಯಸ್ಯ ತಂ ವಂದೇ ಸತತಂ ಗುರುಮ್ ॥ ೪೦ ॥

ದಕ್ಷಿಣೇ ತು ಸುಕಲ್ಕೀ ಚ ಉತ್ತರೇ ಪುರತಃ ಸ್ಥಿತೇ ।
ಉಪವೃಂದಾವನೇ ಯಸ್ಯ ತಂ ವಂದೇ ಸತತಂ ಗುರುಮ್ ॥ ೪೧ ॥

ಭಕ್ತಾನಾಂ ಸರ್ವ ಸಂತಾಪಹಾರಿಣೇಽಭೀಷ್ಟದಾಯಿನೇ ।
ಶ್ರೀವಾದಿರಾಜಗುರುವೇ ನಮಃ ಕಾರುಣ್ಯಸಿಂಧವೇ ॥ ೪೨ ॥

ಸರ್ವ ದುಃಖವಿನಾಶಾಯ ಸರ್ವಸಂಪತ್ಕರಾಯ ಚ ।
ಸರ್ವದೋಷ ವಿಹೀನಾಯ ಗುಣಪೂರ್ಣಾಯ ತೇ ನಮಃ ॥ ೪೩ ॥

ಭಜತಾಂ ಕಲ್ಪತರವೇ ನಮತಾಂ ಕಾಮಧೇನವೇ ।
ಶ್ರೀವಾದಿರಾಜಗುರುವೇ ನಮಃ ಕಾರುಣ್ಯಸಿಂಧವೇ ॥ ೪೪ ॥

ವಾದಿರಾಜ ಮೃಗೇಂದ್ರಾಯ ಪ್ರತಿವಾದೀಭ ವೈರಿಣೇ ।
ನಮೋ ವೈರಾಗ್ಯಭಾಗ್ಯಾಯ ಹಯಗ್ರೀವಾಂಘ್ರಿಸೇವಿನೇ ॥ ೪೫ ॥

ದುರಾಚಾರೋ ದುರ್ಮತಿಶ್ಚ ದುರಾಲೋಚನ ವಾಹನಮ್ ।
ತಥಾಽಪಿ ಮಾಂ ವಾದಿರಾಜಗುರೋ ಪಾಹಿ ಕೃಪಾನಿಧೇ ॥ ೪೬ ॥

ಮೂಢೋ ಮೂರ್ಖೋ ಮದೋನ್ಮತ್ತಃ ಮಹಾ ಪಾಪೌಘವಾಹನಮ್ ।
ತಥಾಽಪಿ ಮಾಂ ವಾದಿರಾಜಗುರೋ ಪಾಹಿ ಕೃಪಾನಿಧೇ ॥ ೪೭ ॥

ಹಠೀ ಶಠಶ್ಚ ದುರ್ಮಾನೀ ದುಶ್ಶೀಲೋಽಹಂ ದುರಾಗ್ರಹಂ ।
ತಥಾಽಪಿ ಮಾಂ ವಾದಿರಾಜಗುರೋ ಪಾಹಿ ಕೃಪಾನಿಧೇ ॥ ೪೮ ॥

ಕೋಪೀ ಕ್ರೋಧೀ ದಯಾ ಶೂನ್ಯಃ ದಾಕ್ಷಿಣ್ಯರಹಿತೋಽಪ್ಯಹಮ್ ।
ತಥಾಽಪಿ ಮಾಂ ವಾದಿರಾಜಗುರೋ ಪಾಹಿ ಕೃಪಾನಿಧೇ ॥ ೪೯ ॥

ಪರನಿಂದಾರತಶ್ಚಾಹಂ ಪರದಾರಾಭಿಮರ್ಷಕಃ ।
ತಥಾಽಪಿ ಮಾಂ ವಾದಿರಾಜಗುರೋ ಪಾಹಿ ಕೃಪಾನಿಧೇ ॥ ೫೦ ॥

ಅಹಂಕಾರೀ ಗುಣದ್ರೋಹೀ ದೋಷಾನ್ವೇಷಣವಾಹನಮ್ ।
ತಥಾಽಪಿ ಮಾಂ ವಾದಿರಾಜಗುರೋ ಪಾಹಿ ಕೃಪಾನಿಧೇ ॥ ೫೧ ॥

ದುರ್ವ್ಯಾಪಾರೀ ದುಷ್ಟಚಿತ್ತೋ ವಿತಥ್ಯಾತಥ್ಯವಾನಹಮ್ ।
ತಥಾಽಪಿ ಮಾಂ ವಾದಿರಾಜಗುರೋ ಪಾಹಿ ಕೃಪಾನಿಧೇ ॥ ೫೨ ॥

ಪರಶ್ರೇಯೋವಿರೋಧೀ ಚ ಪರಸಂತಾಪಕೋಽಪ್ಯಹಮ್ ।
ತಥಾಽಪಿ ಮಾಂ ವಾದಿರಾಜಗುರೋ ಪಾಹಿ ಕೃಪಾನಿಧೇ ॥ ೫೩ ॥

ಆರೋಗ್ಯಕಾಮೀ ಲೋಭೀ ಚ ಯೋಗ್ಯಾಸೂಯಾಪರೋ ಹ್ಯಹಮ್ ।
ತಥಾಽಪಿ ಮಾಂ ವಾದಿರಾಜಗುರೋ ಪಾಹಿ ಕೃಪಾನಿಧೇ ॥ ೫೪ ॥

ನೀಚೋಽಹಂ ದಿಷ್ಟವಂದ್ಯೋಽಹಂ ಧೂರ್ತೋ ದುರ್ಮಾರ್ಗವಾನಪಿ ।
ತಥಾಽಪಿ ಮಾಂ ವಾದಿರಾಜಗುರೋ ಪಾಹಿ ಕೃಪಾನಿಧೇ ॥ ೫೫ ॥

ಅಲಂ ಬುದ್ಧಿವಿಹೀನಶ್ಚ ಅಪಕಾರ ಪರೋ ಹ್ಯಹಮ್ ।
ತಥಾಽಪಿ ಮಾಂ ವಾದಿರಾಜಗುರೋ ಪಾಹಿ ಕೃಪಾನಿಧೇ ॥ ೫೬ ॥

ಅಸಹಿಷ್ಣುರ್ದೀರ್ಘಸೂತ್ರೀ ತಥಾ ಪೈಶುನ್ಯವಾನಹಮ್ ।
ತಥಾಽಪಿ ಮಾಂ ವಾದಿರಾಜಗುರೋ ಪಾಹಿ ಕೃಪಾನಿಧೇ ॥ ೫೭ ॥

ಸರ್ವದಾ ಚಲಚಿತ್ತೋಽಹಮದ ಸದಸ್ಯೋಽಜಿತೇಂದ್ರಿಯಃ ।
ತಥಾಽಪಿ ಮಾಂ ವಾದಿರಾಜಗುರೋ ಪಾಹಿ ಕೃಪಾನಿಧೇ ॥ ೫೮ ॥

ಅಧರ್ಮಾಚಾರಸಂಸಕ್ತೋವಿನೀತ ತ್ಯಾಗವಾನಹಮ್ ।
ತಥಾಽಪಿ ಮಾಂ ವಾದಿರಾಜಗುರೋ ಪಾಹಿ ಕೃಪಾನಿಧೇ ॥ ೫೯ ॥

ಅಧರ್ಮಾಸಕ್ತ ಚಿತ್ತಾನಾಮಶ್ರಯೋಽಹಂ ನ ಸಂಶಯಃ ।
ಶ್ರೀವಾದಿರಾಜ ಭವತಾತತ್ ಕ್ಷಂತವ್ಯಂ ಕ್ಷಮಾವತಾ ॥ ೬೦ ॥

ಸಂಚರಾಮಿ ಸದಾ ಸ್ವಾಮಿನ್ ಕರ್ಮಣಾ ಸ್ಮೃತಿಕಾನನೇ ।
ಮಾಂ ಬಾಧತೇ ತತ್ರ ಚೋರಃ ಕ್ರೂರೋ ದಾರಿದ್ರ್ಯ ಸಂಜ್ಞಕಃ ॥ ೬೧ ॥

ಯತಸ್ತ್ಯಕ್ತಂ ಕಾಮ್ಯಕರ್ಮ ವಾದಿರಾಜಗುರೋ ತ್ವಯಾ ।
ತತಃ ಕರುಷ್ವ ಮಾಂಚ ತ್ವಂ ರಹಿತಃ ಶ್ರುತಿಕರ್ಮಣಾ ॥ ೬೨ ॥

ಯದಿ ಸ್ಯಾತ್ಕರ್ಮಭೋಕ್ತವ್ಯಂ ಚೋರಶಿಕ್ಷಾಂ ತದಾ ಕುರು ।
ತಸ್ಮಾತ್ತವ ಗುರೋ ಸ್ವಾಮಿನ್ ರಾಜಾಖ್ಯಾ ವರ್ತತೇ ಭುವಿ ॥ ೬೩ ॥

ನ ಚೇತ್ ಕರಿಷ್ಯಸಿ ತಥಾ ಕ್ಷತಿರ್ನಾಸ್ತಿ ತದಾ ತವ ।
ಪ್ರಹಾಯ ಸುಪ್ರಸಿದ್ಧತ್ವಾ ತ್ಪ್ರಸಿದ್ಧಂ ಹಿ ನ ನಶ್ಯತಿ ॥ ೬೪ ॥

ಕಿಂ ಹಸಂತಿ ಚ ಮಾಂ ಸರ್ವೇ ರಾಜ್ಞೋ ಹೇತಿ ಕೃಪಾ ತ್ವಯಿ ।
ಇತ್ಥಂ ಹಾಸ್ಯಸ್ಥದಂ ಮಾಂ ಚ ಮಾ ಕುರುಷ್ವ ದಯಾನಿಧೇ ॥ ೬೫ ॥

ವೈರಾಗ್ಯಂ ದೇಹಿ ಮೇ ಸ್ವಾಮೀನ್ ತವ ದಾಸ್ಯಂ ಚ ಸರ್ವದಾ ।
ನಮಸ್ತುಭ್ಯಂ ವಾದಿರಾಜ ಗುರೋ ವೈರಾಗ್ಯವಾರಿಧೇ ॥ ೬೬ ॥

ನಿರ್ವ್ಯಾಜಾಂ ನಿಶ್ಚಲಾಂ ಭಕ್ತಿಮನಿಮಿತ್ತಾಂ ಚ ಶಾಶ್ವತೀಮ್ ।
ಮಾತರ್ಜನಕ ಮೇ ದೇಹಿ ವಾದಿರಾಜಗುರೋತ್ವಯಿ ॥ ೬೭ ॥

ಉಪಾಸನಾ ಪ್ರಕಾರಂ ಮೇ ಜ್ಞಾಪಯತ್ವಂ ತವ ಪ್ರಭೋ ।
ಪ್ರಾರ್ಥಯೇ ತ್ವಾಂ ವಾದಿರಾಜ ಮಾಜವಕ್ತ್ರಂಘ್ರ್ಯುಪಾಸಕ ॥ ೬೮ ॥

ಸ್ನಾತ್ವಾ ಧವಲಗಂಗಾಯಾಂ ತವ ವೃಂದಾವನಾಂತಿಕಮ್ ।
ತ್ವತ್ಪಾದಾಂಬುರುಹಂ ದೃಷ್ಟ್ವಾ ಬಹವಃ ಸದ್ಗತಿಂ ಗತಾಃ ॥ ೬೯ ॥

ತಸ್ಮಾದಜ್ಞಸ್ಯ ಮೇ ಸ್ವಾಮಿನ್ ಋತೇ ತ್ವತ್ಪಾದದರ್ಶನಾತ್ ।
ವಾದಿರಾಜ ಗತಿರ್ನಾಸ್ತಿ ತಸ್ಮಾದ್ದರ್ಶಯ ತೇ ವಪುಃ ॥ ೭೦ ॥

ಋಷಿಗಂಧರ್ವದೇವಾಶ್ಚ ಮುಚ್ಯಂತೇ ತ್ವತ್ಪ್ರಸಾದತಃ ।
ನರಾಃ ಕಿಮುತ ತತ್ ಸ್ವಾಮಿನ್ ವಾದಿರಾಜ ಪ್ರಸೀದ ಮೇ ॥ ೭೧ ॥

ಫಲಂ ದೇಹಿ ಫಲಂ ದೇಹಿ ಪೂರಯಾಶು ಮನೋರಥಮ್ ।
ವಾದಿರಾಜ ಗುರೋ ಕಲ್ಪತರೋ ಕಾರುಣ್ಯಸಾಗರ ॥ ೭೨ ॥

ವಾದೀಭಮೃಗರಾಜತ್ವಾದ್ವಾದಿರಾಜೋ ಭವಾನ್ ಗುರುಃ ।
ನಮಾಮಿ ತ್ವಾಂ ಸುರಶ್ರೇಷ್ಠ ಮಾಂ ಪಾಹಿ ಶರಣಾಗತಮ್ ॥ ೭೩ ॥

ತ್ರಯಸ್ತ್ರಿಂಶತ್ಕೋಟಿದೇವೈಃ ಸದಾ ವೃಂದಾವನಾನ್ವಿತೈಃ ।
ತ್ರಿಕೋಟಿಯತಿಭಿಃ ಸಾರ್ಧಂ ವಾದಿರಾಜೋ ವಿರಾಜತೇ ॥ ೭೪ ॥

ವಾದಿರಾಜಗುರೋಃ ಪಾದಪೀಠೋತ್ಥಿತರಜಃ ಕಣಾಃ ।
ಕುರ್ವಂತಿ ಶ್ರೇಯಸಾಂ ವ್ಯೂಹಂ ಕ್ಷಿಪ್ರಂ ನಃ ಶ್ರುತಿಮಾತ್ರತಃ ॥ ೭೫ ॥

ತಪೋವಿರಕ್ತ್ಯಾದಿಗುಣಾಧಿವಾಸಂ ಹಯಾನನಾಗ್ರಹಪೂರ್ಣಪಾತ್ರಮ್ ।
ನಮಾಮಿ ನಾರಾಯಣಭೂತದೂತಂ ಶ್ರೀವಾದಿರಾಜಂ ಗುರುಸಾರ್ವಭೌಮಮ್॥ ೭೬ ॥

ಶ್ರೀವಾದಿರಾಜಾಖ್ಯಗುರುಪ್ರಸನ್ನಂ ಗುಣೈರಭಿನ್ನಂ ಜಗತೋ ವಿಭಿನ್ನಮ್ ।
ವ್ರಜಾಂಗನಾಪಾದಿತಚೌರ್ಯಪಾತ್ರಂ ಶ್ರೀವಾಜಿವಕ್ತ್ರಂ ಶಿರಸಾ ನಮಾಮಿ
॥ ೭೭ ॥

ವಾದಿರಾಜಗುರುಸ್ತೋತ್ರಂ ತ್ರಿಕಾಲೇ ಯಃ ಪಠೇದಿದಮ್ ।
ಸ ಚ ಬಂಧಾದ್ವಿಮುಕ್ತಃ ಸನ್ ಸದಾಽಽನಂದಮವಾಪ್ನುಯಾತ್ ॥ ೭೮ ॥

ಶಿನ್ನಸೂರ್ಯಾಖ್ಯಶಿಷ್ಯೇಣ ಕೃತಂ ಕೃಷ್ಣೇನ ಕೋಮಲಮ್ ।
ವಾದಿರಾಜಗುರುಸ್ತೋತ್ರಂ ತತ್ಪ್ರೀತ್ಯರ್ಥಂ ತದಾಜ್ಞಯಾ ॥ ೭೯ ॥

॥ ಇತಿ ಶ್ರೀವಾದಿರಾಜಸ್ತೋತ್ರಂ ಸಂಪೂರ್ಣಮ್ ॥

ಶ್ರೀಸೋದಾಕ್ಷೇತ್ರ ಸನ್ನಿಹಿತ ಶ್ರೀಹರಿಗುರುದೇವತಾಸ್ತುತಿಪರ ಶ್ಲೋಕಗಳು :

ಶ್ರೀತ್ರಿವಿಕ್ರಮಸ್ತುತಿಃ :

ತ್ರಿವಿಕ್ರಮಂ ರಮ್ಯಗದಾರಿಶಂಖ-
ಸರೋಜಮಾಲಾಧರಮಿಂದುವರ್ಣಮ್ ।
ಮನೋಹರಾಂಗಂ ಯತಿವಾದಿರಾಜ
ಪ್ರತಿಷ್ಠಿತಂ ನೌಮಿ ಸದಾ ಪ್ರಸನ್ನಮ್ ॥

ವೃಂದಾವನಸ್ಥಹಯಗ್ರೀವಾದಿಸ್ತುತಿಃ :

ವಂದೇಽರವಿಂದನಯನಂ ಮದನಾಭಿರಾಮಂ
ಮಂದಾಕಿನೀಧರಮುಖ್ಯೈಃ ತ್ರಿದಶೈಃ ಸುವಂದ್ಯಮ್ ।

ವೃಂದಾವನೇ ಚ ಕೃತಮಂದಿರಮಪ್ರಮೇಯಂ
ಮಂದಾರಭೂಮಿಜಧರಂ ಹಯಶೀರ್ಷಮಾದ್ಯಮ್ ॥

ಅತ್ಯದ್ಭುತಾಕಾರಮೂರ್ತೇ ಪ್ರತ್ಯಯಾನಂತಸದ್ಗುಣ ।
ದೃಪ್ತದಾನವವಿಧ್ವಂಸಿನ್ ಮರ್ತ್ಯಸಿಂಹ ನಮೋ ನಮಃ ॥

ಹಯಗ್ರೀವಂ ಚಿದಾನಂದವಿಗ್ರಹಂ ಸದನುಗ್ರಹಂ।
ದಶಗ್ರೀವಚ್ಛಿದಂ ಶಾಪಾನ್ಮಣಿಗ್ರೀವವಿಮೋಚನಮ್ ॥

ಸುಗ್ರೀವಾಭಯದಂ ಸಮ್ಯಕ್ ಉಗ್ರಸೇನವಿಭೂತಿದಂ ।
ಉಗ್ರವಿಗ್ರಹಹಂತಾರಂ ಭಕ್ತಾಭಯಕರಗ್ರಹಮ್ ॥

ಸ್ವನಾಮಗ್ರಹಣಾದೇವ ನಿರಸ್ತಗ್ರಹವಿಗ್ರಹಂ ।
ವೃಂದಾವನಗತಂ ವಂದೇ ಬ್ರಹ್ಮರುದ್ರೇಂದ್ರವಂದಿತಮ್ ॥

ಸೀತಾಕಾಂತಂ ಶ್ರೀಹನೋಮತ್ಪ್ರಸೇವ್ಯಂ
ಭೈಷ್ಮೀನಾಥಂ ದ್ರೌಪದೀಶಾರ್ಚಿತಾಂಘ್ರಿಂ ।

ವಿದ್ಯಾಧೀಶಂ ಮೋದತೀರ್ಥಾನುಚಿಂತ್ಯಂ
ವಂದೇಽಶ್ವಾಖ್ಯಂ ವಾದಿರಾಜೇಡ್ಯಪಾದಂ ॥

ಪಂಚವೃಂದಾವನೇ ಪುಣ್ಯೇ ಪಂಚರೂಪಾತ್ಮಕೋ ಹರಿಃ ।
ಪಂಚೀಕೃತ್ಯಸ್ವರೂಪಾಣಿ ನಿತ್ಯಂ ಸನ್ನಿಹಿತಃ ಸ್ವಯಂ ॥

ಶ್ರೀ ಕೃಷ್ಣಸ್ತೋತ್ರಂ :

ಕೃಷ್ಣಾಯ ಯಾದವೇಂದ್ರಾಯ ಜ್ಞಾನಮುದ್ರಾಯ ಯೋಗಿನೇ ।
ನಾಥಾಯ ರುಕ್ಮಿಣೀಶಾಯ ನಮೋ ವೇದಾಂತವೇದಿನೇ ॥

ಶ್ರೀಭೂವರಾಹಸ್ತೋತ್ರಂ :

ಕೋಲಾಯ ಲಸದಾಕಲ್ಪಜಾಲಾಯ ವನಮಾಲಿನೇ ।
ನೀಲಾಯ ನಿಜಭಕ್ತೌಘಪಾಲಾಯ ಹರಯೇ ನಮಃ ॥

ಶ್ರೀಅಶ್ವತ್ಥನಾರಾಯಣಸ್ತೋತ್ರಂ :

ಅಶ್ವತ್ಥದೇವ ಸಕಲೇಷ್ಟದ ದೇವದೇವ
ಭೂದೇವವಂದಿತಪದ ಪ್ರದದಾಸ್ಯಭೀಷ್ಟಂ ।
ವೇದ್ಯೈಕವೇದ್ಯ ಸುಜನಾಬ್ಧಿಸುಪೂರ್ಣಚಂದ್ರ
ಭಕ್ತಾಭಯಪ್ರದ ಸುಪುತ್ರಮಪುತ್ರಿಣಾಂ ಚ ।

ವ್ಯಾಸವರ್ಣನಮ್

ವ್ಯಾಸಾಯಾಪ್ರತಿಮೇತಿಹಾಸರಚನೋಲ್ಲಾಸಾಯ ದುರ್ವಾದಿನಾಂ
ತ್ರಾಸಾಯಾಸಕರಾಯ ಸತ್ಸು ಕೃತ ವಿಶ್ವಾಸಾಯ ದೋಷದ್ವಿಷೇ ।
ಭಾಸ ಆ ಯಾಮುನರಮ್ಯ ತೋಯಸದೃಶಾಯಾಸಾಯಮಾಸೇವಿನೇ

ದಾಸಾಯಾಭಯದಾಯ ಮಧ್ವಗುರುಹೃದ್ವಾಸಾಯ ತುಭ್ಯಂ ನಮಃ ॥ ೧ ॥
ವ್ಯಾಸಾಯ ಭವನಾಶಾಯ ಶ್ರೀಶಾಯ ಗುಣರಾಶಯೇ ।
ಹೃದ್ಯಾಯ ಶುದ್ಧವಿದ್ಯಾಯ ಮಧ್ವಾಯ ಚ ನಮೋ ನಮಃ ॥ ೨ ॥

॥ ಇತಿ ಶ್ರೀ ವಾದಿರಾಜಯತಿ ವಿರಚಿತಂ ವ್ಯಾಸವರ್ಣನಮ್ ॥

ಶ್ರೀಲಕ್ಷ್ಮೀಸ್ತುತಿಃ :

ಲಕ್ಷ್ಮೀಂ ಲಕ್ಷಣಸಂಪನ್ನಾಂ ಲಕ್ಷಣಾಗ್ರಜಕಾಂಕ್ಷಿಣೀಂ ।
ಲಕ್ಷಯಾಮಿ ಕ್ಷಣಂ ಲಕ್ಷವಿತ್ತದಾತ್ರೀಂ ಕಟಾಕ್ಷತಃ ॥

ಲಕ್ಷ್ಮೀಮಕ್ಷರಪಾದಾಬ್ಜಷಟ್ಪದಾಂ ಮಮ ಸೌಖ್ಯದಾಂ ।
ಗುರುರಾಜನುತಾಮಂಬಾಂ ಅರ್ಥಯೇ ಜ್ಞಾನದಾಯಿನೀಂ ॥

ಶ್ರೀಹನುಮ–ಭೀಮ–ಮಧ್ವ–ವಾದಿರಾಜಸ್ತುತಿಃ :

ಮತಿಮಂತಂ ಹನೂಮಂತಂ ಭೀಮಂ ಭೈಷ್ಮ್ಯಾಃಪತಿಪ್ರಿಯಂ ।
ಮಧ್ವಂ ಧ್ವಸ್ತಗುಣಾಭಾವಂ ಮಧುಹಂತುಃ ಪ್ರಿಯಂ ಭಜೇ ॥
(–ವಾದಿರಾಜಂ)

ಗುರುಮುಖಿಲಗುಣಜ್ಞಂ ಸದ್ಗುಣೈಕಾಧಿವಾಸಂ
ಶಮದಮಪರಿನಿಷ್ಠ ಸತ್ವನಿಷ್ಠ ವರಿಷ್ಠ ।
ಸಕಲಸುಜನಶಿಷ್ಟಂ ನಿತ್ಯನಿರ್ಧೂತಕಷ್ಟಂ
ಹಯಮುಖಪದನಿಷ್ಠಂ ಮಾಂ ಭಜಂತು ಪ್ರಪನ್ನಾಃ ॥

ಕೋಲವ್ಯಾಸಹಯಗ್ರೀವಪದಾಬ್ಜ ಪರಿಸೇವಕಃ ।
ಭಾವೀವಾಯುರ್ವಾದಿರಾಜಃ ಕಲ್ಪದ್ರುಃಕಾಮದೋಽಸ್ತುನಃ ।
ಕಾಮಧೇನುರ್ಯಥಾಪೂರ್ವಂ ಸರ್ವಾಭೀಷ್ಟಫಲಪ್ರದಾ ।
ತಥಾ ಕಲೌ ವಾದಿರಾಜಶ್ರೀಪಾದೋಽಭೀಷ್ಟದಃ ಸತಾಮ್ ॥

ಮಾತಾ ರಾಜಾ ಮತ್ಪಿತಾ ವಾದಿರಾಜಃ
ಭ್ರಾತಾ ರಾಜಾ ಮತ್ಸಖಾ ವಾದಿರಾಜಃ ।
ಸರ್ವಸ್ವಂ ಮೇ ವಾದಿರಾಜೋ ದಯಾಲುಃ
ನಾನ್ಯಂ ದೇವಂ ನೈನ ಜಾನೇ ನ ಜಾನೇ ॥

ಶ್ರೀವೇದವೇದ್ಯತೀರ್ಥಸ್ತುತಿಃ :

ಕಾಮಧೇನುರ್ಯಥಾಪೂರ್ವಂ ಸರ್ವಾಭೀಷ್ಟಫಲಪ್ರದಾ ।
ತಥಾ ಕಲೌ ವೇದವೇದ್ಯಶ್ರೀಪಾದೋಽಭೀಷ್ಟದಃ ಸತಾಮ್ ॥

ವೃಂದಾವನಸ್ಥಸಕಲದೇವತಾಸ್ತುತಿಃ :

ವೃಂದಾರಕಾಣಾಂ ಭವ್ಯಾನಾಂ ವೃಂದಂ ವೃಂದಾವನೇ ಗತಂ ।
ಯಾಚೇ ಧೀನಿರ್ಮಲಂ ಸೋದಾಪುರವಾಸಸುಸೇವಕಂ ॥

ಶ್ರೀವೇದನಿಧಿಗುರುಸ್ತುತಿಃ :

ಯೇನ ಶ್ರೀವಾದಿರಾಜಸ್ಯ ಋಜುತಾ ಸ್ಫುಟತಾ ಗತಾ ।
ಸ್ವಾಪ್ನಾಖ್ಯಾನಗತಾಽದೇಶ್ಯೈಃ ಗುರುಂ ವೇದನಿಧಿಂ ಭಜೇ ॥

ಶ್ರೀಶೇಷದೇವರಸ್ತೋತ್ರ ॥

ನಾಗ ನಾಗೇಂದ್ರಶಯನಂ ನಾಗಾನಾಮಧಿಪ ಪ್ರಭೋ ।
ಆಗಮಸ್ತುತಚಾರಿತ್ರ ಯೋಗೀಂದ್ರಪ್ರಿಯ ದರ್ಶಯ ॥

ಶ್ರೀಮಹರುದ್ರದೇವರಸ್ತೋತ್ರ ॥

ಗಂಗಾಧರೋ ಮಂಗಲನಾಮ ಮೂರ್ಧ್ನಿ
ಧ್ಯಾನಾಂತರಂಗೀ ಸರ್ವಲಿಂಗಾತರಸ್ಥ ।
ಉತ್ತುಂಗಕೈಲಾಸಕೃತಾಂಗವಾಸೋ
ನಿಸ್ಸಂಗಿನಂ ಮಾಂ ಸಮುಪಾಜಗಾಮ ॥
ಗಿರೀಂದ್ರವಾಸ ಗೌರೀಶ ಪುರನಾಶ ಸತಾಂ ವಶ ।
ಫಣೀಂದ್ರಭೂಷ ನಿರ್ದೋಷ ಮಮ ತೋಷಕರೋ ಭವ ॥

ಶ್ರೀಭೂತರಾಜಸ್ತುತಿಃ ॥

ಗಣ್ಯೈಃಸ ನಾರಾಯಣಭೂತನಾಥಃ
ಸಮನ್ವಿತಃ ಕರ್ಣವಿಕರ್ಣಸಂಜ್ಞೈಃ ।
ಮಹಮಣೀನಾಂ ಬಹುಲೈಃ ಸುಕೀರ್ಣ
ಮೌಲಿಂ ದದೌ ಮೇ ಶಿರಸಿ ಸ್ಥಿರೋಽಭೂತ್ ॥

ಭೂತರಾಜ ನಮಸ್ತುಭ್ಯಂ ವಾದಿರಾಜಗುರೋಃಪ್ರಿಯ।
ವಿದ್ರಾವ್ಯ ಸರ್ವಬಾಧಾಂ ನಃ ಸದಾ ತ್ವಂ ರಕ್ಷಣಂ ಕುರು ॥

ಶ್ರೀವೃಂದಾವನಚಾರ್ಯಸ್ತುತಿಃ ॥

ವಾದಿರಾಜಸದೋಪಾಸ್ಯಹಯಗ್ರೀವಪದಾನುಗಾನ್ ।
ವಂದೇ ವೃಂದಾವನಾಚಾರ್ಯಾನ್ ವಿಶ್ವಪ್ರಿಯಗುರೂನ್ ಮುದಾ ॥

ಶ್ರೀಧವಲಗಂಗಾಸ್ತೋತ್ರ ॥

ಗಂಗಾ ಸುಮಂಗಲತರಂಗವತೀ ಸ್ವಭಕ್ತ-
ಪಾಪೌಘಭಂಗಕರಿಣೀ ತರಿಣೀ ಭವಾಬ್ಧೇಃ ।
ಸಾ ಮಾನಿನೀ ಪರಮಪಾವನಪಾವನೀ ಚ
ವೃಂದಾವನಸ್ಯ ಮಮ ಪಶ್ಚಿಮಗಾ ವಿಭಾತಿ ॥

ಶ್ರೀ ವಿಶ್ವೋತ್ತಮತೀರ್ಥಸ್ತುತಿ ॥

ಕೋಲವ್ಯಾಸ ಹಯಗ್ರೀವ ಪದಕಂಜ ಮಧುವ್ರತಮ್
ಶ್ರೀ ವಿಶ್ವೋತ್ತಮಯೋಗೀಂದ್ರಂ ವಂದೇಽಹಂ ವಾದಿರಾಟ್ ಪ್ರಿಯಮ್ ॥

ಶ್ರೀ ಭೂತರಾಜ ಸ್ತೋತ್ರಮ್

ಪಸಾದಾರ್ಥಂ ಸದಾ ನಾರಾಯಣಭೂತಾಖ್ಯಮಾದರಾತ್ ।
ವಾದಿರಾಜ ಗುರೋರ್ದೂತಂ ಭೂತರಾಜಂ ನತೋಽಸ್ಮೃಹಮ್ ॥ ೧ ॥

ಸ್ಮರತಾಂ ನಿಯಮೇನೈವ ಭೂತಭೀತ್ಯಾದಿಭಂಜನಮ್ ।
ವಾದಿರಾಜಗುರೋರ್ದೂತಂ ಭೂತರಾಜಂ ನತೋಽಸ್ಮ್ಯಹಮ್ ॥ ೨ ॥

ಗುರೋರ್ದಕ್ಷಿಣಭಾಗಸ್ಥಂ ಭಜತಾಂ ಭದ್ರದಂ ದ್ರುತಮ್ ।
ವಾದಿರಾಜ ಗುರೋರ್ದೂತಂ ಭೂತರಾಜಂ ನತೋಽಸ್ಮ್ಯಹಮ್ ॥ ೩ ॥

ಭೃತ್ಯೈಃಕರ್ಣವಿಕರ್ಣಾಖ್ಯೈರ್ಯುಕ್ತಂ ಭೂತಗಣೈಃ ಸದಾ ।
ವಾದಿರಾಜ ಗುರೋರ್ದೂತಂ ಭೂತರಾಜಂ ನತೋಽಸ್ಮ್ಯಹಮ್ ॥ ೪ ॥

ಕ್ರೂರಂ ಘೋರಂ ತಥಾ ಶೂರಂ ಧನುಃ ಖಡ್ಗಾದಿಧಾರಿಣಮ್ ।
ವಾದಿರಾಜ ಗುರೋರ್ದೂತಂ ಭೂತರಾಜಂ ನತೋಽಸ್ಮ್ಯಹಮ್ ॥ ೫ ॥

ಪ್ರತಾತವಂತಂ ವೀರಾಗ್ರ್ಯಂ ವೀರಭದ್ರೋಪಮಂಹೃದಿ ।
ವಾದಿರಾಜ ಗುರೋರ್ದೂತಂ ಭೂತರಾಜಂ ನತೋಽಸ್ಮ್ಯಹಮ್ ॥ ೬ ॥

ರಾಜಸೇವಾರತಂ ಲೋಕೇ ರಾಜಮಾನ್ಯಂ ರವಿಪ್ರಭಮ್ ।
ವಾದಿರಾಜ ಗುರೋರ್ದೂತಂ ಭೂತರಾಜಂ ನತೋಽಸ್ಮ್ಯಹಮ್ ॥ ೭ ॥

ರಕ್ತಾಂಬರಧರಂ ರಮ್ಯಪುಷ್ಪಮಾಲಾಸುಶೋಭಿತಮ್ ।
ವಾದಿರಾಜ ಗುರೋರ್ದೂತಂ ಭೂತರಾಜಂ ನತೋಽಸ್ಮ್ಯಹಮ್ ॥ ೮ ॥

ರತ್ನೌಘವಲಯೋಪೇತಂ ಮುಕ್ತಾಹಾರವಿಭೂಷಿತಮ್ ।
ವಾದಿರಾಜ ಗುರೋರ್ದೂತಂ ಭೂತರಾಜಂ ನತೋಽಸ್ಮ್ಯಹಮ್ ॥ ೯ ॥

ಅರ್ಕಾಭಾಂಗದಸಂಯುಕ್ತಂ ರತ್ನ ಕುಂಡಲ ಮಂಡಿತಮ್ ।
ವಾದಿರಾಜ ಗುರೋರ್ದೂತಂ ಭೂತರಾಜಂ ನತೋಽಸ್ಮ್ಯಹಮ್ ॥ ೧೦ ॥

ಉತ್ತುಂಗತುರಗಾರೂಢಂ ಛತ್ರಚಾಮರ ಸೇವಿತಮ್ ।
ವಾದಿರಾಜ ಗುರೋರ್ದೂತಂ ಭೂತರಾಜಂ ನತೋಽಸ್ಮ್ಯಹಮ್ ॥ ೧೧ ॥

ದಿವ್ಯಚಂದನಲಿಪ್ತಾಂಗಂ ಕಸ್ತೂರಿತಿಲಕಾಂಚಿತಮ್ ।
ವಾದಿರಾಜ ಗುರೋರ್ದೂತಂ ಭೂತರಾಜಂ ನತೋಽಸ್ಮ್ಯಹಮ್ ॥ ೧೨ ॥

ಅಚಿಂತ್ಯಾದ್ಭುತ ಸನ್ಮೂರ್ತಿಂ ಕಿರೀಟೋಜ್ವಲಮಸ್ತಕಮ್ ।
ವಾದಿರಾಜ ಗುರೋರ್ದೂತಂ ಭೂತರಾಜಂ ನತೋಽಸ್ಮೃಹಮ್ ॥ ೧೩ ॥

ಕುಬೇರಕೋಶಾದಾನೀತದಿವ್ಯಮೌಲೀಂದುಪಾರ್ಷದಮ್ ।
ವಾದಿರಾಜ ಗುರೋರ್ದೂತಂ ಭೂತರಾಜಂ ನತೋಽಸ್ಮ್ಯಹಮ್ ॥ ೧೪ ॥

ಮಸ್ತಕಾರ್ಪಿತ ತನ್ಮೌಲಿಂ ವಾದಿರಾಜಸ್ಯ ಸನ್ಮುನೇಃ ।
ವಾದಿರಾಜ ಗುರೋರ್ದೂತಂ ಭೂತರಾಜಂ ನತೋಽಸ್ಮ್ಯಹಮ್ ॥ ೧೫ ॥

ಮಾನೇನ ಗುರುಣಾ ದತ್ತೇ ನೂಪೂರೇ ದಧತಂಮುದಾ ।
ವಾದಿರಾಜ ಗುರೋರ್ದೂತಂ ಭೂತರಾಜಂ ನತೋಽಸ್ಮ್ಯಹಮ್ ॥ ೧೬ ॥

ತಸ್ಮಾದ್ ಗುರೋಃ ಪ್ರಸಾದಸ್ಯ ಪೂರ್ಣಪಾತ್ರಂ ತಪೋನಿಧಿಮ್ ।
ವಾದಿರಾಜ ಗುರೋರ್ದೂತಂ ಭೂತರಾಜಂ ನತೋಽಸ್ಮ್ಯಹಮ್ ॥ ೧೭ ॥

ರಕ್ಷಕಂ ಮಹಿಮಾಸಕ್ತಂ ಸದಾ ಸರ್ವತ್ರ ಸರ್ವದಾ ।
ವಾದಿರಾಜ ಗುರೋರ್ದೂತಂ ಭೂತರಾಜಂ ನತೋಽಸ್ಮ್ಯಹಮ್ ॥ ೧೮ ॥

ವಾದಿರಾಜಗುರೋರ್ದೂತಭೂತರಾಜಸ್ತುತಿಂ ಸದಾ ।
ಯಃ ಪಠೇಚ್ಚಿಂತಿತಂಕ್ಷಿಪ್ರಂ ಭವೇತ್ತಸ್ಯನ ಸಂಶಯಃ ॥ ೧೯ ॥

ಶ್ರೀ ವಾದಿರಾಜ ಹೃತ್ಪದ್ಮಸಂಸ್ಥಿತಂ ತುರಗಾನನಮ್ ।
ಭಜಾಮಿ ಸತತಂ ಸರ್ವವಿನುತಂ ಚಿತ್ತಶುದ್ಧಯೇ ॥ ೨೦ ॥

ಇತಿ ಭೂತರಾಜ ಸ್ತೋತ್ರಂ ಸಂಪೂರ್ಣಮ್

೮. ಪರಿಶಿಷ್ಟ

ಶ್ರೀ ಭಾವೀ ಸಮೀರ ವಾದಿರಾಜರಿಂದ ರಚಿಸಲ್ಪಟ್ಟ ಕನ್ನಡ ಕೀರ್ತನೆಗಳು

"ನಾರಾಯಣನ ನೆನೆ"

೧

ನಾರಾಯಣನ ನೆನೆ ಮನವೆ ನಾರಾಯಣನ ನೆನೆ
ನಾರಾಯಣನ ವರ್ಣಿಸು ಮನ್ನಿಸು
ಆರಾಧನೆಗಳ ಮಾಡುತ ಪಾಡುತ
ನೀರಾಜನದಿಂದ ಅರ್ಚಿಸು ಮೆಚ್ಚಿಸು
ಪಾರಾಯಣ ಪ್ರೀಯನ ವೇದ ಪಾರಾಯಣ ಪ್ರೀಯನ ॥ ನಾರಾಯಣನ ॥

ಅವನ ಶ್ರವಣ ಮನನ ನಿಧಿಧ್ಯಾಸನ
ಆ ವಿಷ್ಣುವಿನ ಭಕ್ತಿ ಮಹಾ ಪ್ರಸಾದಂಗಳು
ಕೈವಲ್ಯ ಪದಕಿಕ್ಕಿದ ನಿಚ್ಚಣಿಕೆಂದು ಭಾವಜ್ಞರು ಪೇಳ್ವರು
ಜೀವಕೆ ಜನವ ಬಾಧೆಗಳನು ತಪ್ಪಿಸಿ
ಪಾವನಪುರದೊಳಗೆಂದೆಂದೂ ಆವಾಸನ ಮಾಡಿ
ಸುಖಿಸಬೇಕಾದರೆ ಸೇವಿಸು ವೈಷ್ಣವರ ನೀ ಸೇವಿಸು ವೈಷ್ಣವರ ॥

ದ್ವಾರಾವತಿಯ ಗೋಪೀಚಂದನದಿಂದ ಶ್ರೀ ರಮಣನ
ದಿವ್ಯ ನಾಮವ ನೆನೆದೆರೆಡಾರು ಊರ್ಧ್ವಪುಂಡ್ರಂಗಳ ಧರಿಸುತ
ವೀರ ವೈಷ್ಣವ ಗುರುವ, ಸೇರಿ ಸಂತಪ್ತ ಸುದರ್ಶನ ಶಂಖವ,
ಧಾರಣವನು ಭುಜಯುಗದೊಳು ಮಾಡಿ ಮುರಾರಿಯ
ಮಂತ್ರಗಳವರಿಂದಲಿ ಕೇಳಿ ಓರಂತೆ ಜಪಿಸುತಿರು ॥

ಕಂದ ಬಾರೆಂದರೆ ನಂದನಿಗೊಲಿದ ಕುಂದುಕೊರತೆ
ಬಂದರೆ ನೊಂದು ಕೊಳ್ಳನು ಇಂದಿರೆಯರಸ
ಮುಕುಂದನೆ ಮುಕುತಿಯಾನಂದವನೀವ ದೇವ ಆನಂದವ ನೀವ ದೇವ
ಸಂದೇಹವಿಲ್ಲದೆ ಒಂದೇ ಮನದಿ ಗೋವಿಂದನ ನೆನೆದ
ಗಜೇಂದ್ರನಿಗೊಲಿದ ಉಪೇಂದ್ರನ ಶುಭಗುಣಸಾಂದ್ರನ
ಯದುಕುಲ ಚಂದ್ರನ ವಂದಿಸಿರೋ ಯದುಕುಲ ಚಂದ್ರನ ವಂದಿಸಿರೋ ॥

ತುಷ್ಟನಹುದೊ ಎಳ್ಳಷ್ಟು ಮುಂದಿಟ್ಟರೆ ಅಷ್ಟಿಷ್ಟೆನ್ನದೆ
ಸಕಲೇಷ್ಟಂಗಳ ಕೊಟ್ಟು ಕಾವನು ಶಕ್ರನಿಗೆ

ತ್ರಿವಿಷ್ಟಪ ಪಟ್ಟವ ಗಟ್ಟಿದವ, ತ್ರಿವಿಷ್ಟಪ ಪಟ್ಟವಗಟ್ಟಿದವ
ನಿಷ್ಠುರನಲ್ಲ ವಿಶಿಷ್ಟರಿಗೊಲಿದಿಹ ದುಷ್ಟರ
ತರಿದಟ್ಟಿದ ಜಗಜಟ್ಟಿ ಅರಿಷ್ಟ ಮುಷ್ಟಿ ಕಾದ್ಯರ
ಹುಡಿಗುಟ್ಟಿದ ವಿಠ್ಠಲ ಬಲುದಿಟ್ಟ ನಮ್ಮ ವಿಠ್ಠಲಬಲುದಿಟ್ಟ ॥

ಲೋಕದಿ ವರಂವರೆಯ ಭದ್ರಂತೇ ಋತೇ ಕೈವಲ್ಯಮಾತ್ಮನಃ
ಏಕ ಏವೇಶ್ವರಸ್ತಸ್ಯ ಭಗವಾನ್ ವಿಷ್ಣುರವ್ಯಯಃ
ಎಂಬ ಈ ಕಲಿಯುಗದಲ್ಲಿ ಬೇಕಾದ ಪುರಾಣ
ವಾಕು ವಿವೇಕದಿ ಮನದಿ ವಿಚಾರಿಸಿ
ಸ್ವೀಕರಿಸು ವೈಷ್ಣವರ ಮತವ ನಿರಾಕರಿಸನ್ಯಮತವ ॥

ಆವನ ಪಕ್ಷ ಬಲಕ್ಕಿದಿರಿಲ್ಲ ಕೇಳಾವನ
ಕುಕ್ಷಿಯೊಳಕ್ಕು ಜಗತ್ರಯ ಅವನು ರಕ್ಷಿಪ
ಶಿಕ್ಷಿಪನೋ ಮತ್ತಾವನು ಪಾವನನೊ ಮತ್ತಾವನು ಪಾವನನೋ
ಅವನ ಶಿಕ್ಷೆಗೆ ಮಿಕ್ಕವರಿಲ್ಲ ಕೇಳಾವನುಪೇಕ್ಷೆಗೆ
ಕುಲಕ್ಷಯವೆನಿಪುದು ಅವನುರುಕ್ರಮ
ತ್ರಿವಿಕ್ರಮನೆನಿಸಿದಾ ದೇವನಿಗಾವನೆಣೆ ನಮ್ಮ ದೇವನಿಗಾವನೆಣೆ ॥

ವೋಡ್ಯಾಡುವ ದೇವತೆಗಳು ಬಲ್ಲರು ಕೂಡುವ
ನೋಡುವ ಮುಕುತರೆ ಬಲ್ಲರು ಬೇಡುವ
ಮುನಿಗಳು ಬಲ್ಲರು ಅವನೊಡನಾಡುವ ರಮೆ ತಾ ಬಲ್ಲಳು
ಹಾಡುವ ಪಾಡುವ ಯಶೋದೆ ಬಲ್ಲಳು ಕಾಡುವ
ಖೂಳರ ಆಡುತ ಕೆಡಹಿದ ನಾಡೊಳು ಶರಣರ
ಕೇಡುಕಳೆದ ಕೃಷ್ಣ ಗೀಡೆನ್ನದಿರು ಮೂಢ, ಈಡೆನ್ನದಿರು ಮೂಢ ॥

ಹರಿ ನಿರ್ಮಾಲ್ಯವ ಶಿರದಲ್ಲಿ ಧರಿಸು
ಶ್ರೀಹರಿ ನೈವೇದ್ಯವ ಭುಂಜಿಸುತಿರು ನಿತ್ಯ
ಇರುಳು ಹಗಲು ಹರಿಸ್ಮರಣೆಯ ಬಿಡದಿರು ದುರುಳರ ಕೂಡದಿರು ।
ಹರಿಪದ ತೀರಥ ನೇಮವ ಬಿಡದಿರು ಹರಿ
ಪರದೇವತೆಯೆಂದುರುಪುತಲಿರು ಗುರುಮುಖದಿಂದ
ಸಚ್ಛಾಸ್ತ್ರ ಪುರಾಣದ ನಿರುತದಿ ಕೇಳುತಿರು ॥

ಸಿರಿದೇವಿಯು ಯಾವನಿಗರಸಿಯು ಸುರಗುರು
ವಿರಿಂಚಿಪವನರು ಆವನ ಕುವರರು
ಉರಗಾಧಿಪನಾವನ ಮಂಚ ವಿಹಗೇಶ್ವರ ನಾವನ ವಾಹನ
ಪುರಹರನಾವನುಂಗುಟ ನೀರಪೊತ್ತ
ನಿರ್ಜರಪತಿಯಾವನ ಚರಣ ಸೇವಕನಾದ
ಸುರರೊಳಗಾ "ಹಯವದನ" ಗಿನ್ನಾರು ಸರಿಯೆಂದುಸುರುವೆನಯ್ಯಾ ॥ ನಾರಾಯಣನೆನೆ ॥

೨

ಅಟ್ಟತಾಳ

ಲಕ್ಷುಮಿನಾರಾಯಣ ಜಯ । ಲಕ್ಷುಮಿನಾರಾಯಣ ಪ

ಸರ್ವಲೋಕ ಶರಣ್ಯ ಶಾಶ್ವತ । ಸರ್ವವಂದಿತಪಾದ ದಾನವ ।
ಗರ್ವಹರಣ ಗದಾರಿಧಾರಣ । ಪರ್ವತಾರಿ ವರಪ್ರದ ॥ ೧

ನಂಬಿಕೊಂಡಿಹೆ ನಿನ್ನ ದಿವ್ಯ ಪ । ದಾಂಬುಜಗಳನು ಸರ್ವಕಾಲದಿ ।
ಅಂಬುಜಾಲಯೆ ಸಹಿತ ಮನದೊಳ । ಗಿಂಬುಗೊಳು ಕಮಲಾಂಬಕ ॥ ೨

ಆರುಸಂಖ್ಯೆಯ ಕಳ್ಳರೆನ್ನನು । ಗಾರುಮಾಡುವರಾದರಿಂದತಿ ।
ಧೀರ ನಿನ್ನ ಪದಾರವಿಂದಕೆ । ದೂರುವೆನು ರಘುವೀರನೆ ॥ ೩

ದುರ್ಮತಿಗಳಾದಸುರ ಹರಣಕೆ । ಭರ್ಮಗರ್ಭನು ಬಂದು ಸ್ತುತಿಸಲು ।
ಧರ್ಮಸಂಸ್ಥಾಪಿಸುತ ಬಹು ಶುಭ । ಕರ್ಮ ತೋರುವ ಕರುಣಿಯೆ ॥ ೪

ಸಪ್ತಋಷಿಗಳ ಕೂಡಿಕೊಂಡತಿ । ಭಕ್ತಿಯಿಂದಲಿ ನಿನ್ನ ಭಜಿಸಿದ ।
ಸತ್ಯವ್ರತನಿಗೆ ಸಕಲ ಶ್ರುತಿಗಳ । ತತ್ವತಿಳಿಸಿದ ಮತ್ಸ್ಯನೆ ॥ ೫

ಅಮರ ದೈತ್ಯರು ಅಂಬುನಿಧಿಯೊಳು । ಭ್ರಮಣಗೊಳಿಸಲು ಮುಳುಗಿಕೊಂಡಿಹ ।
ಅಮಿತಗುರು ಮಂದರವ ಧರಿಸುತ । ಅಮೃತರಸ ತಂದಿತ್ತನೆ ॥ ೬

ಧಾತ್ರಿಯನು ಕದ್ದೊಯ್ದು ಹಾಟಕ । ನೇತ್ರನ ತೆಗೆದು ಬಿಸುಟು । ಪ ।
ಧಾತ್ರನಾಸಾಕುಹರಜನಿತ ಪ । ವಿತ್ರ ಯಜ್ಞವರಾಹನೆ ॥ ೭

ಹುಡುಗ ಪೇಳಿದ ಮಾತಿನಿಂದ ಘುಡಿಘುಡಿಸಿ ಕಂಭದೊಳು ಬಂದ ।
ಸಿಡಿಲಿನಂತಿಹ ನಖದೆ ದೈತ್ಯನ । ಒಡಲ ಬಗೆದ ಕೋಪದಿಂದ ॥ ೮

ಮಾಣಿಯಂದದಿ ಹೋಗಿ ಭೂಮಿಯ । ದಾನ ಕೊಂಡಾ ನೆವನದಿ ।
ದಾನವಾಹೃತ ಧರೆಯ ಕಶ್ಯಪ । ಸೂನುಗಳಿಗೊಲಿದಿತ್ತನೆ ॥ ೯

ದುಷ್ಟ ಭೂಭುಜ ಭಾರದಿಂದಲಿ । ಕಷ್ಟಬಡುತಿಹ ಧರೆಯ ಕರುಣಾ ।
ದೃಷ್ಟಿಯಿಂದಲಿ ನೋಡಿ ಕೊಡಲಿಯ । ಪೆಟ್ಟಿನಿಂದಲಿ ನೃಪರ ಕಡಿದ ॥ ೧೦

ಸೀರಜಾವದನಾರವಿಂದ ಮ । ಹಾ ರಸಾಸ್ವಾದನ ಪರ ಕಪಿ ।
ವೀರನಿಗೆ ಸ್ವರಾಜ್ಯ ನೀಡಿದ । ಮಾರುತಿಗೆ ದಯಮಾಡಿದ ॥ ೧೧

ಬಾಲಲೀಲೆಯ ತೋರಿ ಗೋಪಿಕ । ಬಾಲೆಯರ ಕೂಡಾಡಿದ ।
ಖೂಳ ಕಂಸನ ಕೆಡಹಿ ದಾನವ । ಮೂಲಕಿತ್ತು ಬಿಸಾಡಿದ ॥ ೧೨

ದಾನವರ ಮೋಹಿಸುವೆ ನಂದನು । ಮಾನವಿಲ್ಲದ ನಗ್ನನಾಗಿ ।
ಹೀನ ಬುದ್ಧಿಯ ತಿಳಿಸಿ ತ್ರಿಪುರರ । ಹಾನಿಗೈಸಿದ ಬೌದ್ಧನೆ ॥ ೧೩

ಮಿಂಚನೊಡ್ಡಿದ ಮೇಘದಂದದ । ಪಂಚವರ್ಣದ ತುರುಗವೇರಿ ।
ಸಂಚರಿಸಿ ಮ್ಲೇಂಛರನ ಗೆಲಿದ ಶ್ರೀ । ಲೋಂಛ ಜೀವರ ವರದನೆ ॥ ೧೪

ಮಂಗಳಾಯತ ನಿನ್ನ ಕರುಣಾ । ಪಾಂಗ ಸುಧೆಯನು ಕರೆದ ಶಿರದಲಿ ।
ತುಂಗ ವಿಷಯ ತರಂಗ ತಪ್ಪಿಸು । ಲಿಂಗಭಂಗದ ಸಿಂಗನೆ ॥ ೧೫

ಮಂದಿರದಿ ನೀ ಬಂದು ರಕ್ಷಿಪೆ । ಯೆಂದು ಸಕಲಾನಂದಗೊಂಡಿಹೆ ।
ಇಂದಿರೇಶನೆ ಎಂದಿಗೂ ಈ । ಅಂದದಿಂದಲಿ ನಿಂದು ಸಲಹೋ ॥ ೧೬

ಕೇಶವಾದಿ ಚತುರ ವಿಂಶತಿ । ಮಾಸಗಳಧಿಷ್ಠಾನ ನಿನಗೆ ।
ಪರೇಶ ಕಡೆಯಲಿ ಬರುವ ಕಾರ್ತಿಕ । ವಾಸಿ ದಾಮೋದರ ಹರೇ ॥ ೧೭

ಛಳಿಯೊಳೇಳುತ ಮುಳುಗಿ ಜಲದೊಳು । ಬಳಲಿ ಕರ್ಮವ ಮಾಡಲಾರೆ ।
ನಳಿನಜಾರ್ಚಿತ ನಿನ್ನ ಪಾದದ । ನೆಳಲ ನಂಬಿ ಸುಮ್ಮನಿರುವೆ ॥ ೧೮

ಅಖಿಲ ದೋಷನಿವಾರಣಾದ್ಭುತ । ಸಕಲ ಸದ್ಗುಣಧಾರಣ ।
ಮಕರ ಕುಂಡಲಧಾರಿ ವೇಂಕಟ । ಶಿಖರಸ್ಥಿತಿ ಸುಖಕಾರಣ ॥ ೧೯

ಪಕ್ಷಿವಾಹನವಂತೆ ನಿನಗೆ । ಸರ್ಪ ನಿನ್ನ ಶಯನವಂತೆ ।
ಮುಕ್ಕಣ್ಣಾ ಮೊಮ್ಮಗನಂತೆ । ಮುದ್ದು ಮುಖದ ಚಲುವನಂತೆ ॥ ೨೦

ಕಡಲ ಮಗಳ ಗಂಡನಂತೆ । ಕರಡಿ ಮಗಳು ಮಡದಿಯಂತೆ ।
ಬಡಗಿನಿಂದ ಬಂದೆಯಂತೆ । ಮಧ್ವಮುನಿಗೆ ಒಲಿದೆಯಂತೆ ॥ ೨೧

ದೇವರ ದೇವನೆ ಬಾರೋ । ದೇವಕೀನಂದನ ಬಾರೋ ।
ದೇವೇಂದ್ರರನ್ನ ಸಲಹಿದು । ದೇವ ಬಾ ನರಹರಿಯೆ ॥ ೨೨

ಕೊಲ್ಲು ಬೇಗ ಖಳರ ಶ್ರೀ । ನಲ್ಲ ಮಧ್ವ ವಲ್ಲಭ ।
ಕೊಲ್ಲದಿದ್ದರೊಲ್ಲರಿವರು । ಕಲಿಯುಗದ ಕಳ್ಳರು ॥ ೨೩

ಎಲ್ಲ ಕೂಡಿ ನಿನ್ನ ಪೂಜೆಗೆ । ಕಲ್ಲುಹಾಕುತ್ತಲಿಹರು ।
ಚಲ್ಲುವ ಹಯವದನ ಅವರ । ಕೊಲ್ಲು ಕೊಲ್ಲು ನಮ್ಮ ಗೆಲಿಸು ॥ ೨೪

ಭಜನ ಪದ್ಧತಿಯವರು ಈ ಪದವನ್ನು ತಾಳ ಬಾರಿಸುತ್ತಾ, ಒಟ್ಟಾಗಿ ನರ್ತನ ಸೇವೆಯ ಕಾಲದಲ್ಲಿ ಹಾಡುವರು. ಸಮಯ ಸನ್ನಿವೇಶಗಳ ಬಲದಿಂದ ಈ ಪದವು ಬಲು ಭಕ್ತಿಯನ್ನುಂಟು ಮಾಡುವುದು.

೩

ರಾಗ : ನೀಲಾಂಬರಿ **ತಾಳ : ಮಿಶ್ರಛಾಪು**

ಏನು ಸುಕೃತದ ಮಾಡಿದಳೊ ಯಶೋದೆ
ಶ್ರೀನಿಧಿಯಾದ ಕೃಷ್ಣನ್ನ ಕರೆದು ಮುದ್ದಿಸುವಳಂತೆ ಪ

ಗಂಗಾಜನಕನಿಗೆ ಗಡಿಗೆ ನೀರೆರೆವಳಂತೆ
ಮಂಗಳಾಂಗಗೆ ಶೃಂಗರಿಸುವಳಂತೆ
ತುಂಗ ಭೂಧರನ್ನ ತೊಟ್ಟಿಲೊಳು ತೂಗುವಳಂತೆ
ಕಂಗಳಿಗಗೋಚರನ ಕರೆದಪ್ಪಿಕೊಂಬಳಂತೆ ೧

ನಗವನೆತ್ತಿದವನ ಮಗುವೆಂದೆತ್ತುವಳಂತೆ
ನಿಗಮಗೋಚರನ ತಾ ನಿಟ್ಟಿಪಳಂತೆ
ಅಗಣಿತಸತ್ವನ್ನ ಹಗ್ಗದಿ ಕಟ್ಟುವಳಂತೆ
ಮಿಗೆ ನಿತ್ಯತೃಪ್ತಗೆ ಪಾಲನೆರೆವಳಂತೆ ೨

ಬಹುಮುಖನಿಗೆ ಭಾಮೆ ಮುದ್ದುಕೊಡುವಳಂತೆ
ಅಹಿತಲ್ಪನಿಗೆ ಹಾವತುಳಿದೀಯೆಂಬಳಂತೆ
ಮಹಾ ದೈತ್ಯದಲ್ಲಣನಿಗೆ ಬಹು ಭಯವ ತೋರುವಳಂತೆ
ಮಹಿಮೆ ನರಸಿಂಹಗೆ ಗುಮ್ಮನ ತೋರುವಳಂತೆ ೩

ಚತುರ್ಮುಖಪಿತನ ಸುತನೆಂದೆತ್ತುವಳಂತೆ
ಶ್ರುತಿವಿನುತಗೆ ಜೋಗುಳ ಪಾಡುವಳಂತೆ
ಶತರವಿತೇಜಗಾರತಿಯನೆನ್ನುವಳಂತೆ
ಗತಭೀತನಿಗೆ ಭಾಮೆ ರಕ್ಷೆಯಿಕ್ಕುವಳಂತೆ ೪

ಕಡೆಗೋಲ ನೇಣ ಕೈಯಲಿ ಪಿಡಿದೊಲವಿಂದ
ಪಡುಗಡಲತಡಿಯ ದ್ವಾರಕೆ ನಿಲಯ
ಬಿಡದೆ ನೆಲೆಸಿದ ಹಯವದನ ಮುದ್ದು
ಉಡುಪಿನ ಕೃಷ್ಣನ ಉಡಿಯೊಳೆತ್ತುವಳಂತೆ ೫

೪

ರಾಗ : ಕೇದಾರಗೌಡ **ತಾಳ : ಅರೆಝಂಪೆ**

ನೆನೆವೆನನುದಿನ ನೀಲನೀರದವರ್ಣನ ಗುಣರನ್ನನ
ಮುನಿಜನಪ್ರಿಯ ಮುದ್ದು ಉಡುಪಿನ ರಂಗನ ದಯಾಪಾಂಗನ ಪ

ದೇವಕಿ ಜಠರೋದಯಾಂಬುಧಿ ಚಂದ್ರನ ಸುಖಸಾಂದ್ರನ
ಗೋವ್ರಜಕೆ ಘನ ಯಮುನೆಯನು ದಾಟಿ ಬಂದನ ಅಲ್ಲಿ ನಿಂದನ
ಮಾವ ಕಳುಹಿದ ಮಾಯ ಶಠವಿಯ ಕೊಂದನ ಚಿದಾನಂದನ
ದೇವರಿಪು ದೈತ್ಯೇಂದ್ರ ಶಕಟನ ಒದ್ದನ ಶ್ರುತಿಸಿದ್ಧನ ೧

ಗೋಕುಲದ ಗೋಪಿಯರ ಸಂಚಿತ್ತ ಚೋರನ ಬಹು ಧೀರನ ಅ-
ನೇಕ ನಾರಿಯರ್ವಸನವನು ಕದ್ದೊಯ್ದನ ಮುರಗಾಯ್ದನ
ನಾಕಿಯರ ನೋಯಿಪ ಧೇನುಕ ವತ್ಸವಿಘಾತ ವಿಖ್ಯಾತನ

ಕಾಕುಮತಿ ಕಾಳಿಂಗನ ಫಣ ತುಳಿದನ ಅವಗೊಲಿದನ ೨

ಶೈಲವನು ಶೇಷಶಯನ ಬೆರಳಲಿ ಅಂತನ ಬಲವಂತನ
ಸೋಳ ಸಾಸಿರ ಬಾಲೆಯರ ಕರ ಪಿಡಿದನ ಸುಧೆಗುಡಿದನ
ಬಾಲ ಭಾಮೆಯರೊಡನೆ ಜಲಕ್ರೀಡೆಗಿಳಿದನ ಅಲ್ಲಿ ನಲಿದನ
ಲೀಲೆಯಲಿ ಲಲನೆಯರಿಗಿಷ್ಟವ ಕೊಟ್ಟನ ಸಂತುಷ್ಟನ ೩

ಕ್ರೂರ ಬಕಕೇಶಿಗಳನೆಲ್ಲ ಸೀಳ್ದನ ಸುರರಾಳ್ದನ ಅ-
ಕ್ರೂರ ಕರೆಯಲು ಹರುಷದಿಂದಲಿ ಬಂದನ ಸುರ ವಂದ್ಯನ
ಸಾರಿ ಕುಬ್ಜೆಗೆ ಭೂರಿಸಂತಸವಿತ್ತನ ಅತಿಶಕ್ತನ
ವಾರಣವ ಒದ್ದು ಕೆಡಹಿದಾಪ್ರತಿಮಲ್ಲನ ಅತಿ ಚೆಲ್ವನ ೪

ಸುಲಭದಿಂದಲಿ ಶಿವನ ಧನುವನು ಮುರಿದನ ನೆರೆಮೆರೆದನ
ಮಲೆತ ಮಲ್ಲರ ಮಡುಹಿ ರಂಗದಿ ನಿಂತನ ಜಯವಂತನ
ಖಳಕುಲಾಗ್ರಣಿ ಕಂಸನೆಂಬನ ಹೊಡೆದನ ಹುಡಿಗೆಡೆದನ
ಬಲದಿ ತಾಯಿತಂದೆ ಬಂಧನ ಕಡಿದನ ಕೀರ್ತಿಪಡೆದನ ೫

ಭುವನಪಟ್ಟವನುಗ್ರಸೇನಗೆ ಕೊಟ್ಟನ ಅತಿ ದಿಟ್ಟನ
ಯುವತಿಯರಿಗುದ್ಧವನ ಕಳುಹಿದ ಜಾಣನ ಸುಪ್ರವೀಣನ
ವಿವಿಧ ವಿದ್ಯಾ ಕಲೆಗಳನ್ನೆಲ್ಲ ಅರಿತನ ಶುಭಚರಿತನ
ಜವನ ಶಿಕ್ಷಿಸಿ ದ್ವಿಜನ ಕಂದನ ತಂದನ ಆನಂದನ ೬

ಕುಮತಿ ಖಳ ಮಾಗಧನ ಯುದ್ಧದಿ ಗೆದ್ದನ ಅನವದ್ಯನ
ದ್ಯುಮಣಿಸಮ ದ್ವಾರಕೆಯ ರಚಿಸಿದುದಾರನ ಗಂಭೀರನ
ಸುಮತಿ ಮುಚುಕುಂದನೊದ್ದ ಯವನನ ಸುಟ್ಟನ ಅತಿ ದಿಟ್ಟನ
ವಿಮಲ ಸುಚಿರಿತ್ರಾಷ್ಟಮಹಿಷಿಯರಾಳ್ದನ ನೆರೆ ಬಾಳ್ದನ ೭

ಮುರ ನರಕ ಮುಖ್ಯರನು ಚಕ್ರದಿ ತರಿದನ ಕರಿವರದನ
ಸುರತರುವ ಸತಿಗಾಗಿ ತಂದ ಸಮರ್ಥನ ಜಗತ್ಕರ್ತನ
ದುರುಳ ಶಿಶುಪಾಲಾದಿ ದೈತ್ಯ ಸಂಹಾರನ ಬಹು ಶೂರನ
ಕುರುಕುಲಕೆ ಲಯವಿತ್ತ ಪಾಂಡವಪ್ರೀಯನಾ ಕವಿಗೇಯನ ೮

ಸಂತತವೀ ಸಾರ ಕತೆಯನು ಕೇಳ್ವರ ನೆರೆ ಬಾಳ್ವರ
ಕಂತುಪಿತ ಕಾರುಣ್ಯದಿಂದಲಿ ಹೊರೆವನು ಸುಖಗರೆವನು
ಇಂತು ಇಳೆಯ ಸುಜನರ ಸಲಹುವ ಕಾಂತನ ಸಿರಿವಂತನ
ಪಂಥವುಳ್ಳ ಪ್ರಸನ್ನ ಹಯವದ(ನ್ನನ) ಮುನಿಮಾನ್ಯನ ೯

೫

ರಾಗ : ಪಂತುವರಾಳಿ ತಾಳ : ತಿಶ್ರಛಾಪು

ನೆರೆನಂಬಿ ಪಡೆಯಿರೊ ಹಿತವ ನಮ್ಮ
ಗುರು ಮಧ್ವಮುನಿಯ ಸಮ್ಮತವ ಪ

ತ್ರೇತೆಯೊಳಂಜನೆ ತನಯನಾಗಿ
ಸೀತಾರಮಣ ರಘುಪತಿಗತಿ ಪ್ರಿಯ
ದೂತತನದಿ ಖಳತತಿಯ ಕೊಂದು
ಖ್ಯಾತಿ ಪಡೆದ ಹನುಮನಾದ ಯತಿಯ ೧

ದ್ವಾಪರದಲಿ ಭೀಮನೆನಿಸಿ ಪಾಂಡು–
ಭೂಪನರಸಿ ಕುಂತಿ ಉದರದಿ ಜನಿಸಿ
ಶ್ರೀಪತಿಗರ್ಥಿಯ ಸಲಿಸಿ ದೈತ್ಯ–
ರೂಪ ನೃಪನ ಕೊಂದ ಮುನಿಪನ ಭಜಿಸಿ ೨

ಕಲಿಯುಗದಲಿ ಯತಿಯಾಗಿ ಈ
ಇಳೆಯ ದುಶ್ಶಾಸ್ತ್ರವ ಜರಿದವರಾಗಿ
ಕುಲಗುರು ಮಧ್ವಪತಿಮುನಿಯೋಗಿ ನಮ್ಮ
ಬಲು ಹಯವದನನ ಬಂಟನೆಂದು ಬಾಗಿ ೩

೬

ರಾಗ : ಆನಂದಭೈರವಿ ತಾಳ : ಆದಿತಾಳ

ಬೇಗ ಬಾರೊ ಬೇಗ ಬಾರೊ ನೀಲಮೇಘವರ್ಣ ಪ

ಬೇಗ ಬಾರೊ ಬೇಗ ಬಾರೊ ವೇಲಾಪುರದ ಚೆನ್ನ ಅ.ಪ.

ಇಂದಿರ ರಮಣ ಗೋವಿಂದ ಬೇಗ ಬಾರೊ
ನಂದನ ಕಂದ ಮುಕುಂದ ಬೇಗ ಬಾರೊ ೧

ಋದ್ಧ ಸಮೃದ್ಧ ಅನಿರುದ್ಧ ಬೇಗ ಬಾರೊ
ಹದ್ದನೇರಿದ ಪ್ರಸಿದ್ಧ ಬೇಗ ಬಾರೊ ೨

ರಂಗ ಉತ್ತುಂಗ ನರಸಿಂಗ ಬೇಗ ಬಾರೊ
ಕಂಗಳಿಗೆಸೆವ ಶುಭಾಂಗ ಬೇಗ ಬಾರೊ ೩

ಧೀರ ಉದಾರ ಗಂಭೀರ ಬೇಗ ಬಾರೊ
ಹಾರಾಲಂಕಾರ ರಘುವೀರ ಬೇಗ ಬಾರೊ ೪

ಅಯ್ಯ ವಿಜಯ್ಯ ಸಾಹಯ್ಯ ಬೇಗ ಬಾರೊ ಉ–
ದಯಾದ್ರಿವಾಸ ಹಯವದನ ಬೇಗ ಬಾರೊ ೫

೭

ರಾಗ : ಮಲಯಮಾರುತ ತಾಳ : ಆದಿತಾಳ

ಕಂಜಾಕ್ಷ ಕಾಯಯ್ಯ ಕರುಣಾನಿಧಿಯೆ ಬಲ-
ಭಂಜನನನುಜನೆ ನೋಡೆನ್ನ ಪ

ಅಂಜದೆ ನಾ ನಿನ್ನ ಅಡಿಗಳಿಗೆರಗುವೆ
ಕುಂಜರವರದನೆ ಕೂಡೆನ್ನ ಅ.ಪ

ನೀನೊಲಿದಾಗಲೆ ನಿಖಿಳ ಸಂಪದ ತನ್ನಿಂ
ತಾನೆ ಬಹುದು ತಡವಿಲ್ಲ
ಆ ನಳಿನಭವಾದ್ಯಮರರಿದಕೆ ಸಾಕ್ಷಿ
ಭಾನುಸನ್ನಿಭ ಬಾರೊ ನಲ್ಲ ೧

ಪುಂಡರೀಕಾಕ್ಷನ ಪೂಜಿಪ ಭಕ್ತರ
ಮಂಡೆಯ (ಹೂವು) ಬಾಡದೆಂದು
ಕಂಡೆ ನಾ ರಣದಲ್ಲಿ ಕಲಿಪಾರ್ಥನಿಗೊಲಿದು
ಬಂಡಿಯ ಬೋವ ನೀನಾದಂದು ೨

ವೃಂದಾರಕೇಂದ್ರ ಶ್ರೀಹಯವದನ ಮುಕುಂದ
ಮಂದರೋದ್ಧಾರ ಮತ್ತೊಂದರಿಯೆ
ಇಂದಿರೆಯರಸ ಬಾ ಇಂದುವದನ ದೀನ-
ಬಂಧುವೆ ಭಕ್ತರ ಸಿರಿಯೆ ೩

೮

ರಾಗ : ಬೇಹಾಗ್ ತಾಳ : ಮಿಶ್ರಛಾಪು

ಕಂಡೆ ಕಂಡೆನು ಕೃಷ್ಣ ನಿನ್ನಯ ದಿವ್ಯಮಂಗಳ ವಿಗ್ರಹ
ಕಂಡು ಬದುಕಿದೆ ಇಂದು ನಾನು ಕರುಣಿಸೊ ಎನ್ನೊಡೆಯನೆ ಪ

ಉಟ್ಟ ದಟ್ಟಿಯು ಪಿಡಿದ ವಂಕಿಯು
ತೊಟ್ಟ ಕೌಸ್ತುಭ ಭೂಷಣ
ಮೆಟ್ಟಿದ ನವರತ್ನದ್ಹಾವಿಗೆ
ಇಟ್ಟ ಕಸ್ತೂರಿ ತಿಲಕವ ೧

ಮಂದಹಾಸವು ದಂತಪಙ್ತಿಯು
ಉಂದದ ಕಡೆಗಣ್ಣ ನೋಟವು
ಅಂದವಾದ ಕುರುಳುಗೂದಲು
ಮುದ್ದು ಸುರಿವೊ ಮುಖವ ನಾ ೨

ಮೊಲ್ಲೆ ಮಲ್ಲಿಗೆ ದಂಡೆ ಕೊರಳಲಿ
ಚೆಲ್ವ ಕಂಕಣ ಕೈಯಲಿ
ಗೊಲ್ಲಸತಿಯರ ಕುಚಗಳಲ್ಲಿ
(ಅಲ್ಲಳಿ) ಮಾಡಿ ನಗುವನ ೩

ಸುರರು ಪುಷ್ಪದ ವೃಷ್ಟಿ ಕರೆಯಲು ಅ-
ಸುರರೆಲ್ಲರು ಓಡಲು
ಕ್ರೂರ ಕಾಳಿಯ ಫಣಗಳಲ್ಲಿ
ಧೀರ ಕುಣಿಕುಣಿದಾಡಿದ ೪

ಎನ್ನ ಬಂಧನ ತರಿಸಿದನೆ
ಎನ್ನ ಪಾಪವು ಓಡಿತು
ಅನ್ಯದೈವವ ಭಜಿಸಲ್ಯಾತಕೆ
ಮನ್ನಿಸೊ ಹಯವದನನೆ ೫

೬

ರಾಗ : ಅಸಾವೇರಿ **ತಾಳ : ಆದಿತಾಳ**

ಮಧ್ವಾಂತರ್ಗತ ವೇದವ್ಯಾಸ ಕಾಯೊ
ಶುದ್ಧಮೂರುತಿಯೆ ಸರ್ವೇಶ ಪ

ಶ್ರದ್ಧೆಯಿಂದಲಿ ನಿನ್ನ ಭಜಿಸುವ ಭಕ್ತರಿಗೆ
ಬುದ್ಧ್ಯಾದಿಗಳ ಕೊಟ್ಟುದ್ಧರಿಸೊ ದೇವರ ದೇವ ಅ.ಪ

ದ್ವಾಪರದಲಿ ಒಬ್ಬ ಮುನಿಪ ತನ್ನ
ಕೋಪದಿಂದಲಿ ಕೊಡಲು ಶಾಪ
ಸ್ಥಾಪಿಸಲು ಜ್ಞಾನ ಲೋಪ
ಅಪಾರ ತತ್ವಸ್ವರೂಪ
ಶ್ರೀಪತಿಯೆ ಕಾಯೆಂದು ಮೊರೆಯಿಡೆ
ಪಾಪ ವಿರಹಿತಳಾದ ಯಮುನೆಯ
ದ್ವೀಪದಲಿ ಅಂಬಿಗರ ಹೆಣ್ಣಿನ
ರೂಪಕ್ಕೊಲಿದವಳಲ್ಲಿ ಜನಿಸಿದೆ ೧

ವೇದವಾದಿಗಳೆಲ್ಲ ಕೆಡಲು ತತ್ವ-
ವಾದಿಜನರು ಬಾಯಿ ಬಿಡಲು
ಮೇದಿನಿ ಸುರರ್ಮೊರೆಯಿಡಲು ನಾಲ್ಕು-
ವೇದ ವಿಭಾಗ ರಚಿಸಲು
ಮೋದದಿಂದ ತದರ್ಥ ಬೋಧಕ-
ವಾದ ಸೂತ್ರ ಪುರಾಣ ರಚಿಸಿ

ವಾದಗಳ ನಿರ್ವಾದ ಮಾಡಿದ
ಸಾಧುವಂದಿತ ಬಾದರಾಯಣ ೨

ಸುಮತಿಗಳಿಗೆ ನೀ ಬೋಧಿಸಿದೆ ಮಿಕ್ಕ
ಕುಮತಗಳನ್ನು ಭೇದಿಸಿದೆ
ಕ್ರಿಮಿಯಿಂದ ರಾಜ್ಯವಾಳಿಸಿದೆ ಜಗತ್-
ಸ್ವಾಮಿ ನೀನೆಂದು ತೋರಿಸಿದೆ
ವಿಮಲರೂಪನೆ ಕಮಲನಾಭನೆ
ರಮೆಯ ಅರಸನೆ ರಮ್ಯಚರಿತನೆ
ಮಮತೆಯಲಿ ಕೊಡು ಕಾಮಿತಾರ್ಥವ
ನಮಿಸುವೆನು ಹಯವದನಮೂರುತಿ ೩

೧೦

ರಾಗ : ಭೈರವಿ ತಾಳ : ಛಾಪು

ಮನ್ನಿಸೆನ್ನ ಮಧುಸೂದನ ಪ

ಮದನನಯ್ಯ ಮೋಹನಕಾಯ
ಉನ್ನತಗುಣನಿಲಯ ಉಡುಪಿನ ಕೃಷ್ಣರಾಯ ಅ.ಪ

ಶ್ರುತಿಗಳ ತಂದೆ ಮುನ್ನ ಸುರಮುನಿಗಳ ಮನ-
ಕತಿ ಹರುಷವ ಕೊಟ್ಟೆ ಅಗಣಿತಗುಣರನ್ನ
ಯತಿಗಳ ಪಾಲಿಸಿದೆ ಮುಂದುವರಿದ
ದಿತಿಜರ ಸೋಲಿಸಿದೆ ಈ ಮಹಿಯೊಳು
ಮತಿವಂತರ ಪೊರೆದೆ ಮಹಿಮೆಯಿಂದ ಮೆರೆದೆ ೧

ಅಚ್ಚಹಾರ ಶೋಭಿತ ಕಂಠ ಆಶ್ರಿತರಿಗೆ ನೀ ನಂಟ
ಮೆಚ್ಚಿದ ಪಾರ್ಥನ ಮಿತ್ರನೆನಿಸಿದೆ ಸುಚರಿತ್ರ
ಮೆಚ್ಚಿದ ನಿನ್ನಯ (ಭಕ್ತ) ವೈಕುಂಠದ
ಮುಚ್ಚಲ ತೆಗಿಸಲು ಶಕ್ತ ಅಚ್ಚುತ ನಿನ್ನ
ಅರ್ಚಿಸಿದವ ಕೃತಾರ್ಥ ಅವನೆ ಸರ್ವಸಮರ್ಥ ೨

ಎಂದೆಂದು ನಿನ್ನವರೊಳು ಎನ್ನ ಕೂಡಿಸೊ ಕೃಪಾಳು
ವಂದ್ಯ ಗರುಡನ ಸ್ಕಂಧವೇರಿ ಬಹ ಗೋವಿಂದ
ತಂದೆ ನೀನೆ ತಾಯಿ ನೀನೆ ಹಯವದನ
ಬಂಧು ನೀನೆ ಬಳಗ ನೀನೆ ಮತ್ತದರಿಂದ
ಕುಂದು ಮಾಡುವುದು ಬಿಡೋ ಕಂಡು ಕರುಣವ ಮಾಡೋ ೩

೧೧

ರಾಗ : ನಾಟಿ — ತಾಳ : ಆದಿತಾಳ

ಮನ್ನಿಸೊ ನೀ ಎನ್ನ ಮಧ್ವಮುನಿ ರನ್ನ
ಚೆನ್ನಿಗ ಶ್ರೀಹರಿಪಾದ ಸೇವಕನೆ ಪ

ಅಂಜನೆಯ ಗರ್ಭ ಪರಿಪೂರ್ಣಚಂದ್ರಮನೆ
ಕಂಜಪ್ರಿಯಸುತನಿಗೆ ಕಲ್ಪತರು ನೀನೆ
ರಂಜಿಸುವ ಶ್ರೀರಾಮಚಂದ್ರನ್ನ ಸೇವಕನೆ
ಸಂಜೀವಗಿರಿಯನು ತಂದ ಮಹಾತ್ಮನೆ ೧

ಅರ್ಜುನಗೆ ಅಣ್ಣನಾಗಿ ಅಖಿಲ ದಿಕ್ಕೆಲ್ಲವನು
ಲಜ್ಜೆಯನು ಕೆಡಿಸಿ ಷಡ್ರಥಿಕರನು ಜರಿದೆ
ಮೂಜಗವು ಮೆಚ್ಚಲು ಮಾಗಧನ ಸೀಳಿದೆ
ಸಜ್ಜನಪ್ರಿಯ ಭೀಮಸೇನ ಉದಾರ ೨

ಮೂರಾರು ಎರಡೊಂದು ಮೂಢಮತಗಳ ಜರಿದು
ಸಾರ ಮಧ್ವಶಾಸ್ತ್ರ ಸಜ್ಜನರಿಗೊರೆದೆ
ಧೀರ ಶ್ರೀ ಹಯವದನನ ಕೂರ್ಮಸೇವಕನಾದ
ಧೀರ ಮಧ್ವಾಚಾರ್ಯ ದೇಶದೊಳು ಮೆರೆದೆ ೩

೧೨

ರಾಗ : ಶಂಕರಾಭರಣ — ತಾಳ : ಆದಿತಾಳ

ಲಕ್ಷ್ಮಿ ರಮಣಗೆ ಮಾಡಿದಳು ಉರುಟಾಣಿ ಪ

ಇಳೆಯೊಳಗತಿಜಾಣೆ ಸುಂದರ ಫಣಿವೇಣಿ ಅ.ಪ.

ಮಚ್ಛ ಕಚ್ಛಪ ಕಿರನೆ ಕೇಸರಿಯಂದದ ಮುಖನೆ
ಸ್ವಚ್ಛಮುಖವ ತೋರ್‍ಯೆ ಅರಿಸಿನ ಹಚ್ಚುವೆನು ೧

ದುರುಳ ಕ್ಷತ್ರಿಯರನ್ನು ಕೊರಳ ತರಿದ ಹರಿಯೆ
ಹರುಷದಿಂ ಕೊರಳ ತೋರ್‍ಯೆ ಗಂಧವ ಹಚ್ಚುವೆನು ೨

ದಶರಥನಲಿ ಜನಿಸಿ ದಶಮುಖನ ಸಂಹರಿಸಿ
ಶಶಿಮುಖಿಯ ತಂದವನೆ ಕುಸುಮ ಮುಡಿಸುವೆನು ೩

ಹದಿನಾರು ಸಾಸಿರ ಸುದತಿಯರನಾಳಿದನೆ
ಪದುಮ ಕರವ ತೋರ್‍ಯೆ ವೀಳ್ಯವ ಕೊಡುವೆನು ೪

ವಸನ ರಹಿತನಾಗಿ ವಸುಧೆಯ ತಿರುಗಿದೆ
ಬಿಸಜನಾಭನೆ ನಿನಗೆ (ವಸನ ಉಡಿಸುವೆನು) ೫

ವರ ತುರಗವನೇರಿ ಕಲಿಯ ಸಂಹರಿಸುವಿ
ಸಿರಿಹಯವದನನೆ ಆರತಿಯೆತ್ತುವೆನು ೬

೧೩

ರಾಗ : ಪೂರ್ವಿಕಲ್ಯಾಣಿ **ತಾಳ : ಛಾಪು**

ಲೋಕ ಭರಿತನೊ ರಂಗಾನೇಕಚರಿತನೊ ಪ

ಕಾಕುಜನರ ಮುರಿದು ತನ್ನ
ಏಕಾಂತ ಭಕ್ತರ ಪೊರೆವ ಕೃಷ್ಣ ಅ.ಪ

ರಾಜಸೂಯ ಯಾಗದಲ್ಲಿ ರಾಜ ರಾಜರಿರಲು ಧರ್ಮ-
ರಾಜಸುತನುಯಿೂತನೇ ಸಭಾಪೂಜ್ಯನೆಂದು ಮನ್ನಿಸಿದನಾಗ ೧

ಮಿಕ್ಕ ನೃಪರ ಜರಿದು ಅಮಿತವಿಕ್ರಮ ಯದುವರನೆ ತನಗೆ
ತಕ್ಕ ರಮಣನೆಂದು ರುಕ್ಮಿಣಿ ಉಕ್ಕಿ ಮಾಲೆಯಕ್ಕಿದಳಾಗ ೨

ಜ್ಞಾನಶೂನ್ಯನಾಗಿ ಸೊಕ್ಕಿ ತಾನೆ ವಾಸುದೇವನೆನಲು
ಹೀನ ಪೌಂಡ್ರಕನ ಶಿರವ ಜಾಣರಾಯ ತರಿದನಾಗ ೩

ಉತ್ತರೆಯ ಗರ್ಭದಲ್ಲಿ ಸುತ್ತಮುತ್ತಿದಸ್ತ್ರವನ್ನು
ಒತ್ತಿ ಚಕ್ರದಿಂದ ನಿಜಭಕ್ತ ಪರೀಕ್ಷಿತನ ಕಾಯ್ದ ೪

ತನ್ನ ಸೇವಕಜನರಿಗೊಲಿದು ಉನ್ನಂತ ಉಡುಪಿಯಲ್ಲಿ ನಿಂತು
ಘನ್ನಮಂದಿರ ಮಾಡಿಕೊಂಡ ಪ್ರಸನ್ನ ಹಯವದನ ಕೃಷ್ಣ ೫

೧೪

ರಾಗ : ಆರಭಿ **ತಾಳ : ಅರೆಝುಂಪೆ**

ವಾಣಿ ಪರಮಕಲ್ಯಾಣಿ ನಮೋ ನಮೋ ಅಜನ
ರಾಣಿ ಪಂಕಜಪಾಣಿ ಪ

ಭಳಿರೆ ಭಳಿರೆ ಅಂಬೆ ಭಕ್ತಜನ ಸುಖದಂಬೆ
ಸುಳಿದಾಡು ಶುಭನಿತಂಬೆ ಅಮ್ಮ ನಿಮ್ಮ
ಹೊಳೆಹೊಳೆವ ಮುಖ ಮುಕುರ ಬಿಂಬೆ
ಇಳೆಯೊಳಗೆ ಸರಿಗಾಣೆ ಶಾರದಾಂಬೆ ಪುತ್ಥಳಿ ಬೊಂಬೆ ೧

ಶರಣು ಶರಣೆಲೆ ದೇವಿ ಸ್ಮರಣೆಮಾತ್ರದಿ ಕಾಯ್ವೆ
ಚರಣದಂದುಗೆಯ ಠೀವಿ ನಳನಳಿಸುವಾ-
ಭರಣಗಳ ನಿಟ್ಟು ಸುಖವೀವಿ
ಧರೆಯೊಳಗೆ ಹರಿಣಾಕ್ಷಿ ನೀ ಸಲಹೆ ವಾಗ್ದೇವಿ ೨

ಜಯ ಜಯತು ಜಗನ್ಮಾತೆ ಜಗದೊಳಗೆ ಪ್ರಖ್ಯಾತೆ
ದಯಮಾಡು ಧವಳಗೀತೆ ಸತತ ಶ್ರೀ
ಹಯವದನಪದಕೆ ಪ್ರೀತೆ ಇಳೆಯೊಳಗೆ
ನಯದಿ ಗೆಲಿಸೆನ್ನ ಮಾತೆ ವಿಧಿಕಾಂತೆ ೩

೧೫

ರಾಗ : ಕಾನಡ ತಾಳ : ಆದಿತಾಳ

ಹಣವೆ ನಿನ್ನಯ ಗುಣವೇನು ಬಣ್ಣಿಪೆನೊ ಪ

ಹಣವಿಲ್ಲದವನೊಬ್ಬ ಹೆಣವೆಸರಿ ಕಂಡ್ಯಾ ಅ.ಪ.

ಬೆಲೆಯಾಗದವನೆಲ್ಲ ಬೆಲೆಯ ಮಾಡಿಸುವಿ
ಎಲ್ಲ ವಸ್ತುಗಳನಿದ್ದಲ್ಲೆ ತರಿಸುವಿ
ಕುಲಗೆಟ್ಟವರ ಸತ್ಕುಲಕೆ ಸೇರಿಸುವಿ
ಹೊಲೆಯನಾದರೂ ತಂದೊಳಗಿರಿಸುವಿ ೧

ಅಂಗನೆಯರ ಸಂಗ ಅತಿಶಯದಿ ಮಾಡಿಸುವಿ
ಶೃಂಗಾರಾಭರಣಂಗಳ ಬೇಗ ತರಿಸುವಿ
ಮಂಗನಾದರೂ ಅನಂಗನೆಂದೆನಿಸುವಿ
ಕಂಗಳಿಲ್ಲದವಗೆ ಮಗಳ ಕೊಡಿಸುವಿ ೨

ಚರಣಕ್ಕೆ ಬಂದಂಥ ದುರಿತವನು ಬಿಡಿಸುವಿ
ಸರುವರಿಗೆ ಶ್ರೇಷ್ಠನರನ ಮಾಡಿಸುವಿ
ಅರಿಯದ ಶುಂಠನ ಅರಿತವನೆನಿಸುವಿ-
ಸಿರಿಹಯವದನನ ಸ್ಮರಣೆ ಮರೆಸುವಿ ೩

೯. ಪರಿಶಿಷ್ಟ

ಶ್ರೀ ವಾದಿರಾಜರ ಮೇಲೆ ಹರಿದಾಸರಿಂದ ರಚಿಸಲ್ಪಟ್ಟ ಕೀರ್ತನೆಗಳು

ಹರಿಸರ್ವೋತ್ತಮ ತತ್ವವನ್ನು ಜಗತ್ತಿಗೆ ಸಾರದ ಭೃಗು ಮಹರ್ಷಿಗಳ ಅಂಶ ಸಂಭೂತರಾದ ವಿಜಯದಾಸರು ವಾದಿರಾಜರ ಮೇಲೆ ರಚಿಸಿದ ಸುಳಾದಿ

೧.

ಸುಳಾದಿ

(ಧ್ರುವತಾಳ)

ಮಾಧವನಂಘ್ರಿ ನಿತ್ಯ ಮೋದದಿಂದಲಿ ಭಜಿಪ
ಸಾಧು ಸನ್ಮುನಿವರ್ಯ ಮೋದತೀರ್ಥರ
ಪದವಿಗೆ ಬರುವ ಲಾತವ್ಯ ಮೇದಿನಿಯೊಳು
ಮಾಯಾವಾದಿಗಳ ಗೆದ್ದ ವಾದಿರಾಜರ ಮಹಿಮೆ
ವರ್ಣಿಸಲು ಶೇಷಗಳವಲ್ಲ
ಮಾಧವ ವೇದವೇದ್ಯ ನಮ್ಮ ವಿಜಯವಿಠಲ
ಆದದರಿಂದವರೆರಡು ಭುಜದಿ ಹಯವಕ್ತ್ರನಾಗಿ
ಪಾದವನಿಟ್ಟು ಸ್ವಾದವಾದ ಕಡಲೆ ಹೂರಣವನುಂಡ
ಶ್ರೀಧರನ ಮಹಿಮೆ ಸಾಧು ಜನರು ಕೇಳಿ ೧

ಮಟ್ಟತಾಳ

ಕಡಲಲಿ ಪವಡಿಸಿದಾ ಒಡೆಯ ತಾ ಪೊಡವಿಯಲಿ
ಮೃಡನುತ ಗೋವಿಂದಾ ಜಡದ್ಧರಿವಾಣದಲಿ
ಕಡಲೆ ಸಕ್ಕರೆ ಬೆರೆಸಿ ಮಡ್ಡಿ ಮಾಡಿದ
ಸಡಗರದಾ ಭಕ್ಷ್ಯ ಲಡ್ಡುಗೆ ಪಾಯಸ ಘೃತ
ದಡುಗೆ ಬ್ರಹ್ಮಾದಿ ಪರಿವಾರಸಹಿತುಂಡು
ಒಡೆಯ ಬ್ರಹ್ಮಾದಿಗಳ ಭೀತಿ ಬಿಡಿಸಿದ
ಕಡೆಗೋಲು ನೇಣು ಪಿಡಿದುಡುಪಿಯೊಳಗೆ ನಿಂದ
ಉಡುರಾಜಮುಖ ನಮ್ಮ ವಿಜಯವಿಠಲರೇಯ
ಬೆಡಗು ಕಾರ್ಯವನ್ನು ನಡೆಸಿದ ಬಗೆ ಕೇಳಿ ೨

ತ್ರಿಪುಟತಾಳ

ತಾಮಸ ಗುಣವುಳ್ಳ ಪಾಮರ ಜನರಿಗೆ

ಈ ಮಹಿಮೆ ದೊರಕುವುದೇ ಸ್ವಾಮಿ ಸಿಲುಕುವನೆ
ಕಾಮಿಸಿ ಕೋಟಿ ವರುಷ ನಾಮ ನುಡಿದುದರಿಂದ ಪರಂ
ಧಾಮ ದೊರೆಯದು ಭೂಮಿಯೊಳಗೆ ಬಂದ
ಭ್ರಾಮಕ ಜನರಿಗೆ ದೊರಕುವನೇ ಸ್ವಾಮಿ ಸಿಲುಕುವನೇ ೩

ಆಟತಾಳ

ಅಜ ಸತ್ಯಲೋಕಾಧಿಪತ್ಯವನು ಮಾಡಿ ದಿ –
ಗ್ವಿಜಯ ಮಾಡಲು ಪುರಕೆ
ನಿಜ ಸುಜ್ಞಾನ ಸಂಪೂರ್ಣಪ್ರಜ್ಞರೆಂಬೋ ಮುನಿಯು
ಅಜನ ಪದಕೆ ಬಂದು ಅಖಿಳರನಾಳುತ್ತಿಪ್ಪ
ನಿಜವಾಯು ಹನುಮ ಭೀಮ ಮಧ್ವರಾಯರು
ಅಜನ ಪಟ್ಟಾಭಿಷಿಕ್ತರಾಗಿ ನಿಜ ಸತ್ಯಲೋಕವನಾಳಿದ
ವಿಜಯಸಾರಥಿ ಪದರಜ ಮಹಾತ್ಮೆಯಿಂದ
ಗಜವೈರಿ ಭಂಜನ ವಿಜಯವಿಠಲನ್ನ
ಭಜನೆ ಗೈಯುತ ಬಹು ಕಾಲ
ಋಜುಗುಣ ಪಂಙ್ತಿಯೊಳಗೆ ಕುಳಿತು,
ನಿಜನಿರ್ಮಲ ಸುಜ್ಞಾನದಿಂದ
ಭುಜಗಶಯನನಲ್ಲಿ ಎಡಬಿಡದೆ ಸ್ನೇಹಮಾಡುತ
ಋಜುಗಳಲ್ಲಿ ಪಕ್ವವಾದ ಮನವುಳ್ಳ
ಸುಜನ ಶಿರೋಮಣಿ ವಾದಿರಾಜರೆನುತ
ನಿಜವಾಗಿ ಬೊಮ್ಮಾಂಡ ಪುರಾಣ ಸಾಧಕದಿಂದ
ಅಜನ ಪದ ಸಲುವುದು ಲೇಶ ಸಂಶಯ ಬ್ಯಾಡಿ
ನಿಜ ನಿಜ ನಿಜವೆಂದು ನಿತ್ಯದಿ ಕೊಂಡಾಡಿ ೪

ಆದಿತಾಳ

ಮನಶುದ್ಧರಾಗಿ ಮಾಧವನಂಘ್ರಿ
ದಿನದಿನದಲ್ಲಿ ನಂಬಿ ಅನವರತ
ಆನಂದಪಡುವ ಮಧ್ವರಾಯರ ಪಾದದ ಮಹಿಮೆ
ಅನೇಕ ಜನ್ಮ ಬಹುಪುಣ್ಯದಿಂದ ಲಬ್ಧ–
ವೆನುತ ತಿಳಿಯಲುಬೇಕು

ಹನುಮೇಶ ಸಿರಿ ವಿಜಯವಿಠಲನ ಪಾದ
ವನಜಾದಿಗಳನ್ನು ನಂಬಿಕೊಂಡಿಪ್ಪ ವಾದಿರಾಜ
ಮುನಿಯು ಸಾಮಾನ್ಯರೆಂದು ಎಣಿಸಿದ ನರರಿಗೆ
ಘನವಾದ ಶಿಕ್ಷೆಯೀವನು ಇನಸೂನು ಕೋಪದಿಂದ
ಮನದಲಿ ಇಟ್ಟುಕೊಂಡು ಮಹಿಮೆ ಪಾಡಿ ಕೊಂಡಾಡಿ

ಜೊತೆ

ಮೋದತೀರ್ಥರ ಮತ ಸೇನಾಧಿಪತಿಯಾದ
ವಾದಿರಾಜ ಮುನಿಯು ವಿಜಯವಿಠಲನ ದಾಸ ೫

೨

(ರಾಗ–ಆರಭಿ; ಏಕತಾಳ)

ವಾದಿರಾಜ ಧೀರ ಯತಿವರ ವಾದದಲಿ ಶೂರ

ಮೋದತೀರ್ಥರ ಮತವ ಪೊಂದಿದ
ಸಾಧುಗಳನು ಉದ್ಧಾರ ಮಾಡುವ ೧

ರಂಗ ಮಂಗಳ ಉತ್ತುಂಗ ವಿಕ್ರಮಯೆನುತ
ಶೃಂಗೇರಿ ಮಠದಿ ಜಯಕೇತನ ಹಾಕಿದ ೨

ಒಡೆಯ ಹಯವಕ್ತ್ರನಿಗೆ ಕಡಲೆ ಹೂರಣ ಮಾಡಿ
ಅಡಿಗಡಿಗೆ ಅವನ ಪಾದ ಬಿಡದೆ ಆರಾಧಿಸುವ ೩

ವಾದಿಗಜ ಪಂಚಾನನನೆನಿಸಿ ಮೇದಿನಿಯೊಳಗೆ ಮೆರೆದ
ಮಾಧವನಪ್ರಿಯ ದಾಸ ಸದಾನಂದದೊಳಿರುವ ೪

ಅಜಪದಕೆ ಅರ್ಹನಾದ ಋಜುಗಣ ಜೀವೋತ್ತಮನ
ನಿಜಪದಕೆ ಬರುವ ವಿಜಯ ವಿಠಲನ ದಾಸ ೫

ಟಿಪ್ಪಣಿ : 'ಶೃಂಗೇರಿ ಮಠದಿ ಜಯಕೇತನ ಹಾಕಿದ' ಇದರ ಅರ್ಥ ಅದ್ವೈತಮತವನ್ನು ಗೆದ್ದ ಎಂದಾಗುವುದು. ಇದೇ ಹಾಡು ಪಾಠಾಂತರಗಳೊಡನೆ ಬೇರೆಯಾಗಿ ಲಿಂಗಸೂಗೂರಿನ ವಿಜಯದಾಸರು ಪದಗಳು ಭಾ–೨ರಲ್ಲಿ (ಕೀರ್ತನೆ ೧೮೭) ಬಂದಿದೆ.

೩

(ರಾಗ–ಖರಹರಪ್ರಿಯ, ಆದಿತಾಳ)

ವಾದಿರಾಜ ಮುನಿಪಾ ಹಯಮುಖ

ಪಾದಕಮಲ ಮಧುಪಾ ಪ

ನೀ ದಯದಲಿ ತವ ಪಾದ ಧ್ಯಾನವನು
ಆದರದಲ್ಲಿ ಕೊಟ್ಟಾದರಿಸೆನ್ನನು ಅ.ಪ.

ಮೂಷಕ ಬಿಲದಿಂದ ಉದರಪೋಷಕ ಬರಲಂದು
ವಾಸುಕಿ ಭಯದಿ ನಿಮ್ಮಾಸನದೆಡೆ ಬರೆ
ಕ್ಲೇಶ ಕಳೆದು ಸಂತೋಷಗೈಸಿದೆ ೧

ಮುಂದೆ ಭೂತನರನಾ ಪ್ರೇರಿಸಿ ಹಿಂದೆ–ವೊಬ್ಬ ನರನಾ
ನಿಂದಿರಿಸಿದೆ ಆನಂದದಿಂದ ಜನ
ವೃಂದ ನೋಡುತಿರೆ ಅಂದಣ ನಡಿಸಿದ್ಯೋ ೨

ಕ್ಷಿತಿಯೊಳು ಸತಿ ತನ್ನಾ ವಲ್ಲಭ
ಮೃತಿಯೈದಿರೆ ಮುನ್ನಾ
ಅತಿ ಶೋಕದಿ ಬಂದು ನುತಿಸಲು ಆ ಪತಿಯನು ಬದುಕಿಸಿ ಹಿತದಿ ರಕ್ಷಿಸಿದೆ ೩

ನರಪತಿ ವ್ಯಾಧಿಯಲಿ ಬಳಲ್ವದ
ತ್ವರಿತದಿ ನೀ ಕೇಳಿ
ಹರುಷದಿ ವ್ಯಾಧಿಯ ಪರಿಹರಿಸ್ಯವನಿಗೆ
ಹರುಷದಿಂದಲಭಯವ ತೋರಿದೆ ೪

ಶಾಸ್ತ್ರ ಪ್ರಸಂಗದಲಿ ನಾರಾಯಣ ಭೂತರ ಗೆಲಿದಲ್ಲೆ
ಖ್ಯಾತಿಯಿಂದ ಬಹು ಮಾತನಾಡಿ ಶ್ರೀ–
ನಾಥನ ಮಂದಿರ ಪ್ರೀತಿಲಿ ತರಿಸಿದ್ಯೊ ೫

ತುರಗವದನ ಪಾದಾ ಭುಜಗಳಲಿ
ಧರಿಸಿಕೊಂಡು ಮೋದ ಕಡಲೆ ಮಡ್ಡಿಯನು
ಕರದಿಂದುಣಿಸಿದ ಗುರುವರಶೇಖರ ೬

ಆ ಮಹಾ **ಗೋಪಾಲವಿಠ್ಠಲ** ತಾಮರಸದಳಗಳ
ಧೀಮಂತರಿಗೆ ಸುಕಾಮಿತವನು ಕೊಡುವ
ಆ ಮಹಾಮಹಿಮ ೭

೪

ರಾಗ–ಮೋಹನ; ಆಟತಾಳ

ವಾದಿರಾಜನೆ ನಿನ್ನ ಪಾದಕ್ಕೆರಗಿ ನಾ
ಮೋದದಿಂ ಬೇಡುವೆ ಮಾಧವನ ತೋರೋ ಪ

ಸಕಲ ವೇದ ಪುರಾಣ ಶಾಸ್ತ್ರಗಳೆಲ್ಲಾ
ಪ್ರಕಟಿಸಿದೆ ಕನ್ನಡದಿ ಪ್ರೇಮದಿಂದ
ನಿಖಳ ಜನರು ಆನಕ ದುಂದುಭಿಸುತನ
ಭಕುತಿಯ ಪಡೆದು ಮೇಣ್ಮುಕುತಿಯೈದಲಿಯೆಂದು ೧

ಗಣನೆಯಿಲ್ಲದೆ ಕೀರ್ತನೆ ಸುಳಾದಿಗಳನ್ನು
ಮನವೊಲಿದು ಮಾಡಿದ್ದು ಜನರು ಪಠಿಸಿ
ವನಜನಾಭನ ಕರುಣವನು ಪಡೆದು ತಾ–
ವನುಭವಿಸಲಾನಂದವನೆನುತಲಿ ೨

ನಿನ್ನ ನೆನೆಯೆ ಧನ್ಯ ನಿನ್ನ ಪಾಡಲು ಮಾನ್ಯ
ನಿನ್ನ ಕೊಂಡಾಡಲು ಪಾಪಶೂನ್ಯ
ನಿನ್ನವನೆನೆ ವೇಣುಗೋಪಾಲವಿಠಲ
ಮನ್ನಿಸಿ ಸದ್ಗತಿ ಪಾಲಿಪ ಮುದದಿ ೩

೫

ರಾಗ–ಕಾಂಬೋದಿ; ಝಂಪೆತಾಳ

ಸಂತೈಸು ತವ ದಾಸನೆಂದೆನ್ನನು ಪ

ಸ್ವಾಂತದಲಿ ನೆಲಸಿ ಏಕಾಂತ ಭಕ್ತೋತ್ತಮನೇ ಅ.ಪ.

ವಾಗೀಶಮುನಿಕರಾಂಬುಜ ಜಪದಿಂದ ಸಂಭವಿಸಿ
ಆಗಮೋಕ್ತಾರ್ಥಗಳ ಶಿಷ್ಯರಾದ
ಭಾಗವತ ಜನರಿಗುಲ್ಲಾಸದಲಿ ಬಿಡದೇ ಚೆ–
ನ್ನಾಗಿ ವ್ಯಾಖ್ಯಾನವನು ಪೇಳ್ದ ಗುರುಸುರತರುವೇ ೧

ಮೋದತೀರ್ಥಾನುಜರ ವಂಶಾಂಬುನಿಧಿಚಂದ್ರ
ಬಾಧಿಸುವ ದುಃಶಾಸ್ತ್ರಗಳನೇ ಮುರಿದು
ವಾದದಿಂದಲೆ ಸಕಲ ಮೇದಿನಿಯೊಳಗಿಪ್ಪ ದು_
ರ್ವಾದಿಗಳ ಭಂಗಿಸದೆ ಮಾಧವನ ಪ್ರಿಯನೇ ೨

ಕಲಿಕೃತಾಚರಣೆಗಳು ಬಲಿಯೆ ಹರಿಯಾಜ್ಞೆಯಿಂ –
ದಿಳೆಯೊಳವತರಿಸಿ ಸಜ್ಜನರಿಗೆಲ್ಲ
ತಿಳಿಯೆ ಪರತತ್ವವನು ಶಾಸ್ತ್ರಮುಖದಿಂದ ಯತಿ
ಕುಲತಿಲಕ ನಂಬಿದವರಿಗೆ ನಿತ್ಯ ಸುರಧೇನು ೩

ಪಾದಚಾರಿಗಳಾಗಿ ತೀರ್ಥಯಾತ್ರೆಗಳ ಸ
ಮ್ಮೋದದಲಿ ಚರಿಸುತಲಿ ಚಮತ್ಕೃತಿಯಲಿ
ಸಾಧು ಸಮ್ಮತವಾದ ತೀರ್ಥಪ್ರಬಂಧವನು
ಆದರದಿ ರಚಿಸಿದ ಮಹಾ ದಯಾಂಬುಧಿಯೇ ೪

ಕ್ಷೋಭಕಾಲದಲಿ ಸಂಚಸುತ್ತಿರಲು ಅ
ಹೋಬಲದಿ ನೈವೇದ್ಯ ಕಲಹದಿಂದ
ಕ್ಷೋಭಿಗರ ಮಿಶ್ರಿತಾನ್ನವನುಂಡು ಕರಗಿಸಿದೆ
ಶ್ರೀ ಭಾರತೀರಮಣನಂತೆ ಹರಿಯ ಕರುಣದಲಿ ೫

ಚಂದ್ರಿಕಾಚಾರ್ಯರಲಿ ಶಿಷ್ಯರಂದದಿ ಚರಿಸಿ ಆ–
ನಂದದಿಂದಲಿ ವ್ಯಾಸ ಪ್ರತೀಕವನ್ನು

ತಂದು ನಿರ್ಭಯದಿ ಸರ್ವತ್ರದಲಿ ಮೆರೆದೆ ಯೋ–
ಗೀಂದ್ರ ದಂಡಕಾಷಾಯ ಧರಿಸಿದ ಗುರುವೆ ೬

ಅಂಕದಲ್ಲಿಪ್ಪ ಬಾಲಕನ ಬರುತಲೆ ಕಂಡು
ಶಂಖಚಕ್ರಾಂಕಿತನು ಈತನೆಂದು
ಶಂಕಿಸದೆ ಎನಗೆ ಪ್ರಾಗ್ಜನ್ಮದಲಿ* ಪೇಳ್ದೆ ಅಕ–
ಳಂಕ ಸನ್ಮಹಿಮ ಹಯಮುಖನ ದಾಸಾಗ್ರಣಿಯೇ ೭

ಮಾರಪಿತ ನೀರಜಾಸನ ತೀವ್ರಗಮನ ಪ –
ದ್ಮಾರಿ ಮೌಳಿಗಳಿಂದ ಸಹಿತರಾಗಿ
ಸಾರಶ್ವೇತದೊಳಗಿಪ್ಪ ತೆರನಂತೆ
ಧೀರ ವೃಂದಾವನದಿ ತೋರುವೆ ನಿರಂತರದಿ ೮

ಸನ್ಮಹಿಮ **ವೇಣುಗೋಪಾಲವಿಠಲ** ಯದುವ
ರೇಣ್ಯನ ಕೃಪಾಪಾತ್ರನೆಂದೆನಿಸುವ
ಘನ್ನ ಋಜುಗಣದೊಳಗೆ ಮಾನ್ಯನಾಗಿಹ ಸುಪ್ರ–
ಸನ್ನ ದ್ವಿಜಕುಲರನ್ನ ನಂಬಿದೆನೋ ನಿನ್ನ ೯

* ಎಂದರೆ ಬೇಲೂರಿನ ವೈಕುಂಠದಾಸರು

೬

(ರಾಗ–ಬೇಹಾಗ್; ಆದಿತಾಳ)

ವಾದಿರಾಜ ಅಸ್ಮದ್ಗುರು ವಾದಿರಾಜ ಪ

ವಾದಿರಾಜ ತವ ಪಾದಕಮಲಭಿ–
ವಾದನ ಮಾಳ್ಪೆ ಸನ್ಮೋದವನೀಯೋ ೧

ಸಾರಿದರಿಗೆ ಕಲ್ಪಭೂರುಹವಂತೆ ಮ –
ನೋರಥ ಸಲ್ಲಿಸು ಸೂರಿಗಳರಸೇ ೨

ಭೇದ ಪಂಚಕವನು ಸಾಧಿಸಿ ಕುಮತ ಕು –
ವಾದಿ ಗರ್ವತತಿ ಭೇದನಗೈದೆ ೩

ದೇಶಿಕವರ್ಯ ವಾಗೀಶ ಕುವರನೇ
ಕ್ಲೇಶ ಹರಿಸೋ ಅಘನಾಶನ ಗೈದು ೪

ನಿಗಮಾನುತ ಸಿರಿ **ಜಗನ್ನಾಥವಿಠಲನ**
ಸುಗುಣಗಳನುದಿನ ಪೊಗಳಿ ಹಿಗ್ಗುವ ೫

೭

(ರಾಗ–ಅರಭಿ; ಆದಿತಾಳ)

ವಾದಿರಾಜ ಗುರು ನೀ ದಯಮಾಡದೆ
ಈ ದುರಿತವ ಕಳೆದಾದರಿಪರ್ಯಾರು ಪ

ಮೋದಮುನಿಮತ ಪಯೋದಧಿ ಪೂರ್ಣ
ವಿದೋದಯ ಶರಣರ ಕಾದುಕೊ ದೊರೆಯೇ ೧

ನೀ ಗತಿಯೆಂದನುರಾಗದಿ ನಂಬಿದ
ಭೋಗಪುರೀಶನ ರೋಗವ ಕಳೆದೆ ೨

ಭೂಮಿಪರುಪಟಳಕಾ ಮಹಿನಾಥನು
ತಾ ಮೈಮರೆದಿರೆ ನೀ ಮುದದಿತ್ತೆ ೩

ದೇಶಿಕಾರ್ಯ ವಾಗೀಶಕುವರ ತವ
ದಾಸಸಮೂಹವ ನೀ ಸಲಹೊ ಸದಾ ೪

ಕಲಿಬಾಧೆಯು ವೆಗ್ಗಳವಾಗಿದೆ ಈ
ಇಳೆಯೊಳು ಯತಿಕುಲತಿಲಕ ಕೃಪಾಳೊ ೫

ಜನ್ಮಾಧಿವ್ಯಾಧ್ಯುನ್ಮಾದ ಭ್ರಮ
ನಿರ್ಮ್ಮೊರೆಹೊಕ್ಕವಗನ್ಮೋದಲುಂಟೆ ೬

ನಿನ್ನವಶನಾದ ಜಗನ್ನಾಥವಿಠಲನ
ಉನ್ನಹದಲ್ಲಿ ತೋರೆನ್ನ ಮನದಲಿ ೭

೮

(ರಾಗ-ಅರಭಿ-ಆದಿತಾಳ)

ವಾದಿರಾಜ ಶರಣರ ಸುರಭೂಜ ವಾದಿರಾಜ ಪ

ವಾದಿರಾಜ ಪ್ರತಿವಾದಿ ಗಜೇಂದ್ರ ಮೃ-
ಗಾಧಿರಾಜ, ವಿಬುಧೋದಧಿ ಚಂದ್ರ ಅ.ಪ.

ಭಾಗೀರಥಿಯಂತ್ಯೋಗಿವರ ಶ್ರೀ
ವಾಗೀಶ ಕರಾಂಬುಜ ಸಂಭವನೇ ೧

ಪಾವಮಾನಿ ಸುಮತಾವಲಂಬಿಗಳ
ಪಾವನವೆಂದೀವುದು ವರವ ೨

ಎಲರುಣಿ ಭಯಕಂಜಿಲಿ ನಿಮ್ಮಾಸನ
ಕೆಳಗಿರೆ ಕಂಡದನುಳುಹಿದೆ ಕರುಣಿ ೩

ಗರಮಿಶ್ರಿತ ನರಹರಿ ನೈವೇದ್ಯವ
ಅರಿತುಂಡು ಅದನರಗಿಸಿಕೊಂಡೆ ೪

ಹಯವದನನ ಪದದ್ವಯ ಭಜಕಾಗ್ರಣಿ
ದಯದಿ ನೀ ವಿಪ್ರಗೆ ನಯನವನಿತ್ತೇ ೫

ಅರ್ಥಿಗಳಿಗೆ ಪರಮಾರ್ಥವ ತೋರಿಸಿ
ತೀರ್ಥಪ್ರಬಂಧವ ಕೀರ್ತನೆ ಗೈದೆ ೬

ಅದ್ವೈತ ಸಮಾಧಿ ಮಧ್ವಸುಸಿದ್ಧಾಂತಿ
ಇಧ್ಮಜಿಂಹ್ವದಿ ಪ್ರಧ್ವಂಸಿಸಿದೆ ೭

ನಮಿಪೆ ತ್ವತ್ಪದ ಕಮಲಗಳಿಗೆ ಮ –
ಧ್ವಮತ ಸರೋರುಹ ದ್ಯುಮಣಿಯೆ ನಿರತ ೮

ಯಮಿವರನೆ ತ್ರಿವಿಕ್ರಮನ ರಥೋತ್ಸವ
ಸಮಯವಿದೆಂದುತ್ಕ್ರಮಣವ ತೊರೆದೆ ೯

ಬಂದು ಕರೆಯೆ ಪುರಂದರನಾಳ್ಗಳು
ಹಿಂದಟ್ಟಿದೆ ಕರ್ಮಂದಿಗಳರಸನೇ ೧೦

ಪೂತಾತ್ಮ ಜಗನ್ನಾಥವಿಠಲನ
ಖ್ಯಾತಿಯ ನುತಿಸುವ ನಾಥಜನಾಪ್ತ ೧೧

೯

(ರಾಗ–ನಾಟ ; ತ್ರಿಪುಟತಾಳ)

ಶರಣು ಶರಣು ಶರಣಯ್ಯ ಶರಣು ಪ

ಶ್ರೀ ಗುರು ವಾದಿರಾಜಗೆ
ಶರಣು ಸುರಗಣ ಮಾನ್ಯಗೆ
ಶರಣು ಶರಣರ ಪೊರೆವ ಕರುಣಿಗೆ
ಶರಣು ಹರಿಗುಣಲೋಲಗೆ ಅಪ

ಮಧ್ವಮತ ಶುಭವಾರ್ಧಿಚಂದ್ರಗೆ
ಸಿದ್ಧ ಸಾಧನ ಮೂರ್ತಿಗೆ
ಬದ್ಧ ಶ್ರೀಹರಿದ್ವೇಷ ಮಾಯ್ಗಳ
ಗೆದ್ದ ಹಯಮುಖ ದಾಸಗೆ ೧

ನಿತ್ಯ ನಿರ್ಮಲ ನಿಗಮಸ್ತೋತ್ರಗೆ
ಭೃತ್ಯ ಪಾಲಕ ಸುಗುಣ ಗಾತ್ರಗೆ
ಸತ್ಯಲೋಕ ಸುಮುಖ್ಯ ಪಾತ್ರಗೆ
ಸ್ತುತ್ಯಯತಿವರ ಸುಜನ ಮಿತ್ರಗೆ ೨

ಮೋಕ್ಷದಿ ಕರುಣ ಕಟಾಕ್ಷದಿ ಎನ್ನ
ವೀಕ್ಷಿಸಿ ಮನದಾಪೇಕ್ಷೆಯ ಸಲಿಸೊ ೬

ಯಾತಕೆ ಎನ್ನನು ಈ ತೆರ ಮಾಡಿದೆ
ನೀತ **ಗುರುಜಗನ್ನಾಥವಿಠ್ಠಲ** ದೂತ ೭

೧೦

ರಾಗ–ಮೋಹನ; ಏಕತಾಳ

ಸೋದಾಪುರದಲಿ ನಿಂತು ರಾಜಿಪನ್ಯಾರೇ ಪೇಳಮ್ಮಯ್ಯ ಪ

ಭೂರ ಹಯಮುಖ ಪಾದ ಭಜಿಸುವ
ವಾದಿಗಜಕೆ ಮೃಗರಾಜ ಕಾಣಮ್ಮಯ್ಯ ಅ.ಪ.

ಅಂಚೆವಾಹನ ಪ್ರಪಂಚದಿ ಪೊಳೆವ ವಿ –
ರಿಂಚಿಗೆ ಸಮನೇನೇ ಪೇಳಮ್ಮಯ್ಯ
ಸಂಚಿತ ಕರ್ಮವ ಕೊಂಚಿಸಿ ಭಕ್ತರ
ಚಂಚಲ ಬಿಡಿಸುವನ್ಯಾರೆ ಪೇಳಮ್ಮಯ್ಯ
ಮಿಂಚು ರಾಶಿಗೆ ಸಮ ಪಂಚ ವೃಂದಾವನ
ಲಾಂಛಿತನ್ಯಾರೇ ಪೇಳಮ್ಮಯ್ಯ
ಚಂಚಲಾಕ್ಷಿ ತಿಳಿ, ಪಂಚರೂಪಾತ್ಮಕ
ಮುಂಚಿಗೆ ಪ್ರಾಣ, ವಿರಿಂಚಿ ಕಾಣಮ್ಮಯ್ಯ ೧

ಸುಂದರ ಶುಭತಮ ವೃಂದಾವನ ನಿಜ
ಮಂದಿರ ಸ್ಥಿತನ್ಯಾರೇ ಪೇಳಮ್ಮಯ್ಯ
ವಂದಿಪ ಜನರಘವೃಂದ ಕಳೆದು ಆ–
ನಂದ ನೀಡುವನ್ಯಾರೇ ಪೇಳಮ್ಮಯ್ಯ
ಇಂದುಮುಖಿಯೆ ಈತ ಗಂಧವಾಹನನಾಗಿ
ಮಂದಜಾಸನ ಪದ ಪೊಂದಿಹನಮ್ಮ ೨

ಖ್ಯಾತಮಹಿಮ ಮಾಯಾ ವ್ರಾತಗಳ ವಿ
ಘಾತ ಮಾಡಿಹನ್ಯಾರೇ ಪೇಳಮ್ಮಯ್ಯ
ಆತುರ ಜನರಿಗೆ ಮಾತಪಿತರಂತೆ
ಮಾತು ಲಾಲಿಪನ್ಯಾರೇ ಪೇಳಮ್ಮಯ್ಯ
ದಾತ ಗುರುಜಗನ್ನಾಥವಿಠ್ಠಲನತಿ
ಪ್ರೀತಿ ಪಡೆದಿಹನ್ಯಾರೆ ಪೇಳಮ್ಮಯ್ಯ
ವೀತಭಯ ಪುರುಹೂತ ಪ್ರಮುಖ
ಭೂತನಾಥನುತ ಮಾತರಿಶ್ವನೀತನಮ್ಮ ೩

೧೧

(ರಾಗ–ಭೈರವಿ; ಆಟತಾಳ)

ಕಂಡೆ ಕಂಡೆ ರಾಜರ ಕಂಡೆ ಕಂಡೆ ಪ

ಕಂಡೆ ಕಂಡೆನು ಕರುಣ ನಿಧಿಯನು
ಕಂಗಳಂಜಲಿ ಮಾಡಿ ಮುಗಿವೆನು

ಲಂಡ ಮಾಯಿಗಳ ಗುಂಡಿಗೆ ಒಡೆಯಲು –
ದ್ದಂಡ ಮಾರುತಿ ಪದಕೆ ಬರುವನ ಅ.ಪ.

ಪಂಚವೃಂದಾವನದಿ ಮೆರೆಯುವ
ಪಂಚಬಾಣನ ಪಿತನ ಸ್ಮರಿಸುವ
ಪಂಚನಂದನ ಮುಂದೆ ಆಗುತ
ಮಿಂಚಿನಂದದಿ ಪೊಳೆವ ಮಹಿಮನ ೧

ಪಂಕ ಪಾತಕ ಕಳೆವ ದೇವನ
ಪಂಕಜಾರಿ ನಿಭೇಂದುವಕ್ತ್ರನ ಆ –
ತಂಕವಿಲ್ಲದೆ ಭಜಿಪ ಸುಜನರ
ಶಂಕೆ ಬಿಡಿಸುವ ಶಂಕರೇಶನ ೨

ಭಜಿಸುವವರಿಗೆ ಭಾಗ್ಯ ಕೊಡುವನ
ಋಜುಗಣೇಶಾಮರೇಂದ್ರ ವಂದಿತ
ನಿಜಪುರಂದರವಿಠ್ಠಲೇಶನ
ಭಜನೆ ಮಾಡುವ ಭಾವಿ ಮರುತರ ೩

೧೨

ಹೊಡಿ ನಗಾರಿ ಮೇಲೆ ಕೈಯಾ ಕಡಕಡ ಪ

ಕಡು ವಾದಿರಾಜರು ದೃಢ ಋಜುಗುಣರೆಂದು ಅ.ಪ.

ಹಯಮುಖ ಪಾದದ್ವಯ ಸೇವಕ ವರ
ಜಯಶೀಲರು ನಿಜ ಭಯಹಾರರೆಂದ್ಹೊಡಿ ನಗಾರಿ ೧

ದೂಷಕರನು ಬಹು ಘಾಶಿಕೊಟ್ಟು ನಿಜ
ದಾಸರ ತೋಷಿಸಿ ಪೋಷಿಪರಿವರೆಂದ್ಹೊಡಿ ನಗಾರಿ ೨

ಮೋದತೀರ್ಥ ಮತ ಸಾಧಿಸಿ ಮೆರೆಸುವ
ವಾದಿರಾಜ ಗುರು ಬೋಧರು ಸಮರೆಂದ್ಹೊಡಿ ೩

ಇಂದಿರಾಪತಿಯ ಛಂದದಿ ಪೂಜಿಪ
ನಂದಿವಾಹನ ಮುಖ ವಂದ್ಯರಿವರೆಂದ್ಹೊಡಿ ೪

ಕಲಿ ಮುಖದಾನವ ಬಲವ ಜಯಿಪ ನಿ–
ಷ್ಕಲುಷ ಚಿತ್ತ ಯತಿಕುಲ ಭೂಷಣಿವರೆಂದ್ಹೊಡಿ ೫

ಕಂಸಾದಿಮುಖಧ್ವಂಸಿ ಸಮೀಕರಣ
ಹಂಸವಾಹ ಪ್ರಶಾಂತ ಸಹಿತರೆಂದ್ಹೊಡಿ ೬

ಸುಂದರ ಪಂಚ ಸುವೃಂದಾವನದೊಳು
ವೃಂದಾರಕ ಮುನಿ ವೃಂದ ವಂದ್ಯರೆಂದ್ಹೊಡಿ ೭

ಲಾತವ್ಯಾತ್ಮಕ ಭೀತಿರಹಿತ ಮಹ-
ಪಾತಕಹರ ಸುರನಾಥ ಮಹಿಮರೆಂದ್ದೊಡಿ ೮

ಭಾವಿ ಭಾರತಿದೇವಿ ಕರಕಮಲ ಸೇವಿತೇಪದ
ಜೀವದ್ವಯರೆಂದ್ದೊಡಿ ೯

ವೃಂದಾವನ ಸದಮಂದಾಖ್ಯಾನವ ಭೂ-
ವೃಂದಾರಕರಿಗೆ ತಿಳಿಪರಿವರೆಂದ್ದೊಡಿ ೧೦

ಸಾನುರಾಗದಿ **ಪ್ರಾಣಪತಿವಿಠಲನ**
ಧ್ಯಾನದಿಂದ ಸನ್ಮಾನಿತರಿವರೆಂದ್ದೊಡಿ ೧೧

೧೩

(ರಾಗ : ತೋಡಿ; ಮಠ್ಯತಾಳ)

ವಾದಿರಾಜನ ಕೂಡೆ ವಾದವ್ಯಾತಕೋ ಪ

ನಿಲ್ಲು ನಿಲ್ಲೆಲೋ ಸಲ್ಲದು ಗರ್ವ ಬಿಡಲೋ ಅ.ಪ.

ಗೆದ್ದು ವಾದಿಗಳನ್ನು ಗೆಲುವಿಲಿ
ಹೊಗಳಿಸಿಕೊಂಬರೋ ಆಚಾರ್ಯರೆಂಬೊರೊ ೧

ವಾಜಿಮುಖನ ದಯದಿಂದಲಿ
ವಿಲೋಲ ವಿಖ್ಯಾತರೋ ಶಿಷ್ಯರಿಗತಿ ಪ್ರೀತರೋ ೨

ಬಾಳೆಹಳ್ಳಿಯ ರುದ್ರಾಕ್ಷಿ ಒಡೆಯನ
ಗುರು ವಾದಿರಾಜರೆಂಬೊರೋ ಇದನು ನಂಬಿರೋ ೩

೧೪

ರಾಜರ ಭಾಗ್ಯವಿದು ಸ್ವಾದಿರಾಜರ ಭಾಗ್ಯವಿದು ಪ

ಸೋಜಿಗವೆನಿಸಿ ವಿರಾಜಿಸುತಿದಕೊ
ರಾಜರ ಭಾಗ್ಯವಿದು ಅ.ಪ.

ಬುಧಜನಕೊಪ್ಪುವ ಪದಸುಳಾದಿ ಖಳ-
ರೆದೆಗಿಚ್ಚೆನಿಸುವ ಚತುರತೆಯಾ
ಸದಮಲ ನಾನಾವಿಧ ಗ್ರಂಥದಿ ಹಯ-
ವದನನ ಪೂಜೆಯು ಯಜಿಸುವುದೆಲ್ಲ ೧

ತಮ್ಮಯ ನೇಮವು ಒಮ್ಮಿಗು ಬಿಡದಂ-
ತಮ್ಮಯ ಬಿಡದಲೆ ಸಮ್ಮೊಗದಾ
ಅಮ್ಮಹಶಾಸಕ ಬೊಮ್ಮ ಭೂತವನು
ಘಮ್ಮನೆ ನಿರ್ಮಿಸಿ ರಮ್ಮಿಪುದೆಲ್ಲ ೨

ಮೇದಿನಿಯೊಳಗೆ ಶುಭೋದಯಕರಕ
ಸ್ವಾದೀಸ್ಥಳ ಸರ್ವಾಧಿಕವ್ಯೆ
ಪಾದದ್ವಯದ ಈ ಅಗಾಧ ಮಹಿಮನೇ
ಶ್ರೀದವಿಠಲನಾರಾಧನೆಯೆಲ್ಲ ೩

೧೫

(ರಾಗ–ಮಧ್ಯಮಾವತಿ; ಆದಿತಾಳ)

ಜಯ ಜಯ ಶ್ರೀ ವಾದಿರಾಜ ಪ

ಜಯ ಜಯ ಆಶ್ರಿತಕಲ್ಪ ಭೂಜ ಅ.ಪ.

ದಂಡ ಕಮಂಡಲ ಕರದವನೆ ಭೂ
ಮಂಡಲದೊಳು ಬಹು ಮೆರೆದವನೆ ಉ
ದ್ದಂಡ ಖಳರ ಮತ ಮುರಿದವನೆ ಚೆಲ್ವ
ಪುಂಡರೀಕನಯನನ ತೋರ್ದವನೇ ೧

ಭವಭಯ ಮದವನೆ ಮಣಿಸಿದನೆ ಶುದ್ಧ
ಸುವಿವೇಕ ಶಿರೋಮಣಿ ಎನಿಸಿದನೆ ನಮ್ಮ
ಅವನಿಪ ಹಯಾಸ್ಯನ ಭಜಿಸುವನೆ ವಿ –
ನ್ನವಗುಣಗಳ ದೂರ ನಿಲಿಸಿದನೇ ೨

ಕವಿ ಜನರಿಗೆ ಸುಖ ಸುರಿಸಿದನೆ ನಿ –
ನ್ನವರವನೆಂದೆನಿಸಿದನೆ ಅಭಿ–
ನವಜನಾರ್ದನ ವಿಠಲನ ಒಲಿಸಿದನೆ ಮನ –
ಕವಿಹಿತರನ ದೂರ ನಿಲಿಸಿದನೇ ೩

೧೬

(ರಾಗ–ಸುರಟ; ಅಟ್ಟತಾಳ)

ಮಂಗಳಂ ಮಂಗಳಂ ವಾದಿರಾಜಗೆ ಪ
ಮಂಗಳ ಸುಗುಣ ತರಂಗ ಕೃಪಾಪಾಂಗ ಅ.ಪ.

ಮುನಿಕುಲೋತ್ತುಂಗ, ದುರ್ಜನ ಮದಭಂಗ
ಸಜ್ಜನ ಅಂತರಂಗ ಅನಘ ನಿಸ್ಸಂಗ ೧
ಹಯವದನನ ಪಾದದ್ವಯ ಭಜಿಪ ಅಗಾಧ
ದಯಾಸಾಗರನಾದ ಭಯನಿವಾರಣಶ್ರೀದ ೨

ಪರಮಾನನುತ **ಅಭಿನವಜನಾರ್ದನವಿಠಲ**
ಅವನಿಪತಿಯ ಪಾದ ಭಜಿಸುವ ೩

॥ ಶ್ರೀಕೃಷ್ಣಾರ್ಪಣಮಸ್ತು ॥

ಗ್ರಂಥಋಣ

೧. ಶ್ರೀ ರಾಮಚಂದ್ರಾಚಾರ್ಯ ವಿರಚಿತ ಶ್ರೀ ವಾದಿರಾಜ ಗುರುವರ ಚರಿತಾಮೃತಮ್ (ಸಂಸ್ಕೃತ) ಶ್ರೀವಾದಿರಾಜೀಯ ಗ್ರಂಥ ಪ್ರಕಾಶನ ಸಮಿತಿ ಉಡುಪಿ

೨. ಸ್ವಾಪ್ನ ವೃಂದಾವನಾಖ್ಯಾನವು ಪಂಡಿತರಿಂದಲೂ ಪಾರಾಯಣಾರ್ಹ ಕೈಪಿಡಿ, ಸಂಪಾದಕರು :– H. ಸುಬ್ಬಾರಾವ್

೩. ಶ್ರೀಮದ್ವಾದಿರಾಜ ಗುರು ಸಾರ್ವಭೌಮರು ಅಡ್ಡೆ ವೇದವ್ಯಾಸಾಚಾರ್ಯ, ಉಡುಪಿ.

೪. ಸೋದೇಶಕ್ಷೇತ್ರದರ್ಶನ
ಸಂಪಾದಕರು :– ಡಾ॥ ಗುರುರಾಜ ಕೃ. ನಿಪ್ಪಾಣಿ

೫. ಹರಿದಾಸರು ಹೊಗಳಿ ಹಾಡಿದ ಶ್ರೀ ವಾದಿರಾಜರು
ಸಂಪಾದಕರು :– ಶ್ರೀನಿವಾಸಹಾವನೂರು

೬. ಕರ್ನಾಟಕ ಭಕ್ತವಿಜಯ
ಲೇಖಕರು :– ಬೇಲೂರು ಕೇಶವದಾಸರು

೭. ಸದನುಗ್ರಹ ಸ್ಮತಿಸಂಚಿಕೆ
ಸಂಪಾದಕರು :– ಡಾ॥ ಗುರುರಾಜ ಕೃ. ನಿಪ್ಪಾಣಿ

೮. ಸಾಪ್ನ ವೃಂದಾವನಾಖ್ಯಾನ
ಅನುವಾದಕರು :– ಶ್ರೀ ಬಿ.ಪಿ. ನಾಗಭೂಷಣರಾವ್

೯. ಶ್ರೀ ವಾದಿರಾಜ ಋಜುತ್ವ ಸಿದ್ಧಾಂತ
ಗ್ರಂಥಕರ್ತರು :– ಶ್ರೀ. ಸುಬ್ಬಾರಾವ್ ಹೆಚ್.

೧೦. ವಾದಿರಾಜರ ಕೃತಿಗಳು.
ಸಂಪಾದಕರು :– T. ನಾಗರತ್ನ ಮೈಸೂರು ವಿ.ವಿ. ಪ್ರಸಾರಾಂಗ

೧೧. ವಾದಿರಾಜ ಕೃಪಾತರಂಗ ಭಾಗ ೧, ೨ ಲೇಖಕರು. ಗಿರಿಬಾಲೆ, (ಸರಸ್ವತಿಬಾಯಿ ರಾಜವಾಡೆ)

೧೨. ಮಾಧ್ವ ಸಿಂಚನ
ಮೈತ್ರಿ ಸಮೂಹದಿಂದ ಪ್ರಕಟಿತ

೧೩. ಸ್ತೋತ್ರಮುಕ್ತಾವಲೀ
ಮಂತ್ರಾಲಯ ರಾಯರಮಠದಿಂದ ಪ್ರಕಾಶಿತವಾದದ್ದು

೧೪. ಸೋದೆ ಶ್ರೀವಾದಿರಾಜ ಸ್ಮೃತಿ ಸಂಚಿಕೆ: ೧೯೭೩
ಸೊಂದಾ ವಾದಿರಾಜ ಮಠ ಜೀರ್ಣೋದ್ಧಾರ ಸಮಿತಿ.

೧೫. ವಾದಿರಾಜ ಸಂಪುಟ ಲೇಖಕರು: ಅರಳು ಮಲ್ಲಿಗೆ ಪಾರ್ಥಸಾರಥಿ

೧೬. ಸ್ತೋತ್ರ ಮಣಿಮಾಲಾ ಪ್ರಕಾಶಕರು: ಅ.ರಾ.ಪಂಚಮುಖಿ. ಧಾರವಾಡ



ಕೆ.ಎಸ್. ವಾದಿರಾಜ

ಭಾವೀಸಮೀರರಾದಂತಹ ಶ್ರೀವಾದಿರಾಜರ ಚರಿತ್ರೆಯನ್ನು ವಾದಿರಾಜರ ಶಿಷ್ಯರಾದ ಶ್ರೀವೇದವೇದ್ಯರ ಶಿಷ್ಯರಾದಂತಹ ಶ್ರೀ ವೇದನಿಧಿತೀರ್ಥರ ಶಿಷ್ಯರಾದ ಶ್ರೀ ರಾಮಚಂದ್ರಾಚಾರ್ಯರು ವಿರಚಿಸಿದ್ದು ಇದು ವಾದಿರಾಜರ ಚರಿತ್ರೆಯ ಬಗ್ಗೆ ಅಧಿಕೃತ ಗ್ರಂಥವಾಗಿದೆ. ಶ್ರೀ ವಾದಿರಾಜರ ನಿಕಟಕಾಲದಲ್ಲೇ ಇದ್ದಂತಹ ಶ್ರೀ ರಾಮಚಂದ್ರಾಚಾರ್ಯರು ವಿರಚಿಸಿದ್ದರಿಂದ ಈ ಕೃತಿಯ ಸಾಚಾತನದ ಬಗ್ಗೆ ಯಾರೂ ಸಂಶಯ ಪಡುವ ಅಗತ್ಯವಿಲ್ಲ.

ಕೃಷ್ಣಾಪುರ ಮಠಾಧೀಶರಾದ ಶ್ರೀ ವಿದ್ಯಾಸಾಗರತೀರ್ಥರು.

“ಶ್ರೀವಾದಿರಾಜ ಗುರುವರ ಚರಿತಾಮೃತ”ವನ್ನು ಓದಿದಾಗ ಮನಸ್ಸು ಪರಿಶುದ್ಧವಾಗುತ್ತದೆ. ಭಕ್ತಿ ಉಂಟಾಗಿ ಭಗವಂತನ ಅನುಗ್ರಹವನ್ನು ಪಡೆಯುತ್ತದೆ. ಈ ಗ್ರಂಥ ತೀರಾಸಾಧಾರಣವೆಂದು ಬಗೆಯುವಂತಿಲ್ಲ ಶ್ರೀ ಸುಮಧ್ವವಿಜಯ ಗ್ರಂಥಕ್ಕೆ ಇರುವಷ್ಟೇ ಐತಿಹಾಸಿಕ ಹಿನ್ನಲೆ ಈ ಗ್ರಂಥಕ್ಕೂ ಇದೆ. ಆದ್ದರಿಂದಲೇ ಇದು ಅತ್ಯಂತ ಪ್ರಾಮಾಣಿಕ ಗ್ರಂಥ. ಶ್ರೀಗುರುರಾಜರ ಚರಿತಾಮೃತ ಸಾಗರದ ಅನೇಕ ಹನಿಗಳನ್ನು ಸಾಕ್ಷಿ ಪುರಾವೆಯೊಂದಿಗೆ ದಾಖಲಿಸಿಕೊಂಡು ಮಹತ್ವ ಈ ಗ್ರಂಥಕ್ಕಿದೆ. ಇದರ ಪೂರ್ಣಪ್ರಮಾಣದ ಪ್ರಾಮಾಣಿಕತೆಗೆ ಶ್ರೀ ಗುರುರಾಜರು ಶ್ರೀವೇದನಿಧಿಗಳು ಸಾಕ್ಷಿಯಾಗಿರುವರು. ಆದ್ದರಿಂದಲೇ ಈ ಗ್ರಂಥ ಮಾಧ್ವರ ಪಾಲಿಗೆ, ಶ್ರೀ ಗುರುರಾಜೀಯ ಭಕ್ತರ ಪಾಲಿಗೆ ಅತ್ಯಂತ ವಿಶ್ವಾಸನೀಯವಾಗಿದೆ.

ಸೋದಾಮಠಾಧೀಶರಾದ ಶ್ರೀ ವಿಶ್ವವಲ್ಲಭತೀರ್ಥರು

ಈ ಗ್ರಂಥವು ವೇದ ಪುರಾಣ ಮೂಲವುಳ್ಳವೆಂದೂ ಗೊತ್ತಾಗುತ್ತದೆ. ಅಷ್ಟ ವಾಧ್ಯಾಯದಲ್ಲಿ ಋಜುಸ್ವರೂಪವು ಛಾಂದೋಗ್ಯ ಭಾಷ್ಯ ಮತ್ತು ಮ.ಭಾ.ತಾ.ನಿರ್ಣಯ ವಾಕ್ಯಗಳಿಂದ ಪ್ರತಿಪಾದಿಸಲ್ಪಟ್ಟಿವೆ. ಅನಂತರ ವಾಮನ ಪುರಾಣೋಕ್ತಕಲ್ಕ್ಯಾದಿ ಚತುರ್ಮುಖ ಪರ್ಯಂತ ನೂರು ಕೊನೆಯ ಋಜುಗಳ ಹೆಸರುಗಳು ಕೊಡಲ್ಪಟ್ಟಿವೆ. ಶ್ರೀ ಹರಿಯೇ ಗುರುರಾಜರನ್ನು ಆಜ್ಞಾಪಿಸಿ ಅವರ ಪ್ರತಿಭೆಯ ನಿಮಿತ್ತದಿಂದ ಲಕ್ಷಾಲಂಕಾರ ಮಾಡಿಸಿರುವುದರಿಂದ ಅದು ವಾದಿರಾಜ ಋಜುತ್ವ ಜ್ಞಾಪಕವೆಂದು ಶಾಸ್ತ್ರಾನು ಸಾರಿ ಅನುಮಾನ ತೋರಿಸಿದ್ದಾರೆ.

*H.*ಸುಬ್ಬರಾಯರು ಎಂ.ಎ.